ಪ್ರಬುದ್ಧ ಕರ್ಣಾಟಕ

ಸಂಪುಟ ೪೩—ಸಂಚಿಕೆ ೧

೧೬೮

ಪ್ಲವ ಸಂವತ್ಸರ

ಆಷಾಢ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೬೧

ವಿಷಯಸೂಚಿಕೆ

ಪ್ರಬುದ್ಧ ಕರ್ಣಾಟಕ

ಪ್ಲವ ಸಂವತ್ಸರ ೧೬೮ ಆಷಾಢ ಸಂಚಿಕೆ

ರಾಣಿಯ ಮೊಕದ್ದಮೆ

ರೋಮರೋಮದಿ ನಿಮಿರೆ ಭಾವವಿದ್ಯುತ್ತು
ತುಳುಕಿ ಕಣ್ಣಿಂ ಪರಿಯೆ ಬಾಷ್ಪಭಾಗೀರಥಿ
ಕೇಳಿದಳು ಹುಚ್ಚು ಪೂಜಾರಿಯ ದಿವ್ಯಪೂಜೆಯ ಕಥೆಯ
ಮಥುರಬಾಬುವಿನತ್ತೆ, ರಾಸಮಣಿ, ರಾಣಿ :
“ ನನ್ನೆಲ್ಲ ಚಿನ್ನ ಇಂದು ಚಿನ್ಮಯವಾಯ್ತು !
ಚಿದ್ಘನವಾಯ್ತು ನಾ ಕಟ್ಟಿಸಿದ ಕಲ್ಲುಮಣ್ಣು !
ಅಗಣ್ಯವಾಯ್ತು ನನ್ನ ಹಿರಿಯರ ಪುಣ್ಯದೇಳ್ಗೆ !
ದಕ್ಷಿಣೇಶ್ವರವಾಯ್ತು ಇನ್ನು ಲೋಕಕ್ಕೆ ಕಣ್ಣು !
ಕೃಪೆಯಾಗಿ
ಭಗವಂತನವತರಿಸಿದನು ಭಾರತದ ಬಾಳ್ಗೆ !
ಕೃತಕೃತ್ಯಳಾದೆ, ನಾ ಧನ್ಯಳಾದೆ !
ಲೋಕಕ್ಕೆ, ದೂರದೇಶದ ಕಂಡು ಕೇಳದ ಜನಕೆ,
ನಾ ಮಾನ್ಯಳಾದೆ, ಗುರುಪಾದ ಧೂಳಿಯಾದೆ ! ”

೨

ನಡೆದು ಬಂದಳು ರಾಣಿ ಮಂದಾಕಿನಿಯ ತೀರ್ಥಕ್ಕೆ.
ಮಿಂದಳುಟ್ಟಳು ಗಂಗೆ ಹೆಮ್ಮೆಪಡುವಂತೆ.
ಕೆಳದಿಯರು ಸೇವಕರು ಅಧಿಕಾರಿಗಳು ದಾರಿತೋರೆ
ಭವತಾರಿಣಿಯ ಬಳಿಗೆ ಭಕ್ತೆ ನಡೆದಳು ಮೆಟ್ಟಲೇರಿ.
ಪರಮಹಂಸರ ಪೂಜೆ ಸಾಗುತಿದ್ದುದ ಕಂಡು
ದೂರದಿಂ ಕೈಮುಗಿದುಕೊಂಡೆ, ಭಾವದಿಂ ತತ್ತರಿಸಿ,
ತೇಲಿದಂದದಿ ನಡೆದು ಮಣಿದಳು ಮಹೇಶ್ವರಿಯ ಚರಣತಲಕೆ.

೩

ದೇಗುಲವ ತುಂಬಿತ್ತು ನಾಗಸ್ವರದಿಂಚರ ;
ಜೇಗಟೆಯ ನಾದಕೆ ಪ್ರಕಂಪಿಸಿತ್ತು ವಾಯುಮಂಡಲ ;
ಗೋಡೆ ಗೋಡೆಗಳಿಂದೆ ಅನುರಣಿತವಾಗಿ
ಮೊಳಗಿತ್ತು ಘಂಟಾಮಹಾಧ್ವನಿ.
ಹೂವಿನ, ಗಂಧದ, ಧೂಪದ ಪರಿಮಳ
ದೈವಿಕ ಎಂಬಂತಿತ್ತು.
ಎಲ್ಲ ಅವತಾರಗಳೂ ಒಂದಾಗುತಲ್ಲಿ ನೆರೆದು
ನೋಡತಿದ್ದರು ಆ ದಿವ್ಯ ಪೂಜೆಯನು.
ದೇವಿ ಭವತಾರಿಣಿಯೊಳೆಲ್ಲರೂ ಉದ್ಭವಿಸಿ
ಸ್ವೀಕರಿಸುತಿದ್ದರಾ ದಿವ್ಯಪೂಜೆಯನು.
ಪಂಚವಟಿ ವಟವೃಕ್ಷವಾಸಿ
ಆ ವೃಕ್ಷಭೈರವ ಕೂಡ ಬಾಗಿ ಕೈಮುಗಿದಿದ್ದನಲ್ಲಿ.
ಆ ಪೂಜೆಯಿಂದೆದ್ದ ಶಕ್ತಿಜ್ಯೋತಿ
ಲೋಕ ಲೋಕಾಂತರದ ಸಂದುಗೊಂದುಗಳಲ್ಲಿ
ಹೃದಯ ಹೃದಯಸ್ತರದ ಗುಹಾಂತರಾಳದಲ್ಲಿ
ಕತ್ತಲೆಯ ಕತ್ತರಿಸೆ ತನ್ನ ದಿವ್ಯಹಸ್ತವನೆತ್ತಿ
ಐರಾವತದ ಅಮೃತಮಯ ಚಾಮಿಾಕರದ ಕರದ
ಕಿರಣಚಾಮರವ ಬೀಸುತಿತ್ತು.

೪

ಪೂಜೆಯಂತ್ಯದಲಿ ರಾಣಿ ರಾಸಮಣಿ
ತನ್ನ ಬಯಕೆಯನರುಹೆ ಭಕ್ತಿ ವಿನಯದಲಿ,
ದೇವದುರ್ಲಭ ದಿವ್ಯ ಕಂಠದಿಂದೇಳ ತೊಡಗಿದುವು
ಭಕ್ತಿಗೀತಾ ಶ್ವೇತಸುಂದರ ಕಪೋತಗಳು

ವಿವಿಧ ರಾಗದ ಭಾವಮಯ ಗರಿಯ ಬಣ್ಣಗೆದರಿ !
ಹಾಡಿದನು ಭಕ್ತ ;
ಆಲಿಸಿದಳಾ ಭಕ್ತೆ ;
ಇಬ್ಬರಾನಂದವನು ಸವಿದಳಾ ಸಚ್ಚಿದಾನಂದೆ.

೫

ಇದೇನಿದೇನು ?
ಬೆಚ್ಚಿದರು ಅಲ್ಲಿ ಸುತ್ತಮುತ್ತಲು ನೆರೆದ
ದೇವಾಲಯದ ಕಾರ್ಯಕರ್ತರುಗಳೆಲ್ಲ ?
ಇದ್ದಕಿದ್ದಂತೆ
ಹಾಡ ನಿಲ್ಲಿಸಿ ಪರಮಹಂಸರು ಕಿನಿಸಿ ಗೊಣಗಿದರು :
" ಇಲ್ಲಿಯೂ ಅದೆ ಯೋಚನೆ !
ಮೂರು ಹೊತ್ತೂ ಮೊಕದ್ದಮೆ ! "
" ಮಾರುಕಟ್ಟೆಯ ಮಾಡುವಿರ ನನ್ನ ತಂದೆಯ ಮನೆಯ ? "
ಎಂದು ಶತಮಾನಗಳ ಹಿಂದೊಮ್ಮೆ
ದೇಗುಲದಿ ಬೇಹಾರಿಗಳನೆಳ್ಬಟ್ಟಿದುದನಿಂದು
ಪುನರಭಿನಯಿಸುವಂತೆ,
ತಟ್ಟಿದರು ಕೆನ್ನೆಗೊಂದೆಚ್ಚರಿಕೆಯನಾ ರಾಣಿಗೆ !
" ಹಿಡಿದು ಕೊಳ್ಳಿರೊ ಹಿಡಿದು ಕೊಳ್ಳಿ,
ಹುಚ್ಚು ಪೂಜಾರಿಯನು ! "
" ರಾಣಿಗವಮಾನವಾಯ್ತಲಾ ! "
" ಹಾಳು ಭಟ್ಟಾಚಾರಿ ! "
" ತಳ್ಳಿರವನನು ದೇವಮಂದಿರದಾಚೆ ! "
ಎನುತೆ ನಾನಾ ಮಂದಿ ನುಗ್ಗಿತಾ ಕಡೆಗೆ.

೬

ಇಂತಿಂತಿಂತು
ಕ್ಷುಬ್ಧಗೊಂಡಿರಲಲ್ಲಿ ನೆರೆದರೆಲ್ಲರೂ,—
ತಣ್ಣಗಿದ್ದವರೆಂದರಿಬ್ಬರೆ :
ಏಟುಕೊಟ್ಟಾ ಭಕ್ತ, ಏಟುತಿಂದಾ ರಾಣಿ !
ಏನನಾಹುತ ನಡೆಯಲಿಲ್ಲೆಂಬಂತೆ ರಾಣಿ
" ಭಟ್ಟಾಚಾರ್ಯರಾವ ತಪ್ಪನು ಮಾಡಿದವರಲ್ಲ. "
ಎಂದು ತೋರುತಾ ಭವತಾರಿಣಿಯ ನಗುವ ಮೂರ್ತಿಯನು,
ಮುಂದುವರಿದಳು ಮತ್ತೆ ಗಂಭೀರಧ್ವನಿಯಿಂದೆ

" ನನ್ನ ತಪ್ಪಿಗೆ ಶಿಕ್ಷೆ ವಿಧಿಸಿದಳು ತಾಯಿ.
ನಡೆಯಿರಾಚೆ !
ನೀವವರ ಮುಟ್ಟಿದರೆ ಕೆಟ್ಟೀರಿ ! "
ರಾಣಿಯಾಜ್ಞೆಗೆ ಹೆದರಿ ಹಿಂಜರಿದರೆಲ್ಲರೂ
ನಡೆದ ಘಟನೆಗೆ ಬಿಲ್ಲು ಬೆರಗಾಗಿ :
ಮತ್ತೆ
ಹಾಡ ತೊಡಗಿದನು ಭಕ್ತ, ದಿವ್ಯೋನ್ಮತ್ತ.
ಮತ್ತೆ
ಆಲಿಸಿದಳಾ ಭಕ್ತೆ, ಭಾವೋನ್ಮತ್ತೆ :
ಇಬ್ಬರಾನಂದವನು ಸವಿದು ವಾತ್ಸಲ್ಯಚಿತ್ತೆ,
ಜಗದಂಬೆ,
ಆನಂದಮಯಿಯಾದಳಾ ದೇವಿ ಸಚ್ಚಿದಾನಂದೆ !

—ಕುವೆಂಪು
೨-೭-೫೯

ಭೂಮಾನುಭೂತಿ
ಮತ್ತು
ಭವ್ಯತಾ ಅನುಭವದ ಮೀಮಾಂಸೆ[1]

ಆನಂದೋ ಬ್ರಹ್ಮೇತಿ ವ್ಯಜಾನಾತ್ |
ಆನಂದಾದ್ಧ್ಯೇವ ಖಲ್ವಿಮಾನಿ ಭೂತಾನಿ ಜಾಯಂತೇ |
ಆನಂದೇನ ಜಾತಾನಿ ಜೀವಂತಿ |
ಆನಂದಂ ಪ್ರಯಂತ್ಯಭಿಸಂವಿಶಂತಿ ||—ತೈತ್ತಿರೀಯ

ಯದ್ಯದ್ ವಿಭೂತಿಮತ್ ಸತ್ತ್ವಂ ಶ್ರೀಮದೂರ್ಜಿತಮೇವ ವಾ |
ತತ್ತದೇವಾವಗಚ್ಛ ತ್ವಂ ಮಮ ತೇಜೋಂಶ ಸಂಭವಮ್ ||
—ಭಗವದ್‌ಗೀತೆ

ಯೋ ವೈ ಭೂಮಾ ತತ್‌ಸುಖಂ ನಾಲ್ಪೇ ಸುಖಮಸ್ತಿ |
ಭೂಮೈವ ಸುಖಂ ||—ಛಾಂದೋಗ್ಯ

೧

ಯಾವುದು ಭೂಮವೋ ಅದೇ ಸುಖ ; ಅಲ್ಪದಲ್ಲಿ ಸುಖವಿಲ್ಲ ; ಭೂಮವೊಂದೇ ನಿಜವಾದ ಸುಖ : ಎಂದು ಉಪದೇಶಮಾಡಿದ ಋಷಿಗುರುವಿಗೆ ಶಿಷ್ಯ 'ಭೂಮ ಎಂದರೇನು' ಎಂದು ಪ್ರಶ್ನೆ ಹಾಕಿ ಅದರ ಜಿಜ್ಞಾಸೆಗೆ ತೊಡಗುತ್ತಾನೆ.

"ಯತ್ರ ನಾನ್ಯತ್ ಪಶ್ಯತಿ, ನಾನ್ಯತ್ ಶೃಣೋತಿ, ನಾನ್ಯತ್ ವಿಜಾನಾತಿ, ಸ ಭೂಮಾ. ಯತ್ರ ಅನ್ಯತ್ ಪಶ್ಯತಿ, ಅನ್ಯತ್ ಶೃಣೋತಿ, ಅನ್ಯತ್ ವಿಜಾನಾತಿ, ತದಲ್ಪಂ. ಯೋ ವೈ ಭೂಮಾ ತದಮೃತಂ. ಯದಲ್ಪಂ ತನ್‌ಮರ್ತ್ಯಂ."

ಎಲ್ಲಿ ಇನ್ನೊಂದು ಕಾಣುವುದಿಲ್ಲ, ಇನ್ನೊಂದು ಕೇಳುವುದಿಲ್ಲ, ಇನ್ನೊಂದು ಅರಿವಿಗೆ ಬರುವುದಿಲ್ಲ, ಅದು ಭೂಮಾ. ಎಲ್ಲಿ ಇನ್ನೊಂದು ಕಾಣುತ್ತದೆ, ಇನ್ನೊಂದು ಕೇಳುತ್ತದೆ, ಇನ್ನೊಂದು ಅರಿವಿಗೆ ಬರುತ್ತದೆ, ಅದು ಅಲ್ಪ. ಯಾವುದು ಭೂಮವೊ ಅದು ಅಮೃತ. ಯಾವುದು ಅಲ್ಪವೊ ಅದು ಮರ್ತ್ಯ."

ಗುರುವಿನ ಉತ್ತರಕ್ಕೆ ಶಿಷ್ಯನ ಪ್ರಶ್ನೆ: ಆ ಭೂಮ ಯಾವುದರಲ್ಲಿ 'ಪ್ರತಿಷ್ಠಿತ'ವಾಗಿದೆ?[2]

---

೧ 'ತಪೋನಂದನ'ದಲ್ಲಿರುವ 'ಪಂಪನಲ್ಲಿ ಭವ್ಯತೆ' ಎಂಬ ಲೇಖನದ ಅಧ್ಯಯನವು ಸಹೃದಯನ ಬುದ್ಧಿಸಂಸ್ಕಾರದ ಪೂರ್ವಭಿತ್ತಿಯಾಗಿದೆಯೆಂಬ ಭಾವನೆಯ ಮೇಲೆ ಈ ಮೀಮಾಂಸೆ ಮುಂದುವರಿಯುತ್ತದೆ.

೨ ಸ ಭಗವಃ ಕಸ್ಮಿನ್ ಪ್ರತಿಷ್ಠಿತ ?—

ಅದಕ್ಕೆ ಗುರುವಿನ ಉತ್ತರ ಸಿದ್ಧಾಂತವಾಗಿ ಹೊಮ್ಮಿದಂತೆ ತೋರಿ ಸಂದೇಹ ದಲ್ಲಿ ಎಂಬಂತೆ ಕೊನೆಗಂಡಿದೆ: "ತನ್ನ ಮಹಿಮೆಯಲ್ಲಿ! ಅಥವಾ ಮಹಿಮೆ ಯಲ್ಲಿಯೂ ಅಲ್ಲವೇನೊ?"೩

ಇಲ್ಲಿ 'ಭೂಮಾ ಎಂದರೆ ಏನು?' ಎಂದು ವಿವರಿಸಲು ಹೊರಟ ಋಷಿ ಅದು ಏನಲ್ಲ ಎಂದು ಮಾತ್ರ ಸೂಚಿಸಲು ಸಮರ್ಥನಾಗಿದ್ದಾನೆ, ಆಲೋಚನೆಯ ದೃಷ್ಟಿಯಿಂದ. ಆದರೆ ಅನುಭೂತಿಯ ದೃಷ್ಟಿಯಿಂದ ಅದರ ಸ್ವರೂಪವನ್ನು ಸುಖ ಎಂದು ವರ್ಣಿಸಿದ್ದಾನೆ. ಅದು ಯಾವುದರಲ್ಲಿ 'ಪ್ರತಿಷ್ಠಿತ'ವಾಗಿದೆ ಎಂದರೆ 'ತನ್ನ ಮಹಿಮೆಯಲ್ಲಿ' ಎಂದವನು ಒಡನೆಯೆ ಅದನ್ನು ತಿದ್ದಿಕೊಳ್ಳಲೊ ಎಂಬಂತೆ 'ತನ್ನ ಮಹಿಮೆಯಲ್ಲಿಯೂ ಅಲ್ಲವೊ ಏನೊ!' ಎಂದು ಆ ವಿಚಾರ ಮಾನಸ ಗಮ್ಯವಲ್ಲ ಎಂಬುದನ್ನು ಧ್ವನಿಪೂರ್ವಕವಾಗಿ ನಿರ್ದೇಶಿಸಿದ್ದಾನೆ. ಆ ಸಂದೇಹದ ಅಥವಾ 'ಅಲ್ಲಯಿಕೆ'ಯ ಅರ್ಥ ಸಂದೇಹವೂ ಅಲ್ಲ, ಅಲ್ಲ ಎಂಬರ್ಥವೂ ಅಲ್ಲ. ಅದು ಅನಿರ್ವಚನೀಯ, ಅವಾಙ್ಮಾನಸಗೋಚರ ಎಂಬುದನ್ನು ವ್ಯಂಜನಾವೃತ್ತಿ ಯಿಂದ ಸೂಚಿಸುವ ನಿಷೇಧಾರ್ಥವಲ್ಲದ ಒಂದು ವಿಧಾನ.೪

ಎಲ್ಲಿ 'ಅನ್ಯ' ಎಂಬುದು ಇರುತ್ತದೆಯೊ, ಮನಸ್ಸಿಗೆ ಬರುತ್ತದೆಯೊ, ಅದೆಲ್ಲ ಅಲ್ಪ, ಮರ್ತ್ಯ, ಅಸುಖ. ಅನ್ಯವಲ್ಲದ್ದು, ಅನ್ಯವಿಲ್ಲದ್ದು ಯಾವ ಅನುಭವವೊ ಅದು ಭೂಮಾ, ಅಮೃತ, ಸುಖ. ಯಾವುದನ್ನು ಭೂಮಾ ಎಂದು ಕರೆಯು ತ್ತೇವೆಯೊ ಅದು ಎಲ್ಲದಕ್ಕೂ ಅತ್ಯಂತ ಮೂಲಾಧಾರವಾದದ್ದು.

ಈ ಭೂಮವನ್ನು ಸಚ್ಚಿದಾನಂದ ಬ್ರಹ್ಮಕ್ಕೆ ಹೋಲಿಸಬಹುದಾದರೂ ಅದು ಸತ್ ಚಿತ್ ಆನಂದಗಳಿಗೂ ಪೂರ್ವಭಿತ್ತಿಯೆಂಬಂತಿರುತ್ತದೆ. ಸರ್ವಾನುಭವಗಳಿಗೂ ಸರ್ವಸಮಾನವಾಗಿರುವ 'ಆಸರ್ವ'ವಾಗುತ್ತದೆ. ಸರ್ವದಲ್ಲಿದ್ದೂ ಸರ್ವಕ್ಕೂ ಸಮವಾದ ಅಂಶವಾಗಿ ಏಕೈಕವಾಗಿರುತ್ತದೆ. ಎಲ್ಲ ಗುಣಗಳನ್ನೂ ಎಲ್ಲ ಲಕ್ಷಣ ಗಳನ್ನೂ ಹೊಮ್ಮಿಸುವ ಅದು ಎಲ್ಲಕ್ಕೂ ಅತೀತ.

ಆದರೂ ಅಂತರ್ಯಾಮಿ. ಆದ್ದರಿಂದಲೆ ಈ ಲೋಕರೂಪದ 'ಅಲ್ಪ'ದಲ್ಲಿಯೂ ಆ 'ಭೂಮ'ದ ಅನುಭೂತಿ ಸಾಧ್ಯವಾಗುತ್ತದೆ. ನಾನಾ ರೂಪಗಳಲ್ಲಿ ನಾನಾ ಪ್ರಕಾರ ಗಳಲ್ಲಿ ನಾನಾ ಅಂತರಗಳಲ್ಲಿ ಅದು ಅನುಭವಕ್ಕೆ ಮಿಂಚುತ್ತದೆ, ಮಿಣುಕುತ್ತದೆ; ಹೊಳೆದಳಿಯುತ್ತದೆ; ಇಣುಕಿ ಮರೆಯಾಗುತ್ತದೆ.

ಬಹುಶಃ ಅದಕ್ಕೆ ಪಕ್ಷಪಾತವಿಲ್ಲ. ನೀತಿ ಅನೀತಿ, ಒಳ್ಳೆಯದು ಕೆಟ್ಟದು, ಮಂಗಳ ಅಮಂಗಳ, ಶಿವ ಅಶಿವ ಎಂಬ ಮಾನವ ನಿರ್ಮಿತ ಶಿಷ್ಟಾಶಿಷ್ಟ ವಲಯ ಭೇದವಿಲ್ಲದೆ ಎಲ್ಲಿ ಬೇಕಾದರೂ ಅಲ್ಲಿ, ಅದನ್ನು ಪಡೆಯಲು ಅರ್ಹವಾದ ಪ್ರಜ್ಞೆಗೆ,

---

೩ ಸ್ವೇ ಮಹಿಮ್ನಿ ಯದಿ ವಾ ನ ಮಹಿಮ್ನಿ!

೪ ಯೋ ಅಸ್ಯಾಧ್ಯಕ್ಷಃ ಪರಮೇ ವ್ಯೋಮನ್
ಸೋ ಅಙ್ಗ ವೇದ ಯದಿ ವಾ ನ ವೇದ॥ ನಾಸದೀಯ ಸೂಕ್ತ.

ಅದರ ಸಕೃದ್ದರ್ಶನವಾಗುತ್ತದೆ. ಆಫ್ರಿಕದ ಕಾಡುಮನುಷ್ಯನ ತಾಮಸ ರಕ್ತ ಭಯಂಕರವಾದ ದೆವ್ವಂಗುಣಿತದಲ್ಲಿ ಎಂತೊ ಅಂತೆ ಐರೋಪ್ಯನ ನಾಗರಿಕ ಚರ್ಚಿನ ನವುರಾದ ಆರಾಧನೆಯಲ್ಲಿಯೂ ಅದು ಮೈದೋರುತ್ತದೆ. ಶಾಕ್ತ ತಾಂತ್ರಿಕನ ಕರಾಳ ಬಲಿಪೂಜೆಯಲ್ಲೆಂತೊ ಅಂತೆ ವೈಷ್ಣವನ ಪುಷ್ಪಕೋಮಲ ಗಂಧಮಯ ಪೂಜೆಯಲ್ಲಿಯೂ ಅದು ಅನುಭವಕ್ಕೆ ಬರುತ್ತದೆ. ಎಲ್ಲ ಮತಗಳ ಮತ್ತು ಮತೀಯಾನುಭವಗಳ ಮೂಲದಲ್ಲಿ 'ಸವೋಽಹಂ ಸರ್ವಭೂತೇಷು' ಎಂಬಂತೆ ಈ ಭೂಮಾನುಭೂತಿ ಅನಿವಾರ್ಯವಾದ ಆದ್ಯಂಶವಾಗಿರುತ್ತದೆ. ಅದು ದೇವರು, ಸತ್ಯ, ಧರ್ಮ, ಪಾಪ, ಪುಣ್ಯ ಮೊದಲಾದ ಮೂಲಸ್ವರೂಪದ ಮೂಕಭಾವಗಳು ಮೂಡುವ ಮುನ್ನವೆ, ಮಾನವನ ಮನಸ್ಸಿನಲ್ಲಿ ಅವಿನ್ನೂ ಚಿಂತನಸ್ಪಷ್ಟವಾಗುವ ಮುನ್ನವೆ ಇದ್ದು, ಅದ್ಭುತರಸ ಮೂಲವಾದ ಆಶ್ಚರ್ಯಾನುಭವದಲ್ಲಿ ಹೃದ್ಗೋಚರವಾಗುತ್ತದೆ.[೫]

ವಿಶೇಷ ವ್ಯಕ್ತಿಗಳಲ್ಲಿ ವಿಶಿಷ್ಟ ಸನ್ನಿವೇಶಗಳಲ್ಲಿ ಮರ್ತ್ಯಪ್ರಜ್ಞೆ ಪ್ರಲಯವಾಗುವಂತಹ ಘಟ್ಟದಲ್ಲಿ ಅದು ಆವಿರ್ಭೂತವಾದಾಗ ಭೂಮವು ಲೋಕದ ಗಮನಕ್ಕೆ ಬಂದು ಸುಪ್ರಸಿದ್ಧವಾಗಿ ಪೂಜ್ಯವಾಗುತ್ತದೆ. ಶಕ್ತಿ, ಜ್ಯೋತಿ, ತೇಜಸ್ಸು ಅಂತಹ ಪೂರ್ಣಪ್ರಮಾಣದಲ್ಲಿ ಪ್ರಕಟವಾಗುವಾಗ ಆ 'ಭಗವತ್ತು' ವಿಭೂತಿ[೬] ಎಂಬ ಹೆಸರಿನಿಂದ ಪ್ರಖ್ಯಾತವಾಗುತ್ತದೆ. ಆದರೆ ಭೂಮವು ಅದರ ವಿಶಿಷ್ಟ ಸ್ಥಿತಿಯಲ್ಲಿಯೆ, ವಿಭೂತಿರೂಪದಲ್ಲಿಯೆ, ಮಾತ್ರ ಅನುಭೂತವಾಗುತ್ತದೆಂದು ಭಾವಿಸಿದರೆ ತಪ್ಪಾಗುತ್ತದೆ. ಅದು ಅತ್ಯಂತ ಸಾಮಾನ್ಯನ ದೈನಂದಿನ ಸಾಧಾರಣ ಭಯ ಭಕ್ತಿ ಗೌರವ ಪವಿತ್ರತಾಭಾವಗಳಲ್ಲಿಯೂ ಇಣಿಕಿ ಮಿಣುಕುತ್ತದೆ. ಆದರ ಆ ಅಲ್ಪ ಪ್ರಮಾಣದಲ್ಲಿ ಭೂಮವು ನಮ್ಮನ್ನು ದಿಗ್‌ಭ್ರಮೆಗೊಳಿಸದಿರಬಹುದು; ನಮ್ಮ

---

೫. Even on the lowest level of religious development the essential characteristic is therefore to be sought elsewhere than in appearance of 'spirit' representation. It lies rather in a peculiar 'moment' of consciousness, to wit, the stupor before something 'wholly other', whether such an other be named 'spirit' or 'daemon' or 'deva' or be left without a name. Nor does it make any difference in this respect whether, to interpret and preserve their apprehension of this 'other', men coin original imagery of their own or adapt imaginations drawn from the world of legend, the fabrications of fancy apart from and prior to any stirrings of daemonic dread.

— '*The Idea of the Holy*' *by* Rudlof Otto.

೬. 'ವಿಭೂತಿ ಪೂಜೆ'ಯಲ್ಲಿ 'ಕವಿಯಲ್ಲಿ ವಿಭೂತಿ' ಎಂಬ ಪ್ರಬಂಧವನ್ನು ನೋಡಿ.

ಭಾವವನ್ನು ವಿಸ್ಮಯದ ಮಟ್ಟಕ್ಕೆ ಏರಿಸದಿರಬಹುದು; ನಮ್ಮ ಅಹಂಕಾರವನ್ನು ಅಪ್ಪಳಿಸಿ, ಅದನ್ನು ವಿರಾಟ್‌ಶೂನ್ಯತೆಗದ್ದಿ, ತನ್ನ ಭಗವದ್‌ವಿಭೂತಿಯಿಂದ ನಮ್ಮನ್ನು ಆಕ್ರಮಿಸಿ ನಮ್ಮ ಭಯ ಭಕ್ತಿ ಪೂಜೆ ಗೌರವಗಳನ್ನು ಸೂರೆಗೊಳ್ಳದಿರ ಬಹುದು. ಆದರೂ ಅತ್ಯಂತ ಯಃಕಶ್ಚಿತನ ಉಪಾಸನೆಯ ಅಜ್ಞಾತವಾದ ಅತಿ ಸಾಮಾನ್ಯ ಸಂದರ್ಭದಲ್ಲಿಯೂ ಈ ಭೂಮದ ಅನುಭೂತಿ ಆ ಅಲ್ಪದ ಹಿನ್ನೆಲೆಯಲ್ಲಿ ಮಿಂಚಿಯೆ ಮಿಂಚುತ್ತದೆ.[೭] ಶ್ರೀರಾಮಕೃಷ್ಣರಂತಹರ ಸಮಾಧಿಸ್ಥಿತಿಯಲ್ಲಿ ಅದು ತನ್ನ ವಿಶೇಷ ಪ್ರಮಾಣದಲ್ಲಿ ಅಥವಾ ತನ್ನ ಪೂರ್ಣತೆಯಲ್ಲಿ ಪ್ರಕಟವಾಗಿ, ಲೋಕ ಲೋಚನಗಳನ್ನು ಸೆಳೆದು, ಜಗದ್ ವಿಸ್ಮಯಕರವಾಗಿ, ಪೂಜಿತವಾಗುತ್ತದೆ. ಆದರೆ ಪ್ರತಿಯೊಬ್ಬ ಮಾನವನ ಚೇತನ ತನ್ನ ಪೂಜಾಚಿತ್ತಭಂಗಿಯಲ್ಲಿ ಭಕ್ತಿರಸನೆ ಯಿಂದ ಆಸ್ವಾದಿಸುವ ರಸವೂ ಈಷತ್‌ಪ್ರಮಾಣದಲ್ಲಿ ಹೃದಯಸ್ಯಂದಿಯಾಗುವ ಆ ಭೂಮವೆ ಆಗಿರುತ್ತದೆ.

೨

ಇದುವರೆಗೆ ನಾವು ಪ್ರಸ್ತಾಪಿಸುತ್ತಿದ್ದ ಭೂಮಾನುಭೂತಿ ಮತಕ್ಕೂ, ಧರ್ಮಕ್ಕೂ, ಮತ್ತು ಅವೆರಡೂ ಇನ್ನೂ ಬುದ್ಧಿಸ್ಪಷ್ಟವಾಗುವುದಕ್ಕೆ ಮುನ್ನಿನ ಪ್ರಪ್ರಾಗವಸ್ಥೆಯಲ್ಲಿ ಭಾವಗೋಚರವಾಗುತ್ತಿದ್ದ ಅದರ ಸ್ವರೂಪಕ್ಕೂ ಹೆಚ್ಚಾಗಿ ಅನ್ವಯವಾಗುತ್ತದೆ.

ಆದರೆ ನಮ್ಮ ಈ ಪ್ರಕೃತ ಲೇಖನಕ್ಕೆ ಮುಖ್ಯವಾಗಿ ಪ್ರಸ್ತುತವಾದುದೆಂದರೆ: ಸೌಂದರ್ಯಾನುಭವದ ಮಟ್ಟದಲ್ಲಿ ಅಥವಾ ರಸಾನುಭವದ ಚೌಕಟ್ಟಿನಲ್ಲಿ ಅಥವಾ ಕಲಾ ಭೂಮಿಕೆಯಲ್ಲಿ ಸಹೃದಯಪ್ರಜ್ಞೆಗೆ ಅಭಿವ್ಯಕ್ತವಾಗುವ ಭೂಮಾನುಭೂತಿ.

ಯಾವ ಭೂಮವು ತ್ರಿತ್ವಮುಖವಾಗಿ ಸತ್ ಚಿತ್ ಆನಂದವಾಯಿತೊ ಆ ಆನಂದದಿಂದಲೆ ಸಮಸ್ತ ಸೃಷ್ಟಿಯೂ ಹೊಮ್ಮುತ್ತದೆಂದೂ, ಆ ಆನಂದದಲ್ಲಿಯೆ ಬಾಳುತ್ತಲಿರುವುದೆಂದೂ, ಆ ಆನಂದದ ಕಡೆಗೆ ಸಾಗುತ್ತಿದೆಯೆಂದೂ, ಆ ಆನಂದ ವನ್ನೆ ಪ್ರವೇಶಿಸಿ ವಿಲಯನಹೊಂದುತ್ತದೆಯೆಂದೂ ಋಷಿಯ ದರ್ಶನ ಸಾರುತ್ತದೆ.

---

೭. Some modern students of religion........have been mislead by their interest in the experiences of exceptional into a distorted account of religion as a whole........Mystical experience is surely after all something exceptional. Religion is something wider than Mysticism. Yet sometimes one gets the impression that the non-mystic is only rather grudgingly and half-heartedly admitted to have any first-hand genuine religious experience at all. The abnormal is often the more interesting, the more fascinating study, but it ought not on that account to be allowed to usurp the place of the normal. —Translator's preface to '*The Idea of the Holy*'.

ಅಲ್ಲಿ ಅನ್ನ, ಪ್ರಾಣ, ಮನಸ್ಸು, ವಿಜ್ಞಾನಗಳಲ್ಲಿ ಒಂದೊಂದನ್ನೂ ಕ್ರಮವಾಗಿ 'ಬ್ರಹ್ಮವೆಂದು ತಿಳಿ' ಎಂದು ಹೇಳಿದಂತೆಯೆ ತುತ್ತತುದಿಯಲ್ಲಿ ಆನಂದವನ್ನೂ ಬ್ರಹ್ಮವೆಂದೆ ತಿಳಿ ಎಂದು ಉಪನಿಷತ್ತು ಬೋಧಿಸಿದೆ.[೮] ಆ ಭೂಮದ ಈ ಆನಂದ ಮುಖವೆ ಸೃಷ್ಟಿಯಲ್ಲಿ ಸೌಂದರ್ಯವಾಗಿ ಕವಿ ಸಹೃದಯ ಚೇತನಕ್ಕೆ ರಸಾನುಭೂತಿಯಾಗಿ ಪರಿಣಮಿಸಿ ಪ್ರಜ್ಞಾಗೋಚರವಾಗುತ್ತದೆ. ಆದ್ದರಿಂದಲೆ ಕಾವ್ಯಮಿಾಮಾಂಸೆಯಲ್ಲಿ ವಿಶೇಷವಾಗಿ ಪ್ರಚುರವಾಗಿರುವ 'ರಸ' ಎಂಬ ಪದದ ವ್ಯಾಪ್ತಿ ಕವಿಯ ಸೌಂದರ್ಯಾನುಭವದಿಂದ ಮೊದಲಾಗಿ ಋಷಿಯ ಸಾಕ್ಷಾತ್ಕಾರದ ಬ್ರಹ್ಮಸ್ವರೂಪದ ವರೆಗೂ ಏರಿರುವಂತೆ ತೋರುತ್ತದೆ.[೯]

ಸೌಂದರ್ಯವು ಲೋಕದಲ್ಲಿಯೂ ಅನುಭವಕ್ಕೆ ಬರುತ್ತದೆ; ಕಾವ್ಯ ಕಲಾದಿಗಳಲ್ಲಿಯೂ ಅನುಭವಕ್ಕೆ ಬರುತ್ತದೆ. ಅರಣ್ಯಮಯ ಪರ್ವತಶ್ರೇಣಿ, ಸೂರ್ಯೋದಯದ ಸ್ವರ್ಣಶ್ರೀಯಲ್ಲಿ ಮನೋಹರ ಮೇಘಚಿತ್ರಗಳಿಂದ ಶೋಭಿಸುವ ದಿಗಂತಾಕಾಶ, ತಿಂಗಳಬೆಳಕಿನ ಮಂಜುಮಾಯೆಯಲ್ಲಿ ಅಂಚುಕಟ್ಟಿದಂತಿರುವ ಕಾಡಿನ ನಡುವೆ ಹರಿಯುವ ಹೊಳೆಯ ಬಿಳಿಮಳಲ ದಿಣ್ಣೆಗಳ ಶೋಭೆ, ವಸಂತೋದಯದಲ್ಲಿ ಹೂತುಂಬಿ ಲಕ್ಷ ಲಕ್ಷ ಮಧುಕರ ಝೇಂಕಾರದಿಂದ ಮನಂಗೊಳಿಸುವ ವೃಕ್ಷರಾಜಿ, ಇತ್ಯಾದಿ ಇತ್ಯಾದಿಗಳನ್ನು ನೋಡಿ, ಕಂಡು, ಸವಿದಾಗ ಅನುಭವವಾಗುತ್ತದೆ ಆ ಸೌಂದರ್ಯ.[೧೦] ಹಾಗೆಯೆ ನಿಸರ್ಗವ್ಯಾಪಾರವನ್ನಾಗಲಿ ಮಾನವನ ಬಹುಮುಖ ಜೀವನವನ್ನಾಗಲಿ ಕಲಾಪ್ರತಿಭೆ ನಿರ್ಮಿಸಿದಾಗಲೂ ಅದನ್ನು ಸವಿಯುವ ನಮ್ಮ ಅನುಭವವನ್ನು ಸೌಂದರ್ಯಾನುಭವ ಅಥವಾ ರಸಾನುಭವ ಎಂದು ಕರೆಯುತ್ತೇವೆ.

ಈ ಸೌಂದರ್ಯಮಾಧ್ಯಮದಲ್ಲಿ ಸತ್ಯ ಪ್ರಕಟವಾಗುತ್ತದೆ; ಶಿವ ಪ್ರಕಟವಾಗುತ್ತದೆ; ಹಾಗೆಯೆ ಭೂಮವೂ ಪ್ರಕಟವಾಗುತ್ತದೆ. ಸೌಂದರ್ಯಮಾಧ್ಯಮದಲ್ಲಿ ಅಲ್ಲದೆ ಬುದ್ಧಿಪ್ರಧಾನವಾದ ರೀತಿಯಲ್ಲಿ ಸತ್ಯ ಪ್ರಕಟವಾಗುವುದನ್ನು ನಾವು ವಿಜ್ಞಾನಶಾಸ್ತ್ರ ಎಂದು ಕರೆಯುತ್ತೇವೆ. ಶಿವ ಪ್ರಕಟವಾಗುವುದನ್ನು ನೀತಿಶಾಸ್ತ್ರ ಮಾನವಶಾಸ್ತ್ರ ಇತಿಹಾಸ ಸಮಾಜಶಾಸ್ತ್ರ ಎಂದೆಲ್ಲಾ ಕರೆಯುತ್ತೇವೆ. ಭಾವಾಂಶ, ಚಿಂತನಾಂಶ, ಕಲ್ಪನಾಂಶ, ರೂಪಾಂಶ ಎಂಬ ಸಾಹಿತ್ಯದ ಮೂಲತತ್ತ್ವಗಳಲ್ಲಿ

---

೮. ತೈತ್ತಿರೀಯೋಪನಿಷತ್ : ಭೃಗುವಲ್ಲೀ—ಅನುವಾಕ II–III–IV–V–VII.

೯. 'ರಸೋ ವೈ ಸಃ' ಎಂಬ ಮುಂದಿನ ಪ್ರಬಂಧವನ್ನು ನೋಡಿ.

೧೦. ಇಲ್ಲಿ ಕೊಟ್ಟಿರುವ ನಿದರ್ಶನಗಳೆಲ್ಲ ಪ್ರಕೃತಿ ಸೌಂದರ್ಯಕ್ಕೇ ಸಂಬಂಧಪಟ್ಟಿವೆ. ಏಕೆಂದರೆ ನಿಸರ್ಗ ದೃಶ್ಯಗಳನ್ನು ಸಂಗದೂರವಾಗಿ ಸವಿಯಲು ಸಾಧ್ಯವಾಗುವಂತೆ ಮಾನವ ವ್ಯಾಪಾರಗಳನ್ನು ಸವಿಯಲು ಸಾಮಾನ್ಯ ಮಾನವನಿಗೆ ಸಾಧ್ಯವಾಗುವುದಿಲ್ಲ. ಆದ್ದರಿಂದ, ಆ ಲೋಕಾನುಭವ ರಸಾನುಭವದ ಮಟ್ಟಕ್ಕೆ ಏರುವುದಿಲ್ಲ. ಅದು ಸಂಗದೂರವಾಗಿ ರಸಾನುಭವದ ಮಟ್ಟಕ್ಕೆ ಏರಬೇಕಾದರೆ ಕಾವ್ಯಕಲಾದಿ ಪ್ರಪಂಚಕ್ಕೆ ಹೋಗಬೇಕಾಗುತ್ತದೆ. ಮುಂಬರಲಿರುವ 'ರಸೋ ವೈ ಸಃ' ಪ್ರಬಂಧದಲ್ಲಿ ವಾಚಕರಿಗೆ ಇದರ ಜಿಜ್ಞಾಸೆ ದೊರೆಯುತ್ತದೆ.

ಚಿಂತನಾಂಶದ ಸಾಮಗ್ರಿ ಒದಗುವುದು ಬುದ್ಧಿಪ್ರಧಾನವಾಗಿರುವ ಆ ಶಾಸ್ತ್ರವಸ್ತುಗಳಿಂದಲೆ.

ಸತ್ಯವೂ ಶಿವವೂ ಸೌಂದರ್ಯದ ಮೂಲಕವೇ ನಮ್ಮ ಅನುಭವಕ್ಕೆ ಬರಬೇಕು ಎಂದೇನೂ ನಿಯತಿಯಿಲ್ಲ. ಸತ್ಯಕ್ಕೆ ಶಿವಕ್ಕೆ ಸೌಂದರ್ಯವಲ್ಲದ ಬೇರೆ ದಾರಿಗಳೂ ಇವೆ. ಹಾಗೆಯೆ ಭೂಮವೂ ಸೌಂದರ್ಯದ ಮಾಧ್ಯಮದಲ್ಲಿಯೇ ನಮಗೆ ಗೋಚರವಾಗಬೇಕು ಎಂದೇನೂ ನಿಯತಿಯಿಲ್ಲ. ಭೂಮಕ್ಕೆ ಸೌಂದರ್ಯವಲ್ಲದ ಬೇರೆ ದಾರಿಗಳಿವೆ. ಪ್ರಪಂಚದ ವಿವಿಧ ಮತಗಳೂ ವಿವಿಧ ಯೋಗಮಾರ್ಗಗಳೂ ತಮ್ಮ ತಮ್ಮ ಸಾಧಕರನ್ನು ಸತ್ಯದ ನೆಲೆಗೂ ಶಿವದ ನೆಲೆಗೂ ಭೂಮಕ್ಕೂ ಕೊಂಡೊಯ್ದಿವೆ ಎಂಬುದಕ್ಕೆ ಅನೇಕ ನಿದರ್ಶನಗಳಿವೆ.

ಭೂಮದ ಸಾಕ್ಷಾತ್ಕಾರಕ್ಕೆ ಸೌಂದರ್ಯದ್ದಲ್ಲದ ಬೇರೆ ಪ್ರಕಾರಗಳಿದ್ದರೂ ಅವು ಯಾವುವೂ ಸೌಂದರ್ಯದಂತೆ ಸಾಮಾನ್ಯ ಜನ ಸುಲಭವೂ ಅಲ್ಲ, ಬಹು ಜನ ಪ್ರಿಯವೂ ಅಲ್ಲ, ಸರ್ವಾಸ್ವಾದನೀಯವೂ ಅಲ್ಲ. ಸೌಂದರ್ಯದ ದಾರಿ ಶುದ್ಧ ಸತ್ಯದ ಮತ್ತು ಶ್ವೇತಶಿವದ ತಪಃಪಥದಂತೆ ಕಠೋರವಾದುದಲ್ಲ. ಅಪೂರ್ವ ಮಾನವಚೇತನಗಳಿಗೆ ಮಾತ್ರ ಆ 'ಕ್ಷುರಸ್ಯಧಾರಾನಿಶಿತ'ವಾದ 'ದುರತ್ಯಯ'ವಾದ 'ದುರ್ಗ'ವಾದ ಪಥಗಳಿಗೆ ಪ್ರವೇಶವಿರುತ್ತದೆ. ಸಿದ್ಧಿಯ ಪ್ರಯೋಜನದ ದೃಷ್ಟಿಯಿಂದ ಉಳಿದ ದಾರಿಗಳಿಗೆ ಒಂದಿನಿತೂ ಕೀಳಲ್ಲವಾದರೂ ರಸಲೋಲುಪವೂ ಸುಖಪ್ರಿಯವೂ ಆದ ನರಚೇತನಕ್ಕೆ ಸೌಂದರ್ಯದ ದಾರಿಯೆ ಅತ್ಯಂತ ಮಧುರವೂ ಆಹ್ಲಾದಕರವೂ ಆಕರ್ಷಣೀಯವೂ ಆಗಿ ಪರಿಣಮಿಸಿದೆ.

ಪ್ರಾಚೀನ ಮನುಷ್ಯ ತನ್ನ ಪ್ರಥಮಪ್ರಜ್ಞೆಯ ಕಣ್ಣು ತೆರೆದಂದು, ಬುದ್ಧಿ ಇನ್ನೂ ತನ್ನ ಅವ್ಯಕ್ತ ದಶೆಯಲ್ಲಿರುವಂದು, ಸತ್ಯ ಶಿವ ಮೊದಲಾದ ತತ್ತ್ವಗಳ ಚಿಂತನೆ ಇನ್ನು ಅಗೋಚರ ಬೀಜಭೂಮಿಕೆಯಲ್ಲಿರುವ ಕಾಲದಲ್ಲಿ ಅಪರಿಚಿತವೂ ಅದ್ಭುತವೂ ಭೀಕರವೂ ಆದ ಭೀಮರಮ್ಯ ನಿಸರ್ಗದ ದೃಶ್ಯಗಳನ್ನೂ ವಸ್ತುಗಳನ್ನೂ ವ್ಯಾಪಾರಗಳನ್ನೂ ಸಂಧಿಸಿದಂದು ಈ ಭೂಮದ ಪ್ರಥಮ ಪರಿಚಯಕ್ಕೆ ಪೀಠಿಕೆಯಾಗುತ್ತದೆ:

ಅರುಣೋದಯದ ಆಕಾಶದಲ್ಲಿ ಹೊಗೆಂಪಿನ ಹೊಳೆ ಹರಿದು, ಮುಗಿಲ ಲೋಕ ಮನೋಹರವಾಗಲು, ಆ ಚೆಲುವನ್ನು ನೋಡಿ, ಅಚ್ಚರಿಯ ಆನಂದದಲ್ಲಿ ನಲಿಯುತ್ತಾನೆ. ತುಸುಹೊತ್ತಿನಲ್ಲಿಯೆ ಮರಗಿಡಗಳ ಹಸುರ ನಡುವಣಿಂದ ಹಕ್ಕಿಗಳ ನೂರಾರು ಇಂಚರ ಕಿವಿಗೆ ಸವಿಹೊಗಿಸಿದಾಗ ಆ ಇಂಪಿಗೆ ಬಗೆ ಸೋತು ಕುಣಿಯುತ್ತಾನೆ. ಬಣ್ಣ ಬಣ್ಣದ ಹೂವುಗಳ ಕಣ್ಸೊಗಕೆ ಬೆರಗಾಗಿ ಒಲಿಯುತ್ತಾನೆ. ಜನ್ಮವೆತ್ತ ಜೀವದ ಸುಖವು ಜೀವನದ ಸೌಂದರ್ಯಾನುಭವವಾಗಿ, ಆಲೋಚನೆಯ ರೂಪದಲ್ಲಿ ಬುದ್ಧಿಗೋಚರವಾಗದಿದ್ದರೂ, ಹೃತ್‌ಸಂವೇದ್ಯವಾಗುತ್ತದೆ.

ಆದರೆ ಹಗಲು ಮುಗಿದು ಇರುಳಾಗುತ್ತದೆ. ಹಗಲೆಲ್ಲ ಅರಳಿದ್ದು ನಲಿದ ಆ ಪ್ರಾಚೀನ ಶಿಶುಮಾನವನ ಚೇತನ ಆ ಪ್ರಥಮ ರಾತ್ರಿಯ ಮುಂದೆ ತತ್ತರಿಸುತ್ತದೆ.

ಅದರ ಮಹಾಶೂನ್ಯತೆ ಅವನನ್ನು ಸೇದಿ ಎಳೆದು ಇಲ್ಲಗೈವಂತೆ ತೋರುತ್ತದೆ. ಎಲ್ಲವನ್ನೂ ನೊಣೆದು ನುಂಗಿದಂತೆ ಅಳಿಸಿ ಬಿಡುವ ಅದರ ಕಗ್ಗತ್ತಲೆಗೆ ಭೀತಿಯಿಂದ ಸೆಡೆತು, ಯಾವುದಾದರೂ ಪೊಟರೆಯಲ್ಲಿಯೊ ಗವಿಯಲ್ಲಿಯೊ ಅವಿತುಕೊಂಡು ತನ್ನನ್ನು ತಾನೆ ಕಾಪಾಡಿಕೊಳ್ಳಲೆಳಸುತ್ತಾನೆ. ಅದರ ಮೌನಕ್ಕೆ, ಶಬ್ದಶೂನ್ಯತಾ ಭೀಷಣತೆಗೆ, ಅವನಿಗೆ ಉಸಿರು ಕಟ್ಟಿದಂತಾಗುತ್ತದೆ. ಹಗಲು ಅಷ್ಟೇನೂ ಭೀಕರವಾಗಿ ತೋರದ ಹೆಬ್ಬಂಡೆ ಏನೋ ಆಕಾರ ಪಡೆಯುತ್ತದೆ. ಏನೋ ಶಕುನಪೂರ್ಣವಾಗುತ್ತದೆ. ಅವನಿಗಾಗುವ ಆ ಭಯಕ್ಕೆ ಕಾರಣವಿಲ್ಲದಿರಬಹುದು. ಹುಲಿಯೊ ಹಾವೊ ಇದಿರು ಬಂದಾಗ ಅಥವಾ ಬರಬಹುದು ಎಂದು ಊಹಿಸಿದಾಗ ಉಂಟಾಗುವ ಹೆದರಿಕೆಯಂತಲ್ಲ ಆ ಭೀತಿ. ಹಾಗೆ ಸಕಾರಣವಾಗಿದ್ದರೆ ಸ್ಪಷ್ಟವಾಗಿದ್ದರೆ ಆ ಬಲಿಷ್ಠನಾದ ಒರಟು ಮಾನವನ ಪ್ರತಿಕ್ರಿಯೆ ಹೆದರಿಕೆಯಲ್ಲದೆ ಬೇರೆಯಾದರೂ ಆಗಬಹುತ್ತೇನೊ! ಆದರೆ ಅದು ನಿಷ್ಕಾರಣಭೀತಿ. ಅದಕ್ಕೆ ರೂಪವಿಲ್ಲ, ಆಕಾರವಿಲ್ಲ; ಗೊತ್ತು, ಗುರಿ, ದಿಕ್ಕು, ದೆಸೆ ಏನೊಂದೂ ಇಲ್ಲ. ಆದರೆ ಹೃದಯಕಂಪನಕಾರಿಯಾಗಿ ದೇಹವನ್ನೆಲ್ಲ ವ್ಯಾಪಿಸುತ್ತದೆ. ಅದು ದೈಹಿಕವೂ ಅಲ್ಲ; ಮಾನಸಿಕವೂ ಅಲ್ಲ; ಅವನಿಗೆ ಚಿಂತನೆ ಸಾಧ್ಯವಾಗಿದ್ದರೆ, ಅದರ ಸ್ವರೂಪವನ್ನು ಅಪ್ರಾಕೃತವೆಂದು ಗುರುತಿಸುತ್ತಿದ್ದನಲ್ಲವೆ? ಆ 'ಅಪ್ರಾಕೃತ'ದ ಅನುಭವದಲ್ಲಿಯೆ ಭೂಮಾನುಭೂತಿಯ ಪ್ರಥಮಸ್ಪಂದನ ಪ್ರಾರಂಭವಾಗುತ್ತದೆ.

ಪ್ರಾಚೀನ ಮಾನವ ಎಂಬ ಪದದಲ್ಲಿ ಪ್ರಾಚೀನ ಎಂಬುದರ ಅರ್ಥ ಕಾಲನಿರ್ದೇಶಕವಾದರೂ ಬರಿಯ ಕಾಲಕ್ಕೆ ಮಾತ್ರ ಅನ್ವಯವಾಗಿ ನಿಂತುಬಿಡುವುದಿಲ್ಲ. ಸಮಕಾಲೀನನಾದ ಅತ್ಯಂತ ಅರ್ವಾಚೀನ ಮಾನವನಲ್ಲಿಯೂ ಆ 'ಪ್ರಾಚೀನ'ತ್ವ ಇದ್ದೇ ಇರುತ್ತದೆ.[೧೧] ಅದು ಅವನ ಚೇತನೆಯ ಭದ್ರಭಿತ್ತಿಯಾಗಿರುತ್ತದೆ. ಅದು ಅವನ ಪ್ರಾಕ್ ಜನ್ಮ ಸಂಸ್ಕಾರಗಳ ತವರುಮನೆ. ಅವನ ಪಾತಾಳಪ್ರಜ್ಞೆಯ ನೆಲೆವೀಡು. ಆದ್ದರಿಂದಲೆ ಅಂದಿನ ಪ್ರಾಚೀನನಂತೆಯೆ ಇಂದಿನ ನವೀನನೂ ಆ ಭೂಮವನ್ನು ಅನುಭವಿಸಲು ಅಭ್ಯಾಸ ಪ್ರಯತ್ನಗಳೊಂದೂ ಇಲ್ಲದೆಯೆ ಸಮರ್ಥನಾಗುತ್ತಾನೆ.

ಆ ಅನುಭವ ನಾನಾ ನಾಮರೂಪಗಳನ್ನು ಧಾರಣೆಮಾಡುತ್ತದೆ. ಒಬ್ಬನೆ ನಿರ್ಜನ ಪ್ರದೇಶದ ಪಾಳುಮನೆಯಲ್ಲಿ ಮಲಗಬೇಕಾಗಿ ಬಂದಾಗ ನಟ್ಟಿರುಳು

---

೧೧. Every civilized human being, whatever his conscious development, is still an *archaic man* at the deeper level of his psyche. Just as the human body connects us with the mammals and displays numerous relics of earlier evolutionary stages going back even to the reptilian age, so the human psyche is likewise a product of evolution which, when followed up to its origins, shows countless archaic traits :—'Archaic Man', 'Modern Man in search of A Soul' by C. G. Jung.

ಎಚ್ಚರವಾಗಿ ನರ ನರಗಳಲ್ಲಿ ಚಳಿ ಸಂಚರಿಸುತ್ತದೆ. ಏನೋ ಕಾಣಿಸಿದಂತಾಗುತ್ತದೆ; ಏನೋ ಕೇಳಿಸಿದಂತಾಗುತ್ತದೆ; ಯಾರೋ ನಡೆದಾಡಿದಂತೆ ಸದ್ದು; ಹಿಂದುಗಡೆ ಯಿಂದ ಮುಟ್ಟಿದಂತೆ! ಅದಕ್ಕೊಂದು ನಾಮರೂಪ ಸಿದ್ಧವಾಗಿ ದೆವ್ವದ ಕತೆ ಹುಟ್ಟುತ್ತದೆ.

ಹಳ್ಳಿಯ ಹೊರಗಡೆ ಒಂದು ಹೆಮ್ಮರವಿರುತ್ತದೆ. ಅದರ ಗಾತ್ರವೊ ಏಳೆಂಟು ಜನರು ತಬ್ಬಿದರೂ ಸಾಲದು. ಎತ್ತರವೊ ಕೊರಳು ಸೋತು ಕಣ್ಣು ದಣಿಯುವಷ್ಟು. ಅದರ ಒಂದೊಂದು ಕೊಂಬೆಯೂ ಬಲ್ಮರದಂತೆ ಕೈಚಾಚಿರುತ್ತದೆ. ಎಲೆ ದಟ್ಟವಾಗಿ ಬೆಳೆದು ಮರ ಕತ್ತಲೆಯ ಗೂಡಾರದಂತಿರುತ್ತದೆ. ಅದನ್ನು ನೋಡಿದರೆ ಏನೋ ದೊಡ್ಡದನ್ನು ಕಂಡಂತಾಗುತ್ತದೆ. ಅದರ ಆ ರಹಸ್ಯಮಯ ಮೌನದಲ್ಲಿ ಏನೋ ಗೌರವಾಸ್ಪದವಾದುದು ನೆಲಸಿರುವಂತೆ ಭಾಸವಾಗುತ್ತದೆ. ಅದರ ಆ ಬೃಹತ್ತನ್ನು ಕಂಡೊಡನೆ ನಮ್ಮ ಅಲ್ಪತೆ ಅಪ್ಪಳಿಸಿದಂತಾಗಿ ಗಮನಕ್ಕೂ ಬರುತ್ತದೆ. ನಾವರಿಯ ಲಾರದ ಏನೊ ಮಹತ್ತು ಅದರಲ್ಲಿ ಸ್ಫುರಿಸಿ ನಮ್ಮನ್ನು ಪುಲಕಿತರನ್ನಾಗಿಮಾಡುತ್ತದೆ. ಆ ಪುಲಕದಲ್ಲಿ ಗೌರವದಂತೆಯೆ ಭೀತಿಯೂ ಸಂಚರಿಸುತ್ತದೆ. ಕೈಮುಗಿಯು ವಂತಾಗುತ್ತದೆ; ಅಡ್ಡಬೀಳುವಂತಾಗುತ್ತದೆ; ಕ್ಷಮೆ ಬೇಡುವಂತಾಗುತ್ತದೆ; ಪ್ರಾರ್ಥಿಸ ಬೇಕು ಅನ್ನಿಸುತ್ತದೆ. ವೃಕ್ಷದೇವತೆ ಅವತರಿಸುತ್ತದೆ. ಮರದಲ್ಲಿ ಭೈರವನ ಆವಾಹನೆ ಯಾಗುತ್ತದೆ; ಗ್ರಾಮಮಾರಿಕಾ ಶಕ್ತಿಯ ಆವಾಸವೂ ಆದೀತು!

ಯಾರಾದರೂ ಅಪ್ಪಿತಪ್ಪಿ ಮರದ ಬುಡದಲ್ಲಿ ಮೈಲಿಗೆ ಮಾಡಿದರೆ ಬಂತು ಪ್ರತೀಕಾರ; ತಪ್ಪು ಕಾಣಿಕೆ ಕಟ್ಟದಿದ್ದರೆ ಮುಗಿಯಿತು ಗತಿ. ಯಾವನಾದರೂ ಆಧುನಿಕ ವಿಜ್ಞಾನ ದೃಷ್ಟಿಯ ವಿಚಾರವಾದಿ ಅದರಲ್ಲಿ ಮರತನವನ್ನೆ ಮಾತ್ರ ಕಂಡು, ಹಳ್ಳಿಯ ಸಾವಿರ ಹೃದಯಗಳ ಭೂಮಾನುಭೂತಿಯನ್ನು ಧಿಕ್ಕರಿಸಿ, ಅದನ್ನು ಕಡಿದನೋ, ಬಂತು ಕೇಡು! ಅವನಿಗಲ್ಲದಿರಬಹುದು; ಆ ಹಳ್ಳಿಗೇ! ಈ ಮನೆಯಲ್ಲಿ ರಕ್ತ ಕಾರಿಕೊಂಡು ಮಗು ಸತ್ತಿತು. ಆ ಮನೆಯಲ್ಲಿ ಇದ್ದಕ್ಕಿದ್ದಂತೆ ಎಲ್ಲರೂ ಏನೋ ಆಗಿ ಮೃತಪಟ್ಟರು. ಆ ಅಜ್ಜನಿಗೆ ಏನೋ ಕಾಣಿಸಿಕೊಂಡು ಹೇಳಿ ಹೋಯಿತಂತೆ! ಸರಿ, ಹಳ್ಳಿಯೆ ಖಾಲಿ![೧೨] ಭೂಮದ ಅನುಭೂತಿ ಬರಿಯ ವೈಯಕ್ತಿಕ ಭಾವದ ಅನುಭವ ಮಾತ್ರದಲ್ಲ; ಅದು ವಸ್ತು; ಅದು ಶಕ್ತಿ; ನಿಗ್ರಹಾನುಗ್ರಹ ಸಮರ್ಥವಾದ ಚೈತನ್ಯವೂ ಆಗುತ್ತದೆ.

ಭೂಮದ ಇಂತಹ ಅನುಭೂತಿ ಕೋಟ್ಯಂತರ ಜನರ ಹೃದಯದಲ್ಲಿ, ಕೋಟ್ಯಂತರ ಸನ್ನಿವೇಶಗಳಲ್ಲಿ ದಿನದಿನವೂ ಸಂಚರಿಸುತ್ತಿರುತ್ತದೆ. ದಿನದಿನದ ಸಂಗತಿಯಾಗಿ ಅದು ವಿಶೇಷದಂತೆ ತೋರದೆ ಸಾಮಾನ್ಯತೆಯಲ್ಲಿ ಹುದುಗಿಕೊಂಡಿದೆ.

---

೧೨. ಈ ಸಂಗತಿ ನಡೆದ ಒಂದು ಘಟನೆಯಲ್ಲಿಯೂ ಆಧಾರ ಪಡೆದಿದೆ, ಮನಶ್ಶಾಸ್ತ್ರದಲ್ಲಿ ಮಾತ್ರವಲ್ಲ.

ಈ ಸಾಮಾನ್ಯತೆಯಲ್ಲಿಯೂ ಅದನ್ನು ಗುರುತಿಸುವ ಸಾಮರ್ಥ್ಯ ಕೆಲವು ವಿಶೇಷ ವ್ಯಕ್ತಿಗಳಿಗೆ ಮಾತ್ರ ಇರುತ್ತದೆ. ಧ್ಯಾನಮಯ ಜೀವನದ ಋಷಿಪ್ರಜ್ಞೆಗೂ ಭಾವಯಿತ್ರೀ ಪ್ರತಿಭೆಯ ಕವಿಪ್ರಜ್ಞೆಗೂ ಆ ಭೂಮಾನುಭೂತಿ ಅದರ ಸಾಧಾರಣ ಸ್ಥಿತಿಯಲ್ಲಿಯೂ ಸುಗೋಚರವಾಗುತ್ತದೆ.[೧೩]

೩

ಭೂಮಾನುಭೂತಿ ತನ್ನ ಸಾಧಾರಣ ಪ್ರಕಾಶನದಲ್ಲಿ ನಮ್ಮ ಗಮನಕ್ಕೆ ಬೀಳದಿದ್ದರೂ ಅದು ವಿಶೇಷ ಪ್ರಮಾಣದಲ್ಲಿ ವಿಭೂತಿಯ ಮಟ್ಟಕ್ಕೇರಿ ಮೈದೋರಿದಾಗ ಲೋಕ ಲೋಚನಗಳನ್ನೆ ಸೆಳೆಯುತ್ತದೆ. ಜಗತ್ತಿನ ನಾನಾ ದೇಶಗಳ ಮತಗಳ ಸುಪ್ರಸಿದ್ಧ ಅಧ್ಯಾತ್ಮ ಜೀವಿಗಳ ಚರಿತ್ರೆಯಲ್ಲಿ, ಯೋಗಿ, ಭಕ್ತ, ಸಾಧಕ, ಸಿದ್ಧ, ಋಷಿ, ಸಂತ, ಕವಿ ಮೊದಲಾದ ಅಂತರ್ಮುಖ ಮತ್ತು ಊರ್ಧ್ವಮುಖ ಸಾಹಸಗಳಲ್ಲಿ ಮುಂಬರಿದವರ ಬದುಕಿನ ಘಟನೆಗಳಲ್ಲಿ ಭೂಮವು ತನ್ನ ವಿಭೂತಿಪ್ರಮಾಣದಲ್ಲಿ ಪ್ರಕಾಶಿತವಾಗಿರುವುದನ್ನು ನಾವು ಕಾಣುತ್ತೇವೆ. ಅಲ್ಲೆಲ್ಲ ಆ ಭೂಮಾನುಭೂತಿ ಕೀರ್ತಿವೆತ್ತು, ಪ್ರಶಂಸಿತವಾಗಿ, ವಿಸ್ಮಯಕ್ಕೂ ಗೌರವಕ್ಕೂ ಭಾಜನವಾಗಿ, ಬಹುಜನ ಪೂಜಿತವಾಗಿದೆ.[೧೪]

ಲೋಕಕ್ಕೆ ಸುಪರಿಚಿತವಾಗಿರುವ ಶ್ರೀ ರಾಮಕೃಷ್ಣ ಪರಮಹಂಸರ ಜೀವನದಲ್ಲಿ ಈ ಭೂಮದ ನಾನಾ ರೀತಿಯ, ನಾನಾ ಅಂತರದ ಮತ್ತು ನಾನಾ ಭೂಮಿಕೆಯ ಅನುಭೂತಿಯ ಘಟನೆಗಳು ಪಂಕ್ತಿ ಪಂಕ್ತಿಯಾಗಿ ನಿಂತಿವೆ. ಅವರ ಜೀವಮಾನದ ಉತ್ತರಾರ್ಧವಂತೂ ನಿರಂತರವೂ ಆಕ್ರಮಣಶೀಲವಾದ ಆ ಭೂಮದ ಆವರ್ತಗರ್ತದ ಸುಳಿ ಸೆಳವುಗಳಿಂದ, ಲೋಕಕಲ್ಯಾಣ ಕಾರ್ಯಾರ್ಥವಾಗಿ, ಪಾರಾಗುವ ಪ್ರಯತ್ನ ಪರಂಪರೆಯಂತೆ ಆಶ್ಚರ್ಯಾವಹವಾಗಿದೆ. ಇತರರ ಸಾಧನೆ ಭೂಮವನ್ನು ಪಡೆಯುವುದಕ್ಕಾಗಿಯೆ ನಡೆದರೆ ಅವರದು ಆ ಭೂಮದಿಂದ ತಪ್ಪಿಸಿಕೊಳ್ಳುವುದಕ್ಕಾಗಿಯೆ ಎಂಬಂತೆ ತೋರುತ್ತದೆ! ಆ ಭೂಮಾನುಭೂತಿಯ ಸ್ಥಿತಿಗೆ ಯೋಗಶಾಸ್ತ್ರದ ಪರಿಭಾಷೆ 'ಸಮಾಧಿ'.

ಭಾವಸಮಾಧಿಯ, ಸವಿಕಲ್ಪಸಮಾಧಿಯ ಮತ್ತು ನಿರ್ವಿಕಲ್ಪ ಸಮಾಧಿಯ ಮೂರು ನಿದರ್ಶನಗಳನ್ನು ಇಲ್ಲಿ ಸೂಚಿಸಬಹುದು.[೧೫]

---

೧೩. ಅಪ್ಪರಿಂದಲೆ ಲೋಕದಲ್ಲಿ ಭೂಮಾನುಭೂತಿಯನ್ನು ಗುರುತಿಸಲೂ ಪಡೆಯಲೂ ಆರದ ಸಾಮಾನ್ಯ ಸಹೃದಯನಿಗೆ ಕಾವ್ಯಕಲಾಸೀಮೆಯಲ್ಲಿ ಅದನ್ನು ಭವ್ಯತಾ ಅನುಭವದ ರೂಪದಲ್ಲಿ ಪಡೆಯಲು ಸುಲಭವಾಗುತ್ತದೆ.

೧೪. ವಾಚಕರು "The Varieties of Religious Experience" ಎಂಬ ವಿಲಿಯಂ ಜೇಮ್ಸ್ ಅವರ ಗ್ರಂಥದಲ್ಲಿ ನಾನಾ ವಿಧವಾದ ಬೇರೆ ಬೇರೆ ಭೂಮಿಕೆಯ ನಿದರ್ಶನಗಳನ್ನು ಕಾಣಬಹುದು.

೧೫. ಕುವೆಂಪು ಅವರ 'ಶ್ರೀ ರಾಮಕೃಷ್ಣ ಪರಮಹಂಸ' ೧೯೫೯ರ ಮೈಸೂರು ವಿಶ್ವವಿದ್ಯಾನಿಲಯದ ಪ್ರಕಟಣೆ—ಪುಟ ೨೨, ೫೧, ೮೭ ನೋಡಿ.

ಅವರ ಜೀವನದಲ್ಲಿ ಅವರಿಗೊದಗಿದ ಮೊತ್ತಮೊದಲನೆಯ ವಿಭೂತಿಸ್ವರೂಪದ ಭಾವಸಮಾಧಿ ನಿಸರ್ಗಸೌಂದರ್ಯದಿಂದ ಪ್ರೇರಿತವಾದದ್ದು. ಎರಡನೆಯದು ಸವಿಕಲ್ಪ ಸಮಾಧಿ; ಅದು ಒದಗಿದುದು ದಕ್ಷಿಣೇಶ್ವರದ ಭವತಾರಿಣಿಯ ಸಾನ್ನಿಧ್ಯದಲ್ಲಿ. ಜಗನ್ಮಾತೆಯ ದರ್ಶನಕ್ಕಾಗಿ ನಿತಾಂತವ್ಯಾಕುಲತೆಯಿಂದ ಹಾತೊರೆದರೂ ಆಕೆ ಮೈದೋರದಿರಲು, ಹೃದಯದ ಅಸಹನೀಯ ಯಾತನೆಯನ್ನು ಸಹಿಸಲಾರದೆ ಗರ್ಭಗುಡಿಯಲ್ಲಿದ್ದ ದೇವಿಯ ಖಡ್ಗವನ್ನು ತುಡುಕುವ ಸಂದರ್ಭದಲ್ಲಿ. ಮೂರನೆಯದು ನಿರ್ವಿಕಲ್ಪಸಮಾಧಿ. ಅದ್ವೈತಗುರು ತೋತಾಪುರಿಯ ಸಮ್ಮುಖದಲ್ಲಿ, ಸಂನ್ಯಾಸ ಸ್ವೀಕಾರಮಾಡಿ ದೀಕ್ಷೆ ತೆಗೆದುಕೊಂಡ ಸಂದರ್ಭದಲ್ಲಿ. "ನಾಮರೂಪ ಜಗತ್ತು ಶೂನ್ಯವಾಗುತ್ತದೆ. ಕ್ಷುದ್ರ ಅಹಂಕಾರವು ಮಹಾಬ್ರಹ್ಮಚೈತನ್ಯದಲ್ಲಿ ವಿಲೀನವಾಗುತ್ತದೆ. ಸಚ್ಚಿದಾನಂದವಾದ ಕೇವಲ ಬ್ರಹ್ಮದಲ್ಲಿ ನೀನು ಅದ್ವಯನಾಗುವೆ. ತತ್ ತ್ವಮ್ ಅಸಿ! ತತ್ ತ್ವಮಸಿ! ತತ್ತ್ವಮಸಿ!"೧೬ ಎಂದು ಸಿದ್ಧಗುರುವಿನ ಶಕ್ತಿಪೂರ್ಣ ಮಂತ್ರವಾಣಿ ಭೂಮದ ಧುಮ್ಮಿಕ್ಕಿಗೆ ಮಹಾಜಲಪಾತ ರಚನೆ ಮಾಡಿದಂದು.

ಎರಡನೆಯ ಮತ್ತು ಮೂರನೆಯ ಸವಿಕಲ್ಪ ಮತ್ತು ನಿರ್ವಿಕಲ್ಪ ಸಮಾಧಿಗಳಿಗಿಂತಲೂ ನಮ್ಮ ಈ ಲೇಖನಕ್ಕೆ ಹೆಚ್ಚು ಪ್ರಕೃತವಾದದ್ದು ಮೊದಲನೆಯ ಸಲದ ಭಾವಸಮಾಧಿ. ಎರಡನೆಯ ಮತ್ತು ಮೂರನೆಯ ಸಂದರ್ಭಗಳಲ್ಲಿ ವ್ಯಕ್ತಿಯ ಅಭೀಪ್ಸೆ, ಇಚ್ಛೆ ಮತ್ತು ಬುದ್ಧಿಗಳು ಮನಃಪೂರ್ವಕವಾಗಿಯೆ ಯಾವುದೊ ಒಂದು ಅನುಭೂತಿಗಾಗಿ ಪ್ರಯತ್ನಿಸುವುದನ್ನು, ಸಾಧನಾನಿರತವಾಗಿರುವುದನ್ನು, ಕಾಣುತ್ತೇವೆ. ಮೊದಲನೆಯದಾದರೋ ಒಂದು ವಿಶೇಷವಾದ ಸೌಂದರ್ಯದ ಸಂನಿವೇಶದಲ್ಲಿ ಭೂಮವು ತನಗೆ ತಾನೆಂಬಂತೆ ಚೇತನವನ್ನು ಸೀಳಿ ಹೊಕ್ಕು, ಪ್ರಜ್ಞೆಗೂ ಆಘಾತವೊದಗಿದಂತಾಗಿ ತತ್ತರಿಸಿ ಬೀಳುವುದನ್ನು ಸಂದರ್ಶಿಸುತ್ತೇವೆ. ಲೋಕರಂಗದಲ್ಲಿ ಇಂತಹ ವಿಭೂತಿಪ್ರಮಾಣದ ಮಹೋನ್ನತ ನಿಸರ್ಗ ಸೌಂದರ್ಯದ ಸಾನ್ನಿಧ್ಯದಲ್ಲಿ, ಪರಮಹಂಸರಂತಹ ದಿವ್ಯಾತ್ಮರ ಮಾತಿರಲಿ ಅದಕ್ಕಿಂತಲೂ ಬಹು ಕೆಳಮಟ್ಟದ ಸಾಮಾನ್ಯರಿಗೂ ಭೂಮಾನುಭೂತಿಯ ತಟಿತ್ತಾಡನವಾಗುವ ನಿದರ್ಶನಗಳನ್ನು ತತ್ತ್ವಶಾಸ್ತ್ರ, ಮನಶ್ಶಾಸ್ತ್ರ, ಮತಶಾಸ್ತ್ರ, ಕಾವ್ಯ ಸಾಹಿತ್ಯಾದಿಗಳಲ್ಲಿ ಯಥೇಚ್ಛವಾಗಿ ಎದುರುಗೊಳ್ಳುತ್ತೇವೆ.೧೭

---

೧೬. ನ ತತ್ರ ಚಕ್ಷುರ್ಗಚ್ಛತಿ ನ ವಾಗ್ಗಚ್ಛತಿ ನೋ ಮನಃ
ನ ವಿದ್ಮೋ ನ ವಿಜಾನೀಮೋ ಯಥೈತದನುಶಿಷ್ಯಾತ್ ॥ ಕೇನೋಪನಿಷತ್.

"ಅಲ್ಲಿಗೆ ಕಣ್ಣು ಹೋಗುವುದಿಲ್ಲ, ವಾಕ್ಕು ಹೋಗುವುದಿಲ್ಲ, ಮನಸ್ಸು ಹೋಗುವುದಿಲ್ಲ, ನಾವು ಅರಿಯೆವು; ಹೇಗೆ ತಿಳಿಸಿಕೊಡಬೇಕೋ ಅದನ್ನೂ ಅರಿಯೆವು"

೧೭. ಆಧ್ಯಾತ್ಮಿಕ ಸಾಮರ್ಥ್ಯವುಳ್ಳ ಸಿದ್ಧಪುರುಷನು ತನ್ನ ಇಚ್ಛಾಮಾತ್ರದಿಂದಲೊ ಸ್ಪರ್ಶಮಾತ್ರದಿಂದಲೊ ಭೂಮಾನುಭೂತಿಯನ್ನು ಇನ್ನೊಬ್ಬನ ಚೇತನದಲ್ಲಿ ಪ್ರಚೋದಿಸಬಲ್ಲ

"ನಿಮ್ಮಲ್ಲಿ ಅನೇಕರಿಗೆ ನೆನಪಿರಬಹುದು, ನಮ್ಮ ತಾರುಣ್ಯಕಾಲದಲ್ಲಿ ಓದಿದ ಕೆಲವು ಕವನಭಾಗಗಳಲ್ಲಿ, ಯಾವುದೊ ಒಂದು ಅತೀಂದ್ರಿಯ ಪ್ರಭಾವಕ್ಕೆ ಒಳಗಾದಂತಾಗಿ, ಅವಿಚಾರ ರಮಣೀಯತಾ ದ್ವಾರದಿಂದ ಮನಃಪ್ರವೇಶಮಾಡಿ ಮೈನವಿರೇಳಿಸಿದ ಆ ಅನಿರ್ವಚನೀಯ ರಸಾನುಭೂತಿ. ಬಹುಶಃ ಈಗ ನಮಗೆ ಆ ಪದಪಂಕ್ತಿಗಳು ಸವೆದುಹೋಗಿ ಕಾಂತಿಮಂದವಾದ ಅಲಂಕಾರಗಳಂತಿರಬಹುದು; ಆದರೆ ಸಂಗೀತವಾಗಲಿ ಭಾವಗೀತವಾಗಲಿ ಎಷ್ಟರಮಟ್ಟಿಗೆ ಆ ಅಸ್ಪಷ್ಟ ಅನಿರ್ವಚನೀಯ ಅತೀಂದ್ರಿಯ ಸೀಮೆಯ ರಹಸ್ಯಮಯ ಆಹ್ವಾನವನ್ನು ನಮ್ಮ ಪ್ರಜ್ಞೆಗೆ ತರಲು ಸಮರ್ಥವಾಗುತ್ತವೆಯೊ ಅಷ್ಟರಮಟ್ಟಿಗೆ ಅವು ಜೀವಂತವೂ ಧ್ವನಿಪೂರ್ವಕವೂ ಆಗಿರುತ್ತವೆ. ಆ ಆಧ್ಯಾತ್ಮಿಕ ಅನುಭೂತಿಗೆ ನಾವು ಜಾಗ್ರತರಾಗಿರುವವರೆಗೆ ಬದುಕು ರಸಮಯವಾಗಿರುತ್ತದೆ; ಅಂತಹ ಹೃದಯ ಸಂವಾದವನ್ನು ಕಳೆದುಕೊಂಡೆವೊ, ಬದುಕು ಮೃತಪ್ರಾಯವಾಗುತ್ತದೆ."[೧೮]

೪

ಭೂಮಾನುಭೂತಿಗೂ ಮತ್ತು ಭವ್ಯತಾ ಅನುಭವಕ್ಕೂ ಇರುವ ಸಂಬಂಧ ಭಾವಕ್ಕೂ ಮತ್ತು ರಸಕ್ಕೂ ಇರುವ ಸಂಬಂಧವನ್ನು ಹೋಲುತ್ತದೆ. ಭಾವ ಒಂದು ಲೋಕವ್ಯಾಪಾರ; ರಸ ಅದರಿಂದ ಮುಂದುವರಿದ ಅಥವಾ ಮೇಲ್ಪರಿದ ಲೋಕೋತ್ತರ ವ್ಯಾಪಾರ. ಆದ್ದರಿಂದ ಭಾವವನ್ನು ಲೌಕಿಕವೆಂದೂ ರಸವನ್ನು ಅಲೌಕಿಕವೆಂದೂ ಕರೆಯುತ್ತಾರೆ.[೧೯]

ಸಾಮಾನ್ಯವಾಗಿ ಭಾವವನ್ನು ಲೋಕದಲ್ಲಿಯೂ ರಸವನ್ನು ಕಾವ್ಯಕಲಾದಿ ರಂಗದಲ್ಲಿಯೂ ಅನುಭವಿಸುತ್ತೇವೆ.[೨೦] ಭಾವಕ್ಕೆ ಲೌಕಿಕಕ್ರಿಯಾಪೇಕ್ಷೆ ಇರುವುದರಿಂದಲೂ ಸ್ವಾರ್ಥ ಮತ್ತು ಅಹಂಕಾರಗಳಿಂದ ಕಲುಷಿತವಾಗಿರುವುದರಿಂದಲೂ ಅದರ ಸ್ಥಾನ ಕೆಳಮಟ್ಟದ್ದು; ಸಂಗದೂರವಾಗಿ ಸಾಕ್ಷೀಪ್ರಜ್ಞಾಧೀನವಾಗಿ, ಶಮತ್ವವನ್ನು ಪಡೆದು, ರಜೋಗುಣದಿಂದ ವಿಮುಕ್ತವಾಗಿ, ಸತ್ವದಿಂದ ಕೂಡಿ, ಆಸ್ವಾದ್ಯವಾಗುವುದರಿಂದ ರಸದ ಸ್ಥಾನ ಮೇಲುಮಟ್ಟದ್ದು. ಆದರೆ ಇಲ್ಲಿ 'ಭೂಮಾನುಭೂತಿ' ಮತ್ತು 'ಭವ್ಯತೆ'ಗಳ ನಡುವೆ, ಕೀಳು ಮೇಲಿನ ಸ್ಥಾನ ಅದಲು ಬದಲಾಗುತ್ತದೆ. ಭೂಮಾನುಭೂತಿ ಲೋಕವ್ಯಾಪಾರವಾದುದರಿಂದ ಅದರ ಸ್ಥಾನ

ನೆಂಬುದಕ್ಕೆ ಶ್ರೀ ರಾಮಕೃಷ್ಣರು ನರೇಂದ್ರನಿಗೆ ನೀಡಿದ ಆತ್ಮಾನುಭವಗಳೆ ಸಾಕ್ಷಿಗಳಾಗಿವೆ. (ಮೈಸೂರು ಶ್ರೀ ರಾಮಕೃಷ್ಣಾಶ್ರಮ ಪ್ರಕಟಿಸಿರುವ ಕುವೆಂಪು ಅವರ 'ಸ್ವಾಮಿ ವಿವೇಕಾನಂದ' ನೋಡಿ) ಕವಿ ತನ್ನ ಕಾವ್ಯದ ವಾಙ್ಮಂತ್ರಶಕ್ತಿಯಿಂದ ಸಹೃದಯನಲ್ಲಿ 'ಭವ್ಯತಾ' ಅನುಭವವನ್ನು ಪ್ರಚೋದಿಸುವುದೂ, ತತ್‌ಸಮವಲ್ಲದಿದ್ದರೂ, ತತ್‌ಸದೃಶವಾಗುತ್ತದೆಯಷ್ಟೆ.

೧೮. "The Varieties of Religious Experience"—William James.

೧೯. 'ರಸಾನುಭವದ ಅಲೌಕಿಕತೆ' ಎಂಬ ಲೇಖನವನ್ನು ನೋಡಿ.

೨೦. ಮುಂಬರಲಿರುವ 'ರಸೋ ವೈ ಸಃ' ಎಂಬ ಲೇಖನವನ್ನು ನೋಡಿ.

ಕೆಳಗೂ 'ಭವ್ಯತೆ' ಕಾವ್ಯ ಕಲಾರಂಗದ ಅನುಭವವಾದ್ದರಿಂದ ಅದರ ಸ್ಥಾನ ಮೇಲೂ ಆಗಬೇಕಿತ್ತು. ಆದರೆ ಹಾಗಾಗುವುದಿಲ್ಲ. ಲೋಕಾನುಭವ ಸ್ವರೂಪದ 'ಭೂಮಾನುಭೂತಿಗೆ' ಕಲಾನುಭವ ಸ್ವರೂಪದ 'ಭವ್ಯತೆ' ಪ್ರತಿಬಿಂಬ ಸ್ಥಾನದಲ್ಲಿ ನಿಲ್ಲುತ್ತದೆ: ಲೋಕರಂಗದಲ್ಲಿ ನಿಜವಾದ ಧ್ಯಾನಸಮಾಧಿಯಲ್ಲಿರುವ ಸಂನ್ಯಾಸಿಗೆ ಸಲ್ಲುವ ಪೂಜಾಗೌರವ ಸ್ಥಾನ ನಾಟಕರಂಗದಲ್ಲಿ ಬರುವ ಆ ಪಾತ್ರಧಾರಿಗೆ ಸಲ್ಲುತ್ತದೆಯೆ? —ಇಲ್ಲ. ಏಕೆ?

ಇತರ ಭಾವ ಮತ್ತು ಇತರ ರಸಗಳಿಗಿರುವ ಸಂಬಂಧದಂತೆ ಶಮಕ್ಕೂ ಶಾಂತ ರಸಕ್ಕೂ ಸಂಬಂಧಕಲ್ಪನೆ ಮಾಡುತ್ತಾರೆ. ಆದರೆ ರತಿಭಾವಕ್ಕಿಂತ ಶೃಂಗಾರರಸ ಶ್ರೇಷ್ಠತರವಾದಂತೆ ಶಮಕ್ಕಿಂತ ಶಾಂತರಸ ಶ್ರೇಷ್ಠತರವಾಗುತ್ತದೆಯೆ? ಭಾವಗಳಿಗೆ ಶಮತ್ವದ ಸಂಸ್ಕಾರ ಒದಗುವುದರಿಂದಲೆ ರಸತ್ವವುಂಟಾಗುತ್ತದೆ. ಅಂದರೆ ಭಾವವನ್ನು ರಸವನ್ನಾಗಿ ಪರಿವರ್ತಿಸುವ ಸ್ಪರ್ಶಮಣಿಯೆ ಶಮ. ಅಂದರೆ ಶಮ ಇತರ ಭಾವಗಳಂತೆ ಭಾವವಲ್ಲ; ಅದು ಭಾವವನ್ನು ರಸಗೊಳಿಸುವ ಭಾವೋಪ ಶಮನ ಶಕ್ತಿ. ಶಮ ಕಲಾರಂಗದಲ್ಲಿ ಪ್ರತಿಬಿಂಬಿತವಾದಾಗ ಅದರ ಲೋಕರಂಗದ ಸ್ಥಿತಿಗಿಂತಲೂ ಮೇಲುಮಟ್ಟದ್ದಾಗುವುದಿಲ್ಲ. ಲೋಕರಂಗದಲ್ಲಿ ಸಿದ್ಧವಾದ ನಿಜವಾದ ಶಾಂತಿ ಕಲಾರಂಗದ ಶಾಂತರಸಕ್ಕಿಂತಲೂ ಸರ್ವಥಾ ಮೇಲುಮಟ್ಟದ ಪುರುಷಾರ್ಥ ವಸ್ತು. ಅಂತೆಯೇ ಲೋಕರಂಗದಲ್ಲಿ ಎಂದರೆ ಬದುಕಿನಲ್ಲಿ ಸ್ವಾನುಭವಕ್ಕೆ ಸಿದ್ಧಿಸುವ ಭೂಮವೂ ಪರಮಪುರುಷಾರ್ಥವಸ್ತು. ಅದರ ಕಲಾಛಾಯೆ ಮೂಲಕ್ಕಿಂತಲೂ ಮೇಲುಮಟ್ಟದ್ದಾಗಲಾರದು; ಆದರೂ, ಅಪೂರ್ವವಾಗಿ, ಅತ್ಯಂತ ಮಹೋನ್ನತ ದ್ರಷ್ಟಾರನಾದ ಮಹಾಕವಿಋಷಿಯ ಭೂಮಾನುಭೂತಿಯ ಕಲಾಭಿವ್ಯಕ್ತಿಯಿಂದ ಸಹೃದಯೋತ್ತಮನಲ್ಲಿ ಸ್ಫುರಿಸುವ ಭವ್ಯತಾ ಅನುಭವವೂ ಭೂಮಾನುಭೂತಿಯಾಗಿ ಪರಿಣಮಿಸಬಹುದೇನೊ!

ಆದರೆ ಇತರ ರಸಗಳಲ್ಲಿ ಇರುವಂತಲ್ಲದೆ ಶಾಂತರಸದಲ್ಲಿ ಮಾತ್ರ ಇರುವಂತೆ ಲೋಕಾನುಭವವಾದ ಭೂಮಾನುಭೂತಿಯ ಕಲಾಭಿವ್ಯಕ್ತಿಯಿಂದ ಸ್ಫುರಿಸುವ ಭವ್ಯತಾ ಅನುಭವದಲ್ಲಿಯೂ ಒಂದು ರಕ್ಷೆ ಇದ್ದೆ ಇರುತ್ತದೆ. ಬಹುಸಂಖ್ಯೆಯ ಸಹೃದಯರಿಗೆ ಶೃಂಗಾರರಸಾನುಭವದಲ್ಲಿ ವೀಸಪಾಲೊ ಮೂರು ವೀಸ ಪಾಲೊ ಮುಕ್ಕಾಲುಮೂರು ವೀಸಪಾಲೊ ರತಿಭಾವದಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಅಂದರೆ ಹಸಿಹಸಿ ರತಿಭಾವದ ಇರುವಿಕೆಯಿಂದ ಶೃಂಗಾರರಸಾನುಭವ ಅವನತವಾಗುತ್ತದೆ. ಆದರೆ ಲೋಕಾನುಭವರೂಪದ ಶಮದ ಇರುವಿಕೆಯಿಂದ ಶಾಂತರಸಾನುಭವ ಅವನತವಾಗುವ ಬದಲು ಉನ್ನತವಾಗುತ್ತದೆ. ಶಮದ ಪ್ರಮಾಣ ಹೆಚ್ಚಿದಷ್ಟೂ ಶಾಂತರಸದ ನೈಜತೆ ಉನ್ನತತರವಾಗುತ್ತದೆ. ಹಾಗೆಯೆ ಕಾವ್ಯ ಕಲಾರಂಗದ ಭವ್ಯತಾ ಅನುಭವದಲ್ಲಿ ಲೋಕಾನುಭವರೂಪದ ಭೂಮಾನುಭೂತಿ ಆಂಶಿಕವಾಗಿ ಯಾದರೂ ಇದ್ದೆ ಇರುತ್ತದೆ. ಅದು ಇದ್ದಷ್ಟೂ ಭವ್ಯತಾ ಅನುಭವದ ಪುರುಷಾರ್ಥಕತೆ

ಉನ್ನತವಾಗುತ್ತದೆಯೆ ಹೊರತು ಅವನತವಾಗುವುದಿಲ್ಲ. ಆದ್ದರಿಂದಲೆ ಮಹಾಕವಿಯ ಮಹಾಕೃತಿಯಲ್ಲಿ ಭೂಮಾನುಭೂತಿ ಭವ್ಯತೆಯಾಗಿ ವಿಪುಲ ಪ್ರಮಾಣದಲ್ಲಿ ಮೈದೋರಿದರೆ, ಸಾಧಾರಣ ಕವಿಯ ಒಂದು ಸಾಧಾರಣ ಭಕ್ತಿ ಗೀತೆಯಲ್ಲಿಯೂ, ಹೃತ್‌ಪೂರ್ವಕತೆ ಭಾವತೀವ್ರತೆ ನೈಜತೆಗಳು ಇದ್ದ ಪಕ್ಷದಲ್ಲಿ, ಆಂಶಿಕವಾಗಿಯಾದರೂ ಭೂಮವು ಹೃದಯಸ್ಯಂದಿಯೆ ಆಗುತ್ತದೆ. ಅಂದರೆ ಕಲಾರಂಗದ ಭವ್ಯತಾ ಅನುಭವದಲ್ಲಿ ಭೂಮದ ಅನುಭೂತಿ ಒಂದಲ್ಲ ಒಂದು ಪ್ರಮಾಣದಲ್ಲಿ ಸಂಚರಿಸಿಯೆ ಇರುತ್ತದೆ.

ಭೂಮಾನುಭೂತಿ ತನ್ನ ಪರಮ ಪ್ರಮಾಣದಲ್ಲಿ ಅಭಿವ್ಯಕ್ತವಾಗಿರುವ ಒಂದು ನಿದರ್ಶನ 'ನಾಸದೀಯ ಸೂಕ್ತ'ದಲ್ಲಿ ನಮಗೆ ದೊರೆಯುತ್ತದೆ. ಋಗ್ವೇದದ ಅನೇಕ ಸೂಕ್ತಗಳಲ್ಲಿ, ಉಪನಿಷತ್ತಿನ ಮಹಾಮಂತ್ರಗಳಲ್ಲಿ ಸಹೃದಯನಾದವನಿಗೆ ತಾನು ಭವ್ಯತೆಯ ಸೀಮೆಯಲ್ಲಿಯೆ ಸಂಚರಿಸುತ್ತಿರುವಂತೆ ತೋರುತ್ತದೆ. ಆದರೆ 'ನಾಸದೀಯಸೂಕ್ತ'ಕ್ಕೆ ಹೆಗಲೆಣೆಯಾಗುವ ಯೋಗ್ಯತೆಯ ಮತ್ತೊಂದು ಕೃತಿಯನ್ನು ಪ್ರಪಂಚದ ಸಾಹಿತ್ಯದಲ್ಲಿಯೆ ಕಣ್ಣಿಟ್ಟು ಹುಡುಕಿದರೂ ಕಾಣುತ್ತೇವೆಯೊ ಇಲ್ಲವೊ? ಅಷ್ಟೊಂದು ಭವ್ಯವಾಗಿದೆ ಆ ಅದ್ವಿತೀಯ ಸೂಕ್ತ.[೨೦]

ನಾಸದಾಸೀನ್ನೋ ಸದಾಸೀತ್ತದಾನೀಂ
ನಾಸೀದ್ರಜೋ ನೋ ವ್ಯೋಮಾ ಪರೋ ಯತ್ ।
ಕಿಮಾರೀವಃ ಕುಹ ಕಸ್ಯ ಶರ್ಮನ್
ಅಮ್ಭಃ ಕಿಮಾಸೀದ್ಗಹನಂ ಗಭೀರಮ್ ॥

ನ ಮೃತ್ಯುರಾಸೀದಮೃತಂ ನ ತರ್ಹಿ
ನ ರಾತ್ರ್ಯಾ ಅಹ್ನ ಆಸೀತ್ ಪ್ರಕೇತಃ ।
ಆನೀದವಾತಂ ಸ್ವಧಯಾ ತದೇಕಮ್
ತಸ್ಮಾದ್ಧಾನ್ಯನ್ನ ಪರಃ ಕಿಂ ಚ ನಾಸ ॥

ತಮ ಆಸೀತ್ ತಮಸಾ ಗೂಢಮಗ್ರೇ
ಽಪ್ರಕೇತಂ ಸಲಿಲಂ ಸರ್ವಮಾ ಇದಮ್
ತುಚ್ಛ್ಯೇನಾಭ್ವಪಿಹಿತಂ ಯದಾಸೀತ್
ತಪಸಸ್ತನ್ಮಹಿನಾಜಾಯತೈಕಮ್ ॥

ಕಾಮಸ್ತದಗ್ರೇ ಸಮವರ್ತತಾಧಿ
ಮನಸೋ ರೇತಃ ಪ್ರಥಮಂ ಯದಾಸೀತ್ ।
ಸತೋ ಬಂಧುಮಸತಿ ನಿರವಿಂದನ್
ಹೃದಿ ಪ್ರತೀಷ್ಯಾ ಕವಯೋ ಮನೀಷಾ ॥

---

೨೦. 'ಗುರುವಿನೊಡನೆ ದೇವರಡಿಗೆ' –ಕುವೆಂಪು ಅವರು ಭಾಷಾಂತರಿಸಿರುವ ಶ್ರೀಮತ್ ಸ್ವಾಮಿ ಶಿವಾನಂದರ (ಶ್ರೀರಾಮಕೃಷ್ಣರ ಅಂತರಂಗದ ಶಿಷ್ಯರಲ್ಲಿ ಒಬ್ಬರು) ಮಾತುಕತೆ– ಶ್ರೀರಾಮಕೃಷ್ಣಾಶ್ರಮ, ಮೈಸೂರು. ಸಂವಾದ ೧೯–ಪುಟ ೮೫ ನೋಡಿ.

ತಿರಶ್ಚೀನೋ ವಿತತೋ ರಶ್ಮಿರೇಷಾಮ್
ಅಧಃ ಸ್ವಿದಾಸೀದುಪರಿ ಸ್ವಿದಾಸೀತ್ ।
ರೇತೋಧಾ ಆಸನ್ ಮಹಿಮಾನ ಆಸನ್
ಸ್ವಧಾ ಅವಸ್ತಾತ್ ಪ್ರಯತಿಃ ಪರಸ್ತಾತ್ ॥

ಕೋ ಅದ್ಧಾ ವೇದ ಕ ಇಹ ಪ್ರವೋಚತ್
ಕುತ ಆಜಾತ ಕುತ ಇಯಂ ವಿಸೃಷ್ಟಿಃ ।
ಅರ್ವಾಗ್ದೇವಾ ಅಸ್ಯ ವಿಸರ್ಜನೇನ
ಅಥಾ ಕೋ ವೇದ ಯತ ಅಬಭೂವ ॥

ಇಯಂ ವಿಸೃಷ್ಟಿರ್ಯತ ಅಬಭೂವ
ಯದಿ ವಾ ದಧೇ ಯದಿ ವಾ ನ ।
ಯೋ ಅಸ್ಯಾಧ್ಯಕ್ಷಃ ಪರಮೇ ವ್ಯೋಮನ್
ಸೋ ಅಙ್ಗ ವೇದ ಯದಿ ವಾ ನ ವೇದ ॥

ಅಚಿಂತ್ಯವೂ ಅನಾದ್ಯನಂತವೂ ಆಗಿರುವ ‘ಅವ್ಯಕ್ತ’ವನ್ನೂ ಅದರಿಂದ ಸೃಷ್ಟಿಯಾದ ‘ವ್ಯಕ್ತ’ದ ಹೊಮ್ಮಿಕೆಯನ್ನೂ ಕುರಿತ ವಸ್ತುವನ್ನೊಳಗೊಂಡಿದೆ ಈ ಸೂಕ್ತ. ಆದರೆ ಬುದ್ಧಿಯ ಮೂಲಕವಾಗಿ ವಿಚಾರದ ಮಾರ್ಗದಿಂದ ಆ ಅವ್ಯಕ್ತವನ್ನರಿಯುವುದೆಂತು ?[೨೧] ಸಿದ್ಧಿಯಿಂದ ಮಾತ್ರ ಅದು ಸ್ವಸಂವೇದ್ಯ ; ಬುದ್ಧಿಗೆಂದೂ ಅಸಾಧ್ಯ. ಅದು ವರ್ಣಿಸುವುದು ಯೋಗಿಯ ಅತ್ಯಂತ ಗಭೀರವಾದ ಧ್ಯಾನದ ಅವಸ್ಥೆಯಲ್ಲಿ ಗೋಚರವಾಗುವ ಭೂಮದ ಅನುಭೂತಿಯನ್ನು. ಸೂಕ್ತದ ಒಂದೊಂದು ಪದವೂ ಪದಪುಂಜವೂ ಪಂಕ್ತಿಯೂ ಭವ್ಯತೆಯ ಸಮುದ್ರಸ್ನಾಯುಗಳಂತೆ ಉಕ್ಕೆದ್ದು ಚಿದಾಕಾಶಪ್ರವೇಶಮಾಡಿ ನಮ್ಮ ಚೈತನ್ಯವನ್ನೆ ಉಲ್ಲೋಲ್ಲ ಕಲ್ಲೋಲಗೈದು ಭೋರ್ಗರೆಯುವಂತೆ ಅನುಭವವಾಗುತ್ತದೆ. ‘ನ ಮೃತ್ಯುರಾಸೀದಮೃತಂ ನ ತರ್ಹಿ’ ‘ತಮ ಆಸೀತ್ ತಮಸಾ ಗೂಢಂ’ ಮೃತ್ಯುವಿಲ್ಲ, ಅಮೃತವಿಲ್ಲ. ಹಗಲಿಲ್ಲ, ಇರುಳಿಲ್ಲ. ಕತ್ತಲೆಯ ಗರ್ಭದಲಿ ಕತ್ತಲೆ ಹುದುಗಿತ್ತು. ‘ಹೃದಿ ಪ್ರತೀಷ್ಯಾ ಕವಯೋ ಮನೀಷಾ’ ‘ಸ್ವಧಾ ಅವಸ್ತಾತ್ ಪ್ರಯತಿಃ ಪರಸ್ತಾತ್’ ‘ಯೋ ಅಸ್ಯಾಧ್ಯಕ್ಷಃ ಪರಮೇ ವ್ಯೋಮನ್ ಸೋ ಅಙ್ಗ ವೇದ ಯದಿ ವಾ ನ ವೇದ’। ಕೊನೆಯ ಎರಡು ಪಂಕ್ತಿಗಳಂತೂ ಭವ್ಯತೆಗೆ ಕಿರೀಟವಿಟ್ಟಂತಿದ್ದು, ನಮ್ಮ ಸಮಸ್ತ ಚೇತನವನ್ನೂ ಅಸೀಮಾಯಾತ್ರಿಯನ್ನಾಗಿ ಮಾಡುತ್ತದೆ. “ಎತ್ತಣಿಂದಾದುದೀ ವಿಸೃಷ್ಟಿ ? ಅವನಿಂದಲೆ ಬಂದುದೊ ಅಥವಾ ಅವನಿಂದಲ್ಲವೊ? ಯಾರು ಆ ಪರಮವ್ಯೋಮದ ಅಧ್ಯಕ್ಷನೊ ಅವನಿಗೆ ಮಾತ್ರವೆ ಅದು ಗೊತ್ತು: ಅಥವಾ ಅವನಿಗೂ ಅದು ಗೊತ್ತಿಲ್ಲವೊ ಏನೊ ?” ಆ ಪ್ರಶ್ನೆ ಉತ್ತರದ ಗರ್ಭದಲ್ಲಿಯೆ ಹುದುಗುತ್ತದೆ. ಆ ಪ್ರಶ್ನೆಯ ಛದ್ಮರೂಪವೆ ಎಲ್ಲಿಗಾಣದ ಉತ್ತರದ ಅನಂತತೆಯಲ್ಲಿ

---

೨೧. ಯನ್ಮನಸಾ ನ ಮನುತೇ ಯೇನಾಹುರ್ ಮನೋ ಮತಂ
ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೇ ॥

ವಿಲೀನವಾಗುತ್ತದೆ. ಆ ಸಂದೇಹವೂ ಬುದ್ಧಿಯ ಸಂದೇಹವಲ್ಲ. ಬುದ್ಧಿಯ ಅಸಾಮರ್ಥ್ಯದ ಸೂಚಕವಷ್ಟೆ. ಅದರ ಪೂರ್ಣವಿರಾಮವಿರುವುದು ಅಚಿಂತ್ಯ ಸಿದ್ಧಿಯಲ್ಲಿ! ಸಂದೇಹಾರ್ಥಕವಾದ ಆ ಪ್ರಶ್ನೆ ಸಿದ್ಧಿಯ ವಾಹಕವಷ್ಟೆ!

'ನಾಸದೀಯ ಸೂಕ್ತ'ದಲ್ಲಿ ನಾವು ಗಮನಿಸಬೇಕಾದ ಇನ್ನೊಂದು ವಿಶೇಷವಿದೆ. ಅದು ಕವನಗಳಲ್ಲಿ ಕವನೋತ್ತಮವಾಗಿದ್ದರೂ ಸಾಮಾನ್ಯವಾಗಿ ಕಾವ್ಯಾರ್ಹ ಸಾಮಗ್ರಿ ಎಂದು ಪರಿಗಣಿತವಾದ ಯಾವುದನ್ನೂ ಒಳಗೊಂಡಿಲ್ಲ. ಬುದ್ಧಿಗೆ ಅಗಮ್ಯವಾದ ಸ್ಥಿತಿಯೆ ಅದರ ವಸ್ತುವಾಗಿದ್ದರೂ ಅದು ಬುದ್ಧಿಪ್ರಧಾನವಾದ ಚಿಂತನಾಂಶವನ್ನೆ ತನ್ನ ಮುಖ್ಯ ಸಾಮಾಗ್ರಿಯನ್ನಾಗಿಸಿಕೊಂಡಿದೆ. ಕಾವ್ಯದಲ್ಲಿ ಇರಲೆಬೇಕೆಂದು ವಿಮರ್ಶಕರು ಸಾಧಿಸುವ ಮಾನವವರ್ಗ ಸಹಜವಾದ ರತ್ಯಾದಿ ಭಾವಾಂಶಗಳೆ ಅಲ್ಲಿ ಇಲ್ಲ. ಗಂಡು ಹೆಣ್ಣಿನ ಸಂಬಂಧದ ರತಿಭಾವ, ವಿಯೋಗ ಮರಣ ದುಃಖ ಸಂಕಟಾದಿಗಳಿಂದ ಒದಗುವ ಶೋಕ, ವೈರ ಸ್ಪರ್ಧೆಗಳಿಂದ ಸಂಭವಿಸುವ ಕ್ರೋಧ, ಇತ್ಯಾದಿ ಬಹುಜನಸುಲಭವಾದ ಶೃಂಗಾರ ಕರುಣ ರೌದ್ರ ವೀರರಸಗಳಾವುವೂ ಅಲ್ಲಿ ಪ್ರವೇಶಿಸುವುದಿಲ್ಲ. ಕಾವ್ಯಕ್ಕೆ ಅತ್ಯಂತ ಅನರ್ಹವೆಂದು ಅನೇಕ ವಿಮರ್ಶಕರು ಖಂಡಿಸುವ ತತ್ತ್ವಾಂಶವೆ ಸೂಕ್ತದ ಜೀವಾತುವಾಗಿದೆ. ಪ್ರಾಣಮಯದಾಚೆಯ ಮನೋಮಯ ವಿಜ್ಞಾನಮಯಗಳೆ ಸೂಕ್ತದ ಮುಖ್ಯ ಕೋಶಗಳಾಗಿವೆ. ವೇದರ್ಷಿಯ ಮಹೋನ್ನತ ಸಿದ್ಧಿಯ ರಸವಿದ್ಯುತ್ತು ಆ ಸೂಕ್ತದ ತತ್ತ್ವಮಯ ಶರೀರವನ್ನು ಸರ್ವತ್ರ ವ್ಯಾಪಿಸಿ, ಅದನ್ನು ದಿವ್ಯೋಜ್ವಲ ಚಿನ್ಮಯವನ್ನಾಗಿ ಮಾಡದೆ ಇದ್ದಿದ್ದರೆ ಅದು ಬರಿಯ ನೀರಸ ತತ್ತ್ವಾಲೋಚನೆಗಳ ಒಣ ಕಟ್ಟಿಗೆಯ ಹೊರೆಯಾಗಿ ಪರಿಣಮಿಸುತ್ತಿತ್ತು ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಭುವನದ ಭಾಗ್ಯದಿಂದಲೆಂಬಂತೆ ಬುದ್ಧಿಭಾವಗಳ ವಿದ್ಯುದಾಲಿಂಗನದಿಂದ ಎಂತಹ ಅದ್ಭುತ ರಸಸಿದ್ಧಿ ಮೈದೋರಬಹುದೆಂಬುದಕ್ಕೆ 'ನಾಸದೀಯ ಸೂಕ್ತ' ಒಂದು ಭವ್ಯ ನಿದರ್ಶನವಾಗಿ, ವ್ಯೋಮಚುಂಬಿಯಾಗಿ, ಮರ್ತ್ಯದ ಅಮರತೆಗೆ ನಿತ್ಯಸಾಕ್ಷಿಯಾಗಿ ನಿಂತಿದೆ: ವೇದಶಿಖರ ವೇದಿಕಾಗ್ರದಲ್ಲಿ ಕಡೆದು ನಿಲ್ಲಿಸಿದ ಭೂಮಾನುಭೂತಿಯ ಮಹಾಗೊಮ್ಮಟ ಪ್ರತಿಮೆಯಂತೆ!

೫

ವೇದೋಪನಿಷತ್ತುಗಳ ಸೂಕ್ತ ಮತ್ತು ಮಂತ್ರಗಳಲ್ಲಿ ಭವ್ಯತೆ ಮತ್ತೆ ಮತ್ತೆ ಮೈದೋರಿದರೆ ನಾವೇನೂ ಹೆಚ್ಚಾಗಿ ಅಚ್ಚರಿಗೊಳ್ಳಬೇಕಾಗಿಲ್ಲ. ಏಕೆಂದರೆ ಭೂಮವೆ ಅಲ್ಲಿಯ ಅನುಭೂತಿಯ ಮತ್ತು ಜಿಜ್ಞಾಸೆಯ ಪ್ರಧಾನವಸ್ತು. ಕಾವ್ಯ ಮಹಾಕಾವ್ಯಗಳಲ್ಲಿಯಾದರೊ ಜೀವನ ಸಮಸ್ತವೂ ಅದರ ವೈವಿಧ್ಯ ವಿಸ್ತಾರಗಳೊಡನೆ ವಸ್ತುವಾಗುತ್ತದೆ. ಅಲ್ಲಿ ತನ್ನ ಅಸಂಖ್ಯವಾದ ವಿವಿಧ ಸ್ತರ ವಿನ್ಯಾಸಗಳಲ್ಲಿ ಪ್ರಕಟವಾಗುವ ಸೌಂದರ್ಯಕ್ಕೇ ಪ್ರಾಧಾನ್ಯ. ಆ ಸೌಂದರ್ಯದ ಮಾಧ್ಯಮದಲ್ಲಿ ಭೂಮವು ಅಲ್ಲೊಮ್ಮೆ ಇಲ್ಲೊಮ್ಮೆ ವಿರಳವಾಗಿ ಮಾತ್ರ ಗೋಚರವಾಗಿ ಭವ್ಯತೆಯ ಆವಿರ್ಭಾವಕ್ಕೆ ಅವಕಾಶವೊದಗುತ್ತದೆ.

ಮಹಾಭಾರತ ರಾಮಾಯಣಗಳಲ್ಲಿ ಭವ್ಯತೆಗೆ ನಿದರ್ಶನವಾಗುವ ಹಲಕೆಲವು ಸಂನಿವೇಶಗಳನ್ನೂ ಪಾತ್ರಗಳನ್ನೂ ನಾವು ಎದುರುಗೊಳ್ಳುತ್ತೇವೆ. ಭಗವದ್ಗೀತೆಯಲ್ಲಿ ಬರುವ ವಿಶ್ವರೂಪದರ್ಶನವೂ ಸುಂದರ ಕಾಂಡದಲ್ಲಿ ಬರುವ ಸಮುದ್ರಲಂಘನ ಸಂನಿವೇಶದ ಆಂಜನೇಯನ ಪಾತ್ರವೂ ಭವ್ಯತೆಗೆ ಮಹೋತ್ತಮ ನಿದರ್ಶನ ಗಳಾಗಿವೆ.೨೨ ಹಾಗೆಯೆ ಪಂಪನ ಆದಿಪುರಾಣದಲ್ಲಿ ಬರುವ ತೀರ್ಥಂಕರ ಶಿಶುವಿನ ಜನ್ಮಾಭಿಷೇಕದ ವರ್ಣನೆಯಲ್ಲಿಯೂ, ತರುವಾಯ ಸಂಭವಿಸುವ ಸೌಧರ್ಮೇಂದ್ರನ ಆನಂದ ನೃತ್ಯದ ವರ್ಣನೆಯಲ್ಲಿಯೂ ಅಭಿವ್ಯಕ್ತವಾಗಿ, ರೋಮ ರೋಮಗಳಲ್ಲಿ ಭೂಮಾಸಂಚಾರವಾಗುವಂತೆ ಮಾಡುವ ಭವ್ಯತೆ ಸಹೃದಯನ ರಸಪ್ರಜ್ಞೆಗೆ ಬ್ರಾಹ್ಮೀಮಧು ಅವತರಿಸುವಂತೆ ಮಾಡುತ್ತದೆ.೨೩ ಭರತ ಬಾಹುಬಲಿಯರ ದ್ವಂದ್ವಯುದ್ಧ ಪ್ರಸಂಗದಲ್ಲಿ, ವಿಜಯದ ಉತ್ತುಂಗ ಶೃಂಗದಲ್ಲಿಯೆ ಅಹಂಕಾರ ನಿರಸನದ, ವೈರಾಗ್ಯಸಿದ್ಧಿಯ ಮತ್ತು ಮಹಾತ್ಯಾಗದ ಗೆಲ್ಗಂಬ ಸ್ಥಾಪನೆಯಾಗುವ ಸ್ಥಾನದಲ್ಲಿ; ದಿಗ್ವಿಜಯಿ ಚಕ್ರವರ್ತಿಯೊರ್ವನ ಹೆಮ್ಮೆ ಎದುರಾಳಿಯ ಕಾಲ್ದುಳಿತಕ್ಕೆ ಸಿಕ್ಕಿ, ಪ್ರೇಕ್ಷಕ ಸಹಸ್ರರ ಕಣ್ಣೆದುರೆ ಅವಮಾನಿತ ವಾದಂದು, ಆ ಅವಮಾನದ ಅಧೋಗತಿಯಿಂದಲೆ ಆಕಾಶಗಾಮಿಯಾಗಿ ತಲೆಯೆತ್ತಿದ ವಿನಯಗೌರವಗಳ ಅದ್ಭುತ ಜಯೋತ್ಸವದ ಸಂದರ್ಭದಲ್ಲಿ; ರಜೋಗುಣದ ಕ್ಷಾತ್ರ ತೇಜಸ್ಸು ಸಾತ್ತ್ವಿಕತೆಗೆ ಸಂಪೂರ್ಣವಾಗಿ ಶರಣಾಗತವಾಗಿ ತನ್ನನ್ನು ತಾನೆ ಸಮರ್ಪಿಸಿಕೊಂಡ ಸಂನಿವೇಶದಲ್ಲಿ ಬಾಹುಬಲಿ :

ನೆಲಸುಗೆ ನಿನ್ನ ವಕ್ಷದೊಳೆ ನಿಶ್ಚಳಮೀ ಭಟಖಡ್ಗಮಂಡಲೋ
ತ್ಪಲವನವಿಭ್ರಮಭ್ರಮರಿಯಪ್ಪ ಮನೋಹರಿ ರಾಜ್ಯಲಕ್ಷ್ಮಿ ಭೂ
ವಲಯಮನಯ್ಯ ನಿತ್ತುದುಮನಾಂ ನಿನಗಿತ್ತೆನಿದೇವುದಣ್ಣ ನೀ
ನೊಲಿದ ಲತಾಂಗಿಗಂ ಧರೆಗಮೂಟಿಸಿದಂದು ನೆಗಟ್ತೆ ಮಾಸದೇ ?

ಎಂದು

ನಿಜಪಾದಾಂಬುರುಹಕ್ಕೆ ಪಾದ್ಯವಿಧಿಯಂ ನೇತ್ರಾಂಬುವಿಂ ಮಾಡುವ
ಗ್ರಜನತ್ಯುನ್ನತಮಪ್ಪ ಮಸ್ತಕದ ಮೇಗೋರಂತೆ ಪಾಯ್ವಾತ್ಮ ಬಾ
ಷ್ಪ ಜಳೌಘಂಗಳಿನಂದು ಬಾಹುಬಲಿ ತನ್ನಿಂದಂ ನಿಧೀಶಂಗೆ ವಂ
ಶಜ ರಾಜ್ಯಾಭಿಷವೋತ್ಸವಂ ನೆಗಟ್ದುದೆಂಬಾಶಂಕೆಯಂ ಮಾಡಿದಂ.

ಎಂಬ ಪವಿತ್ರ ಕಾವ್ಯ ತೀರ್ಥೌಘಜಲಪಾತಾಭಿಷೇಕದ ಪುಣ್ಯಾಘಾತದಿಂದ ಸಹೃದಯ ಶಿರೋಂಬುಜ ಬಿತ್ತರಿಸಿ ತತ್ತರಿಸುವ ಸಂದರ್ಭದಲ್ಲಿ ಮತ್ತೊಮ್ಮೆ ಅನುಭವಕ್ಕೆ ಬರುತ್ತದೆ ಸಾತ್ತ್ವಿಕ ಮಹಾಭವ್ಯತೆ!

ಭವ್ಯತೆಯ ಇನ್ನೊಂದು ನಿದರ್ಶನ ಜನ್ನಮಹಾಕವಿಯ ಯಶೋಧರ ಚರಿತ್ರೆ ಯಲ್ಲಿ ದೊರೆಯುತ್ತದೆ. 'ಭೈರವನ ಜವನ ಮಾರಿಯ ಮೂರಿಯವೊಲ್' ನಿಂದ

---

೨೨. 'ಸಾಹಿತ್ಯದಲ್ಲಿ ಪ್ರತಿಮಾ' ಎಂಬ ಪ್ರಬಂಧವನ್ನು ನೋಡಿ.

೨೩. 'ತಪೋನಂದನ'ದಲ್ಲಿರುವ 'ಪಂಪನಲ್ಲಿ ಭವ್ಯತೆ' ಎಂಬ ಪ್ರಬಂಧವನ್ನು ನೋಡಿ.

ಮಾರಿದತ್ತನು 'ಲಲಿತಾಕಾರರ ಧೀರರ ಬಂದ ಕುಮಾರರ ರೂಪಿಂಗೆ ತಕ್ಕುಗೊಂಡಂತಿರ್ದ' ಸಂದರ್ಭದಲ್ಲಿ. ಅರಸನ ಕೆಲಬಲದವರು 'ಪರಸಿರೆ ಪರಸಿರೆ ನೃಪೇಂದ್ರನಂ ನೀವ್!' ಎಂದಾಗ ತಂಗಿ ಅಭಯಮತಿಯೊಡನೆ ಧೀರಪ್ರಶಾಂತವಾಗಿ ನಿಂತಿದ್ದ ಅಭಯರುಚಿ ಕುಮಾರನು ಇನಿತೂ ವಿಚಲಿತನಾಗದೆ 'ನೃಪವರ, ನಿರ್ಮಲ ಧರ್ಮದಿಂದ ಪಾಲಿಸು ಧರೆಯಂ!' ಎಂದು ಹರಸುತ್ತಾನೆ. ಅಂತಹ ಸ್ಥೈರ್ಯ ಧೈರ್ಯ ಅವ್ವೈರ ಶಾಂತಚಿತ್ತತೆಗಳನ್ನು ಮೊತ್ತಮೊದಲು ಎದುರುಗೊಂಡ ಆ ಭಯಂಕರಕರ್ಮಿ ಮಾರಿದತ್ತನ ಹೃದಯದಲ್ಲಿಯೂ 'ಭೂಮಾ' ಸಂಚಾರವಾಗುತ್ತದೆ. 'ಕಿಟ್ಟಿ ಕರವಾಳ್ಗಮೆನಗಂ ಮಿಟ್ಟುವಿನಂತಿರ್ದ ಮಾರಿಗಂ ಬೆದರದೆ ನಿಂದು, ಅಟ್ಟಿಯನೆ ನುಡಿದ ಇವರ ನೆಗಟ್ಟಿ ಕರಂ ಪಿರಿದು'! ಎಂಬ ಮೆಚ್ಚುಗೆಯ ಭಾವಮಯ ಚಿಂತನದ ಆಶ್ಚರ್ಯ ರೂಪವನ್ನು ತಳೆಯುತ್ತದೆ, ಆ ಭೂಮಾ ಸಂಚಾರದ ಪ್ರತಿಮೆ. ಆ ಭೂಮದ ಭೀಷಣತೆಗೆ ಅಳುಕಿ ಅಪ್ಪಳಿಸಲ್ಪಟ್ಟ ಮಾರಿದತ್ತನ ಸಮಸ್ತ ಚೈತನ್ಯವೂ ಕೈಮುಗಿದು 'ಧೀರರಕಟ ಕುಮಾರರ್!' ಎಂಬ ಉದ್ಗಾರವಾಗಿ ಹೊಮ್ಮುತ್ತದೆ. ಅವನ ಹೃದಯದ ಆ ಉದ್ಗಾರವೆ ಅವನ ಉದ್ಧಾರದ ಮಂತ್ರವಾಗಿ, ಅವನ ಆತ್ಮ ಊರ್ಧ್ವಮುಖ ಪ್ರವಾಸಕ್ಕೆ ದೀಕ್ಷೆಗೊಳ್ಳುತ್ತದೆ.

ಭೀಮ ದುರ್ಯೋಧನರ ಗದಾಯುದ್ಧ ಸನ್ನಿವೇಶದಲ್ಲಿ, ಕರ್ಣಾವಸಾನ ಸನ್ನಿವೇಶದಲ್ಲಿ, ಭೀಷ್ಮಪಾತ್ರದಲ್ಲಿ, ಅರ್ಜುನ ಅಭಿಮನ್ಯುವಂತಹರ ವೀರಜೀವನ ಘಟ್ಟಗಳಲ್ಲಿ, ಪಂಪ ನಾರಣಪ್ಪರ ಮಹಾಕೃತಿಗಳಲ್ಲಿ, ರಜೋಗುಣ ಪ್ರಚುರವಾದ ಭವ್ಯತೆಯನ್ನು ನಾನಾ ಮುಖಗಳಲ್ಲಿ ಸಂಧಿಸುತ್ತೇವೆ. ಆಸುರೀ ಪಕ್ಷದ ವಿಧ್ವಂಸನದಲ್ಲಿ ದೈವೀ ಪಕ್ಷದ ಉತ್ಕರ್ಷದ ಸಾತ್ತ್ವಿಕತೆ ಅಂತರ್ಗತವಾಗಿರುವುದಾದರೂ ಕೆಲವು ವೇಳೆ ಅಲ್ಲಿಯ ರಕ್ತಾರುಣ ಭವ್ಯತೆಯಲ್ಲಿ ಭರತ ಬಾಹುಬಲಿಯರ ಸಮರ ಪ್ರಸಂಗದಿಂದ ಸ್ಫುರಿಸುವ ಶ್ವೇತ ಭವ್ಯತೆಯಲ್ಲಿ ಸಂಚರಿಸುವ ಭೂಮಾನುಭೂತಿಯ ದಿವ್ಯತರ ವಿಭೂತಿ ಗೋಚರಿಸದಿರಬಹುದು. ಆದರೆ ಪ್ರಾಕೃತವಾದ ಮಾನುಷ ಕಲಾಭಿರುಚಿಗೆ ಶ್ವೇತಭವ್ಯತೆಗಿಂತಲೂ ಅರುಣಭವ್ಯತೆಯೆ ಹೆಚ್ಚು ಗ್ರಾಹ್ಯವೂ ಆಸ್ವಾದ್ಯವೂ ಆಗುತ್ತದೆ.[೨೪]

---

೨೪. ಕನ್ನಡದಲ್ಲಿ ಮಹಾಭಾರತವನ್ನು ವಸ್ತುವಾಗಿ ಪಡೆದಿರುವ ಇಬ್ಬರು ಮಹಾಕವಿಗಳ ಎರಡು ಮಹಾಕಾವ್ಯಗಳಲ್ಲಿಯೂ ಪಾತ್ರಗಳಲ್ಲಿ ಸನ್ನಿವೇಶಗಳಲ್ಲಿ ಭವ್ಯತೆ ಮೈದೋರಿರುವ ಅನೇಕ ನಿದರ್ಶನಗಳನ್ನು ನಾವು ಕಾಣುತ್ತೇವೆ. ವಸ್ತುವಿನ ಮಹತ್ತೂ ತಕ್ಕಮಟ್ಟಿಗೆ ಕಾರಣವಾದರೂ ಕವಿಯಲ್ಲಿ 'ಭೂಮಾಪ್ರತಿಭೆ' ಇಲ್ಲದಿದ್ದರೆ ಭವ್ಯತೆ ಸೃಷ್ಟಿಯಾಗುವುದಿಲ್ಲ. ಉದಾಹರಣೆಗೆ, ಮೂಲ ರಾಮಾಯಣದ ಕಥೆ, ಪಾತ್ರ ಮತ್ತು ಸನ್ನಿವೇಶಗಳಲ್ಲಿ ಭವ್ಯತಾಸೃಷ್ಟಿಗೆ ಯಥೇಚ್ಛವಾಗಿ ಅವಕಾಶವಿದ್ದರೂ ತೊರವೆ ರಾಮಾಯಣದಲ್ಲಿ ಕಣ್ಣಿಟ್ಟು ಹುಡುಕಿದರೂ ನಮಗೆ ಒಂದೂ ನಿದರ್ಶನ ದೊರೆಯುತ್ತದೆಯೊ ಇಲ್ಲವೊ! ಕೆಲವೊಮ್ಮೆ ಪ್ರತಿಭೆ ಬರಿಯ ಶ್ರಮ ತೆಗೆದುಕೊಳ್ಳುವ ಒಂದು ಸಾಮರ್ಥ್ಯವಾಗಿ ಪರಿಣಮಿಸುತ್ತದೆ; ಕಾವ್ಯ ಒಂದು ವೃತ್ತಿಪದ್ಧತಿಯಾಗುತ್ತದೆ. ಕವಿ ದುಡಿವ ಶ್ರಮಜೀವಿಯಾಗಿ ಬಿಡುತ್ತಾನೆ!

೬

ವಸ್ತುಪ್ರಧಾನವಾದ ಅದರಲ್ಲಿಯೂ ಕಥಾವಸ್ತು ಪ್ರಧಾನವಾದ ಕಾವ್ಯ ಮಹಾಕಾವ್ಯಗಳಲ್ಲಿ ಭವ್ಯತೆ ಅಲ್ಲಿ ಬರುವ ಪಾತ್ರಗಳಲ್ಲಿ ನಿಷ್ಠವಾಗಿ ಅಥವಾ ಸಂಭವಿಸುವ ಘಟನೆಗಳಿಂದ ಸೃಷ್ಟವಾಗಿ ಸಹೃದಯ ಪ್ರಜ್ಞೆಗೆ ಮೂಡುತ್ತದೆ. ಆದರೆ ಭಾವಪ್ರಧಾನವಾದ ಕವಿತೆಯಲ್ಲಿ ಅದರ ಹೊಮ್ಮಿಕೆ ಇನ್ನೂ ಹೆಚ್ಚು ನೇರವಾಗುತ್ತದೆ. ವಸ್ತುಕಾವ್ಯದಲ್ಲಿ ಭವ್ಯತಾಪ್ರಕಾಶನಕ್ಕಿರುವ ಪರೋಕ್ಷತೆಗೆ ಬದಲಾಗಿ ಭಾವಕಾವ್ಯದಲ್ಲಿ ಕವಿಯ ಸ್ವಾನುಭವದ ಅಪರೋಕ್ಷತೆಗೆ ಅಗ್ರಪಟ್ಟ ದೊರೆಯುತ್ತದೆ. ವಸ್ತುಕಾವ್ಯದಲ್ಲಿ ಅಭಿವ್ಯಕ್ತವಾಗುವ ಭವ್ಯತೆ ಕವಿಯ ನೇರವಾದ ಭೂಮಾನುಭೂತಿ ಆಗಬೇಕಾಗಿಲ್ಲ; ಅದು ಮುಖ್ಯವಾಗಿ ಪಾತ್ರದ ಭೂಮಾನುಭೂತಿ ಅಥವಾ ಪಾತ್ರಪಾತ್ರಗಳ ವ್ಯವಹಾರ ಚಿತ್ರಣದಿಂದ ಸಮುದ್ಭವಿಸುವ ಭೂಮಾನುಭೂತಿ. ಅಲ್ಲಿ ಕವಿಪ್ರಜ್ಞೆ ಆವಶ್ಯಕವಾದರೂ ನಿಮಿತ್ತಮಾತ್ರ; ಅದು ಭೂಮವು ಅವತರಿಸುವುದಕ್ಕೆ ಅರ್ಹತೆಯುಳ್ಳ ಒದಗೆ ಮಾತ್ರ.

ಕಾವ್ಯ ಮಹಾಕಾವ್ಯ ಪುರಾಣಾದಿಗಳು ವಸ್ತುಕಾವ್ಯಗಳಾಗಿ ಮೊದಲನೆಯ ಗುಂಪಿಗೆ ಸೇರುತ್ತವೆ. ವೇದೋಪನಿಷತ್ತುಗಳು ದ್ರಷ್ಟಾರರಾದ ಋಷಿಗಳ ಅನುಭೂತಿಯನ್ನೆ ಸೂಕ್ತ ಮತ್ತು ಮಂತ್ರರೂಪದಲ್ಲಿ ಒಳಗೊಂಡಿರುವುದರಿಂದ ಅವೆಲ್ಲ ಬಹುಮಟ್ಟಿಗೆ ಎರಡನೆಯ ಗುಂಪಿಗೆ ಸೇರಿದ ಭಾವಕವಿತೆಗಳಾಗುತ್ತವೆ. ಅಂತೆಯೆ ನಮ್ಮ ಸಂತಕವಿಗಳು, ವಚನಕಾರರು, ಅನುಭಾವಿಗಳು ತಮ್ಮ ಅಪೇಕ್ಷೆ, ಅಭೀಪ್ಸೆ, ಆದರ್ಶ, ಆಶಯ, ಅನುಭೂತಿಗಳನ್ನೆ ತಮ್ಮ ಹಾಡು ಗೀತೆ ಕವಿತೆಗಳಲ್ಲಿ ಹೇಳಿಕೊಂಡಿರುವುದರಿಂದ ಅವೆಲ್ಲ ಭಾವಕಾವ್ಯಗಳಾಗುತ್ತವೆ. ಅವುಗಳಲ್ಲಿ ಗೋಚರಿಸುವ ಭವ್ಯತೆಗೆ ಕವಿಯ ಅಪರೋಕ್ಷವಾದ ಭೂಮಾನುಭೂತಿಯೆ ನೇರವಾದ ಕಾರಣವಾಗುತ್ತದೆ. ಭಗವದ್ವಸ್ತುವೆ ಮೂಲಕಾರಣವೂ ಮುಖ್ಯ ಪ್ರಯೋಜನವೂ ಪ್ರಧಾನ ಪ್ರೇರಣೆಯೂ ಆಗಿರುವ ಭಕ್ತಿಗೀತಾಕೃತಿಗಳಲ್ಲಿ ಆಧ್ಯಾತ್ಮವೆ ಅದರ ಭಾವದ ಉಲ್ಲಾಸದಲ್ಲಿಯೊ ಅಥವಾ ಅದರ ಅಭಾವದ ಸಂಕಟದಲ್ಲಿಯೊ ಇರುವುದರಿಂದ ಭೂಮವು ಒಂದಲ್ಲ ಒಂದುಮಟ್ಟದಲ್ಲಿ ಸಂಚರಿಸಿದರೂ ಕಲೆಯ ಮಟ್ಟದ ಭವ್ಯತೆಗೇರುವುದು ಅತಿವಿರಳ. ಏಕೆಂದರೆ ಭೂಮದ ಅನುಭೂತಿಯ ಸುಳಿವು ಇದ್ದ ಮಾತ್ರಕ್ಕೆ ಕಲೆಯ ಭೂಮಿಕೆಯಲ್ಲಿ ಭವ್ಯತೆ ತನಗೆ ತಾನೆ ಉಂಟಾಗುವುದಿಲ್ಲ. ಭೂಮದ ಅನುಭೂತಿ ತನ್ನ ವಿಭೂತಿಪ್ರಮಾಣದಲ್ಲಿ ಕಾವ್ಯಲೋಕದಲ್ಲಿ ಅಭಿವ್ಯಕ್ತವಾಗಬೇಕಾದರೆ ಅದು ಭವ್ಯತಾ ಅನುಭವವನ್ನು ಸಹೃದಯನಿಗೆ ನೀಡುವ 'ಶಕ್ತಿ' ಗೇರಬೇಕಾಗುತ್ತದೆ ಆ ಶಕ್ತಿ ಚಿಂತನಾಂಶ ಕಲ್ಪನಾಂಶ ರೂಪಾಂಶಗಳ ಅತ್ಯುಚ್ಚ ಮಟ್ಟದ ನೆರವಿನಿಂದ ಮಾತ್ರ ಸಾಧ್ಯವಾಗುತ್ತದೆ. ಅಂದರೆ ಭೂಮದ ಅಭಿವ್ಯಕ್ತಿಗೆ ಸೌಂದರ್ಯಮಾಧ್ಯಮದ ಸರ್ವಶ್ರೇಷ್ಠ ಸೇವೆ ಸಲ್ಲಬೇಕಾಗುತ್ತದೆ. ಭವ್ಯತಾ ಅನುಭವ ಪ್ರಚೋದನೆಗೆ ಮಹಾಕವಿ, ಮಹಾಕಾವ್ಯ, ಮಹೋಪಮೆ, ಮಹಾಶೈಲಿ,

ಇವುಗಳ ಮಹತ್ತು ಸಹಕರಿಸದಿದ್ದರೆ ಭೂಮಾನುಭೂತಿ ತನಗೆ ತಾನೆ ಭವ್ಯತೆಗೇರಲು ಸಾಧ್ಯವಿಲ್ಲ, ಕಾವ್ಯಲೋಕದಲ್ಲಿ. ವೈನತೇಯನಾದರೂ ಅವನ ವೀರ್ಯಕ್ಕೆ ತಕ್ಕ ಪ್ರಮಾಣದ ರೆಕ್ಕೆಗಳಿಲ್ಲದಿದ್ದರೆ ಅವನ ಬಲಿಷ್ಠತೆ ಪ್ರಕಾಶಿಸುವುದೆಂತು, ವಿಯಲ್ಲೋಕದಲ್ಲಿ ?

ಲೋಕಾನುಭವವಾದ ಭೂಮಾನುಭೂತಿ ಎಷ್ಟೆ ಹಿರಿದಾದರೂ ಕಲೆಯ ಲೋಕದಲ್ಲಿ ಅದು ಭವ್ಯತೆಯಾಗಿ ಅಭಿವ್ಯಕ್ತವಾಗದೆ ತನಗೆ ತಾನೆ ತನ್ನ ಹಿರಿತನವನ್ನು ಮೆರೆಯಲಾರದು. ಆದ್ದರಿಂದಲೆ ಎಂತಹ ಆಧ್ಯಾತ್ಮಿಕ ಸತ್ಯವಿರಲಿ, ಎಂತಹ ತೀವ್ರ ಭಕ್ತಿಭಾವವಿರಲಿ ಎಂತಹ ಲೋಕಸಂಗ್ರಹಕಾರಕವಾದ ನೀತಿಪ್ರಚೋದಕಶಕ್ತಿಯಿರಲಿ, ಎಂತಹ ಕಂಬನಿಗರೆಯಿಸುವ ರಸಾವೇಶವಿರಲಿ, ವೇದಸೂಕ್ತವಾಗಲಿ, ಉಪನಿಷನ್ಮಂತ್ರವಾಗಲಿ ಶತಕವಾಗಲಿ ವಚನವಾಗಲಿ ಭಕ್ತಿಗೀತೆಯಾಗಲಿ ದೇವರ ನಾಮವಾಗಲಿ ಕೀರ್ತನೆಯಾಗಲಿ ಸಾಹಿತ್ಯವಿಮರ್ಶಕನ 'ಭವ್ಯತಾ' ಅಗ್ನಿಪರೀಕ್ಷೆಯಲ್ಲಿ ಉತ್ತೀರ್ಣವಾಗದೆ ಭೂಮವು ಭವ್ಯವಾಗುವುದು ಸಾಧ್ಯವೇ ಇಲ್ಲ. ಅದೇನಾದರೂ ಸಾಧ್ಯವಾಗಿದ್ದ ಪಕ್ಷದಲ್ಲಿ, ನರದೌರ್ಬಲ್ಯವೆ ಮುಖ್ಯಕಾರಣವಾದರೂ ಭಕ್ತಿಪರವಶನಾಗಿದ್ದೇನೆಂಬ ಮಧುರಭ್ರಮೆಯಿಂದ ಕಣ್ಣೀರು ಕರೆಯುವ ಯಃಕಶ್ಚಿತ ದಾಸಮಹಾಶಯನ ಸಂಕೀರ್ತನೆಯೂ ಭವ್ಯವಾಗಿಬಿಡುತ್ತಿತ್ತು !

ಆದಕಾರಣವೆ ನಮ್ಮ ಭಾವಸಾಹಿತ್ಯದಲ್ಲಿ ಆಧ್ಯಾತ್ಮಿಕತೆ, ಭಕ್ತಿ, ತ್ಯಾಗ, ಶರಣಾಗತಿ, ಸಮರ್ಪಣೆ, ಪಶ್ಚಾತ್ತಾಪ, ಪಾಪಭೀತಿ, ಮೃತ್ಯುಭಯ, ಕ್ಷಮಾಯಾಚನೆ ಇತ್ಯಾದಿ ಭೂಮಾಸಂಬಂಧವಾದ ವಸ್ತುಭಾವಗಳಿಗೇನೂ ಕೊರತೆಯಿಲ್ಲವಾದರೂ ಭವ್ಯತೆಯ ಮಟ್ಟಕ್ಕೇರುವ ಭೂಮಾನುಭೂತಿಯ ಅಭಿವ್ಯಕ್ತಿ ಅಪೂರ್ವವೆಂದೇ ಹೇಳಬೇಕಾಗುತ್ತದೆ. ಆಂಗ್ಲೇಯ ಭಾವಸಾಹಿತ್ಯದಲ್ಲಿ ಭೂಮಾಸಂಬಂಧವಾದ ವಸ್ತುಭಾವಗಳು ನಮ್ಮಲ್ಲಿರುವಷ್ಟು ವಿಪುಲವಾಗಿಲ್ಲವೆಂದೆ ಹೇಳಬಹುದಾದರೂ ಕಾವ್ಯಲೋಕದಲ್ಲಿ ಅಭಿವ್ಯಕ್ತಗೊಂಡಿರುವ ಭವ್ಯತೆಮಾತ್ರ ನಮ್ಮಲ್ಲಿರುವಷ್ಟು ವಿರಳವೂ ಅಪೂರ್ವವೂ ಆಗಿಲ್ಲ. ಆದರೂ ಅಲ್ಲಿಯ ಭಾವಕಾವ್ಯಕ್ಷೇತ್ರದ ವಿಸ್ತೀರ್ಣವನ್ನೆ ಗಮನದಲ್ಲಿಟ್ಟುಕೊಂಡು ಹೇಳುವುದಾದರೆ ಅಲ್ಲಿಯೂ ಭವ್ಯತೆಯ ಮಹೋನ್ನತಿಗೇರುವ ಕಾವ್ಯಭಾಗ ಅಲ್ಪವೆ.

ಭವ್ಯತಾ ತತ್ತ್ವವಿಚಾರವನ್ನು ಕಾವ್ಯಮೀಮಾಂಸೆಯ ದೃಷ್ಟಿಯಿಂದ ಗಹನವಾಗಿ ಆಲೋಚಿಸಿ ಉದ್ದಾಮ ಲೇಖನಗಳನ್ನು ಬರೆದಿರುವ ವಿಮರ್ಶಕವರೇಣ್ಯ ಎ. ಸಿ. ಬ್ರಾಡ್ಲೆಯವರು ಇಂಗ್ಲಿಷ್ ಕವಿಪಂಕ್ತಿಯಲ್ಲಿ ಮಿಲ್ಟನ್ ಮಹಾಕವಿಯ ತರುವಾಯ ಬಂದ ಕವಿಗಣದಲ್ಲಿ 'ಭವ್ಯ' ಪಟ್ಟಕ್ಕೆ ಅರ್ಹರಾದವರ ಹೆಸರನ್ನು ಹುಡುಕಹೊರಟು, ಒಂದು ಹೆಸರನ್ನು ಮಾತ್ರ ಆರಿಸಲು ಸಮರ್ಥರಾಗಿದ್ದಾರೆ. ಪ್ರಧಾನವಾಗಿ ವಸ್ತುಕಾವ್ಯಕವಿಯಾದ ಮಿಲ್ಟನ್ ಕವಿಗೆ ಭವ್ಯತೆಯಲ್ಲಿ ಸರಿದೂಗುವ

ಕವಿ ಎಂದರೆ ಪ್ರಧಾನವಾಗಿ ಭಾವಕಾವ್ಯಕವಿಯಾದ ವರ್ಡ್ಸ್‌ವರ್ತ್ ಎಂದು ಅಭಿಪ್ರಾಯಪಟ್ಟಿದ್ದಾರೆ.[೨೫]

ಮಿಲ್ಟನ್ನಿನಂತೆ ಪ್ರಧಾನವಾಗಿ ಉದ್ದಾಮ ವಿಷಯಗಳನ್ನೆ ಆರಿಸಿಕೊಂಡು ವಸ್ತುಕಾವ್ಯಗಳನ್ನು ರಚಿಸದೆ ಅಲ್ಪವ್ಯಕ್ತಿಗಳ ಸಾಮಾನ್ಯಜೀವನದ ಸಾಧಾರಣ ವಿಷಯಗಳನ್ನೆ ಆರಿಸಿಕೊಂಡು ಪ್ರಧಾನವಾಗಿ ಭಾವಗೀತೆಯನ್ನೆ ನಿರ್ಮಿಸಿದ ವರ್ಡ್ಸ್‌ವರ್ತ್ ತನ್ನ ಅಪರೋಕ್ಷ ಭೂಮಾನುಭೂತಿಯಿಂದಲೆ ಭವ್ಯತೆಯನ್ನು ಸೃಷ್ಟಿಸಿದ್ದಾನೆ. ಅವನು ವಿಶೇಷವಾಗಿ ಪ್ರಯೋಗಿಸುವ 'the visionary power' 'silence' 'solitude' 'immortality' 'infinite' 'eternal' 'sublimity' ಮೊದಲಾದ ದರ್ಶನಧ್ವನಿಪೂರ್ಣವಾದ ಪದಗಳಲ್ಲಿ ತಾನು 'ದರ್ಶನಕವಿ' ಎಂಬುದನ್ನು ಮುಚ್ಚುಮರೆ ಮಾಡಿಲ್ಲ. 'ಅಲ್ಪ'ದಲ್ಲಿ 'ಭೂಮಾ'ದ ದರ್ಶನವೆ ವರ್ಡ್ಸ್‌ವರ್ತ್ ಕವಿಯನ್ನು ಅಲ್ಪತೆಯಿಂದ ಪಾರುಮಾಡಿ ಮಹೋನ್ನತಿಗೇರಿಸಿದೆ.[೨೬]

ನಿಸರ್ಗದೃಶ್ಯಗಳಲ್ಲಿ, ಪ್ರಕೃತಿ ಸಾನ್ನಿಧ್ಯದಲ್ಲಿ, ನಿರ್ಜನಪ್ರದೇಶಗಳಲ್ಲಿ, ಪರ್ವತಾಗ್ರಗಳಲ್ಲಿ ಬಾನು ಬಂಡೆ ಬೆಟ್ಟ ಝುರಿ ಗಿರಿ ಕಂದರ ಕಾಡುಗಳ ರುದ್ರರಮಣೀಯ ವಿಜನ ಏಕಾಂತದ ಸಾಹಚರ್ಯದಲ್ಲಿ ದರ್ಶನಕವಿಯಾದ ವರ್ಡ್ಸ್‌ವರ್ತ್‌ಗೆ ಭೂಮದ ಅನುಭೂತಿ ಅನಿವಾರ್ಯವಾದ ಅನುಭವವಾಗಿ ಪರಿಣಮಿಸಿತ್ತು. ಆತನ ಚೈತನ್ಯದ ಸ್ವತಃಸಿದ್ಧವಾದ ಸ್ವಭಾವವೆ ಭೂಮಾಪರವಾಗಿದ್ದಂತೆ ತೋರುತ್ತದೆ.[೨೭] ಆತನ

---

೨೫. 'Oxford Lecturers on Poetry': "Wordsworth is indisputably the most sublime of our poets since Milton."

೨೬. 'Breathed immortality, revolving life,
And greatness still revolving; infinite.
There littleness was not; the least of things
Seemed infinite; and there his spirit shaped
Her prospects, nor did he believe,—he *saw*.'

೨೭. Imagination—here the Power so called
Through sad incompetence of human speech,
That awful Power rose from the mind's abyss
Like an unfathered vapour that enwraps,
At once, some lonely traveller. I was lost;
Halted without an effort to break through;
But to my conscious soul I now can say—
'I recognise thy glory': in such strength
Of usurpation, when the light of sense
Goes out, but with a flash that has revealed
The invisible world, doth greatness make abode,
There harbours; whether we be young or old,
Our destiny, our being's heart and home,

ಸುಪ್ರಸಿದ್ಧ ಮಹಾಭಾವಗೀತೆಗಳಲ್ಲಿಯೂ ಆತ್ಮಕಥನರೂಪದ ಸುದೀರ್ಘ ಮಹಾ ಕೃತಿಗಳಾದ Prelude ಮತ್ತು Excursion ಗಳಲ್ಲಿಯೂ ಭವ್ಯತೆಗೇರಿದ ಭೂಮಾನು ಭೂತಿಯ ಪವಿತ್ರಪೂಜಾಸ್ಥಾನಗಳನ್ನು ಮತ್ತೆ ಮತ್ತೆ ಸಂದರ್ಶಿಸುತ್ತೇವೆ. ಆ ಕಾವ್ಯ ಲೋಕದಲ್ಲಿ ಯಾತ್ರಿಯಾಗುವ ಸಹೃದಯನು ಪುನಃ ಪುನಃ ಬ್ರಾಹ್ಮೀಪ್ರಜ್ಞೆಯ ಭವ್ಯಕ್ಷೇತ್ರಗಳನ್ನು ಪ್ರವೇಶಿಸಿ ಪುನೀತನಾಗುವ ಅನುಭವವನ್ನು ಪಡೆಯುವುದ ರಿಂದಲೆ ಬ್ರಾಡ್ಲೆಯ ವಿಮರ್ಶೆ ತುತ್ತ ತುದಿಯಲ್ಲಿ—' For me, I confess, all this is far from being 'mere poetry' ಎಂಬ ಗೌರವಪೂರ್ಣವಾದ ವಿನಯೋಕ್ತಿ ಯಲ್ಲಿ ಕೈಮುಗಿದು ಹಣೆಮಣಿದು ನಮಸ್ಕರಿಸಿ ಬೀಳ್ಕೊಂಡಿದೆ.

ಒಮ್ಮೆ ವರ್ಡ್ಸ್‌ವರ್ತ್ ತನ್ನೊಬ್ಬ ಮಿತ್ರನೊಡನೆ ಒಂದು ಪರ್ವತ ಪ್ರದೇಶದಲ್ಲಿ ಸಂಚರಿಸುತ್ತಾ ಅದರ ಶಿಖರಸ್ಥಾನವನ್ನು ದಾಟಿ ಒಂದು ಅದ್ಭುತ ದರಿಕಂದರ ಸೀಮೆಯನ್ನು ದೃಷ್ಟಿಸಿದಾಗ[೨೮] ತನಗಾದ ಭೂಮಾನುಭೂತಿಯನ್ನು ಭವ್ಯತೆಯ ಪರಾಕಾಷ್ಠೆಗೆ ನಿದರ್ಶನವೆಂಬಂತೆ ವರ್ಣಿಸಿದ್ದಾನೆ:

"Downwards we hurried fast,
And, with the half-shaped road which we had missed,
Entered a narrow chasm. The brook and road
Were fellow-travellers in this gloomy strait,
And with them did we journey several hours
At a slow pace. The immeasurable height
Of woods decaying, never to be decayed,
The stationary blasts of waterfalls,
And in the narrow rent at every turn
Winds thwarting winds, bewildered and folorn,
The torrents shooting from the clear blue sky,
The rocks that muttered close upon our ears,
Black drizzling crags that spake by the way-side
As if a voice were in them, the sick sight
And giddy prospect of the raving stream,
The unfettered clouds and region of the Heavens,
Tumult and peace, the darkness and the light—

Is with infinitude, and only there;
With hope it is, hope that can never die,
Effort, and expectation, and desire,
And something evermore about to be.

೨೮. Some of the grandest lines in English Poetry—Bradley.
—Oxford Lectures on Poetry. Pp 138.

Were all like workings of one mind, the features
Of the same face, blossoms upon one tree;
Characters of the great Apocalypse,
The types and symbols of Eternity,
Of first, and last, and midst, and without end.

ತಾರುಣ್ಯದಲ್ಲಿ ತಾನು ಕೈಕೊಂಡ ಒಂದು ದೋಣಿಯ ಸಾಹಸದಲ್ಲಿ ತನಗೊದಗಿದ ಒಂದು ಅದ್ಭುತ ಅನುಭವವನ್ನು Prelude ನಲ್ಲಿ ಭವ್ಯವಾಗಿ ರೂಪಿಸಿದ್ದಾನೆ ವರ್ಡ್ಸ್‌ವರ್ತ್. ಒಂದು ಪರ್ವತ ಪ್ರದೇಶದ ದೊಡ್ಡ ಸರೋವರದಲ್ಲಿ ಅಂಚಿಗೆ ಕಟ್ಟಿದ್ದ ದೋಣಿಯೊಂದನ್ನು ಕಳ್ಳತನದಿಂದ ಬಿಚ್ಚಿ, ಅದರಲ್ಲಿ ಕುಳಿತು, ಒಬ್ಬನೆ ಹುಟ್ಟು ಹಾಕುತ್ತಾ ಒಂಟಿಯಾಗಿ ಹೊರಡುತ್ತಾನೆ. ಹೋಗುತ್ತಾ ಹೋಗುತ್ತ ಬೈಗಾಗುತ್ತದೆ. ಬೈಗುಗಪ್ಪು ಮುಸುಗುತ್ತದೆ. ಆಗ ಸರೋವರದ ಒಂದು ದೂರ ತೀರದಲ್ಲಿ ಪಡುವಣ ಬಾನಿಗೆದುರಾಗಿ ದಿಗಂತದಲ್ಲಿ ಮೇಲಕ್ಕೆದ್ದ ಒಂದು ಶಿಖರದ ಹೆಬ್ಬಂಡೆನೆತ್ತಿ ಮೊದಲು ಕಿರಿದಾಗಿ ಕಣ್ಣಿಗೆ ಬೀಳುತ್ತದೆ. ಅದರ ಕಡೆಗೆ ಇವನ ದೋಣಿ ಸಾಗಿದಂತೆಲ್ಲ ಅದರ ಆಕಾರ ಸಂಧ್ಯಾಕಾಶಕ್ಕೆದುರಾಗಿ ಹಿಗ್ಗಿ ಹಿಗ್ಗಿ ಕರ್‌್ರಗೆ ಶಕುನ ಪೂರ್ಣವಾಗಿ ಬಳೆ ಬಳೆದು, ಕವಿಯುತ್ತಿದ್ದ ಸಂಜೆಗತ್ತಲಲ್ಲಿ, ತಾನು ಮಾಡಿದ ಕಳ್ಳತನದ ತಪ್ಪಿಗೆ ಶಿಕ್ಷಾರೂಪಿಯಾಗಿ ಆವಿರ್ಭವಿಸಿ ಆಕ್ರಮಿಸಲೆಂದು, ಮೆಲ್ಲ ಮೆಲ್ಲನೆ ಆದರೂ ದೃಢನಿಶ್ಚಯತೆಯಿಂದ ಬಳಿಸಾರುತ್ತಿದ್ದ ಪ್ರಾಯಶ್ಚಿತ್ತಾತ್ಮಕವಾದ ಆಧ್ಯಾತ್ಮಿಕ ಧರ್ಮಭೀತಿಭೂತವೆಂಬಂತೆ ಗಗನವನ್ನೆಲ್ಲ ವ್ಯಾಪಿಸಿ ಬದ್ಧಭ್ರುಕುಟಿಯಾಗಿ ಮೇಲ್ವಾಯುತ್ತದೆ. ಎದೆ ತಣ್ಣು ಹೆದರಿ, ಬೇಗ ಬೇಗನೆ ದೋಣಿಯನ್ನು ಹಿಂತಿರುಗಿಸಿ ಕತ್ತಲಲ್ಲಿಯೆ ದಡ ಸೇರಿ, ಅದನ್ನು ಇದ್ದಲ್ಲಿಯೆ ಕಟ್ಟಿ, ಮರಳಿನಲ್ಲಿ ಮನುಷ್ಯ ಹೆಜ್ಜೆಯನ್ನು ಕಂಡ ರಾಬಿನ್‌ಸನ್ ಕ್ರೂಸೋವಿನಂತೆ, ಮನೆ ಸೇರುತ್ತಾನೆ. ಆದರೆ ಆ ಭೀತಿದ್ವಾರದಿಂದಲೆ ಅವನ ಚೇತನವನ್ನು ಪ್ರವೇಶಿಸಿದ ಯಾವುದೊ ಒಂದು ಅರ್ಥಹೀನ ಅಸ್ಪಷ್ಟ ನಿರಾಕಾರ ಭೂಮದ ಅನುಭೂತಿಯೊಂದು ಮೈಮೇಲೆ ಬಂದಂತಾಗಿ ಅವನನ್ನು ಅನೇಕ ದಿನಗಳವರೆಗೆ ಹಗಲಿರುಳೂ ಹಿಡಿದುಬಿಡುತ್ತದೆ.

---

೨೯. When, from behind that craggy steep till then
The horizon's bound, a huge peak, black and huge,
As if with voluntary power instinct,
Upreared its head. I struck and struck again,
And growing still in stature the grim shape
Towered up between me and the stars, and still,
For so it seemed, with purpose of its own
And measured motion like a living thing,
Strode after me . . . . . ."

ವುದಿಲ್ಲ. ಭವ್ಯತೆ ಸೌಂದರ್ಯದ ಒಂದು ವಿಶೇಷ ಪ್ರಕಾರ ಎನ್ನುವುದಕ್ಕಿಂತಲೂ ಸೌಂದರ್ಯದಲ್ಲಿ ಆವಿರ್ಭವಿಸುವ ಭೂಮದ ಒಂದು ವಿಶೇಷಪ್ರಕಾರ ಎನ್ನುವುದು ಹೆಚ್ಚಿನ ಸತ್ಯವಾಗುತ್ತದೆ. ಭವ್ಯತಾ ಆವಿರ್ಭಾವಕ್ಕೆ ಸೌಂದರ್ಯ ಒಂದು ಅನಿವಾರ್ಯವೂ ಆವಶ್ಯಕವೂ ಆದ ಮೂಲಭಿತ್ತಿಯಾಗಿರಲೇಬೇಕಾಗುತ್ತದೆ. ಸೌಂದರ್ಯದ ಚೌಕಟ್ಟಿನ ಹೊರಗೆ ನಿಲ್ಲುವ ಭೂಮದ ಅನುಭೂತಿ ಎಷ್ಟು ಮಹಿಮಾಸ್ಪದವಾದುದಾಗಿರಲಿ ಎಷ್ಟುಪವಿತ್ರವಾದುದಾಗಿರಲಿ ಎಂತಹ ಪರಮಪುರುಷಾರ್ಥ ಸಾಧಕವಾದುದಾಗಿರಲಿ ಅದು ಭವ್ಯತೆ ಆಗುವುದಿಲ್ಲ.

ಆದರೆ ಆ ಸಿದ್ಧಾಂತಕ್ಕೆ ನಿದರ್ಶನಗಳು ದೊರೆಯುವುದು ಬಹು ಅಪೂರ್ವ. ಏಕೆಂದರೆ ಕಲಾಕಾವ್ಯಲೋಕಗಳಲ್ಲಿ ಮಾತ್ರವಲ್ಲದೆ ಲೋಕದಲ್ಲಿಯೂ ಭೂಮಾವಿಭೂತಿ ಮೈದೋರುವ ಎಡೆಗಳಲ್ಲೆಲ್ಲ ಸೌಂದರ್ಯವು ತನ್ನ ಮಹೋತ್ಕರ್ಷದ ಹಿನ್ನೆಲೆಯ ಕಾಣಿಕೆಯನ್ನು ಸಮರ್ಪಿಸಿಯೆ ಇರುತ್ತದೆ. ನಿಸರ್ಗದೃಶ್ಯಗಳಲ್ಲಿಯಂತೂ ಭೂಮಾವಿಭೂತಿ ಗೋಚರಿಸುವೆಡೆಗಳಲ್ಲಿ ಸೌಂದರ್ಯಭಿತ್ತಿ ಸ್ವತಃಸಿದ್ಧವಾಗಿಯೆ ಇರುತ್ತದೆ. ಬಹುಶಃ ಮಾನವ ವ್ಯಾಪಾರಗಳಲ್ಲಿ ಭೂಮಾಸಿದ್ಧಿಯೆ ಮಾತ್ರ ಮುಖ್ಯ ಗುರಿಯಾಗಿರುವ ಮನುಷ್ಯಪ್ರಯತ್ನಗಳಲ್ಲಿ, ವೈರಾಗ್ಯಸಾಧನೆಯ ಕಠೋರತರ ಮಾರ್ಗಗಳಲ್ಲಿ ಹುಡುಕಿದರೆ ನಿದರ್ಶನಗಳು ದೊರೆಯಬಹುದೇನೊ !

ಆಂಗ್ಲೇಯ ವಿಮರ್ಶಕವರೇಣ್ಯ ಬ್ರಾಡ್ಲೆಯವರು ತಮ್ಮ 'The Sublime' ಎಂಬ ಪ್ರಬಂಧದಲ್ಲಿ ಭವ್ಯತೆಯನ್ನು ಕುರಿತು ಸ್ವರಸ ಸವಿಚಾರ ಜಿಜ್ಞಾಸೆ ನಡೆಸಿದ್ದಾರೆ. ಅಲ್ಲಿ ಅವರ ದೃಷ್ಟಿ ಭೂಮಾತತ್ತ್ವದ ಕಡೆಗೆ ಪ್ರತ್ಯೇಕವಾಗಿ ಹರಿದಿಲ್ಲ.[೩೧] ಆದರೆ "ಅನಂತತೆ ತಾನು ಸ್ವೇಚ್ಛೆಯಿಂದ ವರಿಸುವ ಯಾವುದೆ ಪರಿಮಿತದಲ್ಲಿ ತನ್ನ ಪೂರ್ಣ ಸಾನ್ನಿಧ್ಯವನ್ನು ಅಭಿವ್ಯಕ್ತಗೊಳಿಸುವ ಪ್ರತಿಮಾ ವಿಧಾನವನ್ನೆ 'ಸೌಂದರ್ಯ' ಎಂದೂ, ಭವ್ಯತೆ ಅದರ ಅಪರಿಮಿತತ್ತ್ವದ ಪ್ರತಿಮೆ ಎಂದೂ ನಾವು ಹೇಳಬಹುದೆಂದು

---

೩೧. ಜರ್ಮನಿಯ ತತ್ತ್ವಶಾಸ್ತ್ರಿ ರುಡಾಲ್ಫ್ ಓಟೊ (Rudolf otto) ಅವರು ತಮ್ಮ 'The idea of the Holy' ಎಂಬ ಗ್ರಂಥದಲ್ಲಿ ಪ್ರತಿಪಾದಿಸಿರುವ 'The numinous' ತತ್ತ್ವವು ಸ್ವಲ್ಪಮಟ್ಟಿಗೆ ಉಪನಿಷತ್ತಿನ ಈ ಭೂಮಾತತ್ತ್ವವನ್ನು ಅದರ ಅಪರಾಭೂಮಿಕೆಯಲ್ಲಿ ಮಾತ್ರ ಹೋಲುವಂತಿದೆ. ಅದರ ವಿಚಾರವಾಗಿ ಅವರು ಹೇಳುತ್ತಾರೆ: "This mental state is perfectly sui generis and irreducible to any other·········It cannot be taught, it can only be evoked, awakened in the mind·········It is not conceptual......All that this new term can express is the note of self-abasement into nothingness before an overpowering, absolute might of some kind......" 'Self-abasement into nothing-ness' ಎಂದು ಅವರು ಹೇಳಿದರೂ ಕೊನೆಯಲ್ಲಿ "The numinous is thus felt as objective and out-side the self" ಎನ್ನುತ್ತಾರೆ. ಭೂಮಾತತ್ತ್ವದ ಅಪರಾಭೂಮಿಕೆಯ ಕೆಳಗಣ ಅವಸ್ಥೆಗಳಿಗೆ ಮಾತ್ರ ಆ ವರ್ಣನೆ ಒಪ್ಪಬಹುದು. ಯತ್ರ ನಾನ್ಯತ್ ಪಶ್ಯತಿ ಇತ್ಯಾದಿ ಉಪನಿಷತ್ತಿನ ವರ್ಣನೆಯ ಭೂಮಾತತ್ತ್ವದ ಕೇವಲಸ್ಥಿತಿಗೆ ಅಥವಾ ಪರಾಭೂಮಿಕೆಗೆ ಅದು ಅತ್ಯಂತ ಸುದೂರವಾಗಿದೆ.

ತೋರುತ್ತದೆ; ಒಂದು ಅಂತರ್ಯಾಮಿತ್ವದ ಪ್ರತಿಮೆ; ಇನ್ನೊಂದು ಅತೀತತ್ವದ್ದು." ಎಂದು ಅವರು ಪ್ರಬಂಧದ ತುದಿಯಲ್ಲಿ ಭೂಮಾತತ್ತ್ವವನ್ನೇ ಸೂಚಿಸಿದ್ದಾರೆ. ೩೨ ಅವರು ಮುಖ್ಯವಾಗಿ ಸೌಂದರ್ಯತತ್ತ್ವವನ್ನೇ ಆಶ್ರಯಿಸಿ ಭವ್ಯತಾ ಅನುಭವವನ್ನು ವಿವರಿಸಿದ್ದಾರೆ. ಅನೇಕ ಛಾಯಾಭೇದಗಳೂ ತರತಮಸ್ತರಗಳೂ ರೀತಿಗಳೂ ಮುಖಗಳೂ ಹಾಸುಹೊಕ್ಕಾಗಿರುವ ಸೌಂದರ್ಯ ಸೀಮೆಯನ್ನು ಐದು ಸೋಪಾನಗಳನ್ನಾಗಿ ವಿಂಗಡಿಸಿ ಶುದ್ಧ ಸೌಂದರ್ಯ ವಲಯವನ್ನು ಮಧ್ಯದಲ್ಲಿರಿಸಿದ್ದಾರೆ. ಭವ್ಯತೆಗೆ ಮೊದಲನೆಯ ಉತ್ತುಂಗಸ್ಥಾನ ಕೊಟ್ಟಿದ್ದಾರೆ.೩೩

ಭವ್ಯ, ಅದ್ಭುತ, ಸುಂದರ, ರಮ್ಯ, ಲಲಿತ—ಎಂದು ಭಾಷಾಂತರಿಸಲು ಒಪ್ಪಿಕೊಂಡು ನಾವು ಮುಂದುವರಿಯಬಹುದು. ಅಂತಹ ಒಪ್ಪಿಗೆಯ ಆವಶ್ಯಕತೆ ಏಕೆ ಎಂದರೆ, ಭಾರತೀಯ ಭಾಷೆಗಳಲ್ಲಿ ಮತ್ತು ಆ ಭಾಷೆಗಳಿಗೆಲ್ಲ ಮಾತೃಸ್ಥಾನದಲ್ಲಿ ನಿಂತಿರುವ ಸಂಸ್ಕೃತದಲ್ಲಿ ಸೌಂದರ್ಯಾನುಭವದ ಮತ್ತು ಭೂಮಾನುಭೂತಿಯ ಅಸಂಖ್ಯಮುಖಗಳನ್ನು ಗುರುತಿಸಲು ನೂರಾರು ಪದಗಳು ಶ್ರೇಣಿಗೊಂಡು ನಿಂತಿವೆ.೩೪ ಅವುಗಳಲ್ಲಿ ಅನೇಕವನ್ನು ಪರ್ಯಾಯಪದಗಳನ್ನಾಗಿಯೂ ಬಳಸಿ ಬಳಸಿ, ಪರಸ್ಪರವಾಗಿ ಇರಬೇಕಾಗಿದ್ದ ವ್ಯತ್ಯಾಸವೆಲ್ಲ ಸವೆದೂ ಸವೆದೂ, ಮುದ್ರೆ ಅಳಿಸಿ ಹೋದ ನಾಣ್ಯಗಳಂತೊ ಅಂತೆ, ಕಡಮೆ ಬೆಲೆಯದಕ್ಕೆ ಹೆಚ್ಚಿನ ಬೆಲೆಯದನ್ನೂ ಹೆಚ್ಚಿನ ಬೆಲೆಯವರ ಸ್ಥಾನದಲ್ಲಿ ಕಡಮೆ ಬೆಲೆಯದನ್ನೂ ಮನಸ್ಸು ಬಂದಂತೆ ಉಪಯೋಗಿಸುವ ಅಲಸ ಪ್ರವೃತ್ತಿ ಬೆಳೆದು ಬಂದಿದೆ. ಅಲ್ಲದೆ ಅದ್ಭುತಕ್ಕೆ ಬದಲು ಮಹತ್ತನ್ನೇಕೆ ಬಳಸಬಾರದು? ರಮ್ಯಕ್ಕೆ ಬದಲು ಚಾರು ಏಕಿರಬಾರದು? ಲಲಿತಕ್ಕೆ ಬದಲು ಲಾವಣ್ಯವಿರಬಹುದಲ್ಲಾ! ಕೋಮಲ ಏಕಾಗಬಾರದು? ಮುದ್ದು, ಸೊಗಸು, ಚೆಲುವು ಈ ಪದಗಳಲ್ಲಿರುವ ಅರ್ಥ Pretty ಎನ್ನುವುದಕ್ಕೆ ಹೆಚ್ಚಿನ ಸಾಮೀಪ್ಯದಲ್ಲಿಲ್ಲವೆ? ಇತ್ಯಾದಿ ಸಂದೇಹಗಳೂ ಸಮಸ್ಯೆಗಳೂ ವಾದವಿವಾದಗಳೂ ಮೂಡದಿರಲು ಈ ಒಪ್ಪಿಗೆ ಬೇಕಾಗುತ್ತದೆ. ಅವು ಮೂಡಲೆಬಾರದು ಎಂದಲ್ಲ; ವಿಚಾರದಾರಿ ವಾದದ ಸಂಧಿಗ್ಧತೆಯಲ್ಲಿ ಸಿಕ್ಕಿ ಗುರಿಗೆಡದಿರಲಿ ಎಂದು!

---

೩೨. 'Beauty,' then, we may perhaps say, is the image of the total presence of the Infinite within any limits it may choose to assume; sublimity the image of its boundlessness . . . . ; the one the image of its immanence, the other of its transcendence.—Oxford Lectures on Poetry.

೩೩. "Let us begin by placing side by side five terms which represent five of the many modes of beauty—sublime, grand, beautiful, graceful, pretty."
(Oxford Lectures on Poetry) **Ibid**

೩೪. ರುಂದ್ರ, ರುದ್ರ, ಭದ್ರ, ಚಾರು, ಮನೋಹರ, ಚೇತೋಹಾರಿ, ಆಹ್ಲಾದಕಾರಿ, ಭೀಷ್ಮ, ಭೀಕರ, ಭಯಂಕರ, ಶಂಕರ, ರಮಣೀಯ, ಕಮನೀಯ, ಸುಭಗ, ಲಸತ್, ಶೋಭಾ, ಸ್ನಿಗ್ಧ, ಮಂಗಲ, ಬಂಧುರ, ಉಜ್ವಲ, ಸೊಗಸು, ಮುದ್ದು, ಚೆಲುವು, ಚೆನ್ನು, ಇನಿದು, ಸೊಂಪು, ವಲ್ಗು, ಆಶ್ಚರ್ಯ, ಕಾಂತಿ, ಮಧುರ, ಕೋಮಲ, ಶ್ರೀ, ಲಕ್ಷ್ಮಿ, ಇತ್ಯಾದಿ.

ಲಾಲಿತ್ಯ, ರಮ್ಯತೆ, ಸೌಂದರ್ಯ, ಆದ್ಭುತ್ಯ, ಭವ್ಯತೆ—ಈ ಐದನ್ನು ಸೌಂದರ್ಯದ ಪಂಚಾಂಗಗಳೆಂದಾಗಲಿ 'ರಸ'ದ ಪಂಚಸ್ಥಿತಿಗಳೆಂದಾಗಲಿ ಭಾವಿಸಬಹುದು ;— ಶೈಶವ, ಬಾಲ್ಯ, ತಾರುಣ್ಯ, ಯೌವನ, ಪರಿಣತಿ ಅಥವಾ ವೃದ್ಧಿಗಳಿರುವಂತೆ. (ಇಂಗ್ಲಿಷಿನಲ್ಲಿ ಸಣ್ಣಕ್ಷರದ b ಇರುವ beauty ಎನ್ನುವುದನ್ನು ದೊಡ್ಡಕ್ಷರದ B ಇರುವ Beauty ಎಂದು ಬರೆದು ಅದರ ಸರ್ವಗ್ರಾಸಿಯಾದ ವಿಶಾಲಾರ್ಥವನ್ನು ಸೂಚಿಸಿರುತ್ತಾರೆ. ನಾವು ದೊಡ್ಡಕ್ಷರದ Beauty ಎನ್ನುವುದನ್ನು 'ರಸ' ಎಂದು ಕರೆಯುವುದರಲ್ಲಿ ಔಚಿತ್ಯವಿದೆ.೩೫) ಲಾಲಿತ್ಯಕ್ಕೂ ರಮ್ಯತೆಗೂ ಹೆಚ್ಚು ಸಾದೃಶ್ಯ ವಿರುವುದನ್ನೂ ಹಾಗೆಯೆ ಭವ್ಯತೆ ಮತ್ತು ಅದ್ಭುತಗಳಿಗೆ ಹೆಚ್ಚು ಸಾಮೀಪ್ಯವಿರು ವುದನ್ನೂ ನಾವು ಗಮನಿಸಬಹುದು. ಸೌಂದರ್ಯ ನಡುವೆ ನಿಲ್ಲುತ್ತದೆ. ಆದರೆ ಒಮ್ಮೊಮ್ಮೆ ಲಾಲಿತ್ಯರಮ್ಯತೆಗಳ ಕಡೆ ತುಸು ಒಲೆಯಬಹುದು; ಒಮ್ಮೊಮ್ಮೆ ಅದ್ಭುತ ಭವ್ಯತೆಗಳ ಕಡೆಗೂ ವಾಲಬಹುದು. ಅಂದರೆ ಲಲಿತಸೌಂದರ್ಯ ಸಾಧ್ಯ ವಾಗುವಂತೆ ಮಹತ್‌ಸೌಂದರ್ಯವೂ ಸಾಧ್ಯ. ಆದರೆ ಲಾಲಿತ್ಯಭವ್ಯತೆಗಳ ನಡುವೆ, ಅವೆರಡಕ್ಕೂ ರಸದ ಸೀಮೆಯ ನಂಟು ಇದ್ದರೂ, ಅಗಾಧವೂ ಅಪಾರವೂ ಆದ ಅಂತರವಿದೆ. ಎಷ್ಟರಮಟ್ಟಿಗೆಂದರೆ, ಅವೆರಡಕ್ಕೂ ಸಂಬಂಧವೆ ಇಲ್ಲವೆಂದು ತೋರು ವಂತೆ; ಅಷ್ಟೇ ಅಲ್ಲ, ಪರಸ್ಪರ ವಿರೋಧಿಗಳಾಗಿಯೂ ಭಾಸವಾಗುವಂತೆ.

ಹಾಗಾದರೆ ಭವ್ಯತೆ ತನ್ನ ಯಾವ ಲಕ್ಷಣದಿಂದ ಲಾಲಿತ್ಯಕ್ಕೆ ಅಮೇಯ ದೂರವಾಗುತ್ತದೆ? ಲಾಲಿತ್ಯಕ್ಕಿಲ್ಲದ ಯಾವ ಗುಣ ಭವ್ಯತೆಯಲ್ಲಿ ಮೈದೋರುತ್ತದೆ? ಹಸುರಿನ ನಡುವೆ, ಕಿರುಬಂಡೆಗಳಲ್ಲಿ ಜಗುಳಿ, ಮೊರೆದು, ನೊರೆಗುಳ್ಳೆಗಳನ್ನು ಚಿಮ್ಮಿ ಹರಿಯುವ ತೊರೆಯ ರಮ್ಯತೆಗೂ ಕಡಿದಾದ ಭಯಂಕರ ಪ್ರಪಾತಕ್ಕೆ ಇಡಿಯ ಹೊಳೆಯೆ ದುಢುಮ್ಮನೆ ಭೋರ್ಗರೆದು ಧುಮುಕುವ ಜೋಗದ ಮಹಾಜಲಪಾತದ ಭವ್ಯತೆಗೂ ಇರುವ ಗುಣ ವ್ಯತ್ಯಾಸವೇನು?

ಎಲ್ಲಿ ಯಾವುದೆ ಗುಣದ ಪರಿಮಿತಿ ಅಥವಾ ಅಲ್ಪತೆ ತನ್ನ ವಿಸ್ತಾರಬಾಹುಳ್ಯ ದಿಂದ ವಿಭೂತಿಪ್ರಮಾಣಕ್ಕೇರಿ೩೬, ಭೂಮವೂ ಆ ವಿಭೂತಿಪ್ರಮಾಣದಲ್ಲಿಯೆ ಆವಿರ್ಭಾವವಾಗಿ ನಮ್ಮ ಪ್ರಜ್ಞೆಯನ್ನು ಆಕ್ರಮಿಸುತ್ತದೆಯೊ ಅಲ್ಲೆಲ್ಲ ಭವ್ಯತೆ ಮೂಡುತ್ತದೆ. ವಿಸ್ತಾರ, ಬಾಹುಳ್ಯ, ಬೃಹತ್ತು, ಮಹತ್ತು, ಮಹಾಶಕ್ತಿ, ಮಹಾ ಮಹಿಮೆ,—ಅಂತರ್ಮುಖದ್ದಾಗಿರಬಹುದು; ಬಹಿರ್ಮುಖದ್ದಾಗಿರಬಹುದು; ಆಧ್ಯಾತ್ಮಿಕ ವಾಗಿರಬಹುದು;—ಇವು ಭವ್ಯತಾ ಅನುಭವವನ್ನು ಪ್ರಚೋದಿಸುವ ಭಿತ್ತಿಲಕ್ಷಣ ಗಳಾಗಿರುತ್ತವೆ. ಅಪಾರ, ಅಸೀಮ, ಅನಂತ, ಅಚಿಂತ್ಯ, ಅಪ್ರಮೇಯ ಇಂತಹ ನಿರ್ದಿಗಂತ ಮತ್ತು ನಿಶ್ಶಿಖರಧ್ವನಿಯ ವಿಶೇಷಣಗಳೆ ಭವ್ಯತಾ ಅನುಭವಕ್ಕೆ

---

೩೫. ಮುಂಬರುವ 'ರಸೋ ವೈ ಸಃ' ಎಂಬ ಪ್ರಬಂಧವನ್ನು ನೋಡಿ.

೩೬. 'ವಿಭೂತಿ ಪೂಜೆ' ಎಂಬ ಗ್ರಂಥದಲ್ಲಿ 'ಕವಿಯಲ್ಲಿ ವಿಭೂತಿ' ಎಂಬ ಪ್ರಂಬಧ ವನ್ನು ನೋಡಿ.

ನೆರವಾಗುವ ಗುಣಗಳನ್ನು ಸೂಚಿಸುತ್ತವೆ. ನಮ್ಮ ದೈನಂದಿನ ಸಾಮಾನ್ಯತೆಯ ಅಲ್ಪತೆಗೆ ಆಘಾತವೊದಗಿ, ನಮ್ಮ ಸ್ವಸ್ವರೂಪದ ಅನಂತತೆ ಆಹ್ವಾನಿತವಾಗಿ, ವಿಭೂತಿಪ್ರಮಾಣದಲ್ಲಿ ಭೂಮದ ಆವಾಹನೆಯಾಗುವುದೆ ಭವ್ಯತೆ.

ನಮ್ಮ ಧ್ಯಾನಕ್ಕೆ ಅಥವಾ ಪರಿಭಾವನೆಗೆ ವಿಷಯವಾಗುವ ಒಂದು ಹಿರಿಮೆ, ಒಂದು ಮಹಿಮೆ, ಒಂದು ಮಹತ್ತು ಬೃಹತ್‌ಪ್ರಮಾಣದಲ್ಲಿ ತಿಕ್ಕನೆ ನಮ್ಮನ್ನು ಸಂಧಿಸಿದಾಗ ಮೊದಲು ನಮ್ಮ ವ್ಯಕ್ತಿತ್ವವನ್ನು ಅಪ್ಪಳಿಸುತ್ತದೆ ; ನಮ್ಮ ಅಹಂಕಾರ ತನ್ನ ಅಲ್ಪತೆಯನ್ನು ಅನುಭವಿಸಿ ತಿರೋಹಿತವಾಗುತ್ತದೆ; ನಮ್ಮ ಗರ್ವಭಾವ ಅಥವಾ ಸ್ವಪ್ರತಿಷ್ಠೆ ಭಂಗಿತವಾಗಿ ಒಮ್ಮೊಮ್ಮೆ ಚೂರ್ಣೀಕೃತವಾಗುತ್ತದೆ; ನಾವು ಕುನಿದು ಕುಗ್ಗಿ ಇಲ್ಲವಾಗುತ್ತೇವೆ. ಹಾಗಾಗುವಿಕೆ ಒಮ್ಮೊಮ್ಮೆ ಭಯದ ರೂಪವನ್ನಾಗಲಿ ವಿಸ್ಮಯದ ರೂಪವನ್ನಾಗಲಿ ತಾಳುತ್ತದೆ. ಎದುರಿಸುವಿಕೆಯನ್ನೆ ಒಂದಿನಿತೂ ಸಹಿಸದ, ಒಂದು ಬುದ್ಧಿಸ್ಪಷ್ಟವಲ್ಲದ ಭೀಷಣತೆ ಹಿಂಜರಿಯುತ್ತಿರುವ ನಮ್ಮ ವ್ಯಕ್ತಿತ್ವವನ್ನು ಬೆನ್ನಟ್ಟಿ ನುಂಗಿ ನೊಣೆಯುತ್ತದೆ. ಆ ಭೀತಿಯ ಸ್ವರೂಪ ಸಾಧಾರಣ ಪ್ರಾಣಿಭಯಕ್ಕಿಂತ ಭಿನ್ನವಾಗಿರುತ್ತದೆ. ಅದು ತಂದೊಡ್ಡುವ ನಾಶದಲ್ಲಿ ಏನೋ ಒಂದು ಅಪೇಕ್ಷಣೀಯವಾದುದೂ ಆಪ್ಯಾಯಮಾನವಾದುದೂ ಇರುತ್ತದೆ. ನಮ್ಮ ಜೀವ ಅದರಿಂದೋಡುವಾಗಲೆ ಅದನ್ನಾಲಿಂಗಿಸುವ ಮರಣಾನಂದದ ಮೋಹದಿಂದ ಅದರ ಆಕ್ರಮಣಕ್ಕೆ ಒಳಗಾಗಲು ಬಯಸಿ, ಒಳಗೊಳಗೆ, ಬೇಕೆಂದೆ, ಅದಕ್ಕೆ ಸಿಕ್ಕಲಿ ಎಂದೆ, ಕಾಲು ಸೋಲುತ್ತದೆ, ನಡೆಗೆಡುತ್ತದೆ, ಬಿದ್ದು ಮೈಮರೆತು ಮೂರ್ಛೆ ಹೋಗುತ್ತದೆ. ಅವಶವಾಗುತ್ತದೆ, ಪರವಶವಾಗುತ್ತದೆ, ತನ್ನನಿತನ್ನೂ ತಾನೆ ಸಂಪೂರ್ಣವಾಗಿ ಸಮರ್ಪಿಸಿಕೊಂಡು ಶೂನ್ಯವಾಗುತ್ತದೆ ; ಪೂರ್ಣ ಶರಣಾಗತಿಯ ಒಂದು ಮಹಾಕ್ರಿಯೆ ನಡೆದುಹೋಗುತ್ತದೆ. ಆಗ ಆ ಶೂನ್ಯವನ್ನು ತುಂಬುತ್ತದೆ, ಪೂರ್ಣ !

ನಮ್ಮನ್ನು ಹೆದರಿಸುವ ಒಂದು ಭೀಷಣತೆ; ಆದರೂ ರಹಸ್ಯವಾಗಿ ಆಕರ್ಷಿಸುವ ಒಂದು ಸಂಮ್ಮೋಹಕತೆ. ನಮ್ಮನ್ನು ಶೂನ್ಯಗೈಯುವ ಭೀತಿ; ಆದರೂ ಆಸ್ವಾದ್ಯವಾಗಿ ಪೂರ್ಣಗೈಯುವ ಒಂದು ಪ್ರೀತಿ. ಒಂದು ರುದ್ರತೆ; ಒಂದು ರಮಣೀಯತೆ. ಅಲ್ಲಿಯ ಭಯ ಪಶುಭಯವಲ್ಲ. ಅದೊಂದು ದಿವ್ಯಭೀತಿ. ನಮ್ಮ ಅಲ್ಪತ್ವವನ್ನು ಒದ್ದು ತಳ್ಳುವಂತೆಯೆ ನಮ್ಮ ಮಹತ್ತ್ವವನ್ನು ಸೆಳೆದಪ್ಪುತ್ತದೆ. ತೈತ್ತರೀಯೋಪನಿಷತ್ತಿನ ಮಹರ್ಷಿ 'ಭೀಷಾಽಸ್ಮಾದ್ವಾತಃ ಪವತೇ। ಭೀಷೋದೇತಿ ಸೂರ್ಯಃ। ಭೀಷಾಽಸ್ಮಾದಗ್ನಿಶ್ಚೇಂದ್ರಶ್ಚ। ಮೃತ್ಯುರ್ಧಾವತಿ ಪಂಚಮ ಇತಿ।' ಎಂದು ಯಾವ 'ಭೀಷೆ'ಯನ್ನು ವರ್ಣಿಸುತ್ತಾನೊ ಆ ಭಯ ಬರಿಯ ಪಶುಭಯವಲ್ಲ. ಕಠೋಪನಿಷತ್ತಿನಲ್ಲಿಯೂ ಸ್ವಲ್ಪ ಹೆಚ್ಚು ಕಡಮೆ ಅದೇ ಮಾತಿನಲ್ಲಿ ಆ ದಿವ್ಯಭಯದ ವರ್ಣನೆ ಬರುತ್ತದೆ: 'ಭಯಾದಸ್ಯಾಗ್ನಿಸ್ತಪತಿ ಭಯಾತ್ತಪತಿ ಸೂರ್ಯಃ। ಭಯಾದಿಂದ್ರಶ್ಚ ವಾಯುಶ್ಚ ಮೃತ್ಯುರ್ಧಾವತಿ ಪಂಚಮಃ।' 'ಇದರ ಭಯದಿಂದ ಅಗ್ನಿ ಸುಡುತ್ತಾನೆ;

ಸೂರ್ಯ ಪ್ರಕಾಶಿಸುತ್ತಾನೆ; ಇಂದ್ರ ಮತ್ತು ವಾಯು ತಮ್ಮ ಕರ್ತವ್ಯಪಾಲನೆ ಮಾಡುತ್ತಾರೆ; ಐದನೆಯವ ಯಮನೂ ಓಡುತ್ತಾನೆ.' 'ಯದಿದಂ ಕಿಂಚ ಜಗತ್ ಸರ್ವಂ ಪ್ರಾಣ ಏಜತಿ ನಿಃಸೃತಮ್। ಮಹದ್ಭಯಂ ಯ ಏತದ್ವಿದುರಮೃತಾಸ್ತೇ ಭವಂತಿ ॥' —ಆ ಪರಬ್ರಹ್ಮ ಶಕ್ತಿಯಿಂದಲೇ ಈ ಜಗತ್ತೆಲ್ಲವೂ ಹೊರಹೊಮ್ಮಿ ಕಂಪಿಸುತ್ತದೆ. ಉದ್ಯತ ವಜ್ರದಂತಿರುವ, ಎಂದರೆ ಹೊಡೆಯಲು ಮೇಲೆತ್ತಿದ ವಜ್ರಾಯುಧದಂತಿರುವ ಇದು ಮಹದ್‌ಭಯ. ಇದನ್ನು ತಿಳಿದುಕೊಳ್ಳುವವರು ಅಮೃತರಾಗುತ್ತಾರೆ.— ಅದೇನೊ ಮಹದ್‌ಭಯ! ಆದರೆ ಅದನ್ನರಿಯುವವರಿಗೆ ಅಮೃತಪ್ರಾಪ್ತಿ! ಭವ್ಯತಾ ಅನುಭವದಲ್ಲಿ ನಮ್ಮ ವ್ಯಕ್ತಿತ್ವವನ್ನು ಅಪ್ಪಳಿಸುವ ಮತ್ತು ನಮ್ಮ ಅಹಂಕಾರವನ್ನು ಕುನಿದು ಕುಗ್ಗಿಸಿ ಇಲ್ಲಗೈಯುವ ಭಯ ಸಾಮಾನ್ಯ ಪಶುಭಯವಲ್ಲ; ಅದು ಉಪನಿಷತ್‌ಕಾರರು ವರ್ಣಿಸುವ ಮಹದ್‌ಭಯ, 'ಭೀಷೆ', ಶ್ರೀಮದ್‌ಭೀತಿ!

ಆ 'ಮಹದ್‌ಭಯ' ನಮ್ಮ ಅಹಂಕಾರಕ್ಕೆ ಆಘಾತಕರವಾಗುತ್ತದೆ; ಕುಸಿದು ಕುಗ್ಗುವ ನಮ್ಮ ವ್ಯಕ್ತಿತ್ವವನ್ನು ಅಪ್ಪಳಿಸುತ್ತದೆ. ನಮ್ಮ ಚೇತನೆಯ ಸಂಪೂರ್ಣ ಶರಣಾಗತಿಯನ್ನು ಸಾಧಿಸುತ್ತದೆ; ನಮ್ಮನ್ನು ಇಲ್ಲಗೈಯುತ್ತದೆ; ಶೂನ್ಯತೆಗೆ ಬೀಸಿ ತೆಗೆದೊಗೆಯುತ್ತದೆ. ಅದು ನಿಷೇಧಾತ್ಮಕ ಪ್ರಯೋಜನ. ಆದರೆ ಅಷ್ಟಕ್ಕೇ ನಿಲ್ಲುವುದಿಲ್ಲ. ನಿಂತಿದ್ದರೆ ಅದು ಭವ್ಯತೆಗೇರುತ್ತಿದ್ದಿಲ್ಲ. ಆ ಶೂನ್ಯ ಸಂಪಾದನೆಯೆ ಪೂರ್ಣತಾ ಸಾಧನೆಯಾಗಿ ಭೂಮಾನುಭೂತಿಯ ಸಿದ್ಧಿಗೆ ಹಾದಿಯಾಗುತ್ತದೆ. ನಮ್ಮ 'ಅಲ್ಪತಾ' ಪ್ರಲಯದ ಒಡನೊಡನೆಯೆ ಭೂಮಾಕ್ರಮದ ಬ್ರಹ್ಮಲಾಭವೂ ಸ್ವತಃಸಂಭವಿಯಾಗುತ್ತದೆ.

ವಸ್ತು ಸಂನಿವೇಶಗಳ ಬೃಹತ್ತು ಮಹತ್ತುಗಳಿದ್ದ ಮಾತ್ರಕ್ಕೆ ಭವ್ಯತಾ ಅನುಭವ ತನಗೆ ತಾನೆ ಸಿದ್ಧವಾಗುವುದಿಲ್ಲ. ಸಹೃದಯ ಪ್ರಜ್ಞೆಯ ಚಿತ್ತಸಂವಾದ ಅದಕ್ಕೆ ಅತ್ಯಂತ ಆವಶ್ಯಕ. ಆ ಚಿತ್ತಸಂವಾದ ಅವನ ಬುದ್ಧಿ ಭಾವ ಸಂಸ್ಕಾರಗಳ ಫಲವಾಗಿರುತ್ತದೆ. ಅವನ ದರ್ಶನಪ್ರಜ್ಞೆಯನ್ನೂ ಅದು ಅವಲಂಬಿಸುತ್ತದೆ. ಭೂಮದ ಅನುಭೂತಿಯಾದರೊ ಅದರ ರೂಕ್ಷತರ ರೂಪಗಳಲ್ಲಿ ಮತ್ತು ಅಲ್ಪಸ್ವಲ್ಪ ಪ್ರಮಾಣದಲ್ಲಿ, ನಾಗರಿಕತೆ ಸಂಸ್ಕೃತಿಗಳ ವಲಯಕ್ಕೆ ಇನ್ನೂ ಪ್ರವೇಶಿಸದಿರುವ ಪಶುಮಾನವನಿಗೂ ಸಾಧ್ಯವಾಗಬಹುದು. ಆದರೆ ಭವ್ಯತಾ ಅನುಭವವಂತೂ ಬುದ್ಧಿಭಾವ ಸಂಸ್ಕಾರಜನ್ಯವಾದ ತತ್ತ್ವದೃಷ್ಟಿ ಮತ್ತು ಅಧ್ಯಾತ್ಮ ಪ್ರಜ್ಞೆಯಿಲ್ಲದವನಿಗೆ ಲಭಿಸುವುದಿಲ್ಲ. ಅಂತಹನು ಲೌಕಿಕಭಾವ ರೂಪವಾದ ಶೋಕಭಯಾದಿಗಳಿಗೆ ವಶವಾಗುತ್ತಾನೆಯೆ ಹೊರತು ರಸರೂಪವಾದ 'ಮಹದ್‌ಭಯ'ಕ್ಕಾಗಲಿ 'ಭೀಷೆ'ಗಾಗಲಿ ಪರವಶನಾಗುವುದಿಲ್ಲ. ಭವ್ಯತಾ ಅನುಭವಕ್ಕೆ ಆವಶ್ಯಕವಾಗಿರುವ ಮತ್ತು ಪರಸ್ಪರ ಪೂರಕವಾಗಿರುವ ಎರಡು ಪಕ್ಷಗಳಲ್ಲಿ ಒಂದನೆಯದಾದ 'ವ್ಯಕ್ತಿಕ್ಷ್ವಾಘಾತ' ಆತನಿಗೆ ಸಂಭವಿಸಬಹುದೆ ವಿನಾ ಎರಡನೆಯದಾದ 'ಬ್ರಹ್ಮಲಾಭ' ಸಿದ್ಧಿಸುವುದಿಲ್ಲ.

ಲಕ್ಷ ನಕ್ಷತ್ರ ಖಚಿತವಾದ ಕಗ್ಗತ್ತಲೆಯ ರಾತ್ರಿಯಾಕಾಶದ ಸುವಿಸ್ತಾರವಲಯ

ವನ್ನು ಅರಣ್ಯಮುದ್ರಿತವಾದ ನಿರ್ಜನನೀರವ ಮಹೋತ್ತುಂಗ ಶಿಖರದಲ್ಲಿ ಏಕಾಂಗಿಯಾಗಿ ನಿಂತು ದರ್ಶಿಸುವಾತನ ಧ್ಯಾನಮನದಲ್ಲಿ ಭವ್ಯತಾ ಸಂಭೂತಿಗೆ ಬೇಕಾಗುವ ಸರ್ವವೂ ಸಜ್ಜಾಗಿರುತ್ತದೆ: ಮಹನ್‌ಮೌನ, ಅದ್ಭುತವಿವಿಕ್ತತೆ, ಮಹದ್‌ವಿಸ್ತೀರ್ಣ, ಅಗಣಿತಸಂಖ್ಯೆ, ಅಪಾರತೆ, ಅನಂತತೆ, ನಿಸ್ಸೀಮತೆ! ಆದರೆ ಆ ವ್ಯಕ್ತಿ ಕಾಡಿನಲ್ಲಿ ದಾರಿತಪ್ಪಿ ಅಲ್ಲಿಗೆ ಬಂದವನಾಗಿದ್ದರೆ? ಅವನು ದಿಗಿಲುಗೊಂಡಿದ್ದರೆ? ಹುಲಿಯದೊ ಹಾವಿನದೊ ಪಿಶಾಚಿಯದೊ ಅಪಾಯದ ಆಶಂಕೆಗೆ ಅವನೆದೆ ಡವಡವಿಸುತ್ತಿದ್ದರೆ? ಅವನಿಗೆ ಭವ್ಯತಾ ಅನುಭವ ಸಾಧ್ಯವೆ? ಹೆದರಿಕೆಯಿಂದ ವ್ಯಕ್ತಿತ್ವಕ್ಕೆ ಆಘಾತವೇನೊ ಒದಗಬಹುದು. ಅವನ ಅಹಂಕಾರ ಮುದುಗಿ ಕುಗ್ಗಬಹುದು. ಪರಿಣಾಮ? ಹೆಚ್ಚು ಎಂದರೆ ಭಯಮೂರ್ಛೆಗೆ ಸಲ್ಲಬಹುದು! 'ಬ್ರಹ್ಮಲಾಭ'ವಂತೂ ಅವನಿಗೆ ಕನಸಿನ ಗಂಟೂ ಆಗುವಂತಿಲ್ಲ!

ಕಾಲ, ಆಕಾಶ, ಸಾಗರ, ಮಹಾರಣ್ಯಶ್ರೇಣಿ, ಮಹೋನ್ನತ ಪರ್ವತಪಂಕ್ತಿ, ತಿಮಿಂಗಿಲ, ಆನೆ, ಸಿಂಹ, ಘಟಸರ್ಪ ಮೊದಲಾದ ನೈಸರ್ಗಿಕ ವಸ್ತುಗಳಲ್ಲಿ ಮತ್ತು ಪ್ರಾಣಿಗಳಲ್ಲಿ ಮೈದೋರುವ ಮಹತ್ತಿಗೆ ಅವುಗಳ ಬೃಹತ್ತೆ ಕಾರಣವಾಗಿರುವಂತೆ ತೋರಿದರೂ ಭವ್ಯತಾ ಅನುಭವಕ್ಕೆ ಬಾಹ್ಯಕವಾದ ಬೃಹತ್ತು ಅನಿವಾರ್ಯವಾಗಿ ಆವಶ್ಯಕವಾದುದೇನಲ್ಲ. ವಸ್ತು ಅನಂತತೆಯ ಭಾವೋದಯಕ್ಕೆ ಕಾರಣವಾದರೆ ಸಾಕು. ತಾನೆ ಅಪಾರವಾಗಿರಬೇಕಾಗಿಲ್ಲ. ಕಪ್ಪು ಮುಸುಗುತ್ತಿರುವ ಬೈಗಿನಂಬರಕ್ಕೆದುರಾಗಿ ದಿಗಂತದ ದಿಬ್ಬದ ಮೇಲೆ ನಿಲ್ಲುವ ಯಾವನೇ ಒಬ್ಬ ಯಃಕಶ್ಚಿತ ಮನುಷ್ಯನ ಮಷೀಚಿತ್ರ, ಚಿತ್ತಸಂವಾದವಿರುವ ಪ್ರೇಕ್ಷಕನ ಪ್ರಜ್ಞೆಯಲ್ಲಿ ವಿಭೂತಿಸಂಚರಿಸುವಂತೆ ಮಾಡಿ, ಭವ್ಯತಾ ಅನುಭವವನ್ನು ಉಂಟುಮಾಡಬಹುದು. ಯಾವನೊ ಒಬ್ಬ ಯಃಕಶ್ಚಿತವ್ಯಕ್ತಿ ಭವ್ಯತೆಗೆ ಕಾರಣವಾಗಲಾರನು, ಬಹಿರ್ಮುಖಗಾತ್ರದಿಂದಾಗಲಿ, ಅಂತರ್‌ಮುಖ ಮಹಿಮೆಯಿಂದಾಗಲಿ. ಆದರೆ ಅನಂತವಾದ ಆಕಾಶಕ್ಕೆದುರಾಗಿ ನಿಂತ ಅನಾಮಧೇಯದ ಆ ವ್ಯಕ್ತಿ ತನ್ನ ಕ್ಷುದ್ರಕ್ಕೂ ಕ್ಷುದ್ರವಾದ ಮಹಾ ಅಲ್ಪತೆಯ ತಾರತಮ್ಯದಿಂದಲಿ ನೋಡುವಾತನ ಮನದಲ್ಲಿ ಅನಂತತಾಭಾವವನ್ನು ಮಿಡಿದು ಭವವಾಗಿಬಿಡುತ್ತಾನೆ.

ಬ್ರಾಡ್ಲೆಯವರು ರಷ್ಯಾದ ಕವಿಯೊಬ್ಬನ ಒಂದು ವಚನಕವನದಲ್ಲಿ ಬರುವ ಪುಟ್ಟ ಗುಬ್ಬಚ್ಚಿಯೊಂದು ಭವ್ಯತೆಗೇರಿರುವ ನಿದರ್ಶನ ಕೊಟ್ಟಿದ್ದಾರೆ. ಆ ತಾಯಿ ಗುಬ್ಬಚ್ಚಿ ಮಳೆಗಾಳಿಗೆ ತೂರಾಡಿದ ಗೂಡಿನಿಂದ ಕೆಳಕ್ಕೆ ಬಿದ್ದಿದ್ದ ರೆಕ್ಕೆ ಬಲಿಯದ ತನ್ನ ಮರಿಯನ್ನು ಭೀಮಗಾತ್ರದ ಬೇಂಟೆನಾಯಿಯ ಉಗ್ರದಾಡೆಯಿಂದ ಸಂರಕ್ಷಿಸಲು ಸೆಣಸಿ ಹೋರಾಡಿ ಬಲಿಯಾದುದನ್ನು ಕಂಡ ಆ ನಾಯಿ ಕೂಡ ಏನೊ ಒಂದು ಅನಿರ್ವಚನೀಯ ಭೀಷೆಗೆ ಸಿಲುಕಿದಂತಾಗಿ, ಸೆಡೆತು, ಹಿಂಜರಿಯಿತಂತೆ! ಆ ಗುಬ್ಬಚ್ಚಿ ಭವ್ಯವಾಗಿರುವುದು ಅದರ ಬಹಿರ್ಗಾತ್ರದಿಂದಲ್ಲ; ಅದರ ಪ್ರೀತಿ, ವಾತ್ಸಲ್ಯ, ತನ್ನ ಪ್ರಾಣವನ್ನೆ ಲೆಕ್ಕಿಸದ ಅದರ ತ್ಯಾಗ, ತನಗಿಂತಲೂ ಬಹುಪಾಲು ದೊಡ್ಡದಾಗಿದ್ದ

ಆ ನಾಯಿಯನ್ನು ನಿರ್ಲಕ್ಷಿಸಿ ಸೆಣಸಿದ ಅದರ ಪುಟ್ಟ ಹೃದಯದ ಹೈಮಾಚಲ ಧೈರ್ಯ, ತನಗೊದಗುವ ಮೃತ್ಯುವನ್ನು ತೃಣಕ್ಕೆಣೆ ಕಡೆಗಣಿಸಿ ಮುನ್ನುಗ್ಗಿದ ಮಾತೃಪ್ರೇಮದ ಮಹಾಶಕ್ತಿ ಮತ್ತು ಸ್ಥೈರ್ಯ—ಇವೆಲ್ಲದರ ಆಂತರಿಕವಾದ ಅಂತರ್ಮುಖವಾದ ಆಧ್ಯಾತ್ಮಿಕವಾದ ಮಹಾಮಹಿಮೆಯಿಂದ ಅದು ವಿಭೂತಿಯ ಮಟ್ಟಕ್ಕೇರಿ ಭವ್ಯ ವಾಗಿದೆ.

ಎಲ್ಲೆಲ್ಲಿ, ಬಾಹ್ಯಕವಾಗಿಯಾಗಲಿ, ಆಂತರಿಕವಾಗಿಯಾಗಲಿ, ಭೂಮವು ತನ್ನ ವಿಭೂತಿಪ್ರಮಾಣದಲ್ಲಿ ಸೌಂದರ್ಯಭೂಮಿಕೆಯನ್ನಾಶ್ರಯಿಸಿ ಇಂದ್ರಿಯಗಳನ್ನು ಅತಿಕ್ರಮಿಸುವಂತೆ ಅಭಿವ್ಯಕ್ತವಾಗುವುದೊ ಅಲ್ಲೆಲ್ಲ ಭವ್ಯತಾ ಅನುಭವಕ್ಕೆ ಅವಕಾಶ ವಿರುತ್ತದೆ. ವಿಸ್ಮಯ, ಆಶ್ಚರ್ಯ, ವ್ಯಕ್ತಿತ್ವಾಘಾತ, ಅಹಂಕಾರಪ್ರಲಯ, ಸಂಪೂರ್ಣ ಶರಣಾಗತಿ ಈ ತೆರನ ನೇತ್ಯಾತ್ಮಕ ಲಕ್ಷಣಗಳಿಂದ ಪ್ರಾರಂಭವಾಗಿ ಅಮೇಯತೆ, ಅನಂತತೆ, ಬ್ರಹ್ಮೈಕ್ಯತೆ, ಪರಿಪೂರ್ಣತೆ ಇಂತಹ ಇತ್ಯಾತ್ಮಕ ಭಾವಗಳಿಂದ ಜೀವಕ್ಕೆ ಶಿವತ್ವವನ್ನು ಕೃಪೆಗೈಯುವವರೆಗೂ ಅದರ ಉಗ್ರಾನುಗ್ರಹದ ಆಶೀರ್ವಾದ ವೇರುತ್ತದೆ.

ತತ್ಕಾಲದಲ್ಲಿ ಸ್ವಾರ್ಥತಾವಿಮುಕ್ತವೂ ಸಂಗದೂರವೂ ಆಗಿರುವ ದರ್ಶನ ಧ್ವನಿ[೩೭] ಸಮರ್ಥವಾದ ಸಹೃದಯಪ್ರಜ್ಞೆ ಭವ್ಯತಾ ಆವಿರ್ಭಾವಕ್ಕೆ ಆವಶ್ಯಕವೂ ಅನಿವಾರ್ಯವೂ ಆಗಿರುವ ಪೂರ್ವಭಿತ್ತಿ.

—ಕುವೆಂಪು

೯–೪–೧೯೬೧

---

೩೭. ಮುಂದೆ ಬರಲಿರುವ 'ರಸೋ ವೈ ಸಃ' ಎಂಬ ಪ್ರಬಂಧದಲ್ಲಿ ದರ್ಶನಧ್ವನಿ ವಿಚಾರದ ಸಂಕ್ಷಿಪ್ತವಿವರಣೆ ದೊರೆಯುತ್ತದೆ.

ಹೊರೆಸನ ಸಾಹಿತ್ಯ ವಿಮರ್ಶೆ

(ಮುಂದುವರಿದುದು)

ಅಗಸ್ಟಸನಿಗೆ ಬರೆದ ಪತ್ರ

ಸೀಸರ್, ನೀನು ರೋಮನ್ ರಾಜ್ಯವನ್ನು ಸೇನಾಬಲದಿಂದ ರಕ್ಷಿಸುತ್ತಿರುವೆ. ಅದಕ್ಕೆ ಸದಾಚಾರಗಳನ್ನೂ, ೧ ನಿರ್ದುಷ್ಟ ನ್ಯಾಯಶಾಸನಗಳನ್ನೂ ಒದಗಿಸುತ್ತಿರುವೆ. ಹೀಗೆ ಇಂತಹ ಅನೇಕ ಗುರುತರವಾದ ಕರ್ತವ್ಯಗಳ ಹೊರೆಯನ್ನು ನೀನು ಒಬ್ಬಂಟಿಗನಾಗಿ ಹೆಗಲ ಮೇಲೆ ಹೊತ್ತಿರುವಾಗ, ನಿನ್ನ ಅಮೂಲ್ಯವಾದ ಕಾಲವನ್ನು ನಾನು ದೀರ್ಘವಾದ ಸಂಭಾಷಣೆಗಳಿಂದ ೨ಪೋಲುಮಾಡಿದರೆ ಅದು ಸಾರ್ವಜನಿಕಹಿತಕ್ಕೆ ಅಪಚಾರಮಾಡಿದಂತಾಗುತ್ತದೆ.

ರೊಮುಲಸ್, ತಂದೆ ಲಿಬರ್, ಪೊಲ್ಲಕ್ಸ್ ಮತ್ತು ಅವನ ಅವಳಿ ಸಹೋದರ ಕಾಸ್ಟರ್ ೩—ಇವರು ತಮ್ಮ ಮಹತ್ಸಾಧನೆಗಳನ್ನು ಪೂರೈಸಿದ ತರುವಾಯ ದೇವಾಲಯಗಳಲ್ಲಿ ಸ್ಥಾನಗಳಿಸಿದರು. ಆದರೆ ಅವರು ಭೂಮಿಯನ್ನು ಫಲವತ್ತು ಮಾಡಿ, ಜನಗಳನ್ನು ನಾಗರಿಕರನ್ನಾಗಿ ಪರಿವರ್ತಿಸಿ, ಘೋರ ಯುದ್ಧಗಳಿಗೆ ವಿರಾಮ ನೀಡಿ, ಜಮೀನುಗಳನ್ನು ವಿಂಗಡಿಸಿ ಹಂಚಿ, ಪಟ್ಟಣಗಳನ್ನು ಕಟ್ಟುತ್ತಾ ಇದ್ದಷ್ಟು ಕಾಲವೂ ಅವರು ನಿರೀಕ್ಷಿಸಿದ ಜನಾನುರಾಗವು ಅವರ ಶ್ರಮಕ್ಕೆ ತಕ್ಕ ಪ್ರಮಾಣದಲ್ಲಿ ದೊರೆಯಲಿಲ್ಲವೆಂದು ವ್ಯಥೆಪಟ್ಟರು. ಭೀಕರವಾದ ಹೈಡ್ರವನ್ನು೪ ಮರ್ದನಮಾಡಿ, ಕಥೆಯು ತಿಳಿಸುವಂತೆ ಇನ್ನೂ ಅನೇಕ ಭಯಂಕರ ಪ್ರಾಣಿಗಳನ್ನು ವಿಧಿಲಿಖಿತದ ಪ್ರಕಾರ ಕೊಂದವನು೫ ಅಸೂಯೆ ಎಂಬ ಕ್ರೂರಪ್ರಾಣಿಯು ಮಾತ್ರ ಮರಣವೊಂದರಿಂದ ಅಡಗುವಂಥದೇ ಹೊರತು ಅದಕ್ಕೆ ಮುಂಚಿನ ಯಾವುದರಿಂದಲೂ ಅಲ್ಲ ಎಂಬುದನ್ನು ಕಂಡುಕೊಂಡನು. ತನಗಿಂತ ಕೆಳಗಿರುವವರ ದೃಷ್ಟಿಯಲ್ಲಿ ಬಹಳ ಭಾರವಾಗಿ ಕಾಣುವ ಗುಣಗಳನ್ನು ಹೊಂದಿರುವವನು ತನ್ನ ಕೇವಲ ಪ್ರಕಾಶ

---

೧. ಅಗಸ್ಟಸನು ರಚಿಸಿದ ವೈವಾಹಿಕ ಜೀವನದ ಮತ್ತು ವೈಯಕ್ತಿಕ ಖರ್ಚುಗಳನ್ನು ನಿರ್ಬಂಧಿಸುವ ಶಾಸನಗಳು.

೨. ಹೊರೆಸನು ಎಷ್ಟೋ ಜನರಿಗೆ ಪದ್ಯಪತ್ರಗಳನ್ನು ಬರೆದರೂ ತನಗೆ ಮಾತ್ರ ಒಂದನ್ನೂ ಬರೆಯಲಿಲ್ಲವೆಂದು ಆಕ್ಷೇಪಿಸಿದ ಆಗಸ್ಟನಿಗೆ ಇದು ಹೊರೆಸನ ಸಮಾಧಾನ,

೩. ರೊಮುಲಸನು ರೋಮಿನ ಸ್ಥಾಪಕರಲೊಬ್ಬ. ಲಿಬರ್ ಮದ್ಯದೇವ ಬಾಕ್ಕಸ್ ಪೊಲ್ಲಕ್ಸ್ ಮತ್ತು ಕಾಸ್ಟರ್ ಝ್ಯೂಸನ ಮಕ್ಕಳು ; ಕ್ರಿ. ಪೂ. ೪೯೬ರಲ್ಲಿ ರೋಮಿನ ಜನರಿಗೆ ಯುದ್ಧದಲ್ಲಿ ನೆರವು ನೀಡಿ ಜಯಗಳಿಸಿ ಕೊಟ್ಟುದಕ್ಕಾಗಿ ಅವರಿಗೆ ಕ್ರಿ. ಪೂ. ೪೮೪ರಲ್ಲಿ ರೋಮಿನಲ್ಲಿ ಒಂದು ದೇವಸ್ಥಾನ ಕಟ್ಟಲಾಗಿತ್ತು.

೪. ಕತ್ತರಿಸಿದಷ್ಟೂ ಮತ್ತೆ ಬೆಳೆಯುತ್ತಿದ್ದ ಅನೇಕ ತಲೆಗಳ ಒಂದು ಸಮುದ್ರ ಪ್ರಾಣಿ.

೫. ಹರ್ಕ್ಯುಲಿಸ್.

ದಿಂದಲೇ ಇತರರನ್ನು ಸುಡುತ್ತಾನೆ. ಆದರೆ ಅವನ ದೀಪವು ನಂದುತ್ತಲೇ[೧] ಅವನೂ ಗೌರವಪಾತ್ರನಾಗುತ್ತಾನೆ. ನಿನ್ನ ವಿಷಯದಲ್ಲಿ ಅದು ಹಾಗಿಲ್ಲ. ನೀನು ನಮ್ಮ ನಡುವೆ ಇರುವಾಗಲೇ ನಾವು ನಿನ್ನ ಮೇಲೆ ಗೌರವಗಳ ಮಳೆಯನ್ನು ಸುರಿಸುತ್ತೇವೆ. ನಿನ್ನ ಹೆಸರಿನಲ್ಲಿ ಪ್ರತಿಜ್ಞೆ ಮಾಡಲು ವೇದಿಗಳನ್ನು ನಿರ್ಮಿಸುತ್ತಿದ್ದೇವೆ. ನಿನ್ನಂಥವನು ಹಿಂದೆ ಯಾವಾಗಲೂ ಹುಟ್ಟಿದ್ದಿಲ್ಲ, ಮುಂದೆಯೂ ಹುಟ್ಟುವುದಿಲ್ಲ ಎಂದು ಹೇಳಿಕೊಳ್ಳುತ್ತಿದ್ದೇವೆ.

ಗ್ರೀಕರ ಮತ್ತು ನಮ್ಮ ದಂಡನಾಯಕರ ಅಗ್ರಶ್ರೇಣಿಯಲ್ಲಿ ನಿನ್ನನ್ನು, ಮತ್ತು ನಿನ್ನನ್ನು ಮಾತ್ರವೇ, ಪರಿಗಣಿಸಿರುವುದರಲ್ಲಿ ನಿನ್ನ ಪ್ರಜೆಗಳು ವಿವೇಕದಿಂದ, ನ್ಯಾಯದಿಂದ ವರ್ತಿಸಿದ್ದಾರೆ. ಆದರೆ ಇದೇ ಜನ ಇತರ ವಿಷಯಗಳನ್ನು ಸಂಪೂರ್ಣವಾಗಿ ಬೇರೆ ಸೂತ್ರ, ಕ್ರಮಗಳಿಂದ ಅಳೆಯುತ್ತದೆ. ತಮ್ಮ ಜೀವಿತವನ್ನು ಮುಗಿಸಿ ಭೂಮಿಯಿಂದ ಮರೆಯಾದುವನ್ನು ಬಿಟ್ಟು ಉಳಿದೆಲ್ಲವನ್ನೂ ದ್ವೇಷ, ತಿರಸ್ಕಾರಗಳಿಂದ ನೋಡುತ್ತದೆ. ಅದು ಎಷ್ಟರಮಟ್ಟಿಗೆ ಪ್ರಾಚೀನತೆಯ ಪಕ್ಷಪಾತಿಯೆಂದರೆ—ಅನ್ಯಾಯಗಳನ್ನು ತಡೆಗಟ್ಟಲು ದಶಕರು (Decemvirs)[೨] ರಚಿಸಿದ ಶಾಸನಗಳು, ಗಾಬಿಯೊಂದಿಗೆ ಅಥವಾ ಪ್ರಬಲರಾದ ಪ್ರಾಚೀನ ಸಾಬೈನರೊಂದಿಗೆ[೩] ನಮ್ಮ ರಾಜರು ಮಾಡಿಕೊಂಡ ಒಪ್ಪಂದಗಳು, ಧರ್ಮಾಚಾರ್ಯರ ಗ್ರಂಥಗಳು,[೪] ಕವಿ-ದ್ರಷ್ಟಾರರ[೫] (Poet-seers) ಪ್ರಾಚೀನ ಲೇಖಗಳು — ಇವೆಲ್ಲವೂ ಆಲ್ಬನ್ ಪರ್ವತ ನಿವಾಸಿಗಳಾದ ವಿದ್ಯಾದೇವಿಯರ (Muses) ಬಾಯಿಂದಲೇ ಬಂದುವೆಂದು ಹೇಳುವ ಅಭಿಮಾನ ಅದಕ್ಕಿದೆ.

ಗ್ರೀಕರ ಕೃತಿಗಳಲ್ಲಿ ಯಾವುವು ಅತ್ಯಂತ ಪ್ರಾಚೀನವೋ ಅವೇ ವಾಸ್ತವವಾಗಿ ಉತ್ತಮೋತ್ತಮವೂ ಆಗಿರುವುದರಿಂದ ರೋಮನ್ ಲೇಖಕರನ್ನೂ ಅದೇ ತಕ್ಕಡಿಯಲ್ಲಿ ತೂಗಬೇಕೆಂಬುದು ನಿನ್ನ ವಾದವಾದರೆ ನಿನ್ನ ಸಿದ್ಧಾಂತಕ್ಕೆ ವಾದದ ಆವಶ್ಯಕತೆಯೇ ಇಲ್ಲ. ಈ ನ್ಯಾಯದಂತೆ ಆಲಿವ್‌ನ ಒಳಗೆ ಗಟ್ಟಿಯಾದುದು

---

೧. ಎಂದರೆ, ಅವನು ಮರಣಹೊಂದುತ್ತಲೇ. ಕೆಳದರ್ಜೆಯ ಜನಗಳ ಅಸೂಯೆಯಿಂದ ಮಹಾಗುಣಿಯೊಬ್ಬನು ಜೀವಿಸಿರುವವರೆಗೂ ತನಗೆ ಸಲ್ಲಬೇಕಾದ ಪ್ರೀತಿಗೌರವಗಳನ್ನು ಕಾಣಲಾರ.

೨. ಕ್ರಿ ಪೂ. ೪೫೧ರಲ್ಲಿ ಹತ್ತು ಸಮಸ್ತರು ಕೂಡಿ ರಚಿಸಿದ ನ್ಯಾಯಶಾಸನಗಳು. ಇವೇ ರೋಮನ್ ನ್ಯಾಯದ ಅಡಿಗಲ್ಲಾದುವು.

೩. ಎಂದರೆ, ಗಾಬಿ ನಗರದೊಂದಿಗೆ ಟಾರ್ಕ್ವಿನಸ್ ಸುಪರ್ಬಸನು ಮಾಡಿಕೊಂಡ ಕೌಲು ಮುಂತಾದುವು.

೪. ಪ್ರಾಚೀನ ಕಾಲದಲ್ಲಿ ರೋಮನ್ ಧರ್ಮಾಚಾರ್ಯರು ಇಡುತ್ತಿದ್ದ ವಾರ್ಷಿಕ ವರದಿಗಳು.

೫. ಇಲ್ಲಿ ಸೂಚಿತವಾಗಿರುವುದು ಹೋಮರನ ಕಾವ್ಯಗಳು.

ಯಾವುದೂ ಇಲ್ಲ; ಕಾಯಿನ ಹೊರಗೆ ಗಟ್ಟಿಯಾದುದು ಯಾವುದೂ ಇಲ್ಲ.೧ ನಾವು ಸೌಭಾಗ್ಯದ ಶಿಖರವನ್ನು ತಲುಪಿದ್ದೇವೆ. ನಾವು ಚಿತ್ರ ಬರೆಯುತ್ತೇವೆ. ಸಿಥರ್ನ್ ವಾದ್ಯ ನುಡಿಸುತ್ತೇವೆ. ಅಖಾಡದಲ್ಲಿ ಗ್ರೀಕರಿಗಿಂತಲೂ ಹೆಚ್ಚು ಕೌಶಲದಿಂದ ಕುಸ್ತಿ ಮಾಡುತ್ತೇವೆ.

ಕಾವ್ಯವು ಮದ್ಯದಂತೆ ಎಷ್ಟು ಕಾಲ ಇಟ್ಟರೆ ಅಷ್ಟು ಉತ್ತಮವಾಗುತ್ತದೆ ಯೆಂದು ನೀನು ಹೇಳಬಹುದು. ಹಾಗಾದರೆ ಕೃತಿಗಳಿಗೆ ಹೆಚ್ಚು ಬೆಲೆಯನ್ನು ದೊರಕಿಸಿಕೊಡುವುದು ಎಷ್ಟನೆಯ ವರ್ಷ ಎಂದು ನಾನು ಕೇಳುತ್ತೇನೆ. ಒಂದು ನೂರು ವರ್ಷಗಳ ಹಿಂದೆ ಮಡಿದ ಲೇಖಕನನ್ನು ಪರಿಪೂರ್ಣರಾದ ಪ್ರಾಚೀನರ ನಡುವೆ ಪರಿಗಣಿಸಬೇಕೋ ಅಥವಾ ಗುಣಹೀನರಾದ ಆಧುನಿಕರ ನಡುವೆಯೋ? ಮುಂದೆ ವಿವಾದಗಳಿಗೆ ಎಡೆಗೊಡದಂತೆ ಒಂದು ಖಚಿತವಾದ ಅವಧಿಯನ್ನು ನಿಗದಿಮಾಡು. "ಒಂದು ನೂರು ವರ್ಷ ತುಂಬಿದವನು ಪ್ರಾಚೀನ ಮತ್ತು ಶ್ರೇಷ್ಠ" ಎಂದು ನೀನು ಹೇಳಬಹುದು. ಹಾಗಾದರೆ ಅದಕ್ಕಿಂತ ಒಂದೇ ಒಂದು ತಿಂಗಳು ಅಥವಾ ವರ್ಷ ಈಚೆಗೆ ಸತ್ತವನ ಗತಿ ಏನು? ಅವನನ್ನು ಯಾರ ನಡುವೆ ಎಣಿಸಬೇಕು? ಪ್ರಾಚೀನ ಕವಿಗಳ ನಡುವೆಯೋ ಅಥವಾ ಇಂದಿನ ಮತ್ತು ಮುಂದಿನ ಪೀಳಿಗೆಯವರೆಲ್ಲರ ತಿರಸ್ಕಾರಕ್ಕೊಳಗಾಗುವವರ ನಡುವೆಯೋ? "ಆ ಅವಧಿಗಿಂತ ಒಂದು ತಿಂಗಳಷ್ಟು ಸ್ವಲ್ಪ ಕಾಲ ಅಥವಾ ಒಂದು ಇಡೀ ವರ್ಷವೇ ಆಗಲಿ ಕಡಿಮೆ ಯಾಗಿರುವವನು ಖಂಡಿತವಾಗಿಯೂ ಪ್ರಾಚೀನರ ಮಧ್ಯದಲ್ಲಿ ಗೌರವದ ಸ್ಥಾನ ವನ್ನು ಪಡೆಯುತ್ತಾನೆ" ಎಂದು ನೀನು ಅವಕಾಶ ನೀಡಬಹುದು. ನೀನು ಕೊಡುವ ಅವಕಾಶವನ್ನು ನಾನು ಆದಷ್ಟು ಸಂಪೂರ್ಣವಾಗಿ ಉಪಯೋಗಿಸಿ ಕೊಳ್ಳುತ್ತೇನೆ. ಕುದುರೆ ಬಾಲದ ಕೂದಲುಗಳಂತೆ ಒಂದೊಂದಾಗಿ ನಿಧಾನವಾಗಿ ಕಿತ್ತು ಹಾಕುತ್ತೇನೆ. ಅನಂತರ ತಾರೀಕುಗಳಿಗೆ ಶರಣಾಗಿರುವ, ಗುಣಗಳನ್ನು ವರ್ಷ ಗಳಿಂದ ಅಳೆಯುವ, ಯಮನ ಸ್ಪರ್ಶದಿಂದ ಪವಿತ್ರವಾಗದ ಯಾವುದನ್ನೂ ಮೆಚ್ಚದ ನನ್ನ ಸ್ನೇಹಿತನನ್ನು ಕರಗುವ ರಾಶಿಯ ತಂತ್ರದಿಂದ ನೆಲಕ್ಕುರುಳಿಸುತ್ತೇನೆ.೨

---

೧. ಎಲ್ಲಾ ವಸ್ತುಗಳನ್ನೂ ಒಂದರ ಲಕ್ಷಣದಿಂದ ಅಳೆಯಬಾರದು. ಎಲ್ಲಾ ಫಲಗಳನ್ನೂ ತೆಂಗಿನಕಾಯಿನ ಲಕ್ಷಣದಿಂದ ಅಳೆದರೆ, ಮಾವಿನಹಣ್ಣಿನ ಹೊರಭಾಗದಲ್ಲಿ ಯಾವುದೂ ಮೆತ್ತಗಿಲ್ಲ ವೆನ್ನಬೇಕಾಗುತ್ತದೆ. ಮಾವಿನಹಣ್ಣಿನ ಲಕ್ಷಣದಿಂದಾದರೆ, ತೆಂಗಿನಕಾಯಿನ ಹೊರಗಡೆ ಗಟ್ಟಿ ಯಾಗಿಲ್ಲವೆನ್ನ ಬೇಕಾಗುತ್ತದೆ. ಹೀಗೆಯೇ ಬಾದಾಮಿ ಖರ್ಜೂರಗಳನ್ನೂ ಉದಾಹರಿಸ ಬಹುದು. ಆದ್ದರಿಂದ ಪ್ರತಿಯೊಂದು ವಸ್ತುವನ್ನೂ ಅದರದರ ಗುಣಗಳಿಗಾಗಿ ಪರೀಕ್ಷಿಸಬೇಕು.

೨. ಇಲ್ಲಿ ಸೂಚಿತವಾಗಿರುವುದು ಒಂದು ಪ್ರಸಿದ್ಧವಾದ ತಾರ್ಕಿಕ ಸಮಸ್ಯೆ:—ಕುದುರೆಯ ಬಾಲ ಎನಿಸಿಕೊಳ್ಳಲು ಎಷ್ಟು ಕೂದಲಿರಬೇಕು? ಒಂದು ಗುಡ್ಡೆ ಎನಿಸಲು ಎಷ್ಟು ಕಾಳುಗಳಿರ ಬೇಕು? ಒಂದು ಸಾವಿರವೇ? ಒಂಬೈನೂರ ತೊಂಬತ್ತೊಂಬತ್ತೇ? ಹೀಗೆ ಒಂದೊಂದಾಗಿ ಕಳೆಯುತ್ತಾ ಬಂದರೆ ಕೊನೆಯಲ್ಲಿ ಬಾಲವೂ, ಗುಡ್ಡೆಯೂ ಕರಗಿಹೋಗುತ್ತವೆ.

ನಮ್ಮ ಸಾಹಿತ್ಯ ವಿಮರ್ಶಕರು ಎನ್ನಿಯಸನನ್ನು೧ "ಜ್ಞಾನಿ" "ವೀರ" "ಎರಡನೆ ಹೋಮರ್" ಎಂದೆಲ್ಲಾ ಕರೆದಿದ್ದಾರೆ. ಅವನ ಹೆಮ್ಮೆಯ ಮಾತುಗಳ ಮತ್ತು ಪೈಥಗೊರಿಯನ್ ಕನಸುಗಳ೨ ಗತಿ ಏನಾಗಿದೆಯೆಂಬುದನ್ನು ಅವನು ಗಮನಿಸುವುದಿಲ್ಲವೆಂದು ನನಗೆ ತೋರುತ್ತದೆ. ನೇವಿಯಸ್೩ ಕೂಡ ಎಲ್ಲರ ಕೈಲೂ ಇಲ್ಲವೇನು? ನೆನ್ನೆ ತಾನೆ ಬರೆದವನಂತೆ ಎಲ್ಲರ ನೆನಪಿನಲ್ಲಿಯೂ ಇಲ್ಲವೇನು? ಪ್ರತಿಯೊಂದು ಪ್ರಾಚೀನ ಕಾವ್ಯವೂ ಅಷ್ಟು ಪವಿತ್ರವಾದುದು. ಕವಿಗಳ ತಾರತಮ್ಯದ ಬಗ್ಗೆ ವಿವಾದ ಹುಟ್ಟಿದಾಗ ಪ್ರಾಚೀನರಲ್ಲಿ "ಪಂಡಿತ ಕವಿ" ಎಂಬ ಪ್ರಶಸ್ತಿಯನ್ನು ಪಕುವಿಯಸನಿಗೂ,೪ "ಪ್ರೌಢ ಕವಿ" ಎಂಬುದನ್ನು ಅಕ್ಕಿಯಸನಿಗೂ೫ ನೀಡಲಾಗಿದೆ. ಈ ಪರಿಭಾಷೆಯ ಪ್ರಕಾರ ಅಫ್ರನಿಯಸನ೬ ನಿಲುವಂಗಿ "ಮೆನಾಂಡರನ೭ ಅಂಗಿಯ ತದ್ವತ್ತಾಗಿದ್ದಿತು". ಪ್ಲಾಟಸನ೮ ಓಟ "ಸಿಸಿಲಿಯ ಎಪಿಕಾರ್ಮಸನದನ್ನು೯" ಹೋತಿದ್ದಿತು. "ಗಾಂಭೀರ್ಯ"ಕ್ಕಾಗಿ ಕೆಕಿಲಿಯಸನಿಗೂ೧೦ "ಕೌಶಲ"ಕ್ಕಾಗಿ ಟೆರೆನ್ಸನಿಗೂ೧೧ ಪ್ರಶಸ್ತಿಗಳು ದೊರಕಿದುವು.೧೨

---

೧. ಕ್ರಿ. ಪೂ. ೨೩೯. ರೋಮನ್ ಸಾಹಿತ್ಯದ ಯುಗಪುರುಷ. ಅನೇಕ ಕಾವ್ಯ, ನಾಟಕಗಳ ಕರ್ತೃ.

೨. ಕ್ರಿ. ಪೂ. ಆರನೆಯ ಶತಕದ ಗ್ರೀಕ್ ದಾರ್ಶನಿಕ ಪೈಥಗೊರಸನು ಮರಣಾನಂತರ ಜೀವಗಳು ದೇಹಾಂತರಗಳನ್ನು ಪ್ರವೇಶಿಸುತ್ತವೆಂದು ನಂಬಿದ್ದನು. ಈ ಸಿದ್ಧಾಂತದ ಪ್ರಕಾರ ಹೋಮರನ ಆತ್ಮವು ತನ್ನಲ್ಲಿ ಅವತರಿಸಿದಂತೆ ಎನ್ನಿಯಸನಿಗೆ ಒಂದು ಕನಸಾಗಿದ್ದಿತಂತೆ. ಈಗ ಎನ್ನಿಯಸನು ಆ ಕನಸನ್ನು ಬಿಟ್ಟುಬಿಡಬಹುದು. ಈ ಸಾಹಿತ್ಯ ವಿಮರ್ಶಕರು ಅವನು ನಿಜವಾಗಿಯೂ ಎರಡನೆ ಹೋಮರ್ ಆಗಿದ್ದಾನೆ ಎಂದು ಪ್ರಮಾಣ ಮಾಡುತ್ತಾರೆ. ಅರ್ವಾಚೀನ ಕವಿಗಳನ್ನು ತೆಗಳುವ ಸಲುವಾಗಿ ಪ್ರಾಚೀನರಿಗೆ ವಿಮರ್ಶಕರು ಕಲ್ಪಿಸಿದ ಬಿರುದುಗಳನ್ನು ಹೊರೆಸನು ಇಲ್ಲಿ ಹಾಸ್ಯ ಮಾಡುತ್ತಿದ್ದಾನೆ.

೩. ಕ್ರಿ. ಪೂ. ೨೩೫. ಪ್ಯೂನಿಕ್ ಯುದ್ಧದ ಮೇಲೆ ಒಂದು ಕಾವ್ಯವನ್ನು ಬರೆದನು.

೪. ಕ್ರಿ. ಪೂ. ೧೯೦. ಎನ್ನಿಯಸನ ಸೋದರಳಿಯ ಈಸ್ಕಿಲಸ್, ಸೋಫೋಕ್ಲಿಸರನ್ನು ಅನುವಾದಿಸಿದನು.

೫. ಕ್ರಿ. ಪೂ. ೧೭೦. ಈಸ್ಕಿಲಸನ ಕೃತಿಗಳ ಪ್ರೇಮಿ. ಐತಿಹಾಸಿಕ ನಾಟಕಗಳನ್ನು ರಚಿಸಿದನು.

೬. ಕ್ರಿ. ಪೂ. ೧೦೦. ವೈನೋದಿಕ ನಾಟಕಗಳನ್ನು ಬರೆದಿದ್ದಾನೆ. ರೋಮಿನ ಮೆನಾಂಡರನೆಂದು ಪ್ರಸಿದ್ಧನಾದ.

೭. ಕ್ರಿ. ಪೂ. ೩೪೨. ಗ್ರೀಕರ ನವ್ಯಪಂಥದ ವೈನೋದಿಕಕಾರ.

೮. ಕ್ರಿ. ಪೂ. ೨೨೦. ರೋಮನ್ ವೈನೋದಿಕಕಾರ.

೯. ಕ್ರಿ. ಪೂ. ೩೯೦. ಗ್ರೀಕ್ ವೈನೋದಿಕಕಾರ. ವೈನೋದಿಕದ ನಿರ್ಮಾತೃವೆಂದು ಪ್ರತೀತಿ.

೧೦. ಕ್ರಿ. ಪೂ. ೨೦೦. ಲ್ಯಾಟಿನರಲ್ಲೆಲ್ಲಾ ಅತ್ಯುತ್ತಮ ವೈನೋದಕಕಾರನೆಂದು ವಲ್ಕೇಷಿಯಸ್ ಇವನನ್ನು ಹೊಗಳಿದ್ದನು.

೧೧. ಕ್ರಿ. ಪೂ. ೧೬೫. ರೋಮಿನ ಪ್ರಖ್ಯಾತ ವೈನೋದಿಕಕಾರ.

೧೨. ನಮ್ಮ "ಉಪಮಾಕಾಲಿದಾಸಸ್ಯ", 'ನೈಷಧಂವಿದ್ವದೌಷಧಂ', 'ಬಾಣೋಚ್ಛಿಷ್ಟಂ

ನಮ್ಮ ಈ ಸಾರ್ವಭೌಮ ರೋಮ್ ಕಂಠಪಾಠ ಮಾಡುವುದು ಇವರನ್ನೇ. ನಾಟಕ ಮಂದಿರಗಳನ್ನು ಕಿಕ್ಕಿರಿಯುವಂತೆ ಅದು ಜನಗಳಿಂದ ತುಂಬುವುದು ಇವರ ಕೃತಿಗಳನ್ನು ನೋಡುವುದಕ್ಕಾಗಿಯೇ. ಕವಿ ಲಿವಿಯಸನ೧ ಕಾಲದಿಂದ ಇಂದಿನವರೆಗೆ ಕವಿಗಳೆಂದು ಅದು ಪರಿಗಣಿಸುವುದು ಇವರಷ್ಟನ್ನು ಮಾತ್ರವೇ.

ಲೋಕ ಕೆಲವು ಸಲ ಸರಿಯಾಗಿ ನಡೆದುಕೊಳ್ಳುತ್ತದೆ. ಇನ್ನು ಕೆಲವು ಸಲ ಅದು ಹಾದಿ ತಪ್ಪುತ್ತದೆ. ಪ್ರಾಚೀನ ಕವಿಗಳನ್ನು ಯಾರೂ ಮೀರಿಸಲಾರರು, ಅವರ ಸಮಕ್ಕೆ ಕೂಡ ಯಾರೂ ಬರಲಾರರು ಎಂಬ ಭಾವನೆಯಿಂದ ಅದು ಅವರನ್ನು ಮೆಚ್ಚಿ ಹೊಗಳುವುದಾದರೆ, ಅದು ಮಾಡುತ್ತಿರುವುದು ತಪ್ಪು. ಆದರೆ ಅವರು ಕೆಲವು ವಿಷಯಗಳನ್ನು ಹಳೆಯ ಕಂದಾಚಾರದ ಶೈಲಿಯಲ್ಲಿಯೂ, ಅನೇಕವನ್ನು ಕರ್ಕಶವಾಗಿಯೂ, ಮತ್ತು ಇನ್ನೂ ಅನೇಕವನ್ನು ಅಲಕ್ಷ್ಯದಿಂದಲೂ ನಿರೂಪಿಸಿದ್ದಾರೆಂದು ಅದು ಒಪ್ಪಿಕೊಂಡರೆ, ಅದಕ್ಕೆ ಸ್ವಲ್ಪ ಅಭಿರುಚಿ ಇದೆ ಎಂದಾಗುತ್ತದೆ. ಆಗ ಅದು ನನ್ನ ಪಕ್ಷವನ್ನು ವಹಿಸುತ್ತದೆ. ಮತ್ತು ಅದರ ತೀರ್ಮಾನದಿಂದ ಜೊವ್ ೨ ಸುಪ್ರೀತನಾಗುತ್ತಾನೆ. ಲಿವಿಯಸನ ಕೃತಿಗಳ ಮೇಲೆ ಖಂಡಿತವಾಗಿಯೂ ನನಗೆ ಯಾವ ದ್ವೇಷವೂ ಇಲ್ಲ. ಚಿಕ್ಕಂದಿನಲ್ಲಿ ಆರ್ಬಿಲಿಯಸನ ೩ ಬೆತ್ತದ ಸಮ್ಮುಖ ಕಲಿತುದನ್ನು ಈ ಪ್ರಪಂಚದಿಂದಲೇ ನಿಃಶೇಷವಾಗಿ ತೊಡೆದು ಹಾಕುವ ಇಚ್ಛೆಯೂ ನನಗಿಲ್ಲ. ಆದರೆ ಅವುಗಳನ್ನು ನಿಷ್ಕಲಂಕ, ಸೌಂದರ್ಯದ ಮಾದರಿ, ಪರಿಪೂರ್ಣತೆಯ ನೆರೆಮನೆ ಎಂದು ಪರಿಗಣಿಸಿರುವುದು ನನಗೆ ಆಶ್ಚರ್ಯವನ್ನುಂಟುಮಾಡುತ್ತದೆ. ವಾಸ್ತವದಲ್ಲಿ ಸಂದರ್ಭ ಹೀಗಿರುತ್ತದೆ. ಆ ಕೃತಿಗಳಲ್ಲಿ ಯಾವುದಾದರೂ ಒಂದು ಸುಂದರ ಪ್ರಯೋಗವು ಅಪರೂಪಕ್ಕೆ ಆ ಕತ್ತಲೆಯಲ್ಲಿ ಬೆಳಗಿದರೆ, ಯಾವುದಾದರೂ ಇಲ್ಲೊಂದು ಅಲ್ಲೊಂದು ಪಂಕ್ತಿ ಉಳಿದವಕ್ಕಿಂತ ಸ್ವಲ್ಪ ಚೆನ್ನಾಗಿ ರಚಿತವಾಗಿದ್ದರೆ, ಜನಗಳು ಅವನ್ನೇ ಮಾದರಿಯಾಗಿ ಭಾವಿಸಿಬಿಟ್ಟು, ಅವುಗಳ ಆಧಾರದ ಮೇಲೆ ಇಡೀ ಕಾವ್ಯದ ಬೆಲೆಯನ್ನು ನಿರ್ಧರಿಸುತ್ತಾರೆ.

ಯಾವುದಾದರೂ ಒಂದು ಕೃತಿಯನ್ನು ಅದರ ಗ್ರಾಮ್ಯತೆಗಾಗಿಯೋ ನೀರಸತೆಗಾಗಿಯೋ ಟೀಕಿಸದೆ ಆಧುನಿಕವೆಂದು ಅದನ್ನು ಟೀಕಿಸುವುದು, ಮತ್ತು ಪ್ರಾಚೀನ

ಜಗತ್ಸರ್ವಂ' ಮುಂತಾದುವನ್ನೂ, ಅನಂತರದ ಕವಿಗಳನ್ನು "ಅಭಿನವ ಕಾಳಿದಾಸ", "ಅಭಿನವ ಪಂಪ" ಎಂದು ಕರೆಯುವ ವಾಡಿಕೆಯನ್ನೂ ಹೋಲಿಸಬಹುದು.

೧. ಕ್ರಿ. ಪೂ. ೨೪೦. ಒಡಿಸ್ಸಿಯ ಸಂಗ್ರಹವೊಂದನ್ನು ರಚಿಸಿದನು. ಅನೇಕ ರುದ್ರ ನಾಟಕಗಳನ್ನು ಬರೆದನು.

೨. ದೇವತೆಗಳ ಅಧಿಪತಿ. ಇಂದ್ರನಿಗೆ ಸಮನಾದ ರೋಮನ್ ದೇವತೆ.

೩. ಮೊದಲು ಸೈನಿಕ. ಐವತ್ತನೆಯ ವರ್ಷದಲ್ಲಿ ಪಾಠ ಹೇಳಿಕೊಡಲು ಪ್ರಾರಂಭ ಮಾಡಿದನು. ಹಣಕ್ಕಿಂತ ಹೆಚ್ಚು ಹೆಸರು ಸಂಪಾದಿಸಿದನು. ಮಾರ್ಸಸ್ ಎಂಬುವನೂ ಇವನ ಬೆತ್ತ, ಛಡಿಗಳನ್ನು ಉಲ್ಲೇಖಿಸಿದ್ದಾನೆ. ಇವನು ಹೊರೆಸನಿಗೆ ಬಾಲ್ಯದಲ್ಲಿ ಗುರುವಾಗಿದ್ದನು.

ಕೃತಿಗಳ ವಿಷಯದಲ್ಲಿ ಔದಾರ್ಯ ತೋರುವ ಬದಲು ಎಲ್ಲಾ ಗೌರವ ಪ್ರಶಸ್ತಿಗಳೂ ಅವಕ್ಕೇ ದೊರಕಬೇಕೆಂದು ಜನಗಳು ಕೇಳುವುದು ಎಷ್ಟು ಅನ್ಯಾಯ?೧ ಅಟ್ಟನಿ ಯಾವುದಾದರೂ ಒಂದು ನಾಟಕವು ಕುಸುಮಕುಂಕುಮಗಳ೩ ಮೇಲೆ ಕಾಲಿಡಲು ಯೋಗ್ಯವಾಗಿದೆಯೇ ಅಥವಾ ಇಲ್ಲವೇ ಎಂದು ನಾನೇನಾದರೂ ಸಂದೇಹ ವ್ಯಕ್ತಪಡಿಸಿದರೆ ಸಾಕು, ಪ್ರತಿಯೊಬ್ಬ ಗೃಹಸ್ಥನೂ ನನ್ನನ್ನು ಮಾನಮರ್ಯಾದೆ ಎಲ್ಲವನ್ನೂ ಬಿಟ್ಟವನೆನ್ನುತ್ತಾನೆ. ಏಕೆಂದರೆ "ಗಂಭೀರ" ಏಸೊಪಸ್ ಮತ್ತು "ಪ್ರವೀಣ" ರಾಸ್ಕಿಯಸ್೪ ಅಭಿನಯಿಸುತ್ತಿದ್ದುದನ್ನು ಟೀಕಿಸುವ ಸಾಹಸ ಮಾಡಿರುತ್ತೇನೆ. ತಮಗೆ ಮೆಚ್ಚಿಗೆಯಾದುದು ಹೊರತು ಉಳಿದೆಲ್ಲವೂ ಅಯೋಗ್ಯ ವಾದುದೆಂದು ಅವರು ಭಾವಿಸುತ್ತಾರೆ. ಅಥವಾ ಕಿರಿಯವರಿಂದ ಮಾರ್ಗದರ್ಶನ ಹೊಂದುವುದೂ, ತಾವು ಗಡ್ಡಮೀಸೆ ಹುಟ್ಟುವ ಮೊದಲು ಕಲಿತುದನ್ನು ನಿಸ್ಸಾರ ವೆಂದು ತಮ್ಮ ವೃದ್ಧಾಪ್ಯದಲ್ಲಿ ಒಪ್ಪಿಕೊಳ್ಳುವುದೂ ಅವಮಾನಕರ ಎಂದು ಅವರು ಎಣಿಸುತ್ತಾರೆ.

ನುಮನ ಸಾಲಿಯನ್ ಸ್ತೋತ್ರವನ್ನು೫ ಹೊಗಳುವ, ಮತ್ತು ಅವನಿಗೂ ಅದು ನನ್ನಷ್ಟೇ ಅರ್ಥವಾಗಿರದಿದ್ದರೂ ಇತರೆಲ್ಲರಿಗಿಂತಲೂ ಚೆನ್ನಾಗಿ ಅದನ್ನು ಅರ್ಥಮಾಡಿಕೊಂಡಿದ್ದೇನೆಂದು ಹೇಳುವ ವ್ಯಕ್ತಿಯು ದಿವಂಗತರಾದ ಪ್ರತಿಭಾವಂತ ಪುರುಷರನ್ನು ಪ್ರಶಂಸಿಸುತ್ತಿಲ್ಲ. ಅದರ ಬದಲು ಅವನು ನಿಜದಲ್ಲಿ ನಮ್ಮ ಯುಗದ ಮೇಲೆ ಯುದ್ಧ ಹೂಡಿದ್ದಾನೆ. ನಮ್ಮ ಮತ್ತು ನಮಗೆ ಸಂಬಂಧಿಸಿದ ವಿಷಯಗಳ ಮೇಲಿನ ಅವನ ದ್ವೇಷಾಸೂಯೆಗಳೇ ಅದು.

ಗ್ರೀಕರೂ ಕೂಡ ನವೀನವಾದೆಲ್ಲವನ್ನೂ ನಮ್ಮಷ್ಟೇ ಅನಾದರದಿಂದ ನೋಡಿದ್ದಿದ್ದರೆ ಪ್ರಾಚೀನವೆನ್ನುವಂಥದು ಯಾವುದು ತಾನೇ ಇಂದು ಇರುತ್ತಿತ್ತು? ಲೋಕದಲ್ಲಿ ಪ್ರತಿಯೊಬ್ಬರೂ ತಮ್ಮ ತಮ್ಮ ಅಭಿರುಚಿಗನುಸಾರವಾಗಿ ಓದಿ ತಿರುವಿ ಹಾಕುವಂಥ ವೈವಿಧ್ಯ ಎಲ್ಲಿರುತ್ತಿತ್ತು?

ಯುದ್ಧಗಳು೬ ಮುಗಿದ ಕೂಡಲೇ ಗ್ರೀಸಿಗೆ ಲಘುವಿಷಯಗಳಲ್ಲಿ ಆಸಕ್ತಿ

---

೧. ಹೋಲಿಸಿ—"ಪುರಾಣಮಿತ್ಯೇವ ನ ಸಾಧು ಸರ್ವಂ"

೨. ಕ್ರಿ. ಪೂ. ೯೦. ವೈನೋದಿಕಗಳನ್ನು ಬರೆದಿದ್ದನು.

೩. ಎಂದರೆ ರಂಗಭೂಮಿ. ರಂಗದ ಮೇಲೆ ಹೂವು ಕುಂಕುಮಗಳನ್ನು ಚೆಲ್ಲಿರುತ್ತಿದ್ದರು.

೪. ಪ್ರಸಿದ್ಧ ನಟರು. ಸಿಸಿರೋನ ಸಮಕಾಲೀನರು ಮತ್ತು ನಟರು. ನಿರುಪಮಾ ಮುಂತಾದ ನಾಟಕಗಳನ್ನು ಸಾಹಿತ್ಯದ ದೃಷ್ಟಿಯಿಂದ ಟೀಕಿಸಿದರೆ, ಅದರಲ್ಲಿ ವರದಾಚಾರ್ಯರು ನಟಿಸುತ್ತಿದ್ದರಲ್ಲಾ ಎಂದು ಯಾರಾದರೂ ಕೇಳಿದರೆ ಹೇಗಿರುತ್ತದೆಯೋ ಹಾಗೆ.

೫. ಕ್ವಿರಿನಲಿನಲ್ಲಿ ರೋಮನರ ಯುದ್ಧದೇವತೆ ಮಾರ್ಸನ ಅರ್ಚಕರು ಹಾಡುತ್ತಿದ್ದ ಸ್ತೋತ್ರ. ಈ ಪದ್ಧತಿಯನ್ನು ನುಮ ಸ್ಥಾಪಿಸಿದ್ದನು. ಈ ಸ್ತೋತ್ರದ ಶೈಲಿ ಎಷ್ಟು ಪ್ರಾಚೀನವಾಗಿತ್ತೆಂದರೆ, ಅದರ ಅರ್ಥ ಅದನ್ನು ಹಾಡುತ್ತಿದ್ದ ಸಾಲಿಯರಿಗೇ ಗೊತ್ತಾಗುತ್ತಿರಲಿಲ್ಲ.

೬. ಪರ್ಷಿಯದೊಡನೆ ಮಾಡಿದವು.

ವಹಿಸಲು ಅವಕಾಶ ದೊರೆಯಿತು. ಅದರ ಉಚ್ಛ್ರಾಯದ ದಿನಗಳಲ್ಲಿ ಅವಿವೇಕಕ್ಕೆ ನಿಧಾನವಾಗಿ ಜಾರಿತು. ಅದು ಒಮ್ಮೆ ದೈಹಿಕ ವ್ಯಾಯಾಮ ಪಟುಗಳಲ್ಲಿ ವಿಪರೀತ, ಆಸಕ್ತಿ ವಹಿಸಿತು, ಇನ್ನೊಮ್ಮೆ ಕುದುರೆ ರೇಸಿನಲ್ಲಿ. ಅಮೃತಶಿಲೆಯ ಅಥವಾ ದಂತದ ಅಥವಾ ಕಂಚಿನ ಕೆಲಸಗಾರರನ್ನು ಪ್ರೀತಿಸಿತು. ಚಿತ್ರಕಾರನ ಫಲಕದ ಮೇಲೆ ತನ್ನ ಕಣ್ಣು ಮತ್ತು ಹೃದಯಗಳನ್ನು ತೂಗಿಹಾಕಿತು. ಒಮ್ಮೆ ವೇಣುವಾದಕರಲ್ಲೂ ಇನ್ನೊಮ್ಮೆ ರುದ್ರ ನಟರಲ್ಲೂ ಸಂತೋಷ ಕಂಡಿತು. ಆಟದ ಮನೆಯಲ್ಲಿನ ಪುಟ್ಟ ಹುಡುಗಿಯಂತೆ ಅದು ಬಹಳ ಆಸೆಯಿಂದ ಅರಸಿದ್ದನ್ನು ಅಷ್ಟೇ ಬೇಗ ಬೇಸರದಿಂದ ತ್ಯಜಿಸುತ್ತಿದ್ದಿತು. ಸುಲಭವಾಗಿ ಬದಲಾಯಿಸಲು ಆಗದೆಂದು ನಂಬುವಂಥ ಇಚ್ಛೆ ದ್ವೇಷಗಳು ಯಾವುದಿವೆ ? ಗ್ರೀಸಿನ ಶಾಂತಿ ಸಮೃದ್ಧಿಯ ಸುಖದ ದಿನಗಳು ಅದಕೆ ನೀಡಿದ್ದು ಇದನ್ನೇ.

ರೋಮಿನಲ್ಲಿ ಅನೇಕ ತಲೆಮಾರುಗಳ ಕಾಲ ಬೆಳಿಗ್ಗೆ ಬೇಗ ಎದ್ದು ಬಾಗಿಲು ತೆರೆಯುವುದು, ಕಕ್ಷಿಗಾರರಿಗೆ ನ್ಯಾಯ ಒದಗಿಸುವುದು, ಸರಿಯಾದವರು ಜಾಮೀನಾದಲ್ಲಿ ಹಣದ ಪೆಟ್ಟಿಗೆಯನ್ನು ತೆರೆಯುವುದು, ಆಸ್ತಿಯನ್ನು ರೂಢಿಸುವ ರೀತಿಗಳನ್ನು ಹಿರಿಯರಿಂದ ಕಲಿಯುವುದು ಮತ್ತು ಕಿರಿಯವರಿಗೆ ಬೋಧಿಸುವುದು ಮತ್ತು ಹಣದ ಗಂಟಿಗೆ ಅಪಾಯಕಾರಿಯಾದ ಕ್ಷುದ್ರ ಕಾಮನೆಗಳನ್ನು ಕಡಿಮೆ ಮಾಡುವುದು—ಇವೆಲ್ಲವೂ ಜನಗಳ ಅನೂಚಾನವಾದ ವಾಡಿಕೆಯಾಗಿದ್ದುವು. ಅವರು ಅವುಗಳನ್ನು ಉತ್ಸಾಹದಿಂದ ನಿರ್ವಹಿಸುತ್ತಲೂ ಇದ್ದರು. ಆದರೆ ಚಂಚಲ ಚಿತ್ತದ ಜನಜಂಗುಳಿ ತನ್ನ ಅಭಿರುಚಿಯನ್ನು ಬದಲಾಯಿಸಿಬಿಟ್ಟಿದೆ. ಅದು ಇಂದು ಬರೆಯುವ ಒಂದು ಸಾರ್ವತ್ರಿಕ ಹವ್ಯಾಸದಿಂದ ತಳಮಳಿಸುತ್ತಿದೆ. ಗಂಭೀರ ಪಿತೃಗಳೂ ಅವರ ಮಕ್ಕಳೂ ಒಂದೇ ರೀತಿ ತಲೆಗಳಿಗೆ ಎಲೆಗಳ ಮಾಲೆಯನ್ನು[೧] ಸುತ್ತಿಕೊಂಡು ಊಟಕ್ಕೆ ಕುಳಿತುಕೊಳ್ಳುತ್ತಾರೆ. ಅವರ ಪದ್ಯಗಳನ್ನು ಬರೆದು ಕೊಳ್ಳಲು ಕರಣಿಕರನ್ನು ನೇಮಿಸಿರುತ್ತಾರೆ. ಪದ್ಯಗಳನ್ನು ಬರೆಯುವುದಿಲ್ಲವೆಂದು ಘೋಷಿಸಿರುವ ನಾನೂ ಕೂಡ ಪಾರ್ಥಿನಿಯನರಿಗಿಂತಲೂ ಹೆಚ್ಚು ಸುಳ್ಳುಗಾರ ನಾಗಿದ್ದೇನೆ. ಸೂರ್ಯನು ಹುಟ್ಟುವುದಕ್ಕಿಂತಲೂ ಮುಂಚೆಯೇ ಎದ್ದು ಲೇಖನಿ, ಕಾಗದ ಮತ್ತು ಫೈಲುಗಳಿಗೆ ಬೊಬ್ಬೆಯಿಡುತ್ತೇನೆ. ಹಡಗಿನ ವಿಷಯ ಗೊತ್ತಿಲ್ಲ ದವನು ಅದನ್ನು ನಡೆಸುವ ಕೆಲಸಕ್ಕೆ ಕೈಹಾಕುವುದಿಲ್ಲ. ಔಷಧಿಗಳ ಪ್ರಯೋಗವನ್ನು ಅರಿತ ಹೊರತು ಯಾವನೂ ಮೂಲಿಕೆಗಳನ್ನು ರೋಗಿಗೆ ಕೊಡುವ ಧೈರ್ಯ ಮಾಡುವುದಿಲ್ಲ. ವೈದ್ಯರಿಗೆ ಸಂಬಂಧಿಸಿದ್ದನ್ನು ವೈದ್ಯರು ಕೈಗೊಳ್ಳುತ್ತಾರೆ. ಬಡಗಿಗಳು ಬಡಗಿಗಳ ಸಲಕರಣೆಗಳನ್ನು ಹಿಡಿಯುತ್ತಾರೆ. ಕಾವ್ಯವನ್ನು ಮಾತ್ರ

೧. ಬೇ ಅಥವಾ ಆಲಿವ್ ಎಲೆಗಳ ಹಾರ ಕವಿಗಳ ಸಾಂಪ್ರದಾಯಿಕವಾದ ಸಂಕೇತ ವಾಗಿದ್ದಿತು.

ನಾವೆಲ್ಲರೂ, ಅದನ್ನು ಅಭ್ಯಾಸ ಮಾಡಿರುವವರೂ ಮತ್ತು ಅದನ್ನು ಅಭ್ಯಾಸ ಮಾಡದವರೂ, ಯಾವ ವ್ಯತ್ಯಾಸವೂ ಇಲ್ಲದೆ ಬರೆಯುತ್ತೇವೆ.

ಇದು ಒಂದು ದೋಷ. ಒಂದು ಬಗೆಯ ಅಷ್ಟು ತೀವ್ರವಲ್ಲದ ಹುಚ್ಚೂ ಹೌದು. ಆದರೂ ಇದರಲ್ಲಿ ಒಳ್ಳೆಯ ಗುಣಗಳೂ ಇವೆ. ಅವು ಎಷ್ಟು ಮಹತ್ವದವು ಎಂಬುದನ್ನು ಪರೀಕ್ಷಿಸೋಣ. ಕವಿಯ ಹೃದಯವು ಸುಲಭವಾಗಿ ಲೋಭಕ್ಕೆ ಒಳಗಾಗುವುದಿಲ್ಲ. ಅವನು ಕಾವ್ಯಗಳನ್ನು ಪ್ರೀತಿಸುತ್ತಾನೆ. ಅವೊಂದೇ ಅವನ ಇಷ್ಟಾರ್ಥ. ನಷ್ಟವಾದ ಹಣ, ಓಡಿಹೋದ ಆಳುಕಾಳು, ಬೆಂಕಿಬಿದ್ದ ಬಣ— ಇವೆಲ್ಲಕ್ಕೂ ಅವನ ಪ್ರತಿಕ್ರಿಯೆ ಕೇವಲ ನಗೆ. ತನ್ನ ಪಾಲುದಾರನನ್ನಾಗಲೀ ಅಥವಾ ತನ್ನ ಪೋಷಣೆಯಲ್ಲಿರುವ ಹುಡುಗನನ್ನಾಗಲೀ ವಂಚಿಸುವ ಮಾರ್ಗಗಳನ್ನು ಅವನು ಚಿಂತಿಸುವುದಿಲ್ಲ. ಅವನ ಆಹಾರ ಬೇಳೆ ಮತ್ತು ಒರಟು ಬ್ರೆಡ್. ಅವನು ರಣರಂಗದಲ್ಲಿ ಶೂರನಾಗದಿರಬಹುದು. ಆದರೆ ಅಲ್ಪವಸ್ತುಗಳೂ ಕೂಡ ಮಹತ್ಸಾಧನೆಗಳಿಗೆ ಸಹಾಯಕವಾಗಬಹುದೆಂಬುದನ್ನು ನೀನು ಒಪ್ಪಿದರೆ, ರಾಷ್ಟ್ರಕ್ಕೆ ಅವನಿಂದಲೂ ಪ್ರಯೋಜನ ಉಂಟು. ಚಿಕ್ಕ ಮಗುವಿನ ತೊದಲು ನುಡಿಗಳಿಗೆ ಒಂದು ರೂಪವನ್ನು ಕೊಡುವವನು ಕವಿ. ಮಾತಿನ ಗ್ರಾಮ್ಯ ಪರುಷ ಶೈಲಿಗಳಿಗೆ ವಿರುದ್ಧವಾದ ಪ್ರವೃತ್ತಿಯನ್ನು ಕಿವಿಗೆ ಮೊದಲಿಂದಲೂ ಕೊಡುತ್ತಾನೆ. ಅನಂತರ ಕಾಠಿನ್ಯ ಅಸೂಯೆ ಮತ್ತು ಕೋಪಗಳನ್ನು ಪರಿಷ್ಕರಿಸಿ, ಸ್ನೇಹದ ಉಪದೇಶದ ಮೂಲಕ ಹೃದಯಕ್ಕೂ ಒಂದು ರೂಪವನ್ನು ಕೊಡುತ್ತಾನೆ. ಸತ್ಕಾರ್ಯಗಳ ಕಥೆಯನ್ನು ಹೇಳುತ್ತಾನೆ. ಬೆಳೆಯುವ ವಯಸ್ಸಿನವರಿಗೆ ಯಶಸ್ಸಿನ ನಿದರ್ಶನಗಳನ್ನು ಒದಗಿಸುತ್ತಾನೆ. ದೀನರಿಗೂ ಮನೋವ್ಯಥೆಯಿಂದ ಕೊರಗುವವರಿಗೂ ಸಮಾಧಾನ ನೀಡುತ್ತಾನೆ.[೧] ಕುಮಾರ ಕುಮಾರಿಯರ ತಂಡಕ್ಕೆ[೨] ಕಾವ್ಯದೇವಿಯು ಕವಿಯನ್ನು ಹುಡುಕಿ ಕೊಡದೆ ಇದ್ದಿದ್ದರೆ, ಆ ತಂಡವು ತಮ್ಮ ಸ್ತೋತ್ರಗಳನ್ನು ಯಾರಿಂದ ಕಲಿಯಬೇಕಾಗಿತ್ತು ? ಕವಿಯು ರಚಿಸಿ ಹೇಳಿಕೊಟ್ಟ ಸ್ತೋತ್ರದ ಮೂಲಕ ಅವರ ತಂಡವು ದೇವರುಗಳ ಸಹಾಯವನ್ನು ಬೇಡುತ್ತದೆ ಮತ್ತು ಆ ದೇವತೆಗಳ ಸಾಕ್ಷಾತ್ಕಾರವನ್ನು ಪಡೆಯುತ್ತದೆ. ಮಳೆಗಾಗಿ ಮುಗಿಲನ್ನು ಮಧುರವಾಗಿ ಕೂಗಿ

---

೧. ಹೋಲಿಸಿ–"ಇತರ ಹವ್ಯಾಸಗಳು ಎಲ್ಲಾ ಋತುಗಳಿಗೂ, ಎಲ್ಲಾ ಸ್ಥಳಗಳಿಗೂ, ಎಲ್ಲಾ ವಯೋದೆಶೆಗಳಿಗೂ ಸಮಾನವಾಗಿ ಯೋಗ್ಯವಾಗಿರುವುದಿಲ್ಲ. ಕವಿಯ ಕೃತಿಗಳಾದರೋ ನಮಗೆ ಬಾಲ್ಯದಲ್ಲಿ ಆಹಾರ, ವಾರ್ಧಿಕ್ಯದಲ್ಲಿ ವಿಹಾರ. ಸುದಿನಗಳಲ್ಲಿ ಅಲಂಕಾರ ಪ್ರಾಯವಾಗಿರುತ್ತವೆ. ದುರ್ದಿನಗಳಲ್ಲಿ ಆಶ್ರಯವನ್ನೂ, ಸಮಾಧಾನವನ್ನೂ ಕೊಡುತ್ತವೆ. ಮನೆಯಲ್ಲಿ ಆನಂದ ನೀಯುತ್ತವೆ, ಹೊರಗೆ ತೊಂದರೆ ಕೊಡುವುದಿಲ್ಲ. ನಿದ್ದೆ ಹತ್ತದಿದ್ದ ರಾತ್ರಿಯನ್ನು ನಮಗೆ ಕಳೆಯುತ್ತವೆ. ಪ್ರವಾಸ ಹೊರಟಾಗ ನಮ್ಮ ಜೊತೆ ಬರುತ್ತವೆ. ರಜದ ದಿನಗಳಲ್ಲಿ ನಮ್ಮ ಸಂಗಾತಿಗಳಾಗಿರುತ್ತವೆ."–ಸಿಸಿರೋ : ಆರ್ಖಿಯಸನ ಪರವಾಗಿ.

೨. ಇಪ್ಪತ್ತೇಳು ಹುಡುಗಿಯರೂ ಇಪ್ಪತ್ತೇಳು ಹುಡುಗರೂ ಇರುವ ನರ್ತಕ–ಗಾಯಕ ತಂಡ.

ತನ್ನ ಬೇಡಿಕೆಯನ್ನು ಪೂರೈಸಿಕೊಳ್ಳುತ್ತದೆ.೧ ರೋಗರುಜಿನಗಳನ್ನು ಪರಿಹಾರ ಮಾಡುತ್ತದೆ. ಏರಿ ಬರುತ್ತಿರುವ ಗಂಡಾಂತರಗಳನ್ನು ದೂರ ಓಡಿಸುತ್ತದೆ. ಶಾಂತಿ ಕಾಲವನ್ನೂ ಸುಭಿಕ್ಷವಾದ ವರ್ಷಗಳನ್ನೂ ಪಡೆಯುತ್ತದೆ. ಇದೆಲ್ಲವನ್ನೂ ಅದು ಕವಿಯು ಕಲಿಸಿದ ಸ್ತೋತ್ರದ ಮೂಲಕ ಮಾಡುತ್ತದೆ. ಮೇಲಿನ ಲೋಕದ ದೇವತೆಗಳು ಮತ್ತು ಕೆಳಗಿನ ಸಚ್ಛಕ್ತಿಗಳು೨ ಇಬ್ಬರನ್ನೂ ಸುಪ್ರೀತರನ್ನಾಗಿ ಮಾಡುವುದು ಗೀತವೊಂದೇ.

ಪೂರ್ವಕಾಲದಲ್ಲಿ ರೈತರು ದಿಟ್ಟ ಹೃದಯರೂ ಅಲ್ಪತೃಪ್ತರೂ ಆಗಿದ್ದರು. ಬೆಳೆಯನ್ನು ಕುಯ್ದ ನಂತರ ಅವರು ತಮ್ಮ ದೇಹಮನಸ್ಸುಗಳಿಗೆ ವಿಶ್ರಾಂತಿ ಕೊಡುತ್ತಿದ್ದರು, ಏಕೆಂದರೆ ಅವು ಇದರ ನೆಚ್ಚಿಕೆಯಿಂದ ಕಷ್ಟಗಳನ್ನು ಸಹಿಸಿದ್ದುವು. ಅವರು ತಮ್ಮ ಹೆಂಡತಿ, ಮಕ್ಕಳು ಮತ್ತು ಜೊತೆಯಲ್ಲಿ ಕೆಲಸಮಾಡಿದವರೊಡನೆ ಭೂಮಿದೇವಿಯನ್ನು ಒಂದು ಹಂದಿಮರಿಯಿಂದಲೂ, ಸಿಲ್ವನಸನನ್ನು೩ ಹಾಲಿನಿಂದಲೂ, ಜೀವನದ ಕ್ಷಣಿಕತೆಯನ್ನು ನಮಗೆ ನೆನಪುಕೊಡುವ ದೇವತೆಯನ್ನು ಹೂವು ಮದ್ಯಗಳಿಂದಲೂ ತೃಪ್ತಿಪಡಿಸುತ್ತಿದ್ದರು. ಈ ಸಂಪ್ರದಾಯದಿಂದ ಹುಟ್ಟಿದ ಫೆಸ್ಕೆನ್ನೈನ್೪ ಉಚ್ಛೃಂಖಲ ವೃತ್ತಿಯು ಸಂವಾದಪದ್ಯಗಳ ಮೂಲಕ ಪರಸ್ಪರ ಲೇವಡಿಮಾಡುವ ಹಳ್ಳಿಹಾಸ್ಯಕ್ಕೆ ಅವಕಾಶ ಕಲ್ಪಿಸಿತು. ಹಳೆಯ ವಾಡಿಕೆಗಾಗಿ ವರ್ಷದಲ್ಲಿ ಒಮ್ಮೆ ಇತ್ತ ಈ ಸ್ವಾತಂತ್ರ್ಯವು ಆಟದಂತಿರುವವರೆಗೂ ಪ್ರಿಯವಾಗಿದ್ದಿತು. ಆದರೆ ಈ ಹಾಸ್ಯವು ನಿಜವಾಗಿ ಪರಿಣಮಿಸಿ ದ್ವೇಷಭಾವನೆಗಳಿಗೆ ಸಾಧನವಾಯಿತು. ಯಾವ ಅಂಕೆಯೂ ಇಲ್ಲದೆ ಅದು ಒಂದು ಸದ್ಗೃಹವಾದ ನಂತರ ಮತ್ತೊಂದನ್ನು ಕಾಡಲು ಪ್ರಾರಂಭಿಸಿತು. ರಕ್ತ ಬರಿಸುವ ಹಲ್ಲಿನಿಂದ ಕಚ್ಚಲ್ಪಟ್ಟ ಜನಗಳು ಅದರ ನೋವನ್ನು ಕಂಡರು. ಅದಕ್ಕೆ ಗುರಿಯಾಗದವರೂ ಕೂಡ ಎಲ್ಲರಿಗೂ ಸಮಾನವಾಗಿ ತಟ್ಟುವ ಈ ಅಪಾಯದ ಬಗ್ಗೆ ಜಾಗ್ರತರಾದರು. ಅವಹೇಳನ ಮಾಡುವ ಪದ್ಯಗಳನ್ನು ನಿರೋಧಿಸಲು ಶಿಕ್ಷಾಸಹಿತವಾದ ಕಾನೂನೊಂದು ರಚಿತವಾಗುವಷ್ಟು ದೂರ ಅದು ಮುಂದುವರೆಯಿತು. ಆದ್ದರಿಂದ ಅವರು ಆಗ ತಮ್ಮ ರಾಗವನ್ನು ಬದಲಾಯಿಸಿದರು. ದೊಣ್ಣೆಯ ಭಯವು ಅವರನ್ನು ಸಭ್ಯ ಶೈಲಿಗೂ, ಆನಂದ ನೀಡುವ ಗುರಿಗೂ ಹಿಂದಿರುಗಿಸಿತು.

---

೧. ಅನಾವೃಷ್ಟಿಯ ಕಾಲದಲ್ಲಿ ಮಳೆಗಾಗಿ ರೋಮಿನಲ್ಲಿ ಕೆಲವು ವಿಶೇಷ ವ್ರತಗಳನ್ನಾಚರಿಸುತ್ತಿದ್ದರು. ಕಪೆನಾದ್ವಾರದ ಹೊರಗೆ ಮನಲಿಸ್ ಎಂದು ಕರೆಯುತ್ತಿದ್ದ ಒಂದು ಕಲ್ಲಿದ್ದಿತು ಮಳೆ ಬರಿಸಲು ಆ ಕಲ್ಲನ್ನು ಬಾಗಿಲಿನ ಒಳಕ್ಕೆ ತೆಗೆದುಕೊಂಡು ಬರುತ್ತಿದ್ದರು.

೨. ಮುಖ್ಯವಾಗಿ ಲೆಮೂರಿಯದಲ್ಲಿ ಮೇ ೯ ರಂದು.

೩. ಸಸ್ಯಾಭಿಮಾನ ದೇವತೆ.

೪. ಫೆಸ್ಕೆನ್ನೈಸ್ ಎಟ್ರೂರಿಯರದ ಒಂದು ನಗರ. ಸುಗ್ಗಿ ಮತ್ತು ಮದುವೆಗಳ ಕಾಲದಲ್ಲಿ ಸ್ವಲ್ಪ ನಾಲಿಗೆಯನ್ನು ಹರಿಯಬಿಟ್ಟು ಸ್ವಲ್ಪ ಕಡಿಮೆ ದರ್ಜೆಯ ಆಶುಕವಿತೆಗಳ ಮೂಲಕ ಪರಸ್ಪರ ಹಾಸ್ಯಮಾಡುತ್ತಿದ್ದ ಸಂಪ್ರದಾಯ.

ದಾಸ್ಯಕ್ಕೊಳಗಾದ ಗ್ರೀಸ್ ತನ್ನ ಅಸಂಸ್ಕೃತ ವಿಜೇತನನ್ನು ದಾಸನನ್ನಾಗಿ ಮಾಡಿಕೊಂಡಿತು.೧ ಇನ್ನೂ ಪ್ರಾಕೃತಾವಸ್ಥೆಯಲ್ಲಿದ್ದ ಲ್ಯಾಟಿಯಂಗೆ ತನ್ನ ಕಲೆಗಳನ್ನು ಕೊಟ್ಟಿತು. ಪರುಷವಾದ ಆ ಸಾಟರ್ನಿಯನ್ ಬಂಧದ ಪ್ರವಾಹವು ಬತ್ತಿಹೋದುದು ಹೀಗೆ. ಸುಸಂಸ್ಕಾರವು ಅಸಹ್ಯವಾದ ಕಳೆಯನ್ನು ಕಿತ್ತೆಸೆದಿದ್ದು ಹೀಗೆ. ಆದರೂ ಬಹಳ ಕಾಲದವರೆಗೆ ಹಿತ್ತಲಿನ ಅವಶೇಷಗಳು ಇದ್ದುವು. ಈಗಲೂ ಅವು ಇನ್ನೂ ಇವೆ. ರೋಮನ್ ಲೇಖಕನು ಗ್ರೀಕರ ಕೃತಿಗಳನ್ನು ಸಾವಧಾನದಿಂದ ಅವಲೋಕಿಸುವ ವೇಳೆಗಾಗಲೇ ಬಹಳ ಕಾಲ ಕಳೆದಿದ್ದಿತು. ಪ್ಯೂನಿಕ್ ಯುದ್ಧಗಳ೨ ಅನಂತರ ಒದಗಿದ ಶಾಂತಿ ಕಾಲದಲ್ಲಿ, ಸೋಫೋಕ್ಲೆಸ್, ಥೆಸ್ಪಿಸ್, ಮತ್ತು ಈಸ್ಕಿಲಸರು೩ ನಮಗೆ ಪ್ರಯೋಜನಕ್ಕೆ ಬರುವ ಯಾವುದನ್ನಾದರೂ ಕೊಡಬಲ್ಲರೇ ಎಂದು ಕೇಳಲು ಪ್ರಾರಂಭಿಸಿದನು. ಸ್ವಲ್ಪ ಕಾಲದಲ್ಲಿಯೇ ತಾನು ಅವರನ್ನು ಯೋಗ್ಯ ರೀತಿಯಲ್ಲಿ ಅನುವಾದಮಾಡಬಲ್ಲನೇ ಎಂದು ಪ್ರಯತ್ನ ಮಾಡಿ ನೋಡಿದನು. ಪ್ರಕೃತಿದತ್ತವಾದ ಉತ್ಸಾಹದ ಮತ್ತು ಅಭಿಮಾನದ ಸ್ವಭಾವದವನಾದುದರಿಂದ ತನ್ನ ಉದ್ಯಮದ ಬಗ್ಗೆ ತೃಪ್ತಿಯನ್ನೂ ಪಡೆದನು. ಏಕೆಂದರೆ ಅವನಿಗೆ ರುದ್ರನಾಟಕದ ಮನೋಧರ್ಮ ಸ್ವಲ್ಪಮಟ್ಟಿಗೆ ಇದೆ. ಅವನ ಪ್ರಯತ್ನಗಳು ಅನೇಕವೇಳೆ ಸರಿಯಾದ ಗುರಿಯನ್ನು ಸಾಧಿಸುತ್ತವೆ. ಆದರೆ ತಾನು ಬರೆದುದನ್ನು ಅಳಿಸುವುದಕ್ಕೆ ಅವನಿಗೆ ಏನೋ ಒಂದು ವಿಧದ ಅರ್ಥವಿಲ್ಲದ ಹೆದರಿಕೆ ಮತ್ತು ಅವಮಾನ.

ವೈನೋದಿಕವು ಸಾಮಾನ್ಯ ಜೀವನದ ಸಂಗತಿಗಳನ್ನು ನಿರೂಪಿಸುವುದರಿಂದ ಅದನ್ನು ರಚಿಸಲು ಹೆಚ್ಚು ಶ್ರಮ ಬೇಕಾಗಿಲ್ಲ ಎಂಬ ಭಾವನೆ ಸರ್ವತ್ರ ಇದೆ. ಆದರೆ ವಾಸ್ತವವಾಗಿ ಅದರ ಶ್ರಮ ಹೆಚ್ಚು, ಏಕೆಂದರೆ ಅದಕ್ಕೆ ಕೊಡುವ ಸ್ವಾತಂತ್ರ್ಯ ಕಡಿಮೆ. ಪ್ಲಾಟಸನು ಪ್ರೇಮಿ ಯುವಕ, ಕಟ್ಟುನಿಟ್ಟಿನ ತಂದೆ, ತಂತ್ರಿ ವಿಟ ಇವರ ಪಾತ್ರಗಳನ್ನು ಬೆಳಸುವುದನ್ನು ನೋಡು. ಅತ್ಯಾಸೆಯ ಪರೋಪಜೀವಿ ಪಾತ್ರಗಳನ್ನು ನಿರೂಪಿಸುವಲ್ಲಿ ಅವನು ಪ್ರಹಸನದ ಉಂಡಾಂಡಿ ದೊಸ್ಸೆನ್ನಾಸನನ್ನು ಎಷ್ಟು ಚೆನ್ನಾಗಿ ಚಿತ್ರಿಸುತ್ತಾನೆ. ವೈನೋದಿಕದ ಜೋಡನ್ನು೪ ಸರಿಯಾಗಿ ತೊಟ್ಟುಕೊಳ್ಳದೆ ರಂಗದ ಮೇಲೆ ಹೇಗೆ ಓಡಾಡುತ್ತಾನೆ ನೋಡು. ಅವನು ಯಾವಾಗಲೂ ಜೋಬಿಗೆ

---

೧. ಗ್ರೀಸ್ ಯುದ್ಧದಲ್ಲಿ ಸೋತರೂ, ರೋಮನರಿಗೆ ಸಂಸ್ಕಾರಗಳನ್ನು ಇತ್ತು ಅವರಿಗೆ ಗುರುವಾಗಿ ಗೆದ್ದಿತು.

೨. ಕ್ರಿ. ಪೂ. ೨೬೪ ರಿಂದ ಕ್ರಿ. ಪೂ. ೧೪೬ರ ವರೆಗೆ ರೋಮನರಿಗೂ ಕಾರ್ಥಿಜಿನಯನರಿಗೂ ನಡೆದ ಯುದ್ಧಗಳು.

೩. ಕ್ರಿ. ಪೂ. ಆರು ಮತ್ತು ಐದನೆಯ ಶತಮಾನಗಳ ಗ್ರೀಕ್ ರುದ್ರನಾಟಕಕಾರರು.

೪. **Sock**. ವೈನೋದಿಕ ನಟರು ಕೊಡುತ್ತಿದ್ದ ಒಂದು ಬಗೆಯ ಜೋಡು. ರುದ್ರ ನಟರು ಕೊಡುತ್ತಿದ್ದುದಕ್ಕೆ **Buskin** ಎಂದು ಹೆಸರು. ಪ್ಲಾಟಸನು ನಾಟಕದ ರಚನೆಗೆ ಗಮನಕೊಡಲಿಲ್ಲವೆಂದು ಹೊರೆಸನ ಟೀಕೆ.

ಹಣ ತುಂಬುವ ಆತುರದಲ್ಲಿಯೇ ಇರುತ್ತಾನೆ. ಅದಾದ ಕೂಡಲೇ, ಅವನ ನಾಟಕ ಏಳಲಿ ಬೀಳಲಿ ಅವನಿಗೆ ಎರಡೂ ಒಂದೇ.

ಯಶೋದೇವತೆಯು ತನ್ನ ವಾಯುರಥದಲ್ಲಿ ರಂಗಕ್ಕೆ ತಂದ ಲೇಖಕನು[೧] ನಿರಾಸಕ್ತ ಪ್ರೇಕ್ಷಕನಿಂದ ಎದೆಗುಂದುತ್ತಾನೆ; ಆಸಕ್ತ ಪ್ರೇಕ್ಷಕನಿಂದ ಅಭಿಮಾನ ಹೊಂದಿ ಉಬ್ಬುತ್ತಾನೆ. ಕೀರ್ತಿಗೆ ಹಾತೊರೆಯುವ ಆತ್ಮವನ್ನು ಕೆಳಕ್ಕೆ ಕೆಡುವುವುದು ಮತ್ತು ಪುನಃ ಎತ್ತಿ ನಿಲ್ಲಿಸುವುದು ಅಷ್ಟು ಸುಲಭದ ಕೆಲಸ. ಸಣ್ಣ ಪಾಮ್ ಕೊಂಬೆ ಯೊಂದನ್ನು[೨] ನನಗೆ ಕೊಡದಿದ್ದರೆ ನಾನು ಕಣ್ಣೀರಿಡುತ್ತಾ ಕೃಶವಾಗಿ ಮನೆಗೆ ಹೋಗುವುದೋ, ಅದನ್ನು ಕೊಟ್ಟರೆ ಹಿಗ್ಗುತ್ತಾ ಮೈತುಂಬಿಕೊಂಡು ಹೋಗುವುದೋ ಆದರೆ ನಾಟಕರಂಗಕ್ಕೂ ಅದರ ಹವ್ಯಾಸಗಳಿಗೂ ನಮಸ್ಕಾರ.

ಸ್ವಲ್ಪ ಧೈರ್ಯವಿರುವ ಕವಿಯನ್ನು ಅನೇಕ ಸಲ ಹೆದರಿಸಿ ಓಡಿಸುವ ಇನ್ನೊಂದು ವಸ್ತುವಿದೆ. ಯೋಗ್ಯತೆ ಮತ್ತು ವರ್ಗಗಳಲ್ಲಿ ಕೆಳಗಿದ್ದರೂ ಸಂಖ್ಯೆಯಲ್ಲಿ ಅಧಿಕವಾಗಿರುವ, ಮೇಲಿನ ವರ್ಗದವರೇನಾದರೂ ಭಿನ್ನಾಭಿಪ್ರಾಯ ವ್ಯಕ್ತಪಡಿಸಿದರೆ ಅವರೊಡನೆ ಕೈಕೈಮಿಲಾಯಿಸಲು ಸಿದ್ಧವಿರುವ ಅವಿದ್ಯಾವಂತ ಮೂರ್ಖರ ಗುಂಪೇ ಅದು. ಅದು ನಾಟಕದ ಮಧ್ಯೆ ಕರಡಿ ಕುಣಿತವನ್ನೋ ಪೈಲ್ವಾನರ ಕುಸ್ತಿಯನ್ನೋ ಅಪೇಕ್ಷಿಸುತ್ತದೆ.[೩] ಗುಂಪು ಪ್ರೀತಿಸುವ ವಿಷಯಗಳು ಇವೇ. ಯೋಧವರ್ಗದಲ್ಲಿಯೂ ಕೂಡ ಆನಂದವು ಕಿವಿಯಿಂದ ಚಂಚಲ ನೇತ್ರಗಳಿಗೆ ಮತ್ತು ಅವುಗಳ ಅಲ್ಪರಂಜನೆಗೆ ಹೊರಟುಹೋಗಿದೆ. ನಾಲ್ಕು ಗಂಟೆ ಅಥವಾ ಅದಕ್ಕೂ ಹೆಚ್ಚು ಕಾಲ ತೆರೆ ಬಿದ್ದೇ ಇರುತ್ತದೆ.[೪] ಅಶ್ವಾರೋಹಿಗಳ ಮತ್ತು ಪದಾತಿಗಳ ತಂಡಗಳು ರಂಗದ ಮೇಲೆ ಓಡುತ್ತಿರುತ್ತವೆ. ಅದಾದ ನಂತರವೇ ಬೆನ್ನು ಹಿಂದೆ ಕೈಕಟ್ಟಿ ಎಳೆದುಕೊಂಡು ಹೋಗುತ್ತಿರುವ ಅದೃಷ್ಟಹೀನ ರಾಜರ ದೃಶ್ಯವು ಗೋಚರವಾಗುತ್ತದೆ. ಎಲ್ಲಾ ವಿಧದ ಗಾಡಿಗಳು, ರಥಗಳು, ವಾಹನಗಳು, ಹಡಗುಗಳು ವೇಗವಾಗಿ ಹೋಗುತ್ತವೆ. ಲೂಟಿಮಾಡಿದ ದಂತ ಮತ್ತು ಕೊರಿಂತಿನ ಹಿತ್ತಾಳೆಯ ಸಾಮಾನು ಒಯ್ಯಲ್ಪಡುತ್ತವೆ. ಡೆಮೊಕ್ರೆಟಸನೇನಾದರೂ[೫] ಬದುಕಿದ್ದರೆ ಈ ದೃಶ್ಯವನ್ನು ಕಂಡು ಅವನು ನಗುತ್ತಿದ್ದನು.

---

೧. ಕೀರ್ತಿ ಗಳಿಸುವುದಕ್ಕಾಗಿ ನಾಟಕಗಳನ್ನು ಬರೆಯುವ ವೈನೋದಿಕಕಾರನು ಪ್ರೇಕ್ಷಕರಿಗೆ ಬಹಳ ವಿನೀತನಾಗಿರುತ್ತಾನೆ. ಪ್ಲಾಟಸನಂತೆ ಹಣಕ್ಕಾಗಿ ಬರೆಯುವವನು ಪ್ರೇಕ್ಷಕರನ್ನು ತುಚ್ಛ ವಾಗಿ ಕಾಣುತ್ತಾನೆ.

೨. ಕವಿಗೆ ಕೊಡುತ್ತಿದ್ದ ಪಾರಿತೋಷಕ.

೩. ಕಥೆಗೆ ಸಂಬಂಧಿಸಿರಲಿ ಇಲ್ಲದಿರಲಿ ಪ್ರತಿಯೊಂದು ಕೃತಿಯಲ್ಲಿಯು ಒಂದೆರಡು ಹಾಡು, ಒಂದೆರಡು ನೃತ್ಯ, ಕೊನೆಗೆ ಒಂದಾದರೂ ಹುಡುಗ ಹುಡುಗಿಯರ ಪ್ರಣಯ ದೃಶ್ಯವನ್ನು ಅಪೇಕ್ಷಿಸುವ ನಮ್ಮ ಸಿನಿಮಾ ಪ್ರೇಕ್ಷರನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

೪. ನಾಟಕದ ಕೊನೆಯಲ್ಲಿ ಫರದೆಯನ್ನು, ನಮ್ಮಂತೆ ಕೆಳಗೆ ಬಿಡದೆ ಮೇಲಕ್ಕೆ ಎತ್ತುವುದು ರೋಮನ್ ನಾಟಕದ ಸಂಪ್ರದಾಯ. ಆದ್ದರಿಂದ ನಾಟಕವು ತೆರೆಯ ಮುಂದೆ ನಡೆಯುತ್ತಿತ್ತು.

೫. ಕ್ರಿ. ಪೂ. ಐದನೆಯ ಶತಮಾನದ ಗ್ರೀಕ್ ದರ್ಶನಕಾರ. ಬಹಳ ಹಾಸ್ಯಪ್ರಿಯ.

ಎಲ್ಲರೂ ಬಾಯಿಬಿಟ್ಟುಕೊಂಡು ಒಂದೇ ಕಡೆ ನೋಡುವಂತೆ ಮಾಡಿದ್ದು ಅರ್ಧ ಚಿರತೆ ಇನ್ನರ್ಧ ಒಂಟೆಯಾಗಿರುವ ಪ್ರಾಣಿಯೇ ಅಥವಾ ಬಿಳಿ ಆನೆಯೇ ಎಂದು ಕೇಳುತ್ತಿದ್ದನು. ಕೆಳಗೆ ಎದುರಿಗೆ ನಡೆಯುತ್ತಿರುವ ಆಟಗಳಿಗಿಂತಲೂ ಹೆಚ್ಚು ಗಮನದಿಂದ ಪರಿಶೀಲಿಸಬೇಕಾದ ದೃಶ್ಯ ಅದನ್ನು ನೋಡುತ್ತಿರುವ ಜನಗಳದು ಎಂದು ಅವನು ಭಾವಿಸುತ್ತಿದ್ದನು, ಏಕೆಂದರೆ ಇವರು ಪ್ರದರ್ಶಿಸುವ ವೈವಿಧ್ಯ ಹೆಚ್ಚಿನದು ಎಂದು. ಆದರೆ ಕವಿಗಳ ವಿಷಯಕ್ಕೆ ಅವರು ಒಂದು ಕಿವುಡು ಕತ್ತೆಗೆ ಕಥೆ ಹೇಳುತ್ತಿದ್ದಾರೆಂದು[೧] ಅವನು ಭಾವಿಸುತ್ತಿದ್ದನು. ನಮ್ಮ ರಂಗಮಂದಿರಗಳು ಪ್ರತಿಧ್ವನಿಸುತ್ತಿರುವ ಗಲಭೆಯನ್ನು ಮೀರಿಸಲು ಯಾವ ಗಂಟಲಿಗೆ ತಾನೇ ಸಾಧ್ಯ? ಗಾರ್ಗನಸನ ಅರಣ್ಯವೋ[೨] ಟಸ್ಕನ್ ಸಮುದ್ರವೋ ಭೋರ್ಗರೆಯುತ್ತಿದೆಯೆಂದು ನಿನಗೆ ತೋರುತ್ತದೆ. ನಾಟಕಗಳನ್ನು ನೋಡುತ್ತಿರುವಾಗ ಮಾಡುವ ಉದ್ಗಾರ ಅಂಥದು. ದೇಶವಿದೇಶಗಳ ವೈಭವಪೂರ್ಣವಾದ ಕಲಾವಸ್ತುಗಳಿಂದಲೂ, ಇತರ ತುಣುಕುಗಳಿಂದಲೂ ತನ್ನನ್ನು ಅಲಂಕಾರ ಮಾಡಿಕೊಂಡ ನಟನು ರಂಗದ ಮೇಲೆ ಕಾಲಿಟ್ಟ ಕೂಡಲೆ ಪ್ರೇಕ್ಷಕವರ್ಗದ ಪ್ರತಿ ಬಲಗೈಯೂ ಎಡಗೈಯನ್ನು ಅಪ್ಪಳಿಸುತ್ತದೆ. "ಅವನು ಈಗ ಏನಾದರೂ ನುಡಿದನೇ?" "ಇಲ್ಲ. ಒಂದು ಮಾತನ್ನೂ ಆಡಿಲ್ಲ." "ಹಾಗಾದರೆ ಅವರನ್ನು ಅಷ್ಟು ಮೆಚ್ಚಿಸಿದ್ದು ಯಾವುದು?" "ನೇರಳೆಬಣ್ಣವನ್ನು ಬಹಳ ಚೆನ್ನಾಗಿ ಹೋಲುವ ಟಾರಂಟೈನ್[೩] ಬಣ್ಣ ಹಾಕಿದ ಅವನು ತೊಟ್ಟಿರುವ ಉಲ್ಲನ್ ಬಟ್ಟೆ."

ನಾನು ಪ್ರಯತ್ನ ಕೂಡ ಮಾಡದಿರುವುದನ್ನು ಇನ್ನಾರಾದರೂ ಚೆನ್ನಾಗಿ ಮಾಡಿದರೆ ಅದನ್ನು ಹೊಗಳಲು ನನಗೆ ಅಸೂಯೆ ಎಂದು ನೀನು ಭಾವಿಸದಿರಲು, ನಾನು ಈಗಲೇ ನನ್ನ ಅಭಿಪ್ರಾಯವನ್ನು ಹೇಳಿಬಿಡುತ್ತೇನೆ. ಕವಿಯೊಬ್ಬನು ಕೇವಲ ಮಿಥ್ಯಾಕಲ್ಪನೆಗಳಿಂದ ನನ್ನ ಹೃದಯದ ಭಾವಗಳನ್ನು ಉದ್ರೇಕಗೊಳಿಸಿ, ಮತ್ತೆ ಶಾಂತಗೊಳಿಸಿ ಅದಕ್ಕೆ ವೃಥಾ ವ್ಯಥೆಯನ್ನುಂಟುಮಾಡಿದರೆ, ಯಕ್ಷಿಣಿಯವನಂತೆ ನನ್ನನ್ನು ಕಾಲ್ಪನಿಕ ಭೀತಿಗಳಿಂದ ಹೆದರಿಸಿದರೆ, ಮತ್ತು ಒಂದು ಕ್ಷಣದಲ್ಲಿ ಥೀಬ್ಸಿಗೂ ಉತ್ತರಕ್ಷಣದಲ್ಲಿ ಅಥೆನ್ಸಿಗೂ[೪] ನನ್ನನ್ನು ಒಯ್ದರೆ, ಅವನು ಹಗ್ಗದ ಮೇಲೆ ನಡೆಯುವ ದೊಂಬನಂತೆ ನನಗೆ ತೋರುತ್ತಾನೆ. ಆದರೆ ಸ್ವಲ್ಪ ಈ ಕಡೆ ನೋಡು. ನೀನು ಅಪೊಲ್ಲೋಗೆ ದೇವಯೋಗ್ಯವಾದ ಒಂದು ಕಾಣಿಕೆಯನ್ನು[೫] ಸಮರ್ಪಿಸಿದ್ದೀಯೆ.

---

೧. "ಕೋಣನ ಮುಂದೆ ಕಿಂದರಿ ಬಾರಿಸಿದ ಹಾಗೆ" ಎಂಬ ನಮ್ಮ ಗಾದೆಗೆ ಸಮನಾದ ರೋಮನ್ ಗಾದೆ.

೨. ಅಪುಲಿಯ ಪ್ರಾಂತದ ಒಂದು ಮಹಾರಣ್ಯ.

೩. ಒಂದು ಬಗೆಯ ಚಿಪ್ಪು ಮೀನಿನಿಂದ ತಯಾರಿಸಿದ ಬಣ್ಣಕ್ಕೆ ಪೂರ್ವತೀರದ ಟಾರೆಂಟಂ ಮತ್ತು ಪಶ್ಚಿಮತೀರದ ಬಾಯ್ಯೇ ಪ್ರಸಿದ್ಧವಾಗಿದ್ದುವು.

೪. ಗ್ರೀಸಿನ ಎರಡು ನಗರಗಳು.

೫. ಪ್ಯಾಲಟೈನ್ ಬೆಟ್ಟದ ಮೇಲೆ ಕಟ್ಟಿದ ಅಪೊಲ್ಲೋನ ದೇವಸ್ಥಾನಕ್ಕೆ ಸೇರಿದಂತೆ ಅಪೊಲ್ಲೋನ ಹೆಸರಿನಲ್ಲಿ ಅಗಸ್ಟಸನು ಸ್ಥಾಪಿಸಿದ ಗ್ರಂಥಾಲಯ.

ಅದನ್ನು ಸರಿಯಾದ ಗ್ರಂಥಗಳಿಂದ ತುಂಬಬೇಕೆಂಬ, ಮತ್ತು ಹಸಿರು ಹೆಲಿಕಾನಿಗೆ ಕವಿಗಳು ಇನ್ನೂ ಹೆಚ್ಚು ಉತ್ಸಾಹದಿಂದ ಹೋಗುವಂತೆ ಅವರನ್ನು ಹುರಿದುಂಬಿಸುವ ಇಚ್ಛೆ ನಿನಗೆ ಇದ್ದರೆ, ಸಹೃದಯತೆ ಇಲ್ಲದ ಪ್ರೇಕ್ಷಕರ ತಿಕ್ಕಲುಗಳನ್ನು ಸಹಿಸುವುದರ ಬದಲು ಶ್ರೋತೃವೊಬ್ಬನಿಗಾಗಿ ಬರೆಯುವ ನಮಗೂ ನೀನು ಆಶ್ರಯ ನೀಡಬೇಕು.

ನಾವು ಕವಿಗಳೂ (ನನ್ನ ತೋಟಕ್ಕೆ ನಾನೇ ಕಳೆಗತ್ತರಿ ಹಾಕಿಕೊಳ್ಳುತ್ತೇನೆ) ನಿಜವಾಗಿ ಅನೇಕವೇಳೆ ನಮ್ಮ ಹಿತಕ್ಕೇ ಧಕ್ಕೆ ತಂದುಕೊಳ್ಳುತ್ತೇವೆ. ನೀನು ಚಿಂತಾ ಕ್ರಾಂತನಾಗಿರುವಾಗಲೋ ಅಥವಾ ಆಯಾಸಗೊಂಡಿರುವಾಗಲೋ ನಾವು ನಿನಗೆ ಒಂದು ಗ್ರಂಥವನ್ನು ಅರ್ಪಿಸುತ್ತೇವೆ. ನಮ್ಮ ಸ್ನೇಹಿತನು ಯಾರಾದರೂ ನಮ್ಮ ಒಂದೇ ಒಂದು ಪಂಕ್ತಿಯನ್ನು ಟೀಕಿಸುವ ಯತ್ನ ಮಾಡಿದರೂ ಅವಮಾನವಾಯಿತೆಂದು ವ್ಯಥೆಪಡುತ್ತೇವೆ. ಯಾರೂ ಕೇಳದಿದ್ದರೂ ಓದಿದ ಭಾಗಗಳನ್ನೇ ಮತ್ತೆ ಓದಲು ಪ್ರಾರಂಭಿಸುತ್ತೇವೆ. ನಮ್ಮ ಶ್ರಮವೂ, ಅಷ್ಟು ಸೂಕ್ಷ್ಮತಂತುಗಳಿಂದ ರಚಿತವಾದ ನಮ್ಮ ಕಾವ್ಯಪಟವೂ ಯಾರ ದೃಷ್ಟಿಗೂ ಬೀಳದೆ ಹೋಯಿತೆಂದು ಗೋಳಾಡುತ್ತೇವೆ. ನಾವು ಪದ್ಯಗಳನ್ನು ಬರೆಯುತ್ತಿದ್ದೇವೆಂದು ಕೇಳಿದ ಕೂಡಲೇ ನೀನಾಗಿಯೇ ನಮ್ಮನ್ನು ನಾವು ಭಾವಿಸಿಕೊಂಡಿರುವ ರೀತಿಯಲ್ಲಿ ಆಹ್ವಾನಿಸಿ, "ನೀವು ಯಾವುದಕ್ಕೂ ಚಿಂತಿಸಬೇಡಿ. ಬರೆಯುತ್ತಾ ಹೋಗಿ" ಎಂದು ನಮ್ಮನ್ನು ಒತ್ತಾಯಪಡಿಸುವಂತೆ ಆಗಬೇಕೆಂದು ನಾವು ಆಶಿಸುತ್ತೇವೆ. ಹೀಗೆಲ್ಲಾ ಮಾಡಿ ನಾವು ನಮ್ಮ ಹಿತಕ್ಕೆ ತೊಂದರೆಗಳನ್ನು ತಂದಕೊಳ್ಳುತ್ತೇವೆ.

ಆದರೂ ರಣರಂಗದಲ್ಲಿಯೂ ಒಳಾಡಳಿತದಲ್ಲಿಯೂ ನೀನು ಪ್ರದರ್ಶಿಸಿರುವ ಧೈರ್ಯಸಾಹಸಗಳಿಗೆ ಎಂಥ ಆಗಮಿಕರನ್ನು೨ ನೇಮಿಸಬೇಕೆಂಬುದನ್ನು ನಿರ್ಧರಿಸಲು ಸ್ವಲ್ಪ ಶ್ರಮವಹಿಸುವುದು ಸೂಕ್ತವೇ, ಏಕೆಂದರೆ ಆ ಕರ್ತವ್ಯವನ್ನು ಒಬ್ಬ ಅಯೋಗ್ಯ ಕವಿಗೆ ಒಪ್ಪಿಸಬಾರದು. ಮಹಾಸಾಮ್ರಾಟನಾದ ಅಲೆಕ್ಸಾಂಡರನು ಹಾಳು ಖೊರಿಲಸನನ್ನು ಪ್ರೀತಿಸಿದ್ದನು. ಅವನ ಗ್ರಾಮ್ಯವೂ ರಚನಾಹೀನವೂ ಆದ ಪದ್ಯಗಳಿಗೆ ರಾಜನ ಸ್ವಂತ ಭಂಡಾರದಿಂದ ಫಿಲಿಪ್ಸ್‌ಗಳು೩ ದೊರಕಿದುವು. ಕಪ್ಪು ಬಣ್ಣಗಳನ್ನು ಮುಟ್ಟಿದರೆ ಅವು ಮಸಿಕಲೆಯನ್ನು ಬಿಡುವಂತೆಯೇ ಲೇಖಕರೂ ಸಹ ಅನೇಕವೇಳೆ ಬೆಳಗುವ ಘಟನೆಗಳಿಗೆ ಕುಕವಿತ್ವದ ಮಸಿ ಬಳಿಯುತ್ತಾರೆ. ಅಷ್ಟು

---

೧. ಎಂದರೆ, ನಾಟಕಗಳನ್ನು ಬರೆಯದ ಇತರ ಕವಿಗಳಿಗೂ.

೨. ಎಂದರೆ, ಗುಣಗಳ ರಕ್ಷಕರು. ಅಗಸ್ಟಸನ ಗುಣಕೀರ್ತನ ಮಾಡಬೇಕಾದ ಕವಿಗಳನ್ನು ಇಲ್ಲಿ ಸಾರ್ವಜನಿಕ ದೇವಸ್ಥಾನಗಳ ಆಗಮಿಕರಿಗೆ ಹೋಲಿಸಿದೆ. ಈ ಗೌರವಕ್ಕೆ ಸಮನಾದ ಗೌರವವನ್ನು ಅಗಸ್ಟಸನು ಹೊರೆಸನಿಗೆ ಈ ಪತ್ರ ಬರೆಯುವುದಕ್ಕಿಂತ ನಾಲ್ಕು ವರ್ಷಗಳ ಹಿಂದೆಯೇ, ಕ್ರಿ. ಪೂ. ೧೭ರಲ್ಲಿ ನೀಡಿದ್ದನು. ಆಂದಿನ ಕ್ರೀಡಾಸ್ಪರ್ಧೆಗಳ ಸ್ವಾಗತಗೀತವನ್ನು ರಚಿಸಲು ಹೊರೆಸನನ್ನು ಆಹ್ವಾನಿಸಿದ್ದನು.

೩. ಚಿನ್ನದ ವರಹದ ಹೆಸರು.

ನಿಕೃಷ್ಟವಾದ ಪದ್ಯಗಳಿಗೆ ಅಷ್ಟು ಹೆಚ್ಚಿನ ಬೆಲೆಯನ್ನು ಅಂಥಾ ಬಿಚ್ಚುಗೈಯಿಂದ ಕೊಟ್ಟ ದೊರೆಯೇ ತನ್ನ ಚಿತ್ರವನ್ನು ಅಪ್ಪೆಲಸ್[೧] ವಿನಾ ಇನ್ನಾರೂ ಬರೆಯಕೂಡ ದೆಂದೂ, ಲಿಸಿಪ್ಪಸ್[೨] ಹೊರತು ಇನ್ನಾರೂ ವೀರ ಅಲೆಕ್ಸಾಂಡರನ ಕಂಚಿನ ಪ್ರತಿಮೆ ಯನ್ನು ತಯಾರಿಸಕೂಡದೆಂದೂ ನ್ಯಾಯಶಾಸನವೊಂದರ ಮೂಲಕ ಕಟ್ಟಾಜ್ಞೆ ಮಾಡಿದನು. ಇತರ ಕಲೆಗಳಲ್ಲಿ ಅಷ್ಟು ಸೂಕ್ಷ್ಮವಾಗಿದ್ದ ಅವನ ವಿವೇಚನೆಯು ಗ್ರಂಥಗಳ ಮತ್ತು ಕಾವ್ಯದೇವಿಯರ ವರಗಳ[೩] ವಿಷಯಗಳಲ್ಲಿ ಹರಿದಾಗ, ಅವನು ಬೋಷಿಯದ[೪] ಅತ್ಯಂತ ಜಡವಾತಾವರಣದಲ್ಲಿ ಹುಟ್ಟಿದ್ದನೆಂದು ನೀನು ಖಂಡಿತ ವಾಗಿ ಹೇಳುತ್ತಿದ್ದೆ.

ಆದರೆ ನೀನು ಮೆಚ್ಚಿರುವ ವರ್ಜಿಲ್[೫] ಮತ್ತು ವರಿಯಸ್[೬] ನಿಜವಾದ ಕವಿಗಳು. ನೀನು ಅವರಿಗೆ ನೀಡಿರುವ ಬಹುಮಾನಗಳು ದಾನಿಗೇ ಬಹಳ ಕೀರ್ತಿ ಯನ್ನು ತರುವಂಥವು. ನೀನು ಅವರ ವಿಷಯದಲ್ಲಿ ತೋರಿಸಿರುವ ವಿಮರ್ಶಾತ್ಮಕ ನಿರ್ಣಯಕ್ಕಾಗಲೀ, ನಿನ್ನಿಂದ ಅವರು ಸ್ವೀಕರಿಸಿರುವ ಅನೇಕ ಬಹುಮಾನಗಳಿಗಾಗಲೀ ಅವರು ಅಪಕೀರ್ತಿ ತರುವುದಿಲ್ಲ.[೭] ಪ್ರಸಿದ್ಧ ಪುರುಷರ ಶೀಲ ಮತ್ತು ಹೃದಯ ಗಳನ್ನು ಕವಿಯ ಕೃತಿಯು ನಿರೂಪಿಸುವುದಕ್ಕಿಂತಲೂ ಹೆಚ್ಚಿನ ಸಾದೃಶ್ಯದಿಂದ ಅವರ ಕಂಚಿನ ಪ್ರತಿಮೆಗಳು ಅವರ ರೂಪವನ್ನು ಚಿತ್ರಿಸಲಾರವು.[೮]

ನನ್ನ ವಿಷಯವಾಗಿಯೂ ನನ್ನ ಆಸೆಗೆ ತಕ್ಕ ಶಕ್ತಿ ನನಗೆ ಇದ್ದಿದ್ದರೆ ಪರಾ ಕ್ರಮದ ಮಹಾಕಾರ್ಯಗಳು; ದೇಶಗಳು, ನದಿಗಳು, ಬೆಟ್ಟಗಳ ಕೋಡುಗಳ ಮೇಲಿರುವ ಕೋಟೆಗಳು, ಅನಾಗರಿಕ ಜನರ ರಾಜ್ಯಗಳು ಇರುವ ಸ್ಥಾನಗಳು;

---

೧. ಕ್ರಿ. ಪೂ. ೩೩೦. ಸೌಂದರ್ಯಕ್ಕೇ ಮಾದರಿಯೆನಿಸಿದ್ದ ಅವನ ವೀನಸ್‌ದೇವಿಯ ಚಿತ್ರವನ್ನು ಅಗಸ್ಟಸನು ಕೊಂಡಿದ್ದನು.

೨. ರ್‍ಹೋಡ್ಸಿನ ಸೂರ್ಯರಥ ಇವನ ಒಂದು ಮಹತ್ಕೃತಿಯಾಗಿದ್ದಿತು. ಪ್ರಸಿದ್ಧ ಶಿಲ್ಪಿ.

೩. ಎಂದರೆ, ಕಾವ್ಯಗಳ.

೪. ಗ್ರೀಸಿನ ಮಧ್ಯ ಪ್ರದೇಶ.

೫. ಈನಿಡ್ ಮಹಾಕಾವ್ಯದ ಕವಿ. ಹೊರೆಸನ ಪ್ರಿಯ ಸ್ನೇಹಿತ.

೬. ಇವನೂ ಒಂದು ಮಹಾಕಾವ್ಯವನ್ನು ಬರೆದಿದ್ದನು. ಅದನ್ನು ವರ್ಜಿಲ್, ಹೊರೆಸ್ ಇಬ್ಬರೂ ಹೊಗಳಿದ್ದಾರೆ. ಥಯೆಸ್ಟಿಸ್ ಎಂಬ ಅವನ ನಾಟಕಕ್ಕೆ ಅಗಸ್ಟಸನಿಂದ ಬಹಳ ಪುರಸ್ಕಾರ ದೊರೆತಿದ್ದಿತು. ಈ ಇಬ್ಬರ ಜೊತೆಯಲ್ಲಿ ಹೊರೆಸನ ಹೆಸರು ಎಲ್ಲರ ಬಾಯಲ್ಲೂ ಕೇಳಿಬರುತ್ತಿದ್ದರೂ, ಹೊರೆಸನು ಅದನ್ನು ಇಲ್ಲಿ ಹೇಳದಿರುವುದು ಅವನ ಪ್ರಸಿದ್ಧವಾದ ವಿನ ಯಕ್ಕೆ ನಿದರ್ಶನವಾಗಿದೆ.

೭. ಆದ್ದರಿಂದ ಅಗಸ್ಟಸನು ಅಲೆಕ್ಸಾಂಡರ್‌ನಿಗಿಂತಲೂ ಉತ್ಕೃಷ್ಟನೆಂದಾಯಿತು. ಏಕೆಂದರೆ ಶೌರ್ಯದ ಜೊತೆಗೆ ಕಾವ್ಯಗಳಲ್ಲಿ ಸದಭಿರುಚಿಯೂ ಅವನಿಗೆ ಇದ್ದಿತು.

೮. ಆದ್ದರಿಂದ ಕಾವ್ಯ ಎಲ್ಲಾ ಕಲೆಗಳಿಗಿಂತಲೂ ಶ್ರೇಷ್ಠವಾದ ಕಲೆ ಎಂದು ಹೊರೆಸನ ಅಭಿಪ್ರಾಯ.

ನಿನ್ನ ಆಳ್ವಿಕೆಯಲ್ಲಿ ಪ್ರಪಂಚದ ಎಲ್ಲೆಡೆಗಳಲ್ಲೂ ಯುದ್ಧಗಳು ನಿಂತದ್ದು; ಶಾಂತಿರಕ್ಷಕ ಜೇನಸ್೧ನ ದೇವಸ್ಥಾನದ ಬಾಗಿಲು ಹಾಕಿದ್ದು; ನೀನು ರಾಜನಾಗಿರುವ ರೋಂ ಪಾರ್ಥಿಯನರಿಗೆ ಭೀತಿದಾಯಕವಾದುದು—ಇವೆಲ್ಲವನ್ನೂ ನನ್ನ ಕಾವ್ಯವಸ್ತುವನ್ನಾಗಿ ಮಾಡಿಕೊಂಡು ವರ್ಣಿಸುವುದರ ಬದಲು ನೆಲದ ಮೇಲೆ ತೆವಳುತ್ತಾ ಹೋಗುವ ನನ್ನ "ಸಂವಾದ"ಗಳನ್ನು೨ ನಾನು ರಚಿಸುತ್ತಿರಲಿಲ್ಲ. ನಿನ್ನ ಘನತೆಗೆ ಸಾಮಾನ್ಯ ಕಾವ್ಯ ಸಲ್ಲದು. ಆದ್ದರಿಂದ ನನ್ನ ಶಕ್ತಿ ನಿರ್ವಹಿಸಲಾಗದ ಕಾರ್ಯಕ್ಕೆ ಕೈಹಾಕುವ ಧೈರ್ಯ ನನ್ನ ವಿನಯಕ್ಕೆ ಇಲ್ಲ.೩ ಅನಗತ್ಯವಾಗಿ ತೋರುವ ಪ್ರೀತಿ ಅದಕ್ಕೆ ಪಾತ್ರನಾದವನಿಗೆ ಬೇಸರವನ್ನುಂಟುಮಾಡುತ್ತದೆ. ಅದು ಅಭಿವ್ಯಕ್ತವಾಗುವ ಕಲೆ ಕಾವ್ಯವಾದರಂತೂ ಅದು ಇನ್ನೂ ವಿಕಟವಾದ ಪ್ರಸಂಗ, ಏಕೆಂದರೆ ಜನಗಳು ಅನುಮೋದಿಸಿ ಗೌರವಿಸುವ ವಿಷಯಗಳಿಗಿಂತಲೂ ತಾವು ನಕ್ಕು ಅಪಹಾಸ್ಯಮಾಡುವ ವಿಷಯಗಳನ್ನು ಬೇಗ ಗ್ರಹಿಸುತ್ತಾರೆ ಮತ್ತು ಸುಲಭವಾಗಿ ನೆನಪಿನಲ್ಲಿಟ್ಟುಕೊಳ್ಳುತ್ತಾರೆ. ನನಗೆ ಮುಜುಗರವನ್ನುಂಟುಮಾಡುವ ಗೌರವ ನನಗೆ ಬೇಕಾಗಿಲ್ಲ. ನಾನು ಇರುವುದಕ್ಕಿಂತಲೂ ಕುರೂಪಿಯನ್ನಾಗಿ ಮೇಣದಲ್ಲಿ ಮಾಡಿರುವ ನನ್ನ ಮುಖವಾಡವೊಂದನ್ನು ಜನರ ದೃಷ್ಟಿಗೆ ಬೀಳುವ ಯಾವ ಜಾಗದಲ್ಲಾದರೂ ತೂಗುಹಾಕುವುದು ನನಗೆ ಹೇಗೆ ಬೇಡವೊ, ಹಾಗೆಯೇ ತಪ್ಪುತಪ್ಪಾಗಿ ಬರೆದ ಪದ್ಯಗಳಲ್ಲಿ ಹೊಗಳಿಸಿಕೊಳ್ಳುವುದೂ ನನಗೆ ಅಭಿಮತವಲ್ಲ, ಏಕೆಂದರೆ ಈ ವಿಕಾರವಾದ ಉಡುಗೊರೆಯಿಂದ ನಾನು ತಲೆ ತಗ್ಗಿಸಬೇಕಾಗಬಹುದು, ಮತ್ತು ಅದರ ಫಲವಾಗಿ ನನ್ನ ಕವಿಯ ಜೊತೆಯಲ್ಲಿ ನನ್ನನ್ನೂ ಉದ್ದಕ್ಕೆ ಒಂದು ಪೆಟ್ಟಿಗೆಯೆಲ್ಲಿ ಹಾಸಿ ಮುಚ್ಚಿದ್ದನು ನಾನು ನೋಡಿ, ಧೂಪ, ಸುವಾಸನಾ ದ್ರವ್ಯಗಳು, ಮೆಣಸು ಮತ್ತು ಗೀಚುಗರ (Scribblers) ಕಾಗದಗಳಲ್ಲಿ ಕಟ್ಟುವಂತಹ ಇತರ ಎಲ್ಲಾ ವಸ್ತುಗಳ ಜೊತೆಯಲ್ಲಿ ಅಂಗಡಿ ಬೀದಿಗೆ ಬಿಜಮಾಡಿಸಬಹುದು.೪

---

೧. ರೋಮನರ ದ್ವಿಮುಖ ದೇವತೆ. ಯುದ್ಧಕಾಲದಲ್ಲಿ ಈ ದೇವರ ದೇವಸ್ಥಾನದ ಬಾಗಿಲುಗಳನ್ನು ತೆರೆದು ಅದರ ಮೂಲಕ ಸೈನಿಕರು ಹಾದು ಹೋಗುತ್ತಿದ್ದರು. ಶಾಂತಿಕಾಲದಲ್ಲಿ ಬಾಗಿಲು ಹಾಕುತ್ತಿತ್ತು.

೨. ಹೊರೆಸನು ತನ್ನ "ವಿಡಂಬನೆ"ಗಳಿಗೆ ಕೊಟ್ಟಿದ್ದ ಹೆಸರು.

೩. ಅಗಸ್ಟಸನ ಕೋರಿಕೆಯ ಮೇಲೆ ಈ ಪತ್ರ ಬರೆಯುತ್ತಿದ್ದರೂ, ತನ್ನ ಶಕ್ತಿಯ ಬಗ್ಗೆ ಹೊರೆಸನ ಸಂಯಮ ಅವನ ವ್ಯಕ್ತಿತ್ವದ ಸ್ಪಷ್ಟವಾದ ಸಂಕೇತ. ಅದೂ ಅಲ್ಲದೆ ಅವನಿಗೆ ಈ ರೀತಿ ದೇವರ ಸಂದೇಶವೂ ಇದ್ದಿತೆಂದು ಹೊರೆಸನೇ ತನ್ನ ಭಾವಗೀತವೊಂದರಲ್ಲಿ ಹೇಳಿಕೊಂಡಿದ್ದಾನೆ: "ಯುದ್ಧ ಮತ್ತು ನಗರಗಳ ಆಕ್ರಮಣಗಳನ್ನು ವರ್ಣಿಸಲು ನಾನು ಇಚ್ಛಿಸಿದಾಗ ನನ್ನ ಉಡುಪದಲ್ಲಿ ಕುಳಿತು ಟರ್‍ಹಿಯನ್ ಸಾಗರವನ್ನು ದಾಟಲು ಪ್ರಯತ್ನಿಸದಂತೆ ಸೂರ್ಯದೇವನು ತನ್ನ ಲೈರ್‌ವಾದನದಿಂದ ನನ್ನನ್ನು ಎಚ್ಚರಿಸಿದನು". (IV. 15.1.)

೪. ಇಂದಿನ ಪರಿಭಾಷೆಯಲ್ಲಿ, "ಹಳೇಪೇಪರ್ ಖಾಲಿ ಶೀಶೆಗಳ ಜೊತೆಸೇರಿ ಹೋಟಲಿಗೋ ಸೆಲೂನಿಗೋ ಹೋಗುವ ಭಾಗ್ಯ ಹೊಂದಬಹುದು" ಎಂದು ಬೇಕಾದರೆ ಹೇಳಬಹುದು.

ಪಿಸೋಸರಿಗೆ ಬರೆದ ಪತ್ರ

ಅಥವಾ

ಕಾವ್ಯಕಲೆ

[ಪಂಕ್ತಿ. ೧–೨೩ ಐಕ್ಯತೆಯ ಪ್ರಾಮುಖ್ಯ]

ಯಾವನಾದರೂ ಒಬ್ಬ ಚಿತ್ರಕಾರನು ಮನುಷ್ಯ ತಲೆಯನ್ನು ಬರೆದು, ಅದಕ್ಕೆ ಕುದುರೆಯ ಕತ್ತನ್ನು ಕೂಡಿಸಿ, ಅನಂತರ ಎಲ್ಲಾ ಜಾತಿಯ ಪ್ರಾಣಿಗಳ ಅವಯವಗಳನ್ನೂ ಅದಕ್ಕೆ ಜೋಡಿಸಿ, ಅನಂತರ ಎಲ್ಲಾ ಬಣ್ಣದ ಗರಿಗಳನ್ನೂ ಆ ದೇಹದ ತುಂಬ ಸಿಕ್ಕಿಸಿ, ಸೊಂಟದವರೆಗೂ ಸುಂದರಳಾದ ಹೆಂಗಸನ್ನು ಅಲ್ಲಿಂದ ಕೆಳಗೆ ವಿಕಾರವಾದ ಮೀನಿನ ಬಾಲದಲ್ಲಿ ಕೊನೆಗಾಣುವಂತೆ ಚಿತ್ರಿಸುತ್ತಾನೆಂದು ಊಹಿಸೋಣ. ಅದನ್ನು ನೋಡಿದಾಗ, ಆ ಚಿತ್ರಕಾರನು ನಿಮ್ಮ ಸ್ನೇಹಿತನೇ ಆಗಿರಲಿ, ನಿಮಗೆ ನಗು ಬರದೆ ಇರಲು ಸಾಧ್ಯವೋ?[೧] ಪ್ರಿಯ ಪಿಸೋಸರೇ, ಜ್ವರದ ತಾಪದಲ್ಲಿರುವವನ ಕನಸುಗಳಂತೆ, ತಲೆಯಾಗಲೀ ಕಾಲಾಗಲೀ ಯಾವ ಒಂದು ಪೂರ್ಣ ವಸ್ತುವಿಗೂ ಸೇರಿರದಂತಹ ಅಸಂಭಾವ್ಯ ಕಲ್ಪನೆಗಳನ್ನು ನಿರೂಪಿಸುವ ಗ್ರಂಥವೂ ಕೂಡ ನಿಜವಾಗಿ ಈ ಚಿತ್ರದಂತಿರುತ್ತದೆ. "ಆದರೆ ಚಿತ್ರಕಾರರು ಮತ್ತು ಕವಿಗಳು ತಮ್ಮ ಕಲ್ಪನೆಯ ಆದೇಶಕ್ಕನುಸಾರವಾಗಿ ನಡೆಯುವ ಹಕ್ಕನ್ನು ಹಿಂದಿನಿಂದಲೂ ಹೊಂದಿದ್ದಾರಲ್ಲ?" ಎಂದು ನೀವು ಕೇಳಬಹುದು. ಅದು ಹೌದು, ನಿಜ. ಆ ಹಕ್ಕನ್ನು ನಾವು ನಮಗೂ ಕೇಳುತ್ತೇವೆ ಮತ್ತು ಇತರರಿಗೂ ಕೊಡುತ್ತೇವೆ. ಆದರೆ ಕ್ರೂರಮೃಗಗಳನ್ನು ಸಾಧುಪ್ರಾಣಿಗಳೊಂದಿಗೆ ಜೊತೆಮಾಡುವ, ಹಾವುಗಳನ್ನು ಹಕ್ಕಿಗಳಿಗೂ, ಕುರಿಗಳನ್ನು ಹುಲಿಗಳಿಗೂ ಕೊಟ್ಟು ಮದುವೆಮಾಡುವ ಮಟ್ಟಕ್ಕೆ ಅದನ್ನು ಚಲಾಯಿಸುವುದನ್ನು ಮಾತ್ರ ನಾವು ಒಪ್ಪುವುದಿಲ್ಲ.

ಘನವಾದ ಉದ್ದೇಶಗಳನ್ನು ಘೋಷಿಸುತ್ತಾ ಬಹಳ ಅಟಾಟೋಪದಿಂದ ಕಾವ್ಯಗಳನ್ನು ಪ್ರಾರಂಭಿಸುವುದು ಇಂದು ಒಂದು ಸಾಮಾನ್ಯ ಸಂಪ್ರದಾಯವಾಗಿಬಿಟ್ಟಿದೆ. ಆದರೆ ಆರಂಭವಾದ ಕೂಡಲೇ ಡಯಾನಾಳ[೨] ವನ ಅಥವಾ ವೇದಿಕೆ, ಫಲವತ್ತಾದ ಮೈದಾನಗಳ ಮೂಲಕ ವೇಗವಾಗಿ ಹರಿಯುವ ನದಿಗಳ ವಕ್ರಗತಿ, ರೈನ್[೩] ನದಿ, ಅಥವಾ ಕಾಮನ ಬಿಲ್ಲು—ಇವುಗಳ ಹೊಳೆಯುವ ವರ್ಣನೆಗಳು

---

೧. ಹೋಲಿಸಿ—ಕಂಠೇ ಮೇಖಲಯಾ ನಿತಂಬಫಲಕೇ ತಾರೇಣ ಹಾರೇಣ ವಾ
ಪಾಣೌ ನೂಪುರಬಂಧನೇನ ಚರಣೇ ಕೇಯೂರಪಾಶೇನ ವಾ!
ಶೌರ್ಯೇಣ ಪ್ರಣತೇ ರಿಪೌ ಕರುಣಯಾ ನಾಯಾಂತಿ ಕೇ ಹಾಸ್ಯತಾಂ....॥
ಮತ್ತು :—ಉಚಿತಸ್ಥಾನವಿನ್ಯಾಸಾದಲಂಕೃತಿರಲಂಕೃತಿಃ....ಕ್ಷೇಮೇಂದ್ರ. ೬.

೨. ರೊಮನರ ಚಂದ್ರ ಮತ್ತು ನದೀವನಪರ್ವತಗಳ ಅಭಿಮಾನಿ ದೇವತೆ.

೩. ಜರ್ಮನಿಯ ಪ್ರಮುಖ ನದಿ.

ಹೊಲಿದು ಜೋಡಿಸಿದ ಜರಿತೇಪೆಗಳಂತೆ (purple patches) ಒಂದಾದ ಮೇಲೆ ಇನ್ನೊಂದು ಉದ್ದಕ್ಕೆ ಬರುತ್ತವೆ. ಆದರೆ ಈ ವರ್ಣನೆಗಳಿಗೆ ಸ್ಥಾನ ಇದಲ್ಲ.೧ ಅಯ್ಯಾ ಚಿತ್ರಕಾರ, ನೀನೇನೋ ಸೈಪ್ರೆಸ್ ಮರವನ್ನು ಚಿತ್ರಿಸುವುದರಲ್ಲಿ ಬಹಳ ಕುಶಲನಿರಬಹುದು. ನಿಜ. ಆದರೆ ನಿನಗೆ ಹಣವನ್ನು ಕೊಟ್ಟಿರುವುದು ಮುಳುಗಿ ಹೋದ ಹಡಗೊಂದರಿಂದ ದಡಕ್ಕೆ ಈಜಿಕೊಂಡು ಬರುತ್ತಿರುವ ನಿರ್ಭಾಗ್ಯ ನಾವಿಕನೊಬ್ಬನನ್ನು ಚಿತ್ರಿಸುವ ಸಲುವಾಗಿ. ಆದ್ದರಿಂದ ನಿನ್ನ ಆ ಕೌಶಲದಿಂದ ಪ್ರಕೃತದಲ್ಲಿ ಏನು ಪ್ರಯೋಜನ? ಮದ್ಯದ ಹೂಜಿಯನ್ನು ತಯಾರಿಸಬೇಕಾಗಿರುವಾಗ ಕುಂಬಾರನ ಚಕ್ರದಿಂದ ಸಣ್ಣ ಕೊಡ ಏಳುತ್ತಿರುವುದರ ಉದ್ದೇಶವೇನು? ಒಟ್ಟನಲ್ಲಿ, ನೀನು ಯಾವುದನ್ನಾದರೂ ರಚಿಸು. ಅದರಲ್ಲಿ ಇನ್ನು ಯಾವುದಿಲ್ಲದಿದ್ದರೂ, ಐಕ್ಯತೆ ಮತ್ತು ಸರಳತೆಗಳು ಮಾತ್ರ ಇರಲಿ.

[೨೪-೪೪ ಕವಿಗಳು ಗಮನಿಸಬೇಕಾದ ವಿಷಯಗಳು]

ಅಯ್ಯಾ ಕುಲೀನ ಪಿಸೋಸ್ ಮತ್ತು ಅವನಿಗೆ ಯೋಗ್ಯರಾದ ಪುತ್ರರೇ, ಕವಿಗಳಾದ ನಮ್ಮಲ್ಲಿ ಅನೇಕರು ಗುಣದ ಸಾದೃಶ್ಯದಿಂದ ಮೋಸಹೋಗುತ್ತೇವೆ.೨ ನಾನು ಸೂತ್ರಪ್ರಾಯವಾಗಿ ಹೇಳಲು ಉದ್ಯಮಿಸಿ ಅಸ್ಪಷ್ಟವಾಗುತ್ತೇನೆ. ಬಹಳ ಮೃದುವಾಗಿರಲು ಪ್ರಯತ್ನಿಸುವವನು ಸತ್ವಓಜಸ್ಸುಗಳನ್ನು ಕಳೆದುಕೊಳ್ಳುತ್ತಾನೆ. ಭವ್ಯತೆಯನ್ನು ಸಾಧಿಸಹೊರಟ ಇನ್ನೊಬ್ಬನು ಆರ್ಭಟದಲ್ಲಿ ಕೊನೆಮುಟ್ಟುತ್ತಾನೆ. ಮಳೆಗಾಳಿಗಳಿಗೆ ಹೆದರಿ ಅತಿಜಾಗರೂಕನಾಗಿರುವವನು ನೆಲಕ್ಕೇ ಅಂಟಿಕೊಂಡು ತೆವಳುತ್ತಾನೆ. ಅಲೌಕಿಕವಾದ ಪ್ರಭಾವವನ್ನುಂಟುಮಾಡುವ ಸಲುವಾಗಿ ಸ್ವಭಾವತಃ ಏಕರೂಪವಿರುವ ವಸ್ತುವಿನಲ್ಲಿ ಇಲ್ಲದ ವೈವಿಧ್ಯವನ್ನು ಕಲ್ಪಿಸತೊಡಗುವವನು ಕಾಡಿನ ಮಧ್ಯದಲ್ಲಿ ಕಡಲಹಂದಿಯನ್ನೂ, ಕಡಲ ಮಧ್ಯದಲ್ಲಿ ಕಾಡುಹಂದಿಯನ್ನೂ ಚಿತ್ರಿಸು

---

೧. ಹೋಲಿಸಿ—ಮಜ್ಜನ ಪುಷ್ಪಾವಚಯನ ಸಂಧ್ಯಾ ಚಂದ್ರೋದಯಾದಿ ವಾಕ್ಯಮಿಹ |
ಸರಸಮಪಿ ನಾತಿಬಹುಲಂ ಪ್ರಕೃತರಸಾನನ್ವಿತಂ ರಚಯೇತ್ ||
ಯಸ್ತು ಸರಿದದ್ರಿಸಾಗರ ಪುರ ತುರಗ ರಥಾದಿ ವರ್ಣನೇ ಯತ್ನಃ |
ಕವಿಶಕ್ತಿಖ್ಯಾತಿಫಲೋ ವಿತತಧಿಯಾಂ ನೋ ಮತಃ ಸ ಇಹ ||

—ಅಪರಾಜಿತಿ (ಲೊಲ್ಲಟ)

೨. ಎಂದರೆ, ಯಾವುದೋ ಒಂದು ಅಂಶವನ್ನು ಗುಣ ಎಂದು ಭಾವಿಸಿಬಿಟ್ಟು ದೇಶ, ಕಾಲಗಳ ಯುಕ್ತಾಯುಕ್ತ ವಿವೇಚನೆಯಿಲ್ಲದೆ ಅದನ್ನು ಅನುಸರಿಸುವುದರಿಂದ. ಆ ಅಂಶ ನಮಗೆ ಗುಣವೆಂದು ಕಂಡ ಮಾತ್ರಕ್ಕೆ ಅದು ನಿಜವಾಗಿಯೂ ಆ ಯೋಗ್ಯತೆಯನ್ನು ಹೊಂದಿಲ್ಲದಿರಬಹುದು. ಈ ಬಗೆಯ ಅವಿವೇಕದಿಂದ ನೈತಿಕ, ಸಾಮಾಜಿಕ ಜೀವನಗಳಲ್ಲಿ ನಾವು ಹೇಗೆ ತಪ್ಪುದಾರಿಗೆ ಹೋಗುತ್ತೇವೆಂಬುದನ್ನು ಹೊರೆಸನು ತನ್ನ ಒಂದು ವಿಡಂಬನೆಯಲ್ಲಿ (I ೨) ನಿರೂಪಿಸಿದ್ದಾನೆ.

ತ್ತಾನೆ. ನೈಜವಾದ ಕೌಶಲವಿಲ್ಲದಿದ್ದರೆ ದೋಷಗಳಿಂದ ತಪ್ಪಿಸಿಕೊಳ್ಳಲು ಮಾಡುವ ಪ್ರಯತ್ನವೇ ಇನ್ನೂ ಹೆಚ್ಚಿನ ದೋಷಗಳಿಗೆ ಮಾರ್ಗವಾಗುತ್ತದೆ.೧

ಎಮಿಲಿಯಸನ ವ್ಯಾಯಾಮಶಾಲೆಯ೨ ಹತ್ತಿರ ಸಾಮಾನ್ಯ ದರ್ಜೆಯ ಒಬ್ಬ ಕಂಚುಗಾರನಿದ್ದಾನೆ. ಅವನು ಕಂಚಿನಲ್ಲಿ ಉಗುರುಗಳನ್ನು ಬಿಡಿಸಬಲ್ಲ ಮತ್ತು ಜೋತಾಡುವ ಕೂದಲನ್ನು ಅನುಸರಿಸಬಲ್ಲ. ಆದರೆ ತನ್ನ ವೃತ್ತಿಯ ಪ್ರಧಾನವಾದ ಭಾಗದಲ್ಲಿಯೇ ಯಶಸ್ವಿಯಾಗಿಲ್ಲ. ಪೂರ್ಣವಾದ ವಸ್ತುವೊಂದನ್ನು ಸಕ್ರಮವಾಗಿ ರಚಿಸುವ ವಿಧಾನ ಅವನಿಗೆ ತಿಳಿಯದಿರುವುದೇ ಅದಕ್ಕೆ ಕಾರಣ. ನನ್ನ ಕಪ್ಪು ಕೂದಲು ಮತ್ತು ಕಣ್ಣು ಎಲ್ಲರ ಮೆಚ್ಚಿಕೆಯನ್ನು ಗಳಿಸಿದರೂ, ಮೂಗು ಸೊಟ್ಟಗಿದ್ದರೆ ನನಗೆ ಬದುಕು ಹೇಗೆ ಅಸಹ್ಯಕರವಾಗುತ್ತದೆಯೋ, ಅಂತೆಯೇ ನಾನು ಯಾವುದನ್ನಾದರೂ ರಚಿಸಿದರೆ ಈ ಮನುಷ್ಯನನ್ನು ಹೋಲುವುದು ನನಗೆ ಇಷ್ಟವಿಲ್ಲ.೩

ಅಯ್ಯಾ ಲೇಖಕರೇ, ನಿಮ್ಮ ಶಕ್ತಿಗೆ ಅನುಗುಣವಾದ ವಿಷಯಗಳನ್ನು ಆರಿಸಿಕೊಳ್ಳಿ. ನಿಮ್ಮ ಹೆಗಲು ಯಾವುದನ್ನು ಹೊರಬಲ್ಲದು, ಯಾವುದನ್ನು ಹೊರಲಾರದು ಎಂಬುದನ್ನು ದೀರ್ಘವಾಗಿ ಆಲೋಚಿಸಿ.೪ ತನ್ನ ಶಕ್ತಿಗೆ ಅನುಗುಣವಾದ ವಿಷಯವನ್ನು ಆರಿಸಿಕೊಂಡವನಿಗೆ ಶಬ್ದವಶ್ಯತೆಯಾಗಲೀ ಸುಲಭಗ್ರಾಹ್ಯವಾದ ಸಂವಿಧಾನ ಕೌಶಲವಾಗಲೀ ಯಾವಾಗಲೂ ದುರ್ಲಭವಾಗುವುದಿಲ್ಲ. ಸಂವಿಧಾನದ ಸೌಂದರ್ಯ ಪ್ರಭಾವಗಳು ನೆಲಸಿರುವುದು ಇಲ್ಲಿ—ಪ್ರತಿಯೊಂದು ಸನ್ನಿವೇಶದಲ್ಲಿಯೂ

---

೧. ಹೋಲಿಸಿ—"ಅನುಸಂಧಾನಶೂನ್ಯಸ್ಯ ಭೂಷಣಂ ದೂಷಣಾಯತೇ"
—ರಾಜಶೇಖರಪು–೧೧೨

೨. ಗ್ಲೇಡಿಯೇಟರುಗಳಿಗೆ ಶಿಕ್ಷಣ ಕೊಡುತ್ತಿದ್ದ ಒಂದು ಶಾಲೆ.

೩. ಹೋಲಿಸಿ—ಕುಕವಿತ್ವಂ ಪುನಸ್ಸಾಕ್ಷಾತ್ ಮೃತಿಮಾಹುರ್ಮನೀಷಿಣಃ ॥ ಭಾಮಹ I ೧೨

ವರಮಕವಿಃ ನ ಪುನಃ ಕುಕವಿಃ ಸ್ಯಾತ್ ಕುಕವಿತಾ ಹಿ ಸೋಚ್ಛ್ವಾಸಂ ಮರಣಂ
—ರಾಜಶೇಖರ ಪು. ೨೧.

೪. ಹೋಲಿಸಿ–"ಕವಿಃ ಪ್ರಥಮಮಾತ್ಮಾನಮೇವ ಕಲ್ಪಯೇತ್. ಕಿಯಾನ್ಮೇ ಸಂಸ್ಕಾರಃ, ಕ್ವ ಭಾಷಾವಿಷಯೇ ಶಕ್ತೋಽಸ್ಮಿ . . . . . . ಇತಿಬುದ್ಧ್ವಾ ಭಾಷಾವಿಶೇಷಮಾಶ್ರಯೇತ" ಇತ್ಯಾಚಾರ್ಯಾಃ—ರಾಜಶೇಖರ, ಪು. ೫೦–೫೧.

ಈ ಸಲಹೆ ಇತರ ಕಲೆಗಳಿಗೂ ಅನ್ವಯಿಸುವಂಥದು. ಹೋಲಿಸಿ—"ನನಗೆ ಪಾಠ ಹೇಳಿಕೊಡುವಾಗ ಅನೇಕಾವರ್ತಿ ಶಾರೀರಸಂಪತ್ತಿನ ವಿಚಾರದಲ್ಲಿ ಅವರು (ಪಟ್ಟಂ ಸುಬ್ರಹ್ಮಣ್ಯ ಅಯ್ಯರ್) ತಿಳಿಸಿದ ಸಂಗತಿ ಈಗಲೂ ನೆನಪಿದೆ. "ಒಬ್ಬನ ಶಾರೀರ ಇನ್ನೊಬ್ಬನ ಶಾರೀರ ಹಂತಿರುವುದಿಲ್ಲ. ಆದ್ದರಿಂದ ಕಣ್ಣುಮುಚ್ಚಿಕೊಂಡು ಒಬ್ಬನ ಸಂಗೀತವನ್ನು ಇನ್ನೊಬ್ಬ ಅನುಕರಿಸುವುದರಲ್ಲಿ ಅರ್ಥವಿಲ್ಲ. ಬಂಗಾರವನ್ನು ಹದಮಾಡಿ ಅವರವರಿಗೆ ಬೇಕಾದ ಆಭರಣಗಳನ್ನು ಅವರವರು ಮಾಡಿಕೊಳ್ಳುವಂತೆ ತನ್ನ ಶರೀರದ ಶಕ್ತಿಸಾಮರ್ಥ್ಯಗಳನ್ನೂ ಲಕ್ಷಣಗಳನ್ನೂ ಗಮನದಲ್ಲಿಟ್ಟುಕೊಂಡು ತನ್ನ ಸಂಗೀತವನ್ನು ಅಳವಡಿಸಿಕೊಳ್ಳುವುದು ಬುದ್ಧಿವಂತನ ಲಕ್ಷಣ. ವೈದ್ಯನಾಥಯ್ಯರ್ ದ್ರುತದಲ್ಲಿ ಹಾಡುತ್ತಾರಲ್ಲ ಎಂದು ನಾನು ಆ ಕಾಲದಲ್ಲಿ ಹಾಡಲು ಸಾಧ್ಯವೇ? ನಾನು ಮಧ್ಯಮಕಾಲದಲ್ಲಿ ಹಾಡುವಂತೆ ಅವರು ಹಾಡಲು ಸಾಧ್ಯವೋ? ಎರಡೂ

ಹೇಳಬೇಕಾದಷ್ಟನ್ನು ಮಾತ್ರ ಹೇಳಿ, ಹೇಳಬಹುದಾದ ಅನೇಕ ಇತರ ಅಂಶಗಳನ್ನು ಮುಂದಕ್ಕೆ ಉಳಿಸಿ ಪ್ರಕೃತದಲ್ಲಿ ಅವನ್ನು ಹೇಳದಿರುವುದರಲ್ಲಿ.[೧]

[೪೫–೭೨ ಶೈಲಿ ವಿನ್ಯಾಸ]

ಪದಗಳ ಸಂಯೋಜನೆಯಲ್ಲಿಯೂ ನೀನು ಒಂದು ಪದವನ್ನು ಆರಿಸಿ ಇನ್ನೊಂದನ್ನು ಬಿಡುವಾಗ ಸೂಕ್ಷ್ಮ ವಿವೇಚನೆ ಮತ್ತು ಎಚ್ಚರಗಳಿಂದ ಕೂಡಿರಬೇಕು. ಸಂಘಟನಾ ವೈಚಿತ್ರ್ಯದಿಂದ ರೂಢಿಯ ಪದವೊಂದು ನವೀನವಾಗಿ ಕಾಣುವಂತಾದರೆ ನಿನ್ನ ನಿರೂಪಣೆ ಬಹಳ ಶ್ರೇಷ್ಠರೀತಿಯದಾಗುತ್ತದೆ.[೨] ಒಂದು ವೇಳೆ ಕೆಲವು ಸೂಕ್ಷ್ಮವಾದ ವಿಷಯಗಳನ್ನು ಸ್ಪಷ್ಟವಾಗಿ ಹೇಳಲು ಹೊಸ ಪದಗಳು ಬೇಕಾಗಿಯೇ ಬಂದರೆ, ಪ್ರಾಚೀನ ಕೆಥೆಗಸರು[೩] ಕೂಡ ಕೇಳಿರದ ಶಬ್ದಗಳನ್ನು ನೀನು ಸೃಷ್ಟಿಸಬಹುದು. ಆ ಸ್ವಾತಂತ್ರ್ಯವನ್ನು ನೀನು ದುರುಪಯೋಗಮಾಡದಿದ್ದರೆ, ಅದು ನಿನಗೆ ಸಿಗುತ್ತದೆ. ಈ ಹೊಸ ಅಥವಾ ಹೊಸದಾಗಿ ಕಲ್ಪಿತವಾದ ಶಬ್ದಗಳು ಗ್ರೀಕ್ ಭಾಷೆಯಿಂದ ಕೆಲವು ಮಾರ್ಪಾಡುಗಳ ಮೂಲಕ ಜನ್ಯವಾಗಿದ್ದರೆ, ಅವಕ್ಕೆ ಮನ್ನಣೆಯೂ ಸಿಗುತ್ತದೆ. ಕೆಕಿಲಿಯಸ್[೪] ಮತ್ತು ಪ್ಲೌಟಸರಿಗೆ[೫] ಇತ್ತ ಸ್ವಾತಂತ್ರ್ಯವನ್ನು ರೋಮನರು ವರ್ಜಿಲ್[೬] ಮತ್ತು ವರಿಯಸ್[೭]ರಿಗೆ ಏಕೆ ನಿರಾಕರಿಸಬೇಕು?

ಸಾಧ್ಯವಿಲ್ಲ. ಕಾರಣ ಇಷ್ಟೆ. ನಮ್ಮಿಬ್ಬರ ಶಾರೀರ ಧರ್ಮಗಳೇ ಬೇರೆಬೇರೆ. ಆದ್ದರಿಂದ ನಮ್ಮಿಬ್ಬರ ಶೈಲಿಗಳೇ ಬೇರೆಬೇರೆಯಾಗಿರುವುದು ಕೇವಲ ಸ್ವಾಭಾವಿಕ ಹಾಗೂ ಅನಿವಾರ್ಯ. ಗುರುವಿನ ಶಾರೀರಧರ್ಮ ಮತ್ತು ಶಿಷ್ಯನ ಶಾರೀರಲಕ್ಷಣ ಎರಡು ಒಂದೇ ವಿಧವಾಗಿದ್ದರೆ ಶಿಷ್ಯನಿಗೆ ಧಾರೆಯೆರೆಯುವ ವಿದ್ಯೆ ಮೂಲದ ಪ್ರತಿಚ್ಛಾಯೆಯಂತಿರುತ್ತದೆ."

—ಕೆ. ವಾಸುದೇವಾಚಾರ್ಯ: ನಾ ಕಂಡ ಕಲಾವಿದರು (೧೯೫೫) ಪು. ೪೬.

೧. ಹೋಲಿಸಿ—ಉಚಿತಸ್ಥಾನವಿನ್ಯಾಸಾದಲಂಕೃತಿರಲಂಕೃತಿಃ |. . . ಅಲಂಕೃತಿಃ ಉಚಿತಸ್ಥಾನವಿನ್ಯಾಸಾದಲಂಕರ್ತುಂ ಕ್ಷಮಾ ಭವತಿ, ಅನ್ಯಥಾ ತ್ವಲಂಕೃತಿವ್ಯಪದೇಶಮೇವ ನ ಲಭತೇ. —ಕ್ಷೇಮೇಂದ್ರ, ೬

೨. ಹೋಲಿಸಿ—ಯಾನೇವ ಶಬ್ದಾನ್ ವಯಮಾಲಪಾಮಃ ಯಾನೇವ ಚಾರ್ಥಾನ್
ವಯಮುಲ್ಲಿಖಾಮಃ |
ತೈರೇವ ವಿನ್ಯಾಸವಿಶೇಷಭವ್ಯೈಃ ಸಂಮೋಹಯಂತೇ ಕವಯೋ ಜಗಂತಿ ||
—ನೀಲಕಂಠದೀಕ್ಷಿತ, ಶಿವಲೀಲಾರ್ಣವ, I. 13.

೩. ಭಾಷಣಕಾರ.

೪. ಕ್ರಿ. ಪೂ. ೨೦೦. ಪ್ರಸಿದ್ಧ ವೈನೋದಿಕ ನಾಟಕಕಾರ.

೫. ಕ್ರಿ. ಪೂ. ೨೨೦. ವೈನೋದಿಕ ನಾಟಕಕಾರ.

೬. ಈನಿಡ್ ಮಹಾಕಾವ್ಯದ ಕರ್ತೃ.

೭. ಪ್ರಸಿದ್ಧನಾದ ಮಹಾಕವಿ, ಮತ್ತು ನಾಟಕಕಾರ. ವರ್ಜಿಲ್ ಮತ್ತು ಹೊರೆಸರ ಸ್ನೇಹಿತ, ಮತ್ತು ಅವರಿಗೆ ಸಮನಾದ ಕವಿ.

ಕೇಟೋ[೧] ಮತ್ತು ಎನ್ನಿಯಸ್[೨] ತಮ್ಮ ಗ್ರಂಥಗಳಲ್ಲಿ ವಸ್ತುಗಳಿಗೆ ಹೊಸಹೊಸ ಹೆಸರುಗಳನ್ನು ಸೃಷ್ಟಿಮಾಡಿ ತಮ್ಮ ಮಾತೃಭಾಷೆಯ ಸಂಪತ್ತನ್ನು ಹೆಚ್ಚಿಸಿರುವಾಗ, ನಾನು ಕೆಲವು ಹೊಸಪದಗಳನ್ನು ಪ್ರಯೋಗಿಸಿದರೆ ನೀವು ಏಕೆ ಗೊಣಗಬೇಕು? ಅಂದಂದಿನ ಮುದ್ರೆ ಹೊಂದಿರುವ ಹೊಸಶಬ್ದಗಳನ್ನು ಬಳಸುವ ಹಕ್ಕು ಹಿಂದಿನಿಂದ ಇಂದಿನವರೆಗೂ ಸಮ್ಮತವಾಗಿದೆ ಮತ್ತು ಮುಂದೆಯೂ ಸಮ್ಮತವಾಗುತ್ತದೆ.[೩]

ಪ್ರತಿವರ್ಷವೂ ವಸಂತಋತುವಿನಲ್ಲಿ ಮರಗಳಲ್ಲಿ ಹಚ್ಚಗೆ ಹುಟ್ಟಿದ ಎಲೆಗಳೆಲ್ಲವೂ ಮಾಗಿಯಲ್ಲಿ ಒಣಗಿ ಉದುರಿ ಮತ್ತೆ ಹೊಸ ಎಲೆಗಳು ಕಾಣಿಸಿಕೊಳ್ಳುವಂತೆ, ಹಳೆಯ ಪೀಳಿಗೆಯ ಶಬ್ದಗಳೂ ಮುಪ್ಪಿನಿಂದ ಮೃತವಾಗುತ್ತವೆ. ಹೊಸ ಶಬ್ದಗಳು ಹುಟ್ಟಿ, ಯುವಕರಂತೆ ಸೊಂಪಾಗಿ ಶಕ್ತಿಪೂರ್ಣವಾಗಿ ಬೆಳೆಯುತ್ತವೆ. ನಾವೂ, ನಮ್ಮ ಸಕಲ ಸಾಧನೆಗಳೂ ಮೃತ್ಯುವಿಗೆ ಅಧೀನವೇ. ಉತ್ತರದ ಬಿರುಗಾಳಿಗಳಿಂದ ಹಡಗುಗಳನ್ನು ರಕ್ಷಿಸಲು ಸಮುದ್ರವನ್ನೇ ದೇಶದೊಳಕ್ಕೆ ನುಗ್ಗಿಸಿ ಬಂದರನ್ನು ನಿರ್ಮಿಸುವಂತಹ ರಾಜಕಾರ್ಯ,[೪] ಹಿಂದೆ ಬಂಜರಾಗಿದ್ದು ದೋಣಿಗಳ ಸಂಚಾರಕ್ಕೆ ಮಾತ್ರ ಉಪಯೋಗವಾಗಿದ್ದ ಜೌಗುಪ್ರದೇಶವನ್ನು ನೇಗಿಲಿನ ಅಧಿಕಾರಕ್ಕೆ ಒಳಪಡಿಸಿ ಈಗ ಸುತ್ತಮುತ್ತಲಿನ ನಗರಗಳಿಗೆ ಆಹಾರ ಒದಗಿಸುವಂತಹ ಪರಿವರ್ತನೆ, ಅಥವಾ ಬೆಳೆಗಳಿಗೆ ಬಹಳ ಅಪಾಯಕಾರಿಯಾಗಿದ್ದ ನದಿಯ ಪಾತ್ರವನ್ನು ಬದಲಾಯಿಸಿ ಹೆಚ್ಚು ಪ್ರಯೋಜನಕರವಾಗಿ ಹರಿಯುವಂತಹ ಹೊಸ ಪಾತ್ರದ

---

೧. ಕ್ರಿ. ಪೂ. ೨೩೪. ಭಾಷಣಕಾರ ಮತ್ತು ನ್ಯಾಯಾಧಿಪತಿ.

೨. ರೋಮನರ ಆದಿಕವಿ.

೩. ಹೋಲಿಸಿ:–ವಿದಿತಸಮಸಂಸ್ಕೃತೋದಿತ
ಪದಂಗಳೊಳ್ಪುದಿದು ಬೆರೆಸಿ ಬರೆ ಕನ್ನಡದೊಳ್ |
ಮುದಮನವು ತರ್ಕುಮತಿಶಯ
ಮೃದಂಗಸಂಗೀತಕಾದಿ ಮಧುರ ರವಂಬೊಲ್ ॥ ನೃಪತುಂಗ, I. 54.

ನೆಗೆಟ್ಟಿರ್ದ್ದ ಕನ್ನಡಂಗಳೊ
ಳಗಣಿತಗುಣವಿದಿತಸಂಸ್ಕೃತೋಕ್ತಕ್ರಮಮಂ |
ಬಗೆದೊಂದುಮಾಡಿ ಪೇಟ್ಟೊಡೆ
ಸೊಗಯಿಸುಗಂ ಕಾವ್ಯಬಂಧಮೆಂದುಮನಿಂದ್ಯಂ ॥ ನೃಪತುಂಗ, I. 56.

ನುಡಿಗಳೊಡಂಬಡಲ್ಬಗೆದವೊಲ್ಬಗೆಯಂ ಮಿಗಲೀಯದೊಂದೆ ನಾ
ಟ್ಟಿಡಿಯ ಬೆಡಂಗೆ ಕನ್ನಡದ ಮಾತಿನೊಳಾ ವಿಕಟಾಕ್ಷರಂಗಳೊ |
ಳ್ತೊಡರದೆ ಸಕ್ಕದಂಗಳ ಪದಂ ಪವಣಾಗಿರೆ ಮೆಲ್ಪುವೆತ್ತು ದಾಂ
ಗುಡಿವಿಡುವಂತೆ ನೀಳ್ದು ನೆಲೆ ಪೇಳ್ವಿದು ನೀತಿನಿರಂತರಕ್ರಮಂ ॥ ನೃಪತುಂಗ, I. 48.

೪. ಕ್ರಿ. ಪೂ. ೩೭ರಲ್ಲಿ ಬಾಯ್ಲೆ ಹತ್ತಿರ ಅಗಸ್ಟಸನ ಗೌರವಾರ್ಥವಾಗಿ ಅಗ್ರಿಪ್ಪ ಕಟ್ಟಿಸಿದ ಪೋರ್ಟಸ್ ಜೂಲಿಯಸ್ ಬಂದರು.

ನಿರ್ಮಾಣ[1]—ಮರ್ತ್ಯ ಮಾನವರ ಈ ಎಲ್ಲಾ ಸಾಧನೆಗಳೂ ನಶ್ವರ. ಭಾಷಾ ಶೈಲಿಗಳ ಖ್ಯಾತಿಲಾವಣ್ಯಗಳಂತೂ ಇನ್ನೂ ಕ್ಷಣಿಕ.

ವ್ಯಾವಹಾರಿಕ ಪ್ರಯೋಗದ ಆವಶ್ಯಕತೆಗನುಸಾರವಾಗಿ ಈಗ ರೂಢಿಯಲ್ಲಿ ಕಾಣದಾಗಿರುವ ಅನೇಕ ಶಬ್ದಗಳು ಮುಂದೆ ಪುನಃ ಜನ್ಮತಾಳುತ್ತವೆ. ಇಂದು ಮಾನ್ಯವಾಗಿರುವ ಅನೇಕವು ಅದೃಶ್ಯವಾಗುತ್ತವೆ. ಪ್ರಯೋಗವೇ (Usage) ಭಾಷೆಯ ನಿಜವಾದ ಪ್ರಭು, ನಿರ್ಣಾಯಕ ಮತ್ತು ಮಾನದಂಡ.

[೭೩-೮೫ ಛಂದಸ್ಸುಗಳು ಮತ್ತು ಅವುಗಳ ಪ್ರಯೋಗ]

ರಾಜರ, ಸೇನಾಪತಿಗಳ ಸಾಹಸ ಕಾರ್ಯಗಳನ್ನು ಮತ್ತು ಯುದ್ಧದ ಕಷ್ಟ ಕಾರ್ಪಣ್ಯಗಳನ್ನು ವರ್ಣಿಸಲು ಯೋಗ್ಯವಾದ ಛಂದಸ್ಸು ಯಾವುದೆಂಬುದನ್ನು ಹೋಮರನು ನಮಗೆ ತೋರಿಸಿಕೊಟ್ಟಿದ್ದಾನೆ.[2] ವಿಷಮ ವೃತ್ತವು (ಒಂದು ಪಾದ ಆರುಗಣ ಮತ್ತು ಇನ್ನೊಂದು ಐದುಗಣದ ದ್ವಿಪದಿ) ಮೊದಲು ಬಳಕೆಗೆ ಬಂದುದು ಶೋಕಗೀತಗಳಲ್ಲಿ. ಕೋರಿಕೆಗಳು ಕೈಗೂಡಿದುದರಿಂದ ಒದಗಿದ ಸಂತೃಪ್ತ ಭಾವ ಗಳನ್ನು ನಿರೂಪಿಸಲು ಅದನ್ನು ಅನಂತರ ಬಳಸಿದರು.[3] ಈ ಸಂಕ್ಷಿಪ್ತ ಛಂದಸ್ಸಿನ ಶೋಕಗೀತಗಳನ್ನು ಮೊದಲು ರಚಿಸಿದವರು ಯಾರು ಎಂಬುದನ್ನು ವಿಮರ್ಶಕರು ಚರ್ಚಿಸುತ್ತಿದ್ದಾರೆ. ಪ್ರಶ್ನೆ ಇನ್ನೂ ಬಗೆಹರಿದಿಲ್ಲ.

ಆರ್ಕಿಲೊಕಸನ[4] ಕೋಪವು ಅಯಾಂಬಿಕ್ ಛಂದಸ್ಸನ್ನು ಅವನಿಗೆ ಆಯುಧ ವಾಗಿ ಕೊಟ್ಟಿತು. ಅದು ಸಂಭಾಷಣೆಗೆ ಅನುಗುಣವೂ, ನೆರೆದ ಪ್ರೇಕ್ಷಕರ ಗಲಭೆಯನ್ನು ಅಡಗಿಸುವಂತಹದೂ, ರಂಗಾಭಿನಯಕ್ಕೆ ಸಹಜವೂ ಆದುದೆಂದು ವೈನೋದಿಕ ಮತ್ತು ರುದ್ರನಾಟಕಗಳು ಅದನ್ನು ಪರಿಗ್ರಹಿಸಿದುವು. ದೇವತೆಗಳು ಮತ್ತು ವೀರರು, ಕುಸ್ತಿಯಲ್ಲಿ ಜಯಗಳಿಸಿದ ಮಲ್ಲ, ರೇಸಿನಲ್ಲಿ ಗೆದ್ದ ಕುದುರೆ, ಯುವಕರ ಪ್ರೇಮಸಂಕಟ

---

೧. ಪಾಂಪ್‌ಟೈನ್ ಜೌಗುಪ್ರದೇಶವನ್ನು ಅಭಿವೃದ್ಧಿಗೊಳಿಸಿ, ಟೈಬರ್ ನದಿಯನ್ನು ಸ್ವಲ್ಪ ಬದಲಾಯಿಸಿದ ಆಗಸ್ಟಸನ ಉದ್ಯಮದ ಉತ್ಪ್ರೇಕ್ಷೆ ಇದು.

೨. ಎಂದರೆ, ಆರುಗಣದ ಪಾದದ ಮಹಾಕಾವ್ಯದ ಮಹಾಛಂದಸ್ಸು. ಹೋಮರನು ಇಲಿಯಡ್, ಒಡಿಸ್ಸಿಗಳಲ್ಲಿ ಬಳಸಿದ ಛಂದಸ್ಸು. ಹೋಲಿಸಿ :—ಅರ್ಥಾನುರೂಪಚ್ಛಂದಸ್ತ್ವಂ ಇತ್ಯನೇನ ಶೃಂಗಾರೇ ದ್ರುತವಿಲಂಬಿತಾದಯಃ, ವೀರೇ ವಸಂತತಿಲಕಾದಯಃ, ಕರುಣೇ ವೈತಾಲೀಯಾದಯಃ, ರೌದ್ರೇ ಸ್ರಗ್ಧರಾದಯಃ, ಸರ್ವತ್ರ ಶಾರ್ದೂಲವಿಕ್ರೀಡಿತಾದಯಃ ನಿಬಂಧನೀಯಾ ಇತ್ಯುಪದಿಶತಿ.—ಭೋಜ, ಶೃಂಗಾರಪ್ರಕಾಶ.

೩. ಮೃತರ ಸ್ಮಾರಕಗಳ ಅಥವಾ ಹರಕೆ ತೀರಿಸಲು ಬಿಡುತ್ತಿದ್ದ ದತ್ತಿಗಳ ಉಲ್ಲೇಖ ಗಳನ್ನು ಎಲಿಗೇಯಿಕ್ ದ್ವಿಪದಿಗಳಲ್ಲಿ ರಚಿಸುತ್ತಿದ್ದರು. ಹೊರೆಸನು ಇಲ್ಲಿ ಅವುಗಳನ್ನು ಸೂಚಿಸಿದ್ದಾನೆ.

೪. ಗ್ರೀಕ್ ವಿಡಂಬಕ ಕವಿ. ಕ್ರಿ. ಪೂ. ೭೨೦.

ಮತ್ತು ಮದ್ಯದ ನಿರತಿಶಯ ಸುಖ—ಇವನ್ನು ಕಾವ್ಯದೇವಿಯು ಲೈರಿಗೆ (Lyre)[೧] ವಹಿಸಿದ್ದಾಳೆ.

[೮೬—೯೮ ಶೈಲಿ ಕಾವ್ಯಪ್ರಕಾರಗಳಿಗೆ ಅನುಗುಣವಾಗಿರಬೇಕು]

ಕಾವ್ಯದ ವಸ್ತು ಪ್ರಭೇದಗಳ ಶೈಲಿರೂಪಗಳ ಈಗಾಗಲೇ ನಿರ್ಧಾರವಾಗಿಬಿಟ್ಟಿವೆ. ಅವುಗಳನ್ನು ಅರಿಯುವ ಮತ್ತು ಪಾಲಿಸುವ ಶಕ್ತಿ ಕೌಶಲಗಳು ನನಗೆ ಇಲ್ಲದಿದ್ದರೆ, ನನ್ನನ್ನು ಕವಿಯೆಂಬ ಹೆಸರಿನಿಂದ ಏಕೆ ಕರೆಯಬೇಕು ? ಇತರರಿಂದ ಕಲಿಯುವುದು ಅವಮಾನ ಎಂಬ ಅರ್ಥವಿಲ್ಲದ ಭಾವನೆಯಿಂದ ನಾನು ಕಲಿಯುವುದರ ಬದಲು ಅಜ್ಞನಾಗಿಯೇ ಏಕೆ ಉಳಿಯಲಿ ? ವೈನೋದಿಕದ ವಸ್ತುವನ್ನು ರುದ್ರ ಶೈಲಿಯಲ್ಲಿ ನಿರೂಪಿಸಬಾರದು. ಹೀಗೆಯೇ ಥಯೆಸ್ಟಿಸನ ಔತಣವನ್ನು[೨] ದೈನಂದಿನ ಸಾಮಾನ್ಯ ಜೀವನಕ್ಕೂ ಮತ್ತು ವೈನೋದಿಕಕ್ಕೂ ಮಾತ್ರ ಯೋಗ್ಯವಾದ ಛಂದಸ್ಸಿನಲ್ಲಿ ವರ್ಣಿಸುವುದು ಬಹಳ ದೊಡ್ಡ ದೋಷ. ಪ್ರತಿಯೊಂದು ಶೈಲಿ ರೀತಿಯೂ ಅದರ ನಿರ್ದಿಷ್ಟವಾದ ಉಚಿತ ಸ್ಥಾನದಲ್ಲಿರಬೇಕು. ಆದರೂ ಕೆಲವು ವೇಳೆ ವೈನೋದಿಕವು ತನ್ನ ಧ್ವನಿಯನ್ನು ಮೇಲಕ್ಕೇರಿಸುತ್ತದೆ. ಸಿಟ್ಟಿನ ಭರದಲ್ಲಿ ಕ್ರೆಮೆಸನು[೩] ಗಂಟಲೇರಿಸಿ ಆರ್ಭಟಿಸುತ್ತಾನೆ. ಹೀಗೆಯೇ ರುದ್ರನಾಟಕದಲ್ಲಿ ಟೆಲೆಫಸ್ ಮತ್ತು ಪಿಲ್ಯೂಸ್[೪] ತಮ್ಮ ಸಂಕಟಗಳನ್ನು ಗದ್ಯಕ್ಕೆ ಹತ್ತಿರವಿರುವ ಶೈಲಿಯಲ್ಲಿ ಅನೇಕವೇಳೆ ವರ್ಣಿಸುತ್ತಾರೆ. ದಾರಿದ್ರ್ಯ ಮತ್ತು ದೇಶಭ್ರಷ್ಟ ದೆಶೆಯಲ್ಲಿರುವ ಅವರ ಆರ್ತಸ್ವರವು ಪ್ರೇಕ್ಷಕರ ಹೃದಯಗಳನ್ನು ಮುಟ್ಟುವಂತಾಗಲು ಅವರು ತಮ್ಮ ಬಣ್ಣದ ಬಟ್ಟಲುಗಳನ್ನೂ[೫], ಮಾರುದ್ದದ ಪದಗಳನ್ನೂ ಬದಿಗಿರಿಸುತ್ತಾರೆ.

---

೧. ಲೈರ್ ಗ್ರೀಕರ ಒಂದು ತಂತ್ರೀವಾದ್ಯ. ಇಲ್ಲಿ ಅದು ಭಾವಗೀತದ ಸಂಕೇತ. ಹೊರೆಸನು ಪಿಂಡಾರನ ಭಾವಗೀತಗಳನ್ನು ಸೂಚಿಸುತ್ತಿದ್ದಾನೆ.

೨. ವರಿಯಸನ ರುದ್ರನಾಟಕ. ಪೆಲೋಪ್ಸನ ಮಗ ಥಯೆಸ್ಟಸ್. ಇವನ ಅಣ್ಣ ಅತ್ರೆಯಸನು ಇವನ ಮಕ್ಕಳನ್ನೇ ಕೊಂದು ಬೇಯಿಸಿ ಬಡಿಸಿದ ಕಥೆ ಈ ನಾಟಕದ ವಸ್ತುವಾಗಿದ್ದಿರಬಹುದು.

೩. ವೈನೋದಕದಲ್ಲಿನ ಒಬ್ಬ ತಂದೆಯ ಪಾತ್ರ.

೪. ಟೆಲೆಫಸ್ :—ಹೆರಾಕ್ಲೆಸ್ ಮತ್ತು ಔಗೆಯರ ಮಗ. ಅಖಿಲಿಸನ ಈಟಿಯಿಂದಾದ ಹುಣ್ಣಿನಿಂದ ಇವನು ಬಹಳ ತೊಂದರೆಪಟ್ಟನು.

ಪಿಲ್ಯೂಸ್—ಏಯಾಕಸನ ಮಗ. ತನ್ನ ಮಲತಮ್ಮನನ್ನು ಕೊಂದುದಕ್ಕಾಗಿ ದೇಶಭ್ರಷ್ಟನಾದನು.

೫. ಅಂಪುಲ (Ampula) ಚಿತ್ರಕಾರರ ಎಣ್ಣೆಯ ಬಟ್ಟಲು ; ಇಲ್ಲಿ ಆಲಂಕಾರಿಕ ಭಾಷೆ ಎಂಬರ್ಥದಲ್ಲಿ ಲಾಕ್ಷಣಿಕವಾಗಿ ಪ್ರಯೋಗಿಸಿದೆ.

[೯೯—೧೧೧ ಶೈಲಿಯು ಪಾತ್ರಕ್ಕೆ ಅನುರೂಪವಾಗಿರಬೇಕು]

ಕಾವ್ಯಗಳ ರೂಪವು[೧] ಮಾತ್ರ ಸುಂದರವಾಗಿದ್ದರೆ ಸಾಲದು. ಅವು ಮೋಹಕವಾಗಿಯೂ ಇದ್ದು ಶ್ರೋತೃವಿನ ಮನಸ್ಸನ್ನು ತಮ್ಮ ಇಚ್ಛಾನುಸಾರ ವರ್ತಿಸುವಂತೆ ಆಕರ್ಷಿಸಬೇಕು.[೨] ನಗುತ್ತಿರುವವರನ್ನು ಕಂಡಾಗ ಜನ ತಾವೂ ನಗುಮುಖರಾಗುವಂತೆ, ಅಳುವವರನ್ನು ಕಂಡಾಗ ಅವರಿಗೆ ಸಹಾನುಭೂತಿಯನ್ನು ತೋರುತ್ತಾರೆ. ನಾನು ಅಳಬೇಕೆಂದು ನೀನು ಅಪೇಕ್ಷಿಸಿದರೆ, ನೀನು ಮೊದಲು ದುಃಖಪಡಬೇಕು. ಟೆಲಿಫಸ್ ಮತ್ತು ಪಿಲ್ಯೂಸರೇ, ನಿಮ್ಮ ದುರ್ಗತಿಗೆ ನಾನು ಮರುಗುವುದು ಹಾಗಾದಾಗ ಮಾತ್ರವೇ. ನಿಮ್ಮ ಸ್ವಭಾವಕ್ಕೆ ಅನುಚಿತವಾದ ಮಾತುಗಳನ್ನೇನಾದರೂ ನೀವು ಆಡಿದರೆ ನನಗೆ ನಗುವೋ ಅಥವಾ ನಿದ್ದೆಯೋ ಬರುತ್ತದೆ.

ದುಃಖದ ಮೋರೆಗೆ ಶೋಕದ ನುಡಿಗಳೂ, ಕೋಪದ ಬಾಯಿಗೆ ಬೆದರಿಕೆಯ ಶಬ್ದಗಳೂ, ವಿನೋದದ ನಾಲಿಗೆಗೆ ಪರಿಹಾಸದ ಪದಗಳೂ, ಗಾಂಭೀರ್ಯದ ವದನಕ್ಕೆ ಪ್ರೌಢ ಸೂಕ್ತಿಗಳೂ ಉಚಿತವಾದುವು.[೩] ಏಕೆಂದರೆ ಪ್ರಕೃತಿಯು ನಮ್ಮ ಬಾಹ್ಯ ಸ್ಥಿತಿಗಳಿಗೆ ಅನುಗುಣವಾಗಿಯೇ ನಮ್ಮ ಆಂತರಿಕ ಭಾವಗಳನ್ನು ಮೊದಲು ರೂಪಿಸುತ್ತದೆ. ಅದು ಮೊದಲು ನಮ್ಮನ್ನು ಸಂತೋಷಭರಿತರನ್ನಾಗಿ ಮಾಡುತ್ತದೆ; ಕೋಪಕ್ಕೆ ಪ್ರಚೋದಿಸುತ್ತದೆ; ಚಿತ್ರಹಿಂಸೆ ಕೊಟ್ಟು ದುಃಖದ ಹೊರೆಯಿಂದ ಭೂಮಿಗೆ ಕುಗ್ಗಿಸುತ್ತದೆ. ಅನಂತರ ಮಾತುಗಳ ಮೂಲಕ ನಮ್ಮ ಹೃದಯದ ಭಾವಗಳನ್ನು ಅಭಿವ್ಯಕ್ತಗೊಳಿಸುತ್ತದೆ.

ಪಾತ್ರವೊಂದರ ಮಾತುಗಳು ಅದರ ಸ್ಥಿತಿಗತಿಗಳಿಗೆ ವಿರುದ್ಧವಾಗಿದ್ದರೆ ಅದು

---

೧. ಎಂದರೆ, ಶೈಲಿ, ಬಾಹ್ಯರೂಪ.

೨. ಹೋಲಿಸಿ:—ಅನ್ಯೋನ್ಯ ಸಂಸರ್ಗ ವಿಶೇಷ ರಮ್ಯಾಪ್ಯಲಂಕೃತಿಃ ಪ್ರತ್ಯುತ ಶೋಚನೀಯಾ |
ನಿರ್ವ್ಯಂಗ್ಯಸಾರೇ ಕವಿಸೂಕ್ತಿಬಂಧೇ ನಿಷ್ಕ್ರಾಂತಜೀವೇ ವಪುಷೀವ ದತ್ತಾ ||
—ಶಿವಲೀಲಾರ್ಣವ, I. ೩೬.
ಕಿಂಚ ಸೌಂದರ್ಯಾತಿರೇಕನಿಷ್ಪತ್ತಯೇ ಅರ್ಥಸ್ಯ ಕಾವ್ಯಕ್ರಿಯಾರಂಭಃ ಕವೇಃ, ನ ತು ಅಲಂಕಾರ ನಿಷ್ಪತ್ತಯೇ, ತೇಷಾಂ ನಾಂತರೀಯಕತ್ವೈವ ತತ್ಸಿದ್ಧೇಃ, ಭಂಗಿಭಣಿತಿ ಭೇದಾನಾಮೇವ ಅಲಂಕಾರತ್ವೋಪಗಮಾತ್.
ನ ಚಾಲಂಕಾರನಿಷ್ಪತ್ತ್ಯೈ ರಸಬಂಧೋದ್ಯತಃ ಕವಿಃ |
ಯತತೇ ತೇ ಹಿ ತತ್ಸಿದ್ಧಿನಾಂತರೀಯಕಸಿದ್ಧಯಃ ||—ಮಹಿಮಭಟ್ಟ, II.

೩. ಹೋಲಿಸಿ:—ರಸಾನುರೂಪಸಂದರ್ಭತ್ವಮಿತ್ಯನೇನ ರತಿಪ್ರಕರ್ಷೇ ಕೋಮಲಃ ಉತ್ಸಾಹಪ್ರಕರ್ಷೇ ಪ್ರೌಢಃ, ಕ್ರೋಧಪ್ರಕರ್ಷೇ ಕಠೋರಃ, ಶೋಕಪ್ರಕರ್ಷೇ ಮೃದುಃ, ವಿಸ್ಮಯಪ್ರಕರ್ಷೇ ತು ಸ್ಫುಟಶಬ್ದಸಂದರ್ಭೋ ವಿರಚನೀಯ ಇತಿ... ||—ಭೋಜಃ ಶೃಂಗಾರಪ್ರಕಾಶ.

ರೋಮನ್ ಶ್ರೀಮಂತ ಮತ್ತು ಸಾಮಾನ್ಯ ಸಾಮಾಜಿಕರೆಲ್ಲರ ಮಹತ್ತಾದ ಅಪಹಾಸ್ಯಕ್ಕೆ ಗುರಿಯಾಗುತ್ತದೆ.[೧] ಮಾತನಾಡುತ್ತಿರುವ ಪಾತ್ರ ಯಾವುದಾದರೂ ದೇವತೆಯೇ ಅಥವಾ ದೇವಾಂಶ ವೀರನೇ, ಪರಿಪಕ್ವವಯಸ್ಸಿನ ವೃದ್ಧನೇ ಅಥವಾ ಬಿಸಿರಕ್ತದ ಉತ್ಸಾಹಿ ಯುವಕನೇ[೨], ಕುಲೀನ ಗೃಹಿಣಿಯೇ ಅಥವಾ ಎಲ್ಲದರಲ್ಲಿಯೂ ತಲೆಹಾಕಿಕೊಂಡು ಬರುವ ದಾಸಿಯೇ[೩], ದೇಶವಿದೇಶ ಸುತ್ತುವ ವ್ಯಾಪಾರಿಯೇ ಅಥವಾ ಫಲವತ್ತಾದ ಸಣ್ಣ ಜಮೀನಿನ ಒಡೆಯನಾದ ಒಬ್ಬ ರೈತನೇ, ಕಾಲ್ಕಾಸಿನವನೇ ಅಥವಾ ಅಸ್ಸೀರಿಯದವನೇ, ಥೀಬ್ಸಿನವನೇ ಅಥವಾ ಆರ್ಗಾಸಿನವನೇ[೪]—ಎಂಬುದು ಬಹಳ ವ್ಯತ್ಯಾಸಗಳನ್ನು ಮಾಡುತ್ತದೆ.

[೧೧೯-೧೩೫ ಕವಿಯು ಸಂಪ್ರದಾಯವನ್ನನುಸರಿಸಬೇಕು, ಇಲ್ಲದಿದ್ದರೆ ಸಂಗತವಾಗಿರುವಂತೆ ರಚಿಸಬೇಕು]

ರೂಢಿಯಲ್ಲಿರುವ ಸಂಪ್ರದಾಯವನ್ನು ಅನುಸರಿಸಿ. ಹಾಗಿಲ್ಲದೆ ಹೊಸದಾಗಿ ರಚಿಸುವುದಾದರೆ, ನಿಮ್ಮ ಕಾವ್ಯವಸ್ತು ಸುಸಂಗತವಾಗಿರಲಿ. ನೀವು ಪ್ರಖ್ಯಾತನಾದ ಅಖಿಲ್ಲೆಸನನ್ನು[೫] ಪುನಃ ವರ್ಣಿಸಬೇಕಾದರೆ, ಅವನನ್ನು ದುಡುಕು ಸ್ವಭಾವದವನೂ, ಬಹಳ ಕೋಪಿಷ್ಠನೂ, ಕಠೋರ ಹೃದಯನೂ, ಸ್ವಾಭಿಮಾನಿಯೂ, ಕೃಪಾಣ ಧರ್ಮವೊಂದರ ವಿನಾ ಇನ್ನಾವ ನಿಯಮಕ್ಕೂ ತಾನು ಶರಣನಲ್ಲವೆನ್ನುವವನೂ ಆಗಿರುವಂತೆ ನಿರೂಪಿಸಿ. ನಿಮ್ಮ ಮೀಡಿಯಳು[೬] ಪ್ರತಿಷ್ಠಾಪರಳೂ, ದಯಾರಹಿತಳೂ;

---

೧. ಹೋಲಿಸಿ:—ಗ್ರಾಮ್ಯತ್ವಮನೌಚಿತ್ಯಂ ವ್ಯವಹಾರಾಕಾರವೇಷವಚನಾನಾಂ ।
ದೇಶಕುಲಜಾತಿವಿದ್ಯಾವಿತ್ತವಯಃಸ್ಥಾನಪಾತ್ರೇಷು ॥ ರುದ್ರಟ, XI. ೯.
ಆಗಮ ಸಮಯ ನ್ಯಾಯ ವಿ
ಭಾಗ ಕಳಾಕಾಲ ಲೋಕ ದೇಶವಿರುದ್ಧಂ ।
ಭೋಗಿ ವಿಷಂಬೊಲ್ಪ್ರಾಣ
ತ್ಯಾಗಮನಾಗಿಸುಗುಮಮಳಕೃತಿವಧುಗಿನಿತುಂ ॥—ನೃಪತುಂಗ, ಕವಿರಾಜಮಾರ್ಗ, I ೬೯.

೨. ಹೋಲಿಸಿ:—ಅವಸ್ಥೋಚಿತಮಾಧತ್ತೇ ಕಾವ್ಯಂ ಜಗತಿ ಪೂಜ್ಯತಾಂ ॥—ಕ್ಷೇಮೇಂದ್ರ, ೩೬.

೩. ಹೋಲಿಸಿ:—ಕುಲೋಪಚಿತಮೌಚಿತ್ಯಂ ವಿಶೇಷೋತ್ಕರ್ಷಕಾರಣಂ ।—ಕ್ಷೇಮೇಂದ್ರ, ೨೮.

೪. ಮೊದಲನೆಯ ಎರಡು ಹೆಸರುಗಳು ಎರಡು ದೇಶಗಳವು; ಕೊನೆಯ ಎರಡು ಎರಡು ನಗರಗಳವು. ಹೋಲಿಸಿ:—ದೇಶೌಚಿತ್ಯೇನ ಕಾವ್ಯಾರ್ಥಃ ಸಸಂವಾದೇನ ಶೋಭತೇ ।—ಕ್ಷೇಮೇಂದ್ರ, ೨೭.

೫. ಹೋಮರನ ಇಲಿಯಡ್ ಕಾವ್ಯದ ನಾಯಕಪಾತ್ರ.

೬. ಜೇಸನನ ಹೆಂಡತಿ. ಗಂಡನು ಬೇರೆಯವಳನ್ನು ಮದುವೆಯಾಗುತ್ತಾನೆಂಬ ಕೋಪಕ್ಕೆ ಆ ವಧುವನ್ನೂ ತನ್ನ ಮಕ್ಕಳನ್ನೂ ಕೊಂದಳು.

ನಿಮ್ಮ ಇನ್ನೋ೧ ಅಶ್ರುಪೂರ್ಣಳೂ; ನಿಮ್ಮ ಇಕ್ಸಿಯನ್೨ ಶುದ್ಧ ಮೋಸಗಾರನೂ; ನಿಮ್ಮ ಇಯೋ೩ ಸದಾಸಂಚಾರಿಯೂ; ನಿಮ್ಮ ಒರೆಸ್ಟಿಸ್೪ ಚಿರದುಃಖಿಯೂ ಆಗಿರಲಿ.೫

ಇದುವರೆಗೆ ಯಾರೂ ಬಳಸದಿರುವ ವಸ್ತುವೊಂದನ್ನು ನಿಮ್ಮ ನಾಟಕದಲ್ಲಿ ನಿರೂಪಿಸಲು ಮತ್ತು ಹೊಸ ಪಾತ್ರವೊಂದನ್ನು ನಿರ್ಮಿಸಲು ಉದ್ಯುಕ್ತರಾದಾಗ, ಅದನ್ನು ನಾಟಕದ ಪ್ರಾರಂಭದಿಂದ ಕೊನೆಯವರೆಗೆ ಏಕರೀತಿಯಾಗಿ ಸುಸಂಗತ ವಾಗಿರುವಂತೆ ರಚಿಸಬೇಕು. ಸಾರ್ವತ್ರಿಕವಾಗಿರುವುದನ್ನು (general) ವ್ಯಕ್ತಿ ವಿಶೇಷವಾಗಿರುವಂತೆ (individual) ನಿರೂಪಿಸುವುದು ಕಷ್ಟ. ಇದುವರೆಗೆ ಯಾರೂ ಹಾಡಿರದ, ಯಾರೂ ಕೇಳಿರದ ವಿಷಯದ ಮೇಲೆ ಸ್ವಂತ ಕಾವ್ಯವೊಂದನ್ನು ರಚಿಸು ವುದಕ್ಕಿಂತಲೂ, ಇಲಿಯಡ್ ಕಾವ್ಯದ ಕಥೆಯನ್ನು ಅಂಕಗಳಾಗಿ ವಿಂಗಡಿಸಿ ನಾಟಕವನ್ನಾಗಿ ಮಾಡಿದರೆ, ನೀವು ಹೆಚ್ಚು ವಿವೇಕಿಗಳಾಗುತ್ತೀರಿ. ಎಲ್ಲರಿಗೂ ಸುಲಭವಾಗಿರುವ ಸರ್ವೇಸಾಮಾನ್ಯವಾದ ಆವರಣದೊಳಗೆ ನೀವು ಹೆಚ್ಚು ಸುತ್ತ ದಿದ್ದರೆ, ಸಾರ್ವಜನಿಕ ಪ್ರದೇಶದಲ್ಲಿಯೂ ನೀವು ಸ್ವಂತ ಹಕ್ಕನ್ನು ಸ್ಥಾಪಿಸಿಕೊಳ್ಳ ಬಹುದು.೬ ಪದಕ್ಕೆ ಪ್ರತಿ ಪದವಿಡಲು ಶ್ರಮಿಸುವ ಅತಿಶ್ರದ್ಧೆಯ ಅನುವಾದಕರೂ

---

೧. ಕಾಡ್ಮಸನ ಮಗಳು. ಅಥಮಾಸನ ಹೆಂಡತಿ. ಇವಳ ಗಂಡನಿಗೆ ಹುಚ್ಚು ಹಿಡಿದು ಇವಳನ್ನು ಅಟ್ಟಿಸಿಕೊಂಡು ಹೋದಾಗ ಇವಳು ತನ್ನ ಮಗುವಿನೊಂದಿಗೆ ಸಮುದ್ರಕ್ಕೆ ಹಾರಿದಳು.

೨. ಫ್ಲೆಗಿಯಸನ ಮಗ. ತನ್ನ ಮಾವನಿಗೆ ವಧೂದಕ್ಷಿಣೆಯಾಗಿ ಕೊಡುತ್ತೇನೆಂದು ಹೇಳಿದ್ದನ್ನು ಕೊಡದೆ ಹೋದನು.

೩. ಇನಕಸನ ಮಗಳು. ದೇವರಾಜನಾದ ಜ್ಯೂಸನ ಹೆಂಡತಿ ಹೇರಾಳ ಆದ್ಯ ಅರ್ಚಕಳು. ಜ್ಯೂಸನು ಇವಳ ರೂಪದಿಂದ ಆಕರ್ಷಿತನಾಗಿ ಇವಳನ್ನು ಪ್ರೀತಿಸತೊಡಗಲು, ಹೇರಾ ಇವಳನ್ನು ಒಂದು ಬಿಳಿ ಹಸುವನ್ನಾಗಿ ಪರಿವರ್ತಿಸಿ, ನೂರುಕಣ್ಣಿನ ಆರ್ಗಸನ್ನು ಇವಳ ಕಾವಲಿಗಾಗಿ ನೇಮಿಸಿದಳು. ಈ ಆರ್ಗಸನ್ನು ಹರ್ಮಿಸ್ ಕೊಂದನು. ಅನಂತರ ಹೇರಾ ಒಂದು ದುಂಬಿ ಈ ಹಸುವನ್ನು ಸದಾ ಕಚ್ಚುತ್ತಿರುವಂತೆ ಮಾಡಿದಳು. ಈ ನೋವನ್ನು ತಾಳ ಲಾರದೆ ಇಯೋ ಯೂರೋಪ್, ಏಷ್ಯಾ ಖಂಡಗಳಲ್ಲಿ ಸಂಚರಿಸುತ್ತಾ ಇದ್ದಳು.

೪. ಅಗಮೆಮ್ನನನ ಮಗ. ತನ್ನ ತಾಯಿಯನ್ನು ಕೊಂದುದಕ್ಕಾಗಿ ಒಂದು ಬಗೆಯ ಉನ್ಮಾದದಿಂದ ಬಹಳ ನರಳಿದನು.

೫. ಹೋಲಿಸಿ—ಸ್ವಭಾವೌಚಿತ್ಯಮಾಭಾತಿ ಸೂಕ್ತೀನಾಂ ಚಾರುಭೂಷಣಂ ||

ಕ್ಷೇಮೇಂದ್ರ. 33.

೬. ಚಿರಪರಿಚಿತವಾದ ವಿಷಯವನ್ನು ನಾಟಕದ ವಸ್ತುವನ್ನಾಗಿ ನೀವು ತೆಗೆದುಕೊಂಡರೂ, ಇತರರು ವರ್ಣಿಸಿರುವ ಸಂಗತಿಗಳನ್ನೇ ನೀವೂ ಕೂಡ ದೀರ್ಘವಾಗಿ ವರ್ಣಿಸುವುದರಲ್ಲಿ ನಿರತ ರಾಗದಿದ್ದರೆ, ಎಂದರೆ ಚರ್ವಿತಚರ್ವಣವಾದುವುಗಳನ್ನೇ ನೀವೂ ವಿಸ್ತಾರವಾಗಿ ಬೆಳೆಸುತ್ತಾ ಹೋಗದಿದ್ದರೆ, ಆ ವಿಷಯವು ನಿಮ್ಮ ಸ್ವಂತ ರಚನೆಯಂತೆ ಆಗುತ್ತದೆ. ರಾಮಾಯಣ, ಮಹಾಭಾರತದ ವಿಷಯಗಳನ್ನೇ ಭಾಸ, ಕಾಳಿದಾಸ, ಭವಭೂತಿ, ಮುರಾರಿ ಇವರು ತಮ್ಮ ಕೃತಿಗಳಲ್ಲಿ ಬಳಸಿಕೊಂಡಿದ್ದರೂ, ಪ್ರತಿಯೊಬ್ಬರದೂ ವೈಯಕ್ತಿಕ ವೈಲಕ್ಷಣ್ಯದಿಂದಿರುವುದಕ್ಕೆ ಇದೇ ಕಾರಣ.

ಆಗಬೇಡಿ. ಅನುಕರಿಸುವ ಆತುರದಲ್ಲಿ ಕಡಿದಾದ ಹಳ್ಳಕ್ಕೆ ಹಠಾತ್ತನೆ ಧುಮುಕಿ ಅಲ್ಲಿಂದ ಪಾರಾಗಲು ಕೃತಿಯ ನಿಯಮವೋ ಅಥವಾ ಅಪಖ್ಯಾತಿಯ ಹೆದರಿಕೆಯೋ ಅವಕಾಶವೀಯದಂತಹ ಅನುಕರಣ ಮಾರ್ಗವನ್ನು ಅನುಸರಿಸಬೇಡ.[೧]

[೧೩೬-೧೫೨ ಪ್ರಾರಂಭವನ್ನು ಹೇಗೆ ಮಾಡಬೇಕು]

"ಪ್ರಿಯಮನ[೨] ಗತಿಯನ್ನೂ, ಪ್ರಖ್ಯಾತವಾದ ಸಮರವನ್ನೂ ಹಾಡುತ್ತೇನೆ" ಎಂದು ಪ್ರಾರಂಭಿಸಿದ ಪ್ರಾಚೀನ ಪೌರಾಣಿಕನ ರೀತಿಯಲ್ಲಿ ನೀನು ನಿನ್ನ ಕಾವ್ಯವನ್ನು ಪ್ರಾರಂಭಿಸಬೇಡ. ಇಂಥ ಬಡಾಯಿನ ಘೋಷಣೆ ಮಾಡಿದವನು ಆ ಪ್ರತಿಜ್ಞೆಗೆ ಅನುರೂಪವಾದ ಯಾವುದನ್ನು ತಾನೇ ರಚಿಸಿಯಾನು? ಪರ್ವತ ಪ್ರಸವವೇದನೆಯನ್ನು ಅನುಭವಿಸುತ್ತದೆ; ಆದರೆ ಹುಟ್ಟುವುದು ಮಾತ್ರ ಒಂದು ಶುದ್ಧ ಸುಂಡಿಲಿ. ಅಸಂಗತವಾದ ಕಾರ್ಯಕ್ಕೆ ಕೈಹಾಕದೆ, "ತ್ರಾಯ್ ವಶವಾದ ನಂತರ ಅನೇಕ ನಗರಗಳನ್ನೂ, ವಿವಿಧ ಆಚಾರಗಳನ್ನೂ ನೋಡಿದ ವೀರನ ಕಥೆಯನ್ನು ಹೇಳು, ದೇವಿ"[೩] ಎಂದು ಪ್ರಾರಂಭಿಸಿದವನದು ಎಷ್ಟು ಸಾಧುವಾದ ಮಾರ್ಗ. ಅವನು ಬೆಂಕಿಯ ಕುಡಿಯನ್ನು ಮೊದಲು ಹೊತ್ತಿಸಿ ಅನಂತರ ಹೊಗೆಯನ್ನು ಎಬ್ಬಿಸುವುದಿಲ್ಲ. ಅದರ ಬದಲು ಹರಡಿದ ಹೊಗೆಯ ಮಧ್ಯೆ ಜ್ವಾಲೆಯೊಂದು ಹತ್ತಿಕೊಂಡು ಪ್ರಕಾಶನೀಡುವಂತೆ ಮಾಡುತ್ತಾನೆ. ಅನಂತರ ಅಂತಿಫತೆಸ್, ಸ್ಕಿಲ್ಲ, ಸೈಕ್ಲೋಪರು, ಮತ್ತು ಖಾರಿಬ್ಡಿಸ್[೪] ಮುಂತಾದ ಅದ್ಭುತ ಚಮತ್ಕಾರ ಸಂಗತಿಗಳನ್ನು ತನ್ನ ಭಂಡಾರದಿಂದ ಹೊರಗೆಡಹಿ ನಮಗೆ ಅವುಗಳನ್ನು ಪ್ರದರ್ಶಿಸುತ್ತಾನೆ. ಡಯೊಮೆಡಿಸನ[೫] ಪುನರಾಗಮನದ ಕಥೆಯನ್ನು ಮೆಲೆಗರನ ಮರಣದಿಂದಾಗಲೀ, ತ್ರಾಯ್‌ನ ಯುದ್ಧವನ್ನು ಲೇಡಳ[೬] ಅವಳಿ ಮೊಟ್ಟೆಗಳಿಂದಾಗಲೀ ಪ್ರಾರಂಭಿಸುವುದಿಲ್ಲ. ಅವನು ಸದಾ ಸಮಾಪ್ತಿಯ ಕಡೆಗೆ ಧಾವಿಸುತ್ತಿರುತ್ತಾನೆ. ಶ್ರೋತೃಗಳಿಗೆ ಕಥೆಯ ಸಂಗತಿಗಳು ಮೊದಲೇ ತಿಳಿದಿವೆಯೋ ಎಂಬಂತೆ ಅವರನ್ನು ಅವಸರದಿಂದ ಕೃತಿಯ ಮಧ್ಯೆ ನೂಕುತ್ತಾನೆ. ತನ್ನಿಂದ

---

೧. ಬಾವಿಗೆ ಬಿದ್ದ ನರಿ ಮತ್ತು ಹೋತನ ಕಥೆ ಇಲ್ಲಿ ಸೂಚಿತವಾಗಿದೆ.

೨. ಪಾರಿಸ್‌ನ ತಂದೆ ಮತ್ತು ಟ್ರಾಯ್‌ನ ದೊರೆ. ಇಲ್ಲಿ ಸೂಚಿತವಾದ ಸಮರ ಟ್ರೋಜನ್ ಮತ್ತು ಗ್ರೀಕರದು.

೩. ಹೋಮರನ ಒಡಿಸ್ಸಿಯ ಆರಂಭ ವಾಕ್ಯ.

೪. ಇವೆಲ್ಲವೂ ಒಡಿಸ್ಸಿಯಲ್ಲಿ ನಿರೂಪಿತವಾಗಿರುವ ವಿವಿಧ ಘಟನೆಗಳು.

೫. ತ್ರಾಯ್ ಯುದ್ಧದಲ್ಲಿ ಭಾಗವಹಿಸಿದ ಒಬ್ಬ ಗ್ರೀಕ್ ವೀರ.

೬. ಟಿಂಡಾರೋಸ್‌ನ ಹೆಂಡತಿ. ದೇವರಾಜನಾದ ಜ್ಯೂಸನು ಹಂಸದ ರೂಪದಲ್ಲಿ ಬಂದು ಇವಳನ್ನು ಕಾಮಿಸಿದನು. ಅನಂತರ ಇವಳು ಎರಡು ಮೊಟ್ಟೆಗಳನ್ನು ಪ್ರಸವಿಸಿದಳು. ಒಂದು ಮೊಟ್ಟೆಯಿಂದ ತ್ರಾಯ್ ಯುದ್ಧಕ್ಕೆ ಕಾರಣಳಾದ ಹೆಲೆನ್, ಮತ್ತೊಂದರಿಂದ ಕಾಸ್ಟರ್ ಮತ್ತು ಪೊಲ್ಲಕ್ಸ್ ಹುಟ್ಟಿದರು.

ಉಜ್ವಲಗೊಳಿಸಲು ಸಾಧ್ಯವಿಲ್ಲವೆಂದು ಮನಗಂಡದ್ದನ್ನು ಬಿಟ್ಟುಬಿಡುತ್ತಾನೆ. ಕಲ್ಪನೆಯನ್ನು ಎಷ್ಟೇ ಸ್ವತಂತ್ರವಾಗಿ ಹರಿಯಬಿಟ್ಟರೂ, ಕೃತಿಯ ಆದಿ ಮಧ್ಯ ಅಂತ್ಯ ಎಲ್ಲವೂ ಏಕತಾನದಲ್ಲಿರುವಂತೆ ಕಲ್ಪಿತ ಸಂಗತಿಗಳನ್ನು ಸತ್ಯಸಂಗತಿಗಳೊಡನೆ ಸಮಂಜಸವಾಗಿ ಜೋಡಿಸಿ ಹೆಣೆಯುತ್ತಾನೆ.

[೧೫೩-೧೭೮ ಪಾತ್ರವಿವೇಕ]

ನಾನು ಮತ್ತು ಪ್ರೇಕ್ಷಕ ಪ್ರಪಂಚ ನಿಮ್ಮಿಂದ ಏನನ್ನು ನಿರೀಕ್ಷಿಸುತ್ತೇವೆ ಎಂಬುದನ್ನು ಹೇಳುತ್ತೇನೆ, ಕೇಳಿ. ಘರದೆಯು ಬಿದ್ದು, ನಟನು "ಚಪ್ಪಾಳೆ ತಟ್ಟಿ" ಎಂದು ಹೇಳುವವರೆಗೂ[೧] ಪ್ರೇಕ್ಷಕರು ಮೆಚ್ಚಿ ಕುಳಿತಿರಬೇಕೆಂದು ನಿಮಗೆ ಅಭಿಲಾಷೆ ಇದ್ದರೆ ನೀವು ಹೀಗೆ ಮಾಡಬೇಕು. ನೀವು ಜನಗಳ ಪ್ರತಿ ವಯಸ್ಸಿನ ನಡೆ ನುಡಿಗಳನ್ನು ಸೂಕ್ಷ್ಮವಾಗಿ ಗಮನಿಸಿ, ಬದಲಾಯಿಸುತ್ತಿರುವ ವಯೋಗತಿ ಮತ್ತು ಮನೋಧರ್ಮಗಳನ್ನು ಯಥಾಯೋಗ್ಯವಾಗಿ ಪ್ರದರ್ಶಿಸಬೇಕು.

ಅವುಗಳಲ್ಲಿ[೨] ಮೊದಲನೆಯದು ಮಾತುಗಳನ್ನು ಅನುಕರಿಸಲು ಈಗ ತಾನೇ ಆರಂಭಿಸಿರುವ, ಬೀಳದೆ ನಡೆಯುವ ವಯಸ್ಸಿನ ಬಾಲಕನದು. ಅವನು ತನ್ನ ಸಂಗಡಿಗರೊಡನೆ ಆಟವಾಡುವುದರಲ್ಲಿ ಬಹಳ ಆಸಕ್ತ. ಕಾರಣವೇ ಇಲ್ಲದೆ ಥಟ್ಟನೆ ಕೋಪಮಾಡಿಕೊಳ್ಳುತ್ತಾನೆ. ಅಷ್ಟೇ ಬೇಗ ಶಾಂತನಾಗುತ್ತಾನೆ. ಕ್ಷಣ ಕ್ಷಣಕ್ಕೂ ಮನಸ್ಸು ಬದಲಾಯಿಸುತ್ತಿರುತ್ತಾನೆ. ಎರಡನೆಯದು ಇನ್ನೂ ಗಡ್ಡ ಮೀಸೆ ಚಿಗುರದ ಯುವಕನದು. ಇವನು ಮೊದಲ ಬಾರಿಗೆ ತನ್ನ ಗುರು ಅಥವಾ ರಕ್ಷಕನಿಂದ[೩] ವಿಮೋಚನೆ ಹೊಂದಿರುತ್ತಾನೆ. ಕುದುರೆ, ಬೇಟೆನಾಯಿ, ಮತ್ತು ಹೊಂಬಿಸಿಲಿನ ಹಚ್ಚನೆಯ ಮೈದಾನಗಳಲ್ಲಿ ಆಸಕ್ತ. ದುರ್ವ್ಯಾಪಾರಗಳಿಗೆ ಮೇಣದಂತೆ ಮೃದು. ವಿವೇಕ ಹೇಳಹೊರಟವರಿಗೆ ಒರಟ. ತನಗೆ ಉಪಯುಕ್ತವಾದುದನ್ನು ಮಾಡಿಕೊಳ್ಳುವುದರಲ್ಲಿ ಸೋಮಾರಿ. ಹಣದ ವಿಷಯದಲ್ಲಿ ದುಂದುಗಾರ. ಬಹಳ ಉತ್ಸಾಹಿ. ಪ್ರಬಲವಾದ ಕಾಮನೆಗಳುಳ್ಳವನು ಒಂದು ಕ್ಷಣದ ಹಿಂದೆ ಗಾಢವಾಗಿ ಪ್ರೀತಿಸಿದುದನ್ನು ಮುಂದಿನ ಕ್ಷಣದಲ್ಲಿ ತೊರೆಯುವುದರಲ್ಲಿಯೂ ಅಷ್ಟೇ ಮುಂದು. ಇದರ ನಂತರ ಮನುಷ್ಯನ ಸ್ವಭಾವ ಬದಲಾಯಿಸುತ್ತದೆ. ಮಧ್ಯವಯಸ್ಸಿನ ಹೃದಯವು ಐಶ್ವರ್ಯ ಮತ್ತು ಪ್ರಭಾವಗಳನ್ನು ಅರಸುತ್ತದೆ. ಮಹತ್ವಾಕಾಂಕ್ಷೆಯ ಅಡಿಯಾಳಾಗುತ್ತದೆ. ಮುಂದೆ ಸರಿಪಡಿಸಲು ಕಷ್ಟವಾಗುವಂತಹ ವಿಷಯಗಳಲ್ಲಿ ಬಹಳ ಎಚ್ಚರವನ್ನು ವಹಿಸುತ್ತದೆ. ಕೊನೆಯದಾಗಿ, ಮುಪ್ಪಿನಲ್ಲಿ ಸುತ್ತಿಕೊಳ್ಳುವ

---

೧. ಪ್ಲಾಟಸ್ ಮತ್ತು ಟಿರೆನ್ಸ್‌ರ ನಾಟಕಗಳು ಸಾಮಾನ್ಯವಾಗಿ ಹೀಗೆ ಸಮಾಪ್ತವಾಗುತ್ತವೆ. ನಮ್ಮ ನಾಟಕಗಳ ಭರತವಾಕ್ಯಕ್ಕೆ ಇವನ್ನು ಹೋಲಿಸಬಹುದು.

೨. ಹೊರೆಸನು ಇಲ್ಲಿ ಅರಿಸ್ಟಾಟಲನ ಭಾಷಣಶಾಸ್ತ್ರ (II.12)ವನ್ನು ಅನುಸರಿಸಿದ್ದಾನೆ.

೩. Custos. ಹುಡುಗನನ್ನು ಸ್ಕೂಲಿಗೆ ಕರೆದುಕೊಂಡು ಹೋಗುತ್ತಿದ್ದ ಸೇವಕ—

ಕ್ಲೇಶಗಳು ಅನೇಕ ಬಗೆಯವು. ಮುದುಕನು ಇನ್ನೂ ಹಣವನ್ನು ಕೂಡಿಡುತ್ತಿರುತ್ತಾನೆ. ಜಿಪುಣತನದಿಂದ ಅನುಭವಿಸಲಾರದೆ ಅದನ್ನು ಖರ್ಚುಮಾಡಲು ಹಿಂತೆಗೆಯುವುದರಿಂದಲೋ ಅಥವಾ ಪ್ರತಿಯೊಂದು ಕೆಲಸವನ್ನು ಅಧೈರ್ಯದಿಂದಲೂ ನಿರುತ್ಸಾಹದಿಂದಲೂ ಮಾಡುವುದರಿಂದಲೋ ಅವನು ಸದಾ ಕಾಲತಳ್ಳುತ್ತಿರುತ್ತಾನೆ. ಅವನಿಗೆ ಸ್ಥೈರ್ಯ ಕಡಿಮೆ. ಅವನ ನಿರೀಕ್ಷೆಗಳು ಅಲ್ಪವಾದವು. ಕೆಲಸದಲ್ಲಿ ಬಹಳ ನಿಧಾನಿ. ಆದರೂ ದೀರ್ಘಕಾಲ ಬದುಕಿರಬೇಕೆಂಬ ಆಸೆ ಅವನಲ್ಲಿ ಪ್ರಬಲವಾಗಿರುತ್ತದೆ. ಹಠಮಾರಿ ಜಗಳಗಂಟ ಸದಾ ಹಿಂದಿನ ತನ್ನ ಬಾಲ್ಯದ ದಿನಗಳನ್ನೇ ಹೊಗುಳುತ್ತಾ ಹೊಸಪೀಳಿಗೆಯ ಚಿಕ್ಕವರನ್ನು ದೂಷಿಸುತ್ತಿರುತ್ತಾನೆ.

ಕಾಲದ ಉಬ್ಬಲೆಯು ನಮಗೆ ಅನೇಕ ವರಗಳನ್ನು ತರುತ್ತದೆ. ಅದರ ಇಳಿಯಲೆಯು ಅನೇಕವನ್ನು ನಮ್ಮಿಂದ ಕೊಂಡುಹೋಗುತ್ತದೆ. ಆದ್ದರಿಂದ ಮುದುಕನ ಅವಸ್ಥೆಗಳನ್ನು ಯುವಕನಿಗೂ, ಪ್ರೌಢನದನ್ನು ಹುಡುಗನಿಗೂ ಅನ್ವಯಿಸಿದಿರಬೇಕಾದರೆ, ನಾವು ಪ್ರತಿಯೊಂದು ವಯೋದೆಶೆಗೂ ಯಾವುದು ಸಂಬಂಧಿಸಿದ್ದು, ಯಾವುದು ಯೋಗ್ಯ ಎಂಬುದನ್ನು ಸದಾ ಎಚ್ಚರದಿಂದ ಗಮನದಲ್ಲಿಡಬೇಕು.[೧]

[೧೭೯—೧೮೮ ರಂಗಪ್ರದರ್ಶನಕ್ಕೆ ಯೋಗ್ಯವಾದ ಸಂಗತಿಗಳು]

ನಾಟಕದ ಘಟನೆಗಳನ್ನು ರಂಗದ ಮೇಲೆ ಅಭಿನಯಿಸುತ್ತಾರೆ ಅಥವಾ ಅವು ನೇಪಥ್ಯದಲ್ಲಿ ಜರುಗಿದಂತೆ ವರ್ಣಿಸುತ್ತಾರೆ. ಸಾಕ್ಷಾತ್ತಾಗಿ ಸಾಮಾಜಿಕನ ಕಣ್ಣೆದುರಿಗೆ ಪ್ರದರ್ಶಿತವಾಗುವ ವಿಷಯಗಳು ಅವನ ಮನಸ್ಸಿನ ಮೇಲುಂಟು ಮಾಡುವ ಪರಿಣಾಮವನ್ನು ಕಿವಿಯಿಂದ ಕೇಳಿದ ವಿಷಯಗಳು ಮಾಡಲಾರವು. ಆದರೂ ನೇಪಥ್ಯಕ್ಕೇ ಯೋಗ್ಯವಾದ ಸಂಗತಿಗಳನ್ನು ರಂಗದ ಮೇಲೆ ಪ್ರದರ್ಶಿಸಬಾರದು. ಅನೇಕ ಘಟನೆಗಳನ್ನು ನಮ್ಮ ಕಣ್ಣಿಗೆ ಮರೆಮಾಡಿ, ಅನಂತರ ಅದನ್ನು ಕಂಡ ಪಾತ್ರವೊಂದನ್ನು ರಂಗದ ಮೇಲೆ ತಂದು, ಅದರ ಮೂಲಕ ಆ ಘಟನೆಯನ್ನು ಉತ್ತಮವಾದ ಶೈಲಿಯಲ್ಲಿ ವರ್ಣಿಸಬೇಕು. ಆದ್ದರಿಂದ ಮೀಡಿಯ ತನ್ನ ಮಕ್ಕಳನ್ನು ಕೊಲ್ಲುವುದು, ಪಾಪಿ ಅತ್ರೆಯಸನು ನರಮಾಂಸವನ್ನು ಬೇಯಿಸುವುದು[೨],

---

೧. ಹೋಲಿಸಿ—ಅವಸ್ಥೋಚಿತಮಾಧತ್ತೇ ಕಾವ್ಯಂ ಜಗತಿ ಪೂಜ್ಯತಾಮ್ ॥
—ಕ್ಷೇಮೇಂದ್ರ ೩೬.

೨. ಪೆಲೊಪ್ಸನಿಗೆ ಅತ್ರೆಯಸ್ ಮತ್ತು ಥಯೆಸ್ಟಸ್ ಇಬ್ಬರು ಮಕ್ಕಳು. ಥಯೆಸ್ಟಸನು ತನ್ನ ಅಣ್ಣ ಅತ್ರೆಯಸನ ಹೆಂಡತಿಯನ್ನು ಕಾಮಿಸಿದನು, ಮತ್ತು ಆ ಕಾರಣಕ್ಕಾಗಿ ದೇಶತ್ಯಾಗ ಮಾಡಬೇಕಾಯಿತು. ಅನಂತರ ಅತ್ರೆಯಸನ ಮಗನ ಮೂಲಕ ಅವನನ್ನು ಕೊಲ್ಲಲು ಪ್ರಯತ್ನಪಟ್ಟನು. ಇದು ಕೈಗೂಡಲಿಲ್ಲ. ಇದರಿಂದ ಕೋಪಗೊಂಡ ಅತ್ರೆಯಸನು ಥಯಸ್ಟಸನನ್ನು ಮೋಸದಿಂದ ಬರಮಾಡಿ, ಅವನ ಮಕ್ಕಳನ್ನು ಕೊಂದು ಅವರ ಮಾಂಸದಿಂದ ಮಾಡಿದ ಅಡಿಗೆಯನ್ನು ಅವನೇ ತಿನ್ನುವಂತೆ ಮಾಡಿದನು.

ಪ್ರಾಕ್ನೆಯು ಹಕ್ಕಿಯಾಗುವುದೂ[೧], ಕಾಡ್ಮಸನು ಹಾವಾಗುವುದೂ[೨]—ಇವುಗಳನ್ನು ರಂಗದ ಮೇಲೆ ಸಾಮಾಜಿಕರ ಎದುರು ಪ್ರದರ್ಶಿಸಬಾರದು. ಇಂತಹ ದೃಶ್ಯಗಳನ್ನು ನೀವೇನಾದರೂ ನನ್ನ ಮುಂದೆ ಹಟದಿಂದ ಪ್ರದರ್ಶಿಸಿದರೆ, ಅವು ನನಗೆ ಅಪನಂಬಿಕೆಯನ್ನೋ ಜಿಗುಪ್ಸೆಯನ್ನೋ ಉಂಟುಮಾಡುತ್ತವೆ.

[೧೮೯-೨೦೧ ನಾಟಕದ ಮುಖ್ಯ ನಿಯಮಗಳು][೩]

ನಾಟಕವು ಐದು ಅಂಕಗಳಿಗಿಂತ ದೊಡ್ಡದೋ ಅಥವಾ ಚಿಕ್ಕದೋ ಆಗದಿರಲಿ. ಹಾಗಿಲ್ಲದಿದ್ದರೆ ಜನಗಳು ಅದನ್ನು ನೋಡಬಯಸುವುದೂ ಇಲ್ಲ, ಮತ್ತು ಅದು ರಂಗದ ಮೇಲೆ ಮತ್ತೆ ಪ್ರದರ್ಶಿತವಾಗುವುದೂ ಇಲ್ಲ. ನಾಟಕದಲ್ಲಿನ ಸಮಸ್ಯೆಯನ್ನು ಬಗೆಹರಿಸಲು ದೇವರೊಬ್ಬನಿಗೆ ಮಾತ್ರ ಸಾಧ್ಯ ಎಂದಾಗುವವರೆಗೆ, ಯಾವ ದೇವತೆಯೂ ನಾಟಕದ ಮಧ್ಯೆ ಪ್ರವೇಶಿಸಬಾರದು.[೪] ನಾಲ್ಕನೆಯ ಪಾತ್ರ ಸಂಭಾಷಣೆಯಲ್ಲಿ ಭಾಗವಹಿಸಕೂಡದು.[೫] ಮೇಳವು ನಾಟಕದ ಒಂದು ಪಾತ್ರದಂತೆ ತನ್ನ ಸ್ಥಾನ ಕರ್ತವ್ಯಗಳನ್ನು ಸಮರ್ಥವಾಗಿ ನಿರ್ವಹಿಸಲಿ. ನಾಟಕದ ಪ್ರಧಾನ ವಸ್ತುವಿಗೆ ಪೋಷಕವೋ ಅಥವಾ ಸಹಜವಾಗಿ ಸಂಬಂಧಿಸಿಯೋ ಇರದ ಯಾವ ಗೀತವನ್ನೂ ಅದು ಎರಡು ಅಂಕಗಳ ನಡುವೆ ಹಾಡಕೂಡದು.[೬] ಅದು ಸತ್ಪಾತ್ರಗಳಿಗೆ ಸಹಾಯಕವಾಗಿದ್ದು ಅವಕ್ಕೆ ಸ್ನೇಹಪೂರ್ಣವಾದ ಸಲಹೆಗಳನ್ನು ನೀಡಲಿ; ಕೋಪಗೊಂಡ ಪಾತ್ರಗಳನ್ನು ಸಂತೈಸಲಿ; ಪಾಪಕ್ಕೆ ಹೆದರುವವರನ್ನು ಆದರಿಸಲಿ; ಮಿತಾಹಾರವನ್ನು ಮೆಚ್ಚಲಿ; ರಾಷ್ಟ್ರಕ್ಕೆ ಕ್ಷೇಮಕಾರಿಗಳಾದ ಧರ್ಮ, ನ್ಯಾಯಶಾಸನ, ಮತ್ತು ತೆರೆದ ಕೋಟೆಬಾಗಿಲಿನ ಶಾಂತಿಕಾಲ ಇವುಗಳನ್ನು ಪ್ರಶಂಸಿಸಲಿ; ಅದಕ್ಕೆ ತಿಳಿಸಿದ ರಹಸ್ಯಗಳನ್ನು ಗೋಪ್ಯವಾಗಿಡಲಿ; ಮತ್ತು ದೀನರಿಗೆ ಭಾಗ್ಯವು ಮತ್ತೆ ಬರಲೆಂದೂ, ಸೊಕ್ಕಿದವರಿಂದ ಅದು ಹೊರಟು ಹೋಗಲೆಂದೂ ದೇವತೆಗಳನ್ನು ಅದು ಪ್ರಾರ್ಥಿಸಲಿ.

---

೧. ಟಿರೆಯುಸನ ಹೆಂಡತಿ ಪ್ರಾಕ್ನೇಯು ತನ್ನ ತಂಗಿ ಫಿಲೊಮೆಲಳನ್ನು ತನ್ನ ಗಂಡ ಕೆಡಿಸಿದ್ದಕ್ಕಾಗಿ ತನ್ನ ಮಗ ಇಟಸನನ್ನು ಕೊಂದು ತನ್ನ ಗಂಡನಿಗೆ ಅದರ ಅಡಿಗೆಯನ್ನು ಬಡಿಸಿದಳು. ಇದು ಗೊತ್ತಾಗಿ ಟಿರೆಯಸನು ಪ್ರಾಕ್ನೀಯನ್ನು ಶಿಕ್ಷಿಸಲು ಹೊರಟಾಗ, ಅವಳು ದೇವರನ್ನು ಮರೆಹೊಕ್ಕು ನೈಟಿಂಗೇಲ್ ಹಕ್ಕಿಯಾಗಿ ಪರಿವರ್ತಿತಳಾದಳು.

೨. ಥೀಬ್ಸಿನ ಸ್ಥಾಪಕ ಕಾಡ್ಮಸನು ಅಂತ್ಯದಲ್ಲಿ ಹಾವಾಗಿ ಸ್ವರ್ಗಕ್ಕೆ ಹೋದ ಘಟನೆ.

೩. ಇವೆಲ್ಲವೂ ಗ್ರೀಕ್ ನಾಟಕಕಾರರ ಸಂಪ್ರದಾಯ ಮತ್ತು ನಿಯಮಗಳು.

೪. ಇದು ಯೂರಿಪಿಡೀಸಿನ ನಾಟಕಗಳಲ್ಲಿ ಸಾಮಾನ್ಯ.

೫. ರಂಗದ ಮೇಲೆ ಮೂರಕ್ಕಿಂತ ಹೆಚ್ಚು ಪಾತ್ರಗಳು ಸಂಭಾಷಣೆಯಲ್ಲಿ ಭಾಗವಹಿಸಲು ಗ್ರೀಕ್ ರುದ್ರನಾಟಕದಲ್ಲಿ ಅವಕಾಶವಿರಲಿಲ್ಲ.

೬. ಇದು ಯೂರಿಪಿಡೀಸಿನ ಪದ್ಧತಿ.

[೨೦೭-೨೦೯ ನಾಟಕದಲ್ಲಿ ಸಂಗೀತ]

ಹಿಂದಿನ ಕಾಲದಲ್ಲಿ ಕೊಳಲಿಗೆ ಹಿತ್ತಾಳೆಯ ಕಟ್ಟುಗಳಿರಲಿಲ್ಲ. ಅದು ಶಬ್ದದಲ್ಲಿ ಕಹಳೆಯೊಂದಿಗೆ ಸ್ಪರ್ಧಿಸುತ್ತಲೂ ಇರಲಿಲ್ಲ. ಅದು ಕೆಲವೇ ರಂಧ್ರಗಳಿರುವ ಒಂದು ಚಿಕ್ಕ ವಾದ್ಯವಾಗಿದ್ದಿತು. ಮೇಳಕ್ಕೆ ಪಕ್ಕವಾದ್ಯವಾಗಿದ್ದು, ಪ್ರೇಕ್ಷಕರಿಂದ ಇನ್ನೂ ಭರ್ತಿಯಾಗದ ರಂಗಮಂದಿರವನ್ನು ತನ್ನ ನಾದದಿಂದ ತುಂಬುವುದು ಅದರ ಕಾರ್ಯವಾಗಿದ್ದಿತು. ಅಂದು ನಾಟಕಗಳಿಗೆ ಬರುತ್ತಿದ್ದ ಜನಗಳನ್ನು ಸುಲಭವಾಗಿ ಎಣಿಸಬಹುದಾಗಿದ್ದಿತು. ಅವರ ಸಂಖ್ಯೆ ಅಷ್ಟು ಕಡಿಮೆಯಾಗಿದ್ದಿತು. ಅವರು ಪ್ರಾಮಾಣಿಕರೂ, ಒಳ್ಳೆಯ ನಡತೆಯವರೂ, ಆಡಂಬರವಿಲ್ಲದವರೂ ಆಗಿದ್ದರು. ಅನಂತರ ವಿಜಯಗಳಿಂದ ದೇಶವು ವಿಶಾಲವಾಗಿ ಬೆಳೆದು ಹೆಚ್ಚು ವಿಸ್ತಾರವಾದ ಕೋಟೆಗಳು ನಮ್ಮ ನಗರಗಳನ್ನು ಸುತ್ತುವರೆದು, ಹಬ್ಬದ ದಿವಸಗಳಲ್ಲಿ ಮದ್ಯ ಗೋಷ್ಠಿಗಳು ಹಗಲಿನಲ್ಲಿಯೇ ಪ್ರಾರಂಭವಾಗಿ, ಪ್ರತಿಯೊಬ್ಬರೂ ತಮ್ಮ ತಮ್ಮ ಕಾಮನೆಗಳನ್ನು ಸ್ವಚ್ಛಂದವಾಗಿ ತೃಪ್ತಿಪಡಿಸಲು ಮೊದಲಾಗಲು, ನಾಟಕದಲ್ಲಿ ಸಂಗೀತಕ್ಕೆ ಹೆಚ್ಚಿನ ಕಾಲ, ಹೆಚ್ಚಿನ ರಾಗಗಳ ಸ್ವಾತಂತ್ರ್ಯ ಲಭಿಸಿತು. ತನ್ನ ವೃತ್ತಿಯ ಕೆಲಸಕಾರ್ಯಗಳನ್ನು ಮುಗಿಸಿಕೊಂಡು ವಿರಾಮದ ವೇಳೆಯನ್ನು ಕಳೆಯಲು ನಾಟಕಶಾಲೆಯನ್ನು ಹೊಕ್ಕು ನಾಗರಿಕನ ಪಕ್ಕದಲ್ಲಿ ಕುಳಿತ ಅವಿದ್ಯಾವಂತ ಹಳ್ಳಿಗನಿಗೆ, ಅಭಿಜ್ಞ ಅನಭಿಜ್ಞರ ಕಲಬೆರಕೆಯ ಗುಂಪಿಗೆ ರಸಿಕತೆಯಾದರೂ ಎಲ್ಲಿಯದು? ಆದ್ದರಿಂದ ವೇಣುವಾದಕನು ತನ್ನ ಹಿಂದಿನ ದಿನಗಳ ಕಲೆಗೆ ನರ್ತನ ಮತ್ತು ಮಿತಿಮೀರಿದ ಅಭಿನಯಗಳನ್ನು ಸೇರಿಸಿದನು. ರಂಗದ ಮೇಲೆ ಬಂದಾಗ ರಂಗದಷ್ಟಕ್ಕೂ ತನ್ನ ಅಂಗವಸ್ತ್ರದ ಸೆರಗನ್ನು ಹಾಸಿದನು. ಹೀಗೆಯೇ ಸರಳ ಗಂಭೀರವಾಗಿದ್ದ ಲೈರಿಗೆ (Lyre)೧ ಹೆಚ್ಚಿನ ತಂತಿಗಳನ್ನು ಕಟ್ಟಲಾಯಿತು. ನಿರಂಕುಶ ಪದಪ್ರಯೋಗವು ನವೀನವಾದ ಅಶ್ರುತ ಪೂರ್ವವಾದ ವೈಭವ ಶೈಲಿಯೊಂದನ್ನು ಕಲ್ಪಿಸಿತು. ಭವಿಷ್ಯತ್ ಸಂಗತಿಗಳನ್ನು ಸೂಚಿಸುವ ಮತ್ತು ಸದ್ಯೋಪಯುಕ್ತವಾದ ಸಲಹೆಗಳನ್ನು ನೀಡುವ ಅದರ ಉಪದೇಶ ವಾಕ್ಯಗಳು ಡೆಲ್ಫಿಯ ದೈವವಾಣಿಯೊಂದಿಗೆ ಸ್ಪರ್ಧಿಸಿದುವು.

[೨೨೦—೨೫೦ ಸ್ಯಾಟಿರ್ ನಾಟಕ]

ಹಿಂದೆ ಮೇಕೆಯೊಂದರ ಅಲ್ಪ ಬಹುಮಾನಕ್ಕಾಗಿ ಸ್ಪರ್ಧಿಸುತ್ತಿದ್ದ ರುದ್ರನಾಟಕಕಾರನು ಸ್ವಲ್ಪ ಕಾಲದ ನಂತರ ಅರೆಬೆತ್ತಲೆಯ ಕಾಡು ಸ್ಯಾಟಿರ್‌ಗಳನ್ನು೨ ರಂಗದ

೧. ಒಂದು ತಂತೀ ವಾದ್ಯ.

೨. ಮದ್ಯ ಮತ್ತು ರುದ್ರನಾಟಕದ ಅಭಿಮಾನಿ ದೇವತೆ ಡಯೊನೈಸಸನ ಅನುಯಾಯಿಗಳು. ಇವರ ದೇಹದ ಅರ್ಧ ಭಾಗ ಮನುಷ್ಯರದು, ಇನ್ನರ್ಧ ಮೇಕೆಗಳದು. ಕುಡಿತ, ವಿಕಟ ಹಾಸ್ಯಗಳಿಗೆ ಹೆಸರಾದವರು.

ಮೇಲೆ ತಂದು, ತನ್ನ ನಾಟಕದ ಗಾಂಭೀರ್ಯಕ್ಕೆ ಧಕ್ಕೆಯಾಗದ ರೀತಿಯಲ್ಲಿ ವಿಕಟವಾದ ವಿನೋದದ ದೃಶ್ಯಗಳನ್ನು ಪ್ರದರ್ಶಿಸಿದನು.[೧] ಆಗತಾನೇ ಯಾಗಗಳಲ್ಲಿ ಭಾಗವಹಿಸಿ, ಪೂರ್ತಿಯಾಗಿ ಕುಡಿದು ಬಂದಿರುವ ಸ್ವಚ್ಛಂದವೃತ್ತಿಯ ಪ್ರೇಕ್ಷಕರನ್ನು ನಾಟಕದ ಕೊನೆಯವರೆಗೆ ಅವರವರ ಸ್ಥಾನಗಳಲ್ಲೇ ಕುಳಿತಿರುವಂತೆ ಮಾಡಲು ನಾವೀನ್ಯದ ಆಕರ್ಷಣೆ ರಂಜನೆಗಳಿಗೆ ಮಾತ್ರ ಸಾಧ್ಯ ಎಂದು ಅವನು ಭಾವಿಸಿದುದೇ ಅವನು ಹಾಗೆ ಮಾಡಲು ಕಾರಣ. ನಾಟಕದ ನಡುವೆ ಈ ಸ್ಯಾಟಿರ್‌ಗಳ ವಿನೋದ ಮತ್ತು ಕುಚೋದ್ಯಗಳನ್ನು ಪ್ರದರ್ಶಿಸುವುದೂ, ಗಂಭೀರವಾದ ವಿಷಯಗಳಿಂದ ಹಾಸ್ಯದವಕ್ಕೆ ಬದಲಾಯಿಸುವುದೂ ಯುಕ್ತವೇ. ಆದರೆ ಹಾಗೆ ಮಾಡುವಾಗ ಅದು ಯಾರಾದರೂ ಒಬ್ಬ ದೇವತೆಯೋ ಅಥವಾ ಮಾನವ ವೀರನೋ ರಾಜಯೋಗ್ಯವಾದ ಬಂಗಾರ ಮತ್ತು ಕೆನ್ನೀಲಿ (Purple) ವಸ್ತ್ರಗಳಲ್ಲಿ ರಂಗದ ಮೇಲೆ ಮೆರೆದ ಸ್ವಲ್ಪ ಕಾಲದೊಳಗೇ ಕತ್ತಲೆಯ ಪಡಖಾನೆಯನ್ನು ಹೊಕ್ಕು ಅಸಭ್ಯವಾದ ಸಂಭಾಷಣೆ ಗಳಲ್ಲಿ ತೊಡಗುವಂತಹದಾಗಬಾರದು. ನೆಲವನ್ನು ತೊರೆಯುವ ಭರದಲ್ಲಿ ಆಕಾಶ ವನ್ನು, ಮೋಡಗಳನ್ನು ಅಪ್ಪಬಾರದು. ಲಘುವಾಗಿ ಮಾತಾಡುವುದು ರುದ್ರದೇವಿಗೆ ಅನುರೂಪವಾದುದಲ್ಲ. ಸ್ವೇಚ್ಛಾಚಾರಿ ಸ್ಯಾಟಿರರ ನಡುವೆ ಅವಳೇನಾದರೂ ಒಂದು ವೇಳೆ ಕಾಣಿಸಿಕೊಳ್ಳಬೇಕಾದ ಪ್ರಸಂಗ ಬಂದಲ್ಲಿ, ಅವಳು ಆಗ ಹಬ್ಬದ ದಿನಗಳಲ್ಲಿ ನರ್ತನಮಾಡಬೇಕಾಗಿರುವ ಗೃಹಿಣಿಯಂತೆ ಸ್ವಲ್ಪ ಸಂಕೋಚ, ಗಾಂಭೀರ್ಯಗಳಿಂದ ವರ್ತಿಸಲಿ.

ಪ್ರಿಯ ಪಿಸೋಸರೇ, ನಾನು ಸ್ಯಾಟಿರ್ ನಾಟಕಗಳನ್ನು ರಚಿಸುವುದಾದರೆ, ನೀರಸವಾದ ರೂಢಿಯ ಪದಗಳನ್ನು ಬಳಸುವುದಿಲ್ಲ. ಸೇವಕ ಡವಸ್, ಅಥವಾ ಯಜಮಾನಿ ಸಿಮೊವಿಗೆ ಮೋಸಮಾಡಿ ವರಹವೊಂದನ್ನು ಕದ್ದ ಧೂರ್ತ ಕೆಲಸಗಾರ್ತಿ ಪಿಥಿಯಸ್, ಅಥವಾ ದೇವಶಿಶುವೊಂದರ ಪೋಷಕ ಮತ್ತು ಅನುಚರ ಸಿಲೆನಸ್[೨]– ಇವರ ಸಂಭಾಷಣೆಯ ಶೈಲಿಯಲ್ಲಿ ಯಾವ ವ್ಯತ್ಯಾಸವೂ ಇರದ ರೀತಿಯಲ್ಲಿ ರುದ್ರಶೈಲಿ ಯಿಂದ ದೂರವಾಗಲು ನಾನು ಪ್ರಯತ್ನಿಸುವುದಿಲ್ಲ.

ಚಿರಪರಿಚಿತವಾದ ವಸ್ತುವಿನ ಮೇಲೆ ನಾನು ಕೃತಿಯೊಂದನ್ನು ರಚಿಸುವಲ್ಲಿ ನನ್ನ ಗುರಿ ಇಂತಿರುತ್ತದೆ. ಅದನ್ನು ಯಾರು ಬೇಕಾದರೂ ಆ ರೀತಿ ರಚಿಸಬಹುದೆಂದು ಅದು ಎಲ್ಲರಿಗೂ ತೋರಬೇಕು. ಆದರೆ ಹಾಗೆ ಮಾಡಲು ಹೊರಟವನು ಮಾತ್ರ

---

೧. ತ್ರಗೋದಿಯ (Tragoedia), ಅಜಗೀತ, ಎಂಬ ನಾಮ ನಿಷ್ಪತ್ತಿಯಿಂದ ಒದಗಿದ ಅರ್ಥವನ್ನು ಹೊರೆಸ್ ಅನುಸರಿಸಿದ್ದಾನೆ. ಸ್ಯಾಟಿರ್ ನಾಟಕಕ್ಕೆ ರುದ್ರನಾಟಕದೊಡನೆ ಸಂಬಂಧ ಕಲ್ಪಿಸಿ, ಅದೊಂದು ಗಂಭೀರ ಪ್ರಕಾರವೆಂದೂ, ವೈನೋದಿಕದಂತೆ ಲಘುವಲ್ಲವೆಂದೂ ಸೂಚಿಸುವುದೇ ಅವನ ಉದ್ದೇಶ.

೨. ಮದ್ಯದ ಗಡಿಗೆಯ ಅಭಿಮಾನಿ ದೇವ ಸಿಲೆನಸ್ ಸ್ಯಾಟಿರ್‌ಗಳ ಮುಖಂಡ, ಮತ್ತು ಮದ್ಯದ ದೇವ ಬಾಕ್ಕಸ್‌ನ ಪೋಷಕ.

ಧಾರಾಕಾರವಾಗಿ ಬೆವರು ಸುರಿಸಿ ವೃಥಾ ಶ್ರಮಪಡುವಂತಾಗಬೇಕು. ಆನುಪೂರ್ವಿ ಮತ್ತು ಸಂಯೋಜನೆಗಳ ಶಕ್ತಿ ಅಂತಹದು.೧ ಸಾಮಾನ್ಯ ಪದಗಳಿಗೆ ಲಭಿಸುವ ವೈಶಿಷ್ಟ್ಯ ಅಂತಹದು.

ವನದೇವತೆಗಳನ್ನು ಕಾಡುಗಳಿಂದ ಬರಮಾಡಿ ರಂಗದ ಮೇಲೆ ಪ್ರದರ್ಶಿಸಿದಾಗ, ಅವು ರಸ್ತೆ ಚೌಕಗಳಲ್ಲಿ ಹುಟ್ಟಿದವೂ, ಪೇಟೆಬೀದಿಗಳಲ್ಲಿ ಬೆಳೆದವೂ ಆಗಿರುವಂತೆ ವರ್ತಿಸಬಾರದು. ಅವುಗಳ ಮಾತು ನಮ್ಮ ನಗರಗಳ ಕಾಮಣ್ಣರ ಮಾತಿನಂತೆ ಸತ್ವಹೀನವಾಗಿರಬಾರದು. ಜುಗುಪ್ಸೆ ಹುಟ್ಟಿಸುವ, ಅಶ್ಲೀಲ ಶಬ್ದಗಳನ್ನು ಅವು ಪ್ರಯೋಗಿಸಬಾರದು. ಹಾಗಿಲ್ಲದಿದ್ದರೆ ಅಶ್ವಪತಿಗಳು, ಕುಲೀನರು ಮತ್ತು ಶ್ರೀಮಂತ ವರ್ಗ ಅವುಗಳನ್ನು ನೋಡಿದಾಗ ಅಸಹ್ಯಪಟ್ಟುಕೊಳ್ಳುತ್ತಾರೆ. ಅಂತಹ ನಾಟಕವನ್ನು ಹುರಿಗಡಲೆ ಜಂಗಲ್‌ಬಾದಾಮಿ (Walnuts) ಗಿರಾಕಿಗಳು ಎಷ್ಟೇ ಮೆಚ್ಚಿಕೊಂಡರೂ, ಇವರು ಮಾತ್ರ ಅದನ್ನು ಸಮಾಧಾನದಿಂದ ನೋಡುವುದೂ ಇಲ್ಲ, ಅದಕ್ಕೆ ಪುರಸ್ಕಾರವನ್ನು ಕೊಡುವುದೂ ಇಲ್ಲ.

[೨೫೧—೨೭೪ ನಾಟಕದ ಛಂದಸ್ಸು]

ಲಘ್ವಕ್ಷರದ ನಂತರ ಗುರ್ವಕ್ಷರವಿರುವ (೧—) ಗಣಕ್ಕೆ ಅಯಾಂಬಿಕ್ ಗಣ ಎಂದು ಹೆಸರು. ಅದು ಕ್ಷಿಪ್ರಗತಿಯ ಗಣ. ಆರು ಆಘಾತಗಳನ್ನು ಹೊಂದಿದ್ದು ಮೊದಲಿಂದ ಕೊನೆಯವರೆಗೆ ಯಾವ ವ್ಯತ್ಯಾಸವೂ ಇಲ್ಲದ ಛಂದಸ್ಸಿಗೂ ಅಯಾಂಬಿಕ್ ತ್ರಿಗಣಪಾದ ಎಂಬ ಹೆಸರು ಬರಲು ಅದರ ಕ್ಷಿಪ್ರಗತಿಯೇ ಕಾರಣ.೨ ಕಿವಿಗೆ ಸ್ವಲ್ಪ ನಿಧಾನವಾಗಿಯೂ ಹೆಚ್ಚು ಗಂಭೀರವಾಗಿಯೂ ಕೇಳುವಂತಾಗಲು ಅಯಾಂಬಿಕ್ ಛಂದಸ್ಸು ಗಂಭೀರಗತಿಯ ಸ್ಪಾಂಡಿಗೆ (— —) ತನ್ನ ಆನುವಂಶಿಕ ಹಕ್ಕಿನಲ್ಲಿ ಒಂದು ಪಾಲನ್ನು ಕೆಲವೇ ದಿವಸಗಳ ಹಿಂದೆ ಕೊಟ್ಟಿತು. ಆದರೆ ಪಾದದ ಎರಡನೆಯ

---

೧. ರೋಸ್ಕಾಗ್ನಿಯವರ ಅಭಿಪ್ರಾಯದಲ್ಲಿ ಇಲ್ಲಿ ಹೇಳಿರುವುದು ಪದಗಳ ಅರ್ಥಕ್ಕೆ ಸಂಬಂಧಿಸಿದುದೇ ವಿನಾ ಅವುಗಳ ನಾದಕ್ಕೆ ಸಂಬಂಧಿಸಿದುದಲ್ಲ. ವಿಶಿಷ್ಟ ಸನ್ನಿವೇಶದಲ್ಲಿ ಹಳೆಯ ಪದಗಳನ್ನು ಪ್ರಯೋಗಿಸಿದಾಗ ಅವಕ್ಕೆ ಒದಗುವ ಹೊಸ ಅರ್ಥ ಪರಂಪರೆಗಳನ್ನು ಇದು ಸೂಚಿಸುತ್ತದೆ ಎಂದು ವಿಲ್ಕಿನ್ಸನ್ ವ್ಯಾಖ್ಯಾನ ಮಾಡಿದ್ದಾರೆ. ಹೋಲಿಸಿ—

ಶಬ್ದಾಸ್ತೇ ನ ತಥಾವಿಧಾಃ ಪಥಿ ಧಿಯಾಂ ಲೋಕಸ್ಯ ಯೇ ನಾಸತೇ
 ನಾರ್ಥಾತ್ಮಾಪಿ ಸ ಕೋಽಪಿ ಧಾವತಿ ಗಿರಾಂ ಭೂಪಾಲಮಾರ್ಗೇ ನ ಯಃ |
ಅಸ್ತ್ಯನ್ಯಸ್ತು ಸ ಸನ್ನಿವೇಶಶಿಶಿರಃ ಶಬ್ದಾರ್ಥಯೋಸ್ಸಂಗಮೋ
 ಯೇನಾಮೀ ಸ್ವವಶೇನ ದಗ್ಧಕವಯೋ ಮಥ್ನಂತಿ ಚೇತಾಂಸಿ ನಃ ||

—ಸುಭಾಷಿತರತ್ನಕೋಷ.

೨. ಎಂದರೆ, ಅಯಾಂಬ್ ಎಷ್ಟು ಚಿಕ್ಕ ಗಣವೆಂದರೆ, ಆರುಗಣವಿರುವ ಪಾದವನ್ನು ಷಡ್ಗಣಪಾದಿ ಎನ್ನುವುದರ ಬದಲು ತ್ರಿಗಣಪಾದಿ ಎನ್ನುತ್ತಿದ್ದರು.

ಮತ್ತು ನಾಲ್ಕನೆಯ ಸ್ಥಾನಗಳಲ್ಲಿ ಮಾತ್ರ ಅದಕ್ಕೆ ಅವಕಾಶ ಕೊಡಲಿಲ್ಲ. ಅಕ್ಕಿಯಸನ[೧] ಪ್ರಸಿದ್ಧ ಟ್ರಿಮಿಟರುಗಳಲ್ಲಿ ಅಯಾಂಬಿಕ್ ಗಣ ಕಾಣುವುದು ಅಪರೂಪ. ರಂಗದ ಮೇಲುರುಳಿಸಿದ ಭಾರವಾದ ಬಂಡೆಗಳನ್ನು ಹೋಲುವ ಎನ್ನಿಯಸನ[೨] ಪಂಕ್ತಿಗಳಲ್ಲಿ ಅದು[೩] ಅಜಾಗರೂಕತೆಯಿಂದ ಅಥವಾ ಕಾವ್ಯಕಲೆಯ ಅಜ್ಞಾನದಿಂದ ಉಂಟಾದ ಮಹದ್ದೋಷದಿಂದ ಕೂಡಿದೆ.

ಛಂದೋದೋಷಗಳನ್ನು ಗ್ರಹಿಸುವುದು ಮತ್ತು ನಿರ್ಧರಿಸುವುದು ಎಲ್ಲ ವಿಮರ್ಶಕರಿಗೂ ಸಾಧ್ಯವಲ್ಲ. ನಮ್ಮ ರೋಮನ್ ಕವಿಗಳ ವಿಷಯದಲ್ಲಿ ತೋರಿರುವ ಸಹನೆಯಂತೂ ಔಚಿತ್ಯದ ಮಿತಿಯನ್ನು ಮೀರಿದ್ದು. ಹಾಗೆಂದು ನಾನು ಎಲ್ಲಾ ನಿಯಮಗಳನ್ನೂ ಬದಿಗೊತ್ತಿ ಸ್ವಚ್ಛಂದವಾಗಿ ಬರೆಯಲೋ? ಅಥವಾ ನನ್ನ ದೋಷಗಳು ಎಲ್ಲರಿಗೂ ಗೊತ್ತಾಗುತ್ತವೆ ಎಂದು ಅರಿತು, ಕ್ಷಮಿಸಲರ್ಹವಾದ ಪರಿಮಿತಿಯೊಳಗೆ ಧೈರ್ಯದಿಂದಿರಲು ಜಾಗ್ರತೆ ವಹಿಸಲೋ? ಹೀಗೆ ಮಾಡಿದರೆ ನಾನು ದೋಷಾರೋಪಣೆಯಿಂದೇನೋ ಮುಕ್ತನಾಗುತ್ತೇನೆ, ಆದರೆ ಪ್ರಶಂಸೆಗೆ ಮಾತ್ರ ಪಾತ್ರನಾಗುವುದಿಲ್ಲ.

ಮಿತ್ರರೇ, ನೀವು ಗ್ರೀಕರ ಕೃತಿಗಳನ್ನು ಹಗಲೂ ರಾತ್ರಿ ಶ್ರದ್ಧೆಯಿಂದ ತಿರುವಿ ಹಾಕಿ, ವ್ಯಾಸಂಗ ಮಾಡಿ.[೪] "ಆದರೆ ನಮ್ಮ ಪೂರ್ವಜರು ಪ್ಲಾಟಸನ ಛಂದೋ ವಿನ್ಯಾಸವನ್ನೂ ವಾಕ್ಚಾತುರ್ಯವನ್ನೂ ಪ್ರಶಂಸಿಸಿದ್ದಾರಲ್ಲ" ಎಂದು ನೀವು ಹೇಳಬಹುದು. ನಿಜ. ಆದರೆ ಅಸಂಸ್ಕೃತ ಹಾಸ್ಯಕ್ಕೂ ಸಂಸ್ಕೃತ ಚತುರೋಕ್ತಿಗೂ ಇರುವ ವ್ಯತ್ಯಾಸ ನನಗೆ ಮತ್ತು ನಿಮಗೆ ತಿಳಿದಿದೆ ಎಂದಾದರೆ, ಮತ್ತು ಬೆರಳಿನಿಂದ ತಾಳಹಾಕುವುದರಿಂದ ಅಥವಾ ಕಿವಿಯಿಂದ ಕೇಳುವುದರಿಂದ ನಾವು ಸರಿಯಾದ ತಾಳಲಯವನ್ನು ಗ್ರಹಿಸಬಲ್ಲೆವು ಎಂದು ಒಪ್ಪುವುದಾದರೆ, ನಮ್ಮ ಪೂರ್ವಿಕರು ಆ ಎರಡು ಗುಣಗಳನ್ನು ವಿವೇಚನಾರಹಿತವಾಗಲ್ಲದಿದ್ದರೂ, ಬಹಳ ಸುಲಭವಾಗಿ ಹೊಗಳಿದರೆಂದು ನನ್ನ ಭಾವನೆ.

---

೧. ಕ್ರಿ. ಪೂ. ೧೭೦ ಈಸ್ಕಿಲಸನ ಕೃತಿಗಳನ್ನು ಅನುವಾದ ಮಾಡಿದ್ದನು. ಅನೇಕ ಐತಿಹಾಸಿಕ ನಾಟಕಗಳನ್ನು ಬರೆದಿದ್ದನು.

೨. ಕ್ರಿ. ಪೂ. ೨೩೯ ರೋಮನರ ಆದಿಕವಿಯೆಂದು ಪ್ರಸಿದ್ಧನಾಗಿದ್ದನು. ಮಹಾಕಾವ್ಯ, ನಾಟಕ ಮುಂತಾದ ವುಗಳನ್ನು ಬರೆದಿದ್ದನು.

೩. ಅಯಾಂಬಿಕ್ ಛಂದಸ್ಸು.

೪. ಹೋಲಿಸಿ—ಅದಱಿಂ ಪರಮಾಗಮಕೋ

ವಿದನಪ್ಪುದು ಪೂರ್ವಕಾವ್ಯ ರಚನೆಗಳಂ ತಾಂ |
ಮೊದಲೊಳ್ಕಲ್ತಂಗಲ್ಲದೆ
ಪದದೊಳ್ಜಾಣಿಂ ಬೆಡಂಗುಮಕ್ಕುಮೆ ಕೃತಿಯೊಳ್ ||

ಕವಿರಾಜಮಾರ್ಗ, I. ೯.

ಮುಂದಿನ ಶತಮಾನದಲ್ಲಿ ಹೊರೆಸನಿಗೇ ರೋಮನ್ ಸ್ಕೂಲುಗಳಲ್ಲಿ ಈ ಸ್ಥಾನ ಸಿಕ್ಕಿತೆಂದು ಜೂವಿನಲ್ ಹೇಳಿದ್ದಾನೆ.

[೨೭೫-೨೯೪ಳ ಪ್ರಾಚೀನ ಗ್ರೀಕ್ ನಾಟಕ]

ಥೆಸ್ಪಿಸನು[೧] ರುದ್ರಕಾವ್ಯವನ್ನು ಕಂಡುಹಿಡಿದನೆನ್ನುತ್ತಾರೆ. ಅದುವರೆಗೆ ಆ ಕಾವ್ಯಪ್ರಕಾರ ಗೊತ್ತಿರಲಿಲ್ಲ. ಅವನು ತನ್ನ ಕೃತಿಗಳನ್ನು ಗಾಡಿಗಳಲ್ಲಿ ಸಾಗಿಸುತ್ತಿದ್ದನು. ಮದ್ಯದ ಗಷ್ಟನ್ನು ಮುಖಕ್ಕೆ ಬಳಿದುಕೊಂಡ ನಟರು ಅವುಗಳನ್ನು ಹಾಡುತ್ತಿದ್ದರು ಮತ್ತು ಅಭಿನಯಿಸುತ್ತಿದ್ದರು. ಈಸ್ಕಿಲಸನು[೨] ಅವನ ತರುವಾಯ ಬಂದನು. ಅವನು ರುದ್ರನಟನ ಮುಖವಾಡ ಮತ್ತು ಸುಂದರವಾದ ವೇಷಭೂಷಣಗಳನ್ನು ರಚಿಸಿದನು. ಸಣ್ಣ ಸಣ್ಣ ಹಲಗೆಗಳನ್ನು ಜೋಡಿಸಿ ರಂಗವನ್ನು ನಿರ್ಮಿಸಿದನು. ನಟರಿಗೆ ಭವ್ಯಶೈಲಿ ಮತ್ತು ರುದ್ರಾಭಿನಯವನ್ನು[೩] ಕಲಿಸಿದನು. ಅನಂತರ ಪ್ರಾಚೀನ ವೈನೋದಿಕವು ಹುಟ್ಟಿತು. ಅದಕ್ಕೂ ಪುರಸ್ಕಾರ ಸಿಗದೆ ಇರಲಿಲ್ಲ. ಆದರೆ ಅದರ ಸ್ವಾತಂತ್ರ್ಯವು ಸ್ವೇಚ್ಛಾಚಾರವಾಗಿ ಪರಿಣಮಿಸಿ, ಅದನ್ನು ನ್ಯಾಯಶಾಸನಗಳ ಮೂಲಕ ನಿರೋಧಿಸಬೇಕಾದ ಮಟ್ಟಿಗೆ ಅಪಾಯಕಾರಿಯಾಯಿತು. ಅನಂತರ ಶಾಸನಕ್ಕೆ ಶರಣಾಗಿ ಅವಹೇಳನ ಮಾಡುವ ಹಕ್ಕನ್ನು ಕಳೆದುಕೊಂಡ ಮೇಳವು ಅವಮಾನಕರವಾದ ರೀತಿಯಲ್ಲಿ ಮೂಕವಾಯಿತು.

[ರೋಮನ್ ಕಾವ್ಯದ ದೋಷ]

ನಮ್ಮ ಕವಿಗಳು ಬಳಸದಿರುವ ಕಾವ್ಯಶೈಲಿ ಯಾವುದೂ ಇಲ್ಲ. ರೋಮನ್ ವಿಷಯಗಳನ್ನು ಕುರಿತು ಅವರು ರಚಿಸಿದ ರುದ್ರನಾಟಕ ಮತ್ತು ವೈನೋದಿಕಗಳಲ್ಲಿ ಗ್ರೀಕರ ಮಾರ್ಗಕ್ಕಿಂತಲೂ ಮುಂದೆ ಹೋಗಿ ನಮ್ಮ ನಾಡಿನ ಮಹತ್ಸಾಧನೆಗಳನ್ನು ಹೊಗಳಿ ಹಾಡಿದ ಅವರ ಧೈರ್ಯ ಬಹಳ ಪ್ರಶಂಸನೀಯವಾದುದು. ನಮ್ಮ ಪ್ರತಿಯೊಬ್ಬ ಕವಿಯೂ ಅರದಿಂದ ಉಜ್ಜುವ ಕೆಲಸಕ್ಕೆ[೪] ಬೇಸರಪಡದೆ ಇದ್ದಿದ್ದರೆ, ಲ್ಯಾಟಿಯಂನ ಹೆಸರು ಸಾಹಿತ್ಯಕ್ಕಿಂತಲೂ ಹೆಚ್ಚಾಗಿ ಸಾಹಸಕೃತ್ಯ ಶಸ್ತ್ರಕೌಶಲಗಳಿಗೆ ಪ್ರಖ್ಯಾತವಾಗುತ್ತಿರಲಿಲ್ಲ.

---

೧. ಕ್ರಿ. ಪೂ. ಆರನೆಯ ಶತಕದ ಗ್ರೀಕ್ ನಾಟಕಕಾರ. ಇವನು ಕ್ರಿ. ಪೂ. ೫೩೫ ರಲ್ಲಿ ಪ್ರದರ್ಶಿಸಿದ ರುದ್ರನಾಟಕದಿಂದ ರುದ್ರನಾಟಕದ ಇತಿಹಾಸ ಪ್ರಾರಂಭವಾಯಿತೆಂದು ನಂಬಲಾಗಿತ್ತು.

೨. ಕ್ರಿ. ಪೂ. ೫೨೫. ಗ್ರೀಕ್ ರುದ್ರನಾಟಕದ ತ್ರಿಮೂರ್ತಿಗಳಲ್ಲೊಬ್ಬ.

೩. ಎಂದರೆ ರುದ್ರನಾಟಕಕ್ಕೆ ಅನುರೂಪವಾದ ಗಂಭೀರ ಶೈಲಿಯಲ್ಲಿ ಮಾತನಾಡುವುದು ಮತ್ತು ಅಭಿನಯಿಸುವುದನ್ನು.

೪. Labour of the File. ಸ್ವಲ್ಪವೂ ಓರೆಕೋರೆಯಿಲ್ಲದೆ ಒಪ್ಪವಾಗಿ ನಯವಾಗಿ ಮಾಡುವುದಕ್ಕೆ.

ಅಯ್ಯಾ, ಪಾಂಪಿಲಿಯಸನ ವಂಶಜರೇ,[೧] ಅನೇಕ ದಿವಸಗಳ ಕಾಲ ಅನೇಕ ತಿದ್ದುಪಡಿಗಳನ್ನು ಮಾಡಿ ಹತ್ತಾರು ಸಲ ಪರಿಷ್ಕರಿಸುವುದರ ಮೂಲಕ ಉಗುರು ತುದಿಗೆ ನಯವಾಗಿರುವ ಮಟ್ಟಿಗೆ ಇರದ ಪ್ರತಿಯೊಂದು ಕಾವ್ಯವನ್ನೂ ನೀವು ಖಂಡಿಸಿ.[೨]

[೨೯೫-೩೦೮ ಸ್ವಾಭಾವಿಕ ಪ್ರತಿಭೆ ಮತ್ತು ಕಲಾನಿಯಮ]

ಬಡಪಾಯಿ ಕಲಾನಿಯಮಗಳಿಗಿಂತಲೂ ಸ್ವಾಭಾವಿಕ ಶಕ್ತಿಯೇ ಉತ್ಕೃಷ್ಟವಾದುದು ಎಂದು ಡೆಮೊಕ್ರೆಟಸನ[೩] ಸಿದ್ಧಾಂತ.[೪] ಆದ್ದರಿಂದ ಸಮಾಹಿತಚಿತ್ತದ ಕವಿಗಳೆಲ್ಲರನ್ನೂ ಅವನು ಹೆಲಿಕಾನ್ ಶಿಖರದಿಂದ[೫] ಹೊರದೂಡುತ್ತಾನೆ. ಈ ಕಾರಣಕ್ಕಾಗಿ ನಮ್ಮ ಭಾವೀಕವಿಗಳ ಒಂದು ದೊಡ್ಡ ಸಮೂಹಕ್ಕೆ ಸಮೂಹವೇ ಗಡ್ಡ ಬಿಟ್ಟು, ಉಗುರು ಬೆಳೆಸಿ, ನಿರ್ಜನ ಪ್ರದೇಶಗಳನ್ನು ಆಶ್ರಯಿಸಿ, ಸಾರ್ವಜನಿಕ ಸ್ನಾನಗೃಹಗಳಿಂದ ದೂರವಾಗಿದೆ. ಮೂರು ಪಟ್ಟು ಅಂತಿಸಿರಸ್ ಹೆಲ್ಲೆಬೋರಿನಿಂದ[೬] ಗುಣಪಡಿಸಲಾಗದ ಅಮೂಲ್ಯವಾದ ತಲೆಗಳನ್ನು ನಾಪಿತ ಲಿಸಿನಸನಿಗೆ[೭] ಮಾತ್ರ ಒಪ್ಪಿಸದಿದ್ದರೆ ಸಾಕು, ಅದರಿಂದ ಅವರಿಗೆ ಕವಿಗಳೆಂಬ ಬಿರುದು ಗೌರವಗಳು ಸಿಗುತ್ತವೆ ಎಂದು ಅವರ ಭಾವನೆ. ಪ್ರತಿ ವಸಂತದಲ್ಲಿಯೂ ಪಿತ್ತವನ್ನು ವಿರೇಚನೆ ಮಾಡಿಸಿಕೊಳ್ಳುತ್ತಿರುವ ನಾನು ಎಂಥ ದಡ್ಡ! ಹಾಗೆ ಮಾತ್ರ ಮಾಡಿಕೊಳ್ಳದೆ ಇದ್ದಿದ್ದರೆ ಕವಿತೆಯಲ್ಲಿ ನನ್ನನ್ನು ಮೀರಿಸಲು ಯಾರಿಗೂ ಸಾಧ್ಯವಾಗುತ್ತಿರಲಿಲ್ಲ. ಒಟ್ಟಿನಲ್ಲಿ ಅದರಿಂದ ಯಾವ ಪ್ರಯೋಜನವೂ ಇಲ್ಲ. ಆದ್ದರಿಂದ ನಾನು ಈಗ

---

೧. ಕಾಲ್ಪುರ್ನಿಯಸ್ ಕುಲಕ್ಕೆ ಸೇರಿದ್ದ ಪಿಸೋಸರು ನುಮನ ಮಗ ಕಾಲ್ಪುಸನನ್ನು ತಮ್ಮ ಕುಲದ ಮೂಲಪುರುಷನೆಂದು ಭಾವಿಸಿದ್ದರು. ಆದ್ದರಿಂದ ರೋಮನರ ಉತ್ಕೃಷ್ಟ ಕುಲಕ್ಕೆ ಸೇರಿದ ಅವರನ್ನು ರಾಷ್ಟ್ರೀಯ ಸಾಹಿತ್ಯದ ಉದ್ಧಾರಕ್ಕೆ ಕಂಕಣ ತೊಡುವಂತೆ ಹೊರೆಸನು ಸಲಹೆ ಕೊಡುತ್ತಿದ್ದಾನೆ.

೨. ಲೋಹದ ಪ್ರತಿಮೆಯ ನುಣುಪನ್ನು ಶಿಲ್ಪಿ ಪರೀಕ್ಷಿಸುತ್ತಿದ್ದ ರೀತಿಯನ್ನು ಹೊರೆಸನು ಇಲ್ಲಿ ಸಾಹಿತ್ಯಕ್ಕೆ ಅನ್ವಯಿಸಿದ್ದಾನೆ.

೩. ಕ್ರಿ. ಪೂ. ಐದನೆಯ ಶತಕದ ಗ್ರೀಕ್ ದಾರ್ಶನಿಕ.

೪. ಹೋಲಿಸಿ—"ಕಾವ್ಯಕರ್ಮಣಿ ಕವೇಃ ಸಮಾಧಿಃ ಪರಂ ವ್ಯಾಪ್ರಿಯತೇ ಇತಿ ಶ್ಯಾಮದೇವಃ. ಅಭ್ಯಾಸ ಇತಿ ಮಂಗಲಃ. ಸಾ (ಶಕ್ತಿಃ) ಕೇವಲಂ ಕಾವ್ಯೇ ಹೇತುಃ ಇತಿ ಯಾಯಾವರೀಯಃ"—ರಾಜಶೇಖರ. ಪೂ. ೧೧.

೫. ಕಾವ್ಯ, ಕಲಾಭಿಮಾನಿ ದೇವಿಯರ ವಾಸಸ್ಥಾನ.

೬. ಹುಚ್ಚು ಮುಂತಾದ ಮೆದುಳಿನ ರೋಗಗಳಿಗೆ ಪ್ರಾಚೀನ ವೈದ್ಯಗ್ರಂಥಗಳಲ್ಲಿ ಹೇಳಿದ್ದ ಔಷಧಿ. ಫೋಕಿಸಿನ ಅಂತಿಸಿರಸ್ ಪ್ರದೇಶದಲ್ಲಿ ಈ ಬೇರು ಬಹಳ ಸಿಗುತ್ತಿತ್ತು.

೭. ಇವನನ್ನು ಕುರಿತ ನಾಣ್ನುಡಿಯೊಂದನ್ನು ಪ್ರಾಚೀನ ಪಂಡಿತನೊಬ್ಬನು ಈ ರೀತಿ ಉಲ್ಲೇಖಿಸಿದ್ದಾನೆ: "ಲಿಸಿನಸನ ಸಮಾಧಿ ಅಮೃತಶಿಲೆಯದು. ಕೇಟೋಗೆ ಸ್ಮಾರಕವೇ ಇಲ್ಲ. ಪಾಂಪೆಯದು ಬಹಳ ಸಾಮಾನ್ಯವಾದುದು. ದೇವತೆಗಳನ್ನು ಯಾರು ನಂಬಬಹುದು?"

ಸಾಣೆಯ ಕೆಲಸವನ್ನು ವಹಿಸುತ್ತೇನೆ.೧ ಸಾಣೆಕಲ್ಲಿಗೆ ಸ್ವತಃ ಕತ್ತರಿಸುವ ಶಕ್ತಿಯಿಲ್ಲದಿದ್ದರೂ ಕಬ್ಬಿಣವನ್ನು ಹರಿತಮಾಡುವ ಶಕ್ತಿ ಇದೆ. ನಾನು ಸ್ವಂತವಾಗಿ ಏನನ್ನೂ ಬರೆಯದಿದ್ದರೂ ಕವಿಗೆ ಅವನ ಕಾರ್ಯ ಮತ್ತು ಕರ್ತವ್ಯಗಳನ್ನು—ಎಂದರೆ, ಅವನು ವಿಷಯಗಳನ್ನು ಎಲ್ಲಿಂದ ಸಂಗ್ರಹಿಸಬೇಕು; ಯಾವುದು ಅವನನ್ನು ಪೋಷಿಸಿ, ಬೆಳೆಸುತ್ತದೆ; ಯಾವುದು ಅವನಿಗೆ ಅನುರೂಪವಾದುದು, ಯಾವುದು ಅಲ್ಲ; ಗುಣದ ಮಾರ್ಗ ಯಾವುದು, ದೋಷದ ಹಾದಿ ಯಾವುದು—ಇವುಗಳನ್ನು ತಿಳಿಸುತ್ತೇನೆ.೨

[೩೦೯–೩೨೨. ಸತ್ಕಾವ್ಯದ ಆಧಾರ ವಿವೇಕ]

ವಿವೇಕವೇ ಸತ್ಕಾವ್ಯದ ಮೂಲ ಮತ್ತು ಮುಖ್ಯ ಆಧಾರ.೩ ಸೊಕ್ರೆಟಿಸನ ಸಂಭಾಷಣೆಗಳು ನಿನಗೆ ವಿಷಯವನ್ನು ಒದಗಿಸುತ್ತವೆ.೪ ವಿಷಯವು ಸಿದ್ಧವಾದ ಕೂಡಲೇ ಶಬ್ದಗಳು ಸಹಜವಾಗಿ ನಿರಾಯಾಸವಾಗಿ ಅನುಸರಿಸಿ ಬರುತ್ತವೆ. ದೇಶಕ್ಕೆ ಮತ್ತು ಸ್ನೇಹಿತರಿಗೆ ತಾನು ಸಲ್ಲಿಸಬೇಕಾದುದು ಏನು; ತಂದೆತಾಯಿಗಳಿಗೆ,

---

೧. ಇದೇ ಸಾದೃಶ್ಯವನ್ನು ಪ್ರಾಚೀನ ಗ್ರೀಕ್ ಭಾಷಣಕಾರ ಐಸೊಕ್ರೆಟಸನು ಕೊಟ್ಟಿದ್ದಾನೆ.

೨. ಹೋಲಿಸಿ–ಸ್ವಾಮೀ ಮಿತ್ರಂ ಚ ಮಂತ್ರೀ ಚ ಶಿಷ್ಯಶ್ಚಾಚಾರ್ಯ ಏವ ಚ|
ಕವೇರ್ಭವತಿ ಹೀ ಚಿತ್ರಂ ಕಿಂ ಹಿ ತದ್ಯನ್ನ ಭಾವಕಃ || ರಾಜಶೇಖರ.
ಪು. ೧೫.

೩. ವಿವೇಕ–Sapientia, Wisdom–ಎಂದರೆ ಪರಮೋಚ್ಚವಾದ ನೀತಿತತ್ವಗಳು ಮತ್ತು ನಿರ್ದುಷ್ಟವಾದ ಸದಸತ್ ವಿವೇಚನಾಶಕ್ತಿ. ಒಳ್ಳೆಯ ವಾಗ್ಮಿಯಾಗಬೇಕಾದವನಿಗೆ ಇರಬೇಕಾದ ಮುಖ್ಯ ಗುಣ ಸ್ವಾಭಾವಿಕವಾದ ಈ ವಿವೇಕ ಎಂದು ಸಿಸಿರೋ ಹೇಳುತ್ತಾನೆ. "ಭಾಷಣ ಕೌಶಲವಿರುವ ಸದ್ವ್ಯಕ್ತಿಯೇ ವಾಗ್ಮಿ" ಎಂದು ಕೇಟೋ ಲಕ್ಷಣ ರಚಿಸಿದ್ದಾನೆ. "ಮೊದಲು ಸತ್ಪುರುಷನಾಗದೆ ಸತ್ಕವಿಯಾಗುವುದು ಸಾಧ್ಯವೆ ಇಲ್ಲ" ಎಂದು ಸ್ಟ್ರಾಬೋ. ಇದನ್ನೇ ಲಾಂಗಿನಸನು "ನಿಜವಾದ ವಾಕ್ಶಕ್ತಿಯುಳ್ಳವರು ಅಧಮ ಭಾವನೆಗಳಿಂದ ದೂರವಿರುವಂತಾಗಲು, ಈ ಔನ್ನತ್ಯದ ಮೂಲವನ್ನು ಸೂಚಿಸುವುದು ಅತ್ಯಂತ ಅವಶ್ಯಕ. ಇಡೀ ಜೀವನವೆಲ್ಲಾ ಅಧಮವಾದ, ನೀಚವಾದ ಭಾವನೆ ಉದ್ದೇಶಗಳನ್ನು ಹೊಂದಿರುವ ಜನ ಪ್ರಶಂಸೆಗೆ ಪಾತ್ರವಾಗುವ, ಅಮರತ್ವಕ್ಕೆ ಯೋಗ್ಯವಾಗುವ ಯಾವೊಂದನ್ನು ರಚಿಸುವುದೂ ಸಾಧ್ಯವಾಗದ ವಿಷಯ. ನಾವು ಮಹಾವಾಕ್ಯಗಳನ್ನು ಗಂಭೀರ ಭಾವನೆಗಳಿರುವವರ ಬಾಯಿಂದ ಮಾತ್ರ ನಿರೀಕ್ಷಿಸುತ್ತೇವೆ" ಎಂದು ಹೇಳುತ್ತಾನೆ. (ಔನ್ನತ್ಯವಿಚಾರಚರ್ಚೆ. ix. 3). ಯಶವನ್ನು ತರುವ ಕೃತಿಗಳನ್ನು ಬರೆಯಬೇಕೆಂದಿರುವವನ ಬದುಕೇ ಒಂದು ನಿಜವಾದ ಕಾವ್ಯವಾಗಿರಬೇಕೆಂದು ಮಿಲ್ಟನ್ ಅಭಿಪ್ರಾಯ ಪಟ್ಟಿದ್ದಾನೆ. ಇವುಗಳ ಸಂಗಡ ನಮ್ಮ "ನಾನೃಷಿಃ ಕುರುತೇ ಕಾವ್ಯಂ" ಎಂಬ ಸೂಕ್ತಿಯನ್ನೂ ಹೋಲಿಸಬಹುದು.

೪. ನಿಜವಾದ ವಿವೇಕವನ್ನು ಗಳಿಸಬೇಕಾದಲ್ಲಿ ತತ್ವಶಾಸ್ತ್ರದ ಅಧ್ಯಯನವೊಂದೇ ಮಾರ್ಗವೆಂದು ಹೊರೆಸನು ಫ್ಲೋರಸನಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾನೆ. ಸಿಸಿರೋ ಕೂಡ ತನ್ನ ವಾಗ್ಮಿತೆ ಸ್ಫೂರ್ತಿ ಪಡೆದುದು ಅಕಾಡೆಮಿಯ (ಎಂದರೆ, ತತ್ವಶಾಸ್ತ್ರದ) ಉದ್ಯಾನಗಳಿಂದಲೇ ವಿನಾ ಅಲಂಕಾರಿಕರ ಕಾರ್ಖಾನೆಗಳಿಂದಲ್ಲ ಎಂದಿದ್ದಾನೆ.

ಒಡಹುಟ್ಟಿದವನಿಗೆ, ಅತಿಥಿಗೆ ತೋರಿಸಬೇಕಾದ ಪ್ರೀತ್ಯಾದರಗಳು ಎಂಥವು; ಶಾಸಕನ ಮತ್ತು ನ್ಯಾಯಾಧೀಶನ ಕರ್ತವ್ಯಗಳು ಯಾವುವು; ಯುದ್ಧದಲ್ಲಿ ಸೇನಾಪತಿಯಾಗಿ ನಿಯೋಜಿತನಾಗಿರುವವನ ಹೊಣೆ ಏನು—ಇವೆಲ್ಲವನ್ನೂ ಅರಿತಿರುವವನು ಪ್ರತಿಯೊಂದು ಪಾತ್ರಕ್ಕೂ ಅದಕ್ಕೆ ಅನುರೂಪವಾದ ಭಾಷಾಶೈಲಿಯನ್ನು ರಚಿಸಬಲ್ಲ ಎಂದು ನನಗೆ ದೃಢವಾದ ನಂಬಿಕೆ ಇದೆ. ಕುಶಲನೆಂಬ ಹೆಸರನ್ನು ಸಂಪಾದಿಸಬೇಕೆನ್ನುವ ಕಲೆಗಾರನು ವಾಸ್ತವಿಕ ಜೀವನದ ಮತ್ತು ಅದರ ನಡೆ ನುಡಿಗಳ ರೂಪರೇಖೆಗಳನ್ನು ಮಾದರಿಯಾಗಿಟ್ಟುಕೊಂಡು, ಅದರ ಆಧಾರದ ಮೇಲೆ ನಿಜ ಜೀವನವನ್ನು ಹೋಲುವ ಭಾಷಾಶೈಲಿಯನ್ನು ರಚಿಸುವಂತೆ ನಾನು ಅವನಿಗೆ ಸಲಹೆ ನೀಡುತ್ತೇನೆ.[೧] ನಾಟಕವೊಂದರ ವಸ್ತುಸಂವಿಧಾನದಲ್ಲಿ ಸೌಂದರ್ಯ, ಶಕ್ತಿ, ಅಥವಾ ಕೌಶಲಗಳು ಇಲ್ಲದಿದ್ದರೂ, ಅದರ ಭಾವನೆಗಳು ಸಾಧಾರಣವಾಗಿದ್ದು ಪಾತ್ರಗಳು ಚೆನ್ನಾಗಿ ಚಿತ್ರಿತವಾಗಿದ್ದಲ್ಲಿ, ಅದು ಜನಗಳ ಮೆಚ್ಚಿಗೆಯನ್ನು ಗಳಿಸುತ್ತದೆ, ಮತ್ತು ಅವರ ಚಿತ್ತವನ್ನು ಆಕರ್ಷಿಸುವುದರಲ್ಲಿ ಕಿಣಿಕಿಣಿನಾದದ ಅರ್ಥಹೀನ ಬೆಡಗು ಪಂಕ್ತಿಗಳಿಗಿಂತಲೂ ಹೆಚ್ಚು ಸಮರ್ಥವಾಗುತ್ತದೆ.

[೩೨೩–೩೩೩. ಗ್ರೀಕರು ಮತ್ತು ರೋಮನರು]

ಗ್ರೀಕರಿಗೆ ಸಹಜವಾದ ಪ್ರತಿಭೆಯೂ, ನಿಜವಾದ ವಾಕ್ಸಂಪತ್ತೂ ಇದ್ದುವು. ಅವು ಕಾವ್ಯದೇವತೆ (Muse) ಅವರಿಗಿತ್ತ ವರ. ಅವರ ಏಕೈಕ ಆಸೆ ಖ್ಯಾತಿಯಾಗಿದ್ದಿತು. ರೋಮನರಾದರೋ ಉದ್ದುದ್ದವಾದ ಗಣಿತ ಪ್ರಕ್ರಿಯೆಗಳಿಂದ ನಾಣ್ಯದ ಮೂಲಾಂಶವನ್ನು ನೂರಾಗಿ ವಿಭಾಗಿಸುವ ವಿಧಾನವನ್ನು ಬಾಲ್ಯದಿಂದಲೇ ಕಲಿಯಲು ಪ್ರಾರಂಭಿಸುತ್ತಾರೆ. ದೃಷ್ಟಾಂತಕ್ಕೆ—

"ಅಲ್ಬಿನಸನ[೨] ಮಗನೇ, ಒಂದು ಪಂಚಕದಿಂದ ಒಂದು ಉಂಚಿಯವನ್ನು ಕಳೆದರೆ ಉಳಿಯುವುದೆಷ್ಟು? ನಿನಗೆ ಗೊತ್ತಿರಬೇಕಲ್ಲಾ? ಬೇಗ ಹೇಳು." ಇದು ಪ್ರಶ್ನೆ.

"ಒಂದು ತ್ರಿಯನ್ಸ್." ಉತ್ತರ ಕೂಡಲೇ ಬರುತ್ತದೆ.

---

೧. ಹೋಲಿಸಿ—ಲೋಕಸಿದ್ಧಂ ಭವೇತ್ ಸಿದ್ಧಂ ನಾಟ್ಯಂ ಲೋಕಸ್ವಭಾವಜಂ ।
ತಸ್ಮಾತ್ ನಾಟ್ಯಪ್ರಯೋಗೇ ತು ಪ್ರಮಾಣಂ ಲೋಕ ಇಷ್ಯತೇ ॥೧೧೩.
ಏವಂ ಲೋಕಸ್ಯ ಯಾ ವಾರ್ತಾ ನಾನಾವಸ್ಥಾಂತರಾತ್ಮಿಕಾ ।
ಸಾ ನಾಟ್ಯೇ ಸಂವಿಧಾತವ್ಯಾ ನಾಟ್ಯವೇದವಿಚಕ್ಷಣೈಃ ॥ ೧೧೬.
ನಾನಾಶೀಲಾಃ ಪ್ರಕೃತಯಃ ಶೀಲೇ ನಾಟ್ಯಂ ಪ್ರತಿಷ್ಠಿತಂ
ತಸ್ಮಾಲ್ಲೋಕಪ್ರಮಾಣಂ ಹಿ ಕರ್ತವ್ಯಂ ನಾಟ್ಯಯೋಕ್ತೃಭಿಃ ॥ ೧೧೯.
—ಭರತನಾಟ್ಯಶಾಸ್ತ್ರ. XXVI.

೨. ಇವನು ಒಬ್ಬ ಲೇವಾದೇವಿ ಮಾಡುತ್ತಿದ್ದ ಸಾಹುಕಾರ.

"ಭೇಷ್! ನೀನು ನಿನ್ನ ಆಸ್ತಿಯನ್ನು ಕಾಪಾಡಿಕೊಳ್ಳಬಲ್ಲೆ. ಅದಕ್ಕೆ ಒಂದು ಉಂಚಿಯವನ್ನು ಸೇರಿಸಿದರೆ ಎಷ್ಟಾಗುತ್ತದೆ?"

"ಒಂದು ಸೆಮಿಸ್."೧

ತಾಮ್ರದ ಈ ಬಣ್ಣ ಮತ್ತು ದುಡ್ಡು ಕೂಡಿಸುವ ಈ ಅಲ್ಪ ಬುದ್ಧಿ ನಮ್ಮ ಹೃದಯವನ್ನು ಆವರಿಸಿರುವಾಗ, ಸೈಡರ್ ತೈಲವನ್ನು ಲೇಪಿಸಿ, ಸೈಪ್ರೆಸ್ ಮರದ ಪೆಟ್ಟಿಗೆಗಳಲ್ಲಿ೨ ಇಡುವಂತಹ ಯೋಗ್ಯತೆಯುಳ್ಳ ಕಾವ್ಯಗಳ ರಚನೆಯ ಆಸೆ ತಾನೇ ನಮಗೆ ಎಲ್ಲಿಯದು?

[೩೩೪-೩೪೬ ಕಾವ್ಯದ ಗುರಿ]

ಕವಿಗಳ ಗುರಿ ಉಪದೇಶ ನೀಡುವುದೋ, ಅಥವಾ ಆಹ್ಲಾದ ಕೊಡುವುದೋ, ಅಥವಾ ಪ್ರಿಯವಾದುದನ್ನೂ ಲೋಕಪ್ರಯೋಜಕವಾದುದನ್ನೂ ಏಕಕಾಲದಲ್ಲಿ ಕೊಡುವುದೋ ಆಗಿರುತ್ತದೆ.೩ ನೀವು ಉಪದೇಶ ನೀಡುವಾಗ ಹ್ರಸ್ವವಾಗಿರಿ, ಏಕೆಂದರೆ ಆಗ ನೀವು ಹೇಳಿದ್ದನ್ನು ಶ್ರೋತೃಗಳ ಬುದ್ಧಿಯು ಶೀಘ್ರವಾಗಿ ಗ್ರಹಿಸಿ, ಅದರ ತತ್ವವನ್ನು ಅರಿತು, ಯಥಾವತ್ತಾಗಿ ಜ್ಞಾಪಕದಲ್ಲಿಡಲು ಅದು ಸಹಾಯಕ ವಾಗಿರುತ್ತದೆ. ತುಂಬಿದ ಕೊಡದಿಂದ ಹೆಚ್ಚಿನ ನೀರು ಚೆಲ್ಲಿ ಹೋಗುವಂತೆ, ತುಂಬಿದ ಮನಸ್ಸಿನಿಂದಲೂ ಅನುಪಯುಕ್ತವಾದ ಪ್ರತಿಯೊಂದು ಪದವೂ ಚೆಲ್ಲಿ ಹೋಗುತ್ತದೆ. ನೀವು ರಚಿಸಿರುವ ಕಲ್ಪಿತ ಸಂಗತಿಗಳು ರಂಜನೆ ನೀಡಬೇಕಾದಲ್ಲಿ ಅವು ಸಾಧ್ಯವಾದ ಮಟ್ಟಿಗೂ ನಿಜ ಜೀವನದ ಸಂಗತಿಗಳನ್ನು ಹೋಲಬೇಕು. ನಾಟಕವು ಪ್ರೇಕ್ಷಕನಿಂದ ಮೇರೆ ಮೀರಿದ ನಂಬಿಕೆಯನ್ನು ಅಪೇಕ್ಷಿಸಬಾರದು. ಆಗತಾನೇ ಶಿಶುವೊಂದನ್ನು ತಿಂದು ತೇಗುತ್ತಿರುವ ರಾಕ್ಷಸಿ ಲೇಮಿಯಳ೪ ಹೊಟ್ಟೆಯಿಂದ ಆ ಶಿಶುವನ್ನು ಜೀವಂತವಾಗಿರುವಂತೆ ಹೊರತರಬಾರದು. ಉಪಯುಕ್ತವಾದ ನೀತಿಬೋಧೆಯಿಲ್ಲದ ಕಾವ್ಯವನ್ನು ವೃದ್ಧ ಶಾಸಕರ ಸಮೂಹವು ತಿರಸ್ಕರಿಸುತ್ತದೆ.೫ ನಿಸ್ಸತ್ತ್ವವಾದ

೧. ಪಂಚಕ, ಉಂಚಿಯ, ತ್ರಿಯನ್ಸ್, ಸೆಮಿಸ್ ಇವೆಲ್ಲವೂ ರೋಮನ್ ನಾಣ್ಯಗಳ ಹೆಸರುಗಳು. ಹೊರೇಸನು ಇಲ್ಲಿ ವರ್ಣಿಸಿರುವುದು ರೋಮನ್ ಸ್ಕೂಲಿನ ಪಾಠಕ್ರಮದ ಒಂದು ದೃಶ್ಯ.

೨. ಹುಳುಹೊಡೆದು ನಾಶವಾಗದಂತೆ ಪದಾರ್ಥಗಳನ್ನು ರಕ್ಷಿಸುತ್ತಿದ್ದ ಕ್ರಮ ಇದೆಂದು ಪ್ಲಿನಿ ಎಂಬ ಪ್ರಾಚೀನ ರೋಮನ್ ಲೇಖಕ ಹೇಳಿದ್ದಾನೆ.

೩. ಎಂದರೆ ನೀತಿಬೋಧೆ ಅಥವಾ ಆನಂದ, ಅಥವಾ ಆನಂದವನ್ನು ನೀಡಿ ಜೀವನಕ್ಕೆ ಉಪಯುಕ್ತವಾದುದನ್ನೂ ಹಿತವಾಗಿ ಉಪದೇಶಿಸುವುದು. ಕಾವ್ಯವು ಜನಗಳ ಮನಸ್ಸನ್ನು ತತ್ತ್ವಾಭ್ಯಾಸಕ್ಕೆ ಆಕರ್ಷಿಸುವ ಒಂದು ಸಾಧನ ಮಾತ್ರ ಎಂದು ಲುಕ್ರಿಷಸ್ (I. ೯೩೬-೫೦) ಹೇಳುತ್ತಾನೆ. ಇದು ಎಲ್ಲ ರೋಮನರಿಗೂ ಸಮ್ಮತವಾಗಿದ್ದ ಭಾವನೆ.

೪. ಹೆಂಗಸಿನ ಮುಖ, ಕತ್ತೆಯ ಕಾಲುಗಳಿದ್ದ ಒಬ್ಬ ರಾಕ್ಷಸಿ.

೫. ಹೋಲಿಸಿ—ಕಾವ್ಯಂ ಹೃದಯಸಂವಾದಿ ಸತ್ಯಪ್ರತ್ಯಯ ನಿಶ್ಚಯಾತ್ |
ತತ್ತ್ವೋಚಿತಾಭಿಧಾನೇನ ಯಾತ್ಯುಪಾದೇಯತಾಂ ಕವೇಃ ‖ ಕ್ಷೇಮೇಂದ್ರ. ೩೦.

ಕಾವ್ಯವನ್ನು ಪ್ರತಿಷ್ಠಿತ ಯೋಧವರ್ಗವು ಮೆಚ್ಚುವುದಿಲ್ಲ. ಪ್ರಯೋಜನ ಮತ್ತು ಆನಂದಗಳನ್ನು ಮೇಳಯಿಸಿ, ಶ್ರೋತೃವಿಗೆ ನೀತಿ ಮತ್ತು ಪ್ರೀತಿಗಳನ್ನು ಏಕ ಕಾಲದಲ್ಲಿ ಕೊಡುವ ಕವಿಯು ಎಲ್ಲರ ಪ್ರಶಂಸೆಯನ್ನು ಗಳಿಸುತ್ತಾನೆ.೧ ಅಂತಹ ಕಾವ್ಯವು ಪ್ರಕಾಶಕರಿಗೆ ಹಣವನ್ನು ಸಂಪಾದಿಸಿಕೊಡುತ್ತದೆ, ಸಾಗರವನ್ನು ದಾಟುತ್ತದೆ,೨ ಮತ್ತು ಕವಿಯ ಕೀರ್ತಿಗೆ ದೀರ್ಘಾಯುಷ್ಯವನ್ನು ನೀಡುತ್ತದೆ.೩

[೩೪೭-೩೬೫ ಕಾವ್ಯದೋಷಗಳು]

ದೋಷಗಳಲ್ಲಿ ಕೆಲವನ್ನು ನಾವು ಹೃತ್ಪೂರ್ವಕವಾಗಿ ಕ್ಷಮಿಸಬಹುದು, ಏಕೆಂದರೆ ಮನಸ್ಸು ಮತ್ತು ಕೈಗಳು ಉದ್ದೇಶಿಸಿದ ನಾದವನ್ನು ತಂತಿಯು ಎಲ್ಲ ಕಾಲದಲ್ಲಿಯೂ ಕೊಡುವುದಿಲ್ಲ. ಮಂದ್ರವನ್ನು ಮೀಟಿದಾಗ ಅನೇಕವೇಳೆ ತಾರವು ನುಡಿಯುತ್ತದೆ. ಬಿಲ್ಲುಗಾರನು ಪ್ರತಿಸಲವೂ ತನ್ನ ಲಕ್ಷ್ಯವನ್ನು ಹೊಡೆಯಲಾರ. ವಸ್ತುತಃ ಕಾವ್ಯವೊಂದರ ಅಧಿಕ ಭಾಗ ಸುಂದರವಾಗಿದ್ದು, ಅಜಾಗರೂಕತೆಯಿಂದ ಒದಗಿದ ಅಥವಾ ಮಾನವನ ಅಲ್ಪಶಕ್ತಿಯಿಂದ ಅಪರಿಹಾರ್ಯವಾಗಿ ಒದಗಿದ ಕೆಲವು ದೋಷಗಳು ಅದರಲ್ಲಿದ್ದರೆ, ಅದಕ್ಕಾಗಿ ನನಗೆ ಕೋಪಬರುವುದಿಲ್ಲ.

ಹಾಗಾದರೆ ಈ ವಿಷಯದಲ್ಲಿ ನಮ್ಮ ಸಿದ್ಧಾಂತವೇನು? ಯಾವನಾದರೂ ಒಬ್ಬ ನಕಲು ತಯಾರಿಸುವವನು ಪದೇ ಪದೇ ಎಚ್ಚರಿಸುತ್ತಿದ್ದರೂ ಅದೇ ತಪ್ಪನ್ನೇ ಮತ್ತೆಮತ್ತೆ ಮಾಡುತ್ತಿದ್ದರೆ ಅವನು ಕ್ಷಮಿಸಲರ್ಹನಲ್ಲ. ಒಬ್ಬ ಹಾರ್ಪ್‌ವಾದಕನು ಒಂದೇ ತಂತಿಯ ಮೇಲೆ ಸದಾ ತಪ್ಪು ನುಡಿಸುತ್ತಿದ್ದರೆ, ಅವನು ನಗೆಗೀಡಾಗುತ್ತಾನೆ. ಈ ರೀತಿಯಲ್ಲಿಯೇ ಸದಾ ತಪ್ಪುಮಾಡುವ ಲೇಖಕನು ನನಗೆ ಎರಡನೆ ಖೊರಿಲಸ

---

೧. ಹೋಲಿಸಿ—ಪ್ರೀತಿಂ ಕರೋತಿ ಕೀರ್ತಿಂ ಚ ಸಾಧುಕಾವ್ಯನಿಬಂಧನಂ॥
ಭಾಮಹ I. ೨.

ಮಾತಱಿವಕ್ಕೆಲಬಜ್ಜಗ
ತೀತಳಗತಮನುಜರೊಳಗೆ ಮಾತಱಿವವರೊಳ್ |
ನೀತಿವಿದರಮಳಕವಿತಾ
ನೀತಿಯುತಕ್ಕೆಲರೆ ಪರಮಕವಿವೃಷಭಕ್ಕಳ್ ॥ ನೃಪತುಂಗ. I. ೧೭.

೨. ಹೋಲಿಸಿ—ಏಕಸ್ಯ ತಿಷ್ಠತಿ ಕವೇರ್ಗೃಹ ಏವ ಕಾವ್ಯಂ
ಅನ್ಯಸ್ಯ ಗಚ್ಛತಿ ಸುಹೃದ್ಭವನಾನಿ ಯಾವತ್ |
ನ್ಯಸ್ಯಾವಿದಗ್ಧವದನೇಷು ಪದಾನಿ ಶಶ್ವತ್
ಕಸ್ಯಾಪಿ ಸಂಚರತಿ ವಿಶ್ವಕುತೂಹಲೀವ ॥ ರಾಜಶೇಖರ. ಪು. ೧೩.

೩. ಹೋಲಿಸಿ—ಉಪೇಯುಷಾಮಪಿ ದಿವಂ ಸನ್ನಿಬಂಧವಿಧಾಯಿನಾಂ |
ಅಸ್ತ ಏವ ನಿರಾತಂಕಂ ಕಾಂತಂ ಕಾವ್ಯಮಯಂ ವಪುಃ ॥ ಭಾಮಹ. I. ೬.
ಕಾವ್ಯಮಯ್ಯೋ ಗಿರೋ ಯಾವಚ್ಚರಂತಿ ವಿಶದಾ ಭುವಿ |
ತಾವತ್ಸಾರಸ್ವತಂ ಸ್ಥಾನಂ ಕವಿರಾಸಾದ್ಯ ಮೋದತೇ ॥ ರಾಜಶೇಖರ. ಪು. ೨೭.

ನಂತೆ೧ ತೋರುತ್ತಾನೆ. ಅವನ ಕೃತಿಯಲ್ಲಿ ಅಪರೂಪಕ್ಕೆ ಕಾಣುವ ಒಂದೆರಡು ಒಳ್ಳೆಯ ಪಂಕ್ತಿಗಳೂ ನನಗೆ ಆಶ್ಚರ್ಯಪೂರ್ವಕವಾದ ನಗುವನ್ನೇ ಉಂಟು ಮಾಡುತ್ತವೆ. ಆದರೆ ಅದೇ ನಾನು ಪೂಜ್ಯ ಹೋಮರನೇನಾದರೂ ನಿದ್ದೆಯಿಂದ ಯಾವಾಗಲಾದರೂ ತಲೆಯಾಡಿಸಿದರೆ ಸಿಟ್ಟಿಗೇಳುತ್ತೇನೆ. ಆದರೂ ವಾಸ್ತವವಾಗಿ ದೀರ್ಘವಾದ ಕೃತಿಯೊಂದರಲ್ಲಿ ಕವಿಯು ಒಂದೊಂದು ಸಲ ನಿದ್ರಾವಶನಾಗುವುದು ಸಹಜವಾದುದೇ.

ಕಾವ್ಯವು ಚಿತ್ರಕಲೆಯನ್ನು ಹೋಲುತ್ತದೆ.೨ ಕೆಲವು ಕೃತಿಗಳು ನೀವು ಹತ್ತಿರ ಹೋದಷ್ಟೂ ನಿಮ್ಮ ಮನಸ್ಸನ್ನು ಸೆಳೆಯುತ್ತವೆ. ಇನ್ನು ಕೆಲವಕ್ಕೆ ನೀವು ಸ್ವಲ್ಪ ದೂರದಲ್ಲಿ ನಿಲ್ಲಬೇಕು. ಒಂದು ನೆರಳಿನಲ್ಲಿ ನೋಡಲು ಸರಿ. ಇನ್ನೊಂದು ವಿಮರ್ಶಕನ ತೀಕ್ಷ್ಣದೃಷ್ಟಿಗೆ ಹೆದರದೆ ಪ್ರಕಾಶವಾದ ಬೆಳಕನ್ನು ಅಪೇಕ್ಷಿಸುತ್ತದೆ. ಒಂದು ಒಂದುಸಲಕ್ಕೆ ಮಾತ್ರ ಆಹ್ಲಾದವೀಯುತ್ತದೆ; ಇನ್ನೊಂದು ಹತ್ತು ಸಲವಾದರೂ ಇನ್ನೂ ರಮ್ಯವಾಗಿಯೇ ತೋರುತ್ತಿರುತ್ತದೆ.

[೩೬೬—೩೯೦. ಕಾವ್ಯರಚನೆ]

ಅಯ್ಯಾ ಜ್ಯೇಷ್ಠ ಯುವಕ,೩ ನೀನು ನಿಮ್ಮ ತಂದೆಯಿಂದ ಸರಿಯಾದ ಮಾರ್ಗ ದಲ್ಲಿ ಶಿಕ್ಷಣ ಪಡೆದಿರುವೆ, ಮತ್ತು ಸಹಜವಾದ ಸ್ವಂತ ವಿವೇಚನೆಯನ್ನೂ ಹೊಂದಿ ರುವೆ. ಆದರೂ ನಾನು ಹೇಳುವುದನ್ನು ಕೇಳು. ಅದನ್ನು ಯಾವಾಗಲೂ ಗಮನ ದಲ್ಲಿಡು. ಮಧ್ಯಮಗುಣದವಕ್ಕೆ, ಸಾಮಾನ್ಯಗುಣದವಕ್ಕೆ ಅವಕಾಶ, ಪುರಸ್ಕಾರ ಇರುವುದು ಕೆಲವು ವಿಷಯಗಳಲ್ಲಿ ಮಾತ್ರವೇ. ದೃಷ್ಟಾಂತಕ್ಕೆ, ಸಾಮಾನ್ಯವಾದ ಕೇಸುಗಳನ್ನು ನಡೆಸುವ ಎರಡನೆ ದರ್ಜೆ ಲಾಯರೊಬ್ಬನಿಗೆ ಮೆಸ್ಸಲಸನ೩ ವಾಗ್ವೈಭವ ವಾಗಲೀ ಕಾಸ್ಕೆಲ್ಲಿಯಸ್ ಔಲಸನ೪ ನ್ಯಾಯಪಾಂಡಿತ್ಯವಾಗಲೀ ಇಲ್ಲ. ಆದರೆ ಅವನಿಗೆ ಒಂದು ಬೆಲೆ ಇದೆ. ಆದರೆ ಕವಿಗಳಲ್ಲಿ ಮಾತ್ರ ಮಧ್ಯಮಗುಣವನ್ನು ದೇವತೆಗಳಾಗಲೀ, ಮನುಷ್ಯರಾಗಲೀ, ಕೊನೆಗೆ ಗ್ರಂಥಪ್ರಕಾಶಕರಾಗಲೀ ಅನುಮೋದಿಸುವುದಿಲ್ಲ.

---

೧. ಅಲೆಕ್ಸಾಂಡರನ ಪ್ರೀತಿಗೆ ಪಾತ್ರನಾಗಿದ್ದ ಒಬ್ಬ ಕುಕವಿ.

೨. ಕ್ರಿ. ಪೂ. ಆರನೆಯ ಶತಕದ ಗ್ರೀಕ್ ಕವಿ ಸಿಮೊನಿದೆಸನು "ಕಾವ್ಯ ನುಡಿಚಿತ್ರ, ಚಿತ್ರ ಮೂಕಕಾವ್ಯ" ಎಂದಿದ್ದನು. ಪ್ಲೂಟಾರ್ಕನು ತನ್ನ ವಿಮರ್ಶಾ ಪ್ರಬಂಧ ವೊಂದರಲ್ಲಿ ಇದನ್ನು ಉಲ್ಲೇಖಿಸುತ್ತಾನೆ. ಪ್ರಾಯಶಃ ಹೊರೆಸನ ಮನಸ್ಸಿನಲ್ಲಿಯೂ ಈ ವಾಕ್ಯವೇ ಇದ್ದಿರಬಹುದು.

೩. ಹೊರೆಸನು ಈ ಪತ್ರವನ್ನು ಮುಖ್ಯವಾಗಿ ಬರೆದುದು ಪಿಸೋವಿನ ಹಿರಿಯ ಮಗನಿಗೆ. ಈ ಯುವಕನು ಸ್ಪೆಯಿನಿನಲ್ಲಿ ಅಧಿಕಾರಿಯಾಗಿರುವಾಗ ದುರ್ಮರಣಕ್ಕೆ ಈಡಾದನು.

೪. ಸುಮಾರು ಕ್ರಿ. ಪೂ. ೬೪. ಪ್ರಸಿದ್ಧವಾಗ್ಮಿ ಸಿಸಿರೋ ಇವನ ಭಾಷಣಗಳನ್ನು ಪ್ರಶಂಸಿಸಿದ್ದಾನೆ. ಅನಂತರ ಕ್ವಿಂಟಿಲಿಯನನೂ ಇವನ ಶೈಲಿಯನ್ನು ಹೊಗಳಿದ್ದಾನೆ.

ಸಂತೋಷಸಮಾರಂಭಗಳ ರಸದೌತಣಗಳ ನಡುವೆ ಅಪಸ್ವರದ ಸಂಗೀತ, ಉತ್ಕೃಷ್ಟವಲ್ಲದ ಸುಗಂಧತೈಲ, ಸಾರ್ಡಿನಿಯದ ಕಹಿ ಜೇನುತುಪ್ಪದಲ್ಲಿ ಕಲಸಿದ ಗಸಗಸೆ ಬೀಜ, ಇವು ಅಸಹ್ಯವನ್ನುಂಟುಮಾಡುತ್ತವೆ, ಏಕೆಂದರೆ ಇವು ಯಾವುವೂ ಔತಣಕ್ಕೆ ಅವಶ್ಯಕವಲ್ಲ. ಈ ರೀತಿಯಲ್ಲಿಯೇ ಹೃದಯಾಹ್ಲಾದವೇ ಏಕೋದ್ದೇಶವಾಗುಳ್ಳ ಕಾವ್ಯವೂ ಕೂಡ ಉತ್ತಮೋತ್ತಮ ಮಟ್ಟಕ್ಕಿಂತ ಸ್ವಲ್ಪವೇ ಸ್ವಲ್ಪ ಕೆಳಕ್ಕೆ ಜಾರಿದರೂ ಅಧಃಪಾತಾಳಕ್ಕೆ ಬಿದ್ದುಬಿಡುತ್ತದೆ.[೧]

ಆಟಗಳ ಪರಿಚಯವಿಲ್ಲದವನು ಕ್ರೀಡಾರಂಗದ ಸ್ಪರ್ಧೆಗಳಲ್ಲಿ ಭಾಗವಹಿಸುವುದಿಲ್ಲ. ಚೆಂಡು, ಚಕ್ರ, ಅಥವಾ ಹಲ್ಲಿನ ರಾಟೆಗಳ ಪರಿಶ್ರಮವಿರದವನು, ನೆರೆದ ಜನ ಘೊಳ್ಳನೆ ನಕ್ಕಾರೆಂಬ ಭಯದಿಂದ, ಅವುಗಳ ತಂಟೆಗೆ ಹೋಗದೆ ಕೇವಲ ಪ್ರೇಕ್ಷಕನಾಗಿ ನಿಲ್ಲುತ್ತಾನೆ. ಆದರೆ ಪದ್ಯಗಳನ್ನು ಬರೆಯಲು ಗೊತ್ತಿರದವನು ಮಾತ್ರ ಕಾವ್ಯವನ್ನು ಬರದೇ ಬರೆಯುತ್ತಾನೆ!

"ಏಕೆ ಬರೆಯಬಾರದು? ಅವನು ಸ್ವತಂತ್ರವರ್ಗದವನಲ್ಲವೋ? ಸ್ವತಂತ್ರ ಕುಲದಲ್ಲಿ ಹುಟ್ಟಿಲ್ಲವೋ?[೨] ಅದಕ್ಕಿಂತಲೂ ಹೆಚ್ಚಾಗಿ ಅವನ ಆಸ್ತಿ ಯೋಧವರ್ಗದವನಿಗೆ ಇರಬೇಕಾದಷ್ಟು ಇದೆಯೆಂದಾಗಿಲ್ಲವೋ? ಅವನ ಚಾರಿತ್ರ್ಯ ನಿಷ್ಕಳಂಕವಾಗಿಲ್ಲವೋ?" ಎಂದು ನೀನು ಕೇಳಬಹುದು.

ಹೌದು, ಅದೆಲ್ಲವೂ ನಿಜ. ಆದರೆ ನಿನ್ನ ಮಟ್ಟಿಗೆ ಹೇಳುಬಹುದಾದರೆ, ನೀನು ಮಿನರ್ವಳು ಒಪ್ಪದೆ[೩] ಯಾವುದನ್ನೂ ಆಡುವುದೂ ಇಲ್ಲ, ಮಾಡುವುದೂ ಇಲ್ಲ. ನಿನ್ನ ಆದ್ಯ ನಿಯಮ, ನಿನ್ನ ನಿರ್ಧಾರ ಅಂತಹದು. ಆದರೂ ಮುಂದೆ ಯಾವಾಗಲಾದರೂ ನೀನು ಏನನ್ನಾದರೂ ಒಂದುವೇಳೆ ಬರೆದರೆ, ಅದನ್ನು ವಿಮರ್ಶಕ ಮೇಕಿಯಸ್,[೪] ನಿಮ್ಮ ತಂದೆ, ಮತ್ತು ನನ್ನ ಮುಂದೆ ಮೊದಲು ಓದು. ಅನಂತರ ನಿನ್ನ ಕೈಬರಹದ ಪ್ರತಿಯನ್ನು ಪೆಟ್ಟಿಗೆಯೊಳಗೆ ಇಟ್ಟು ಒಂಬತ್ತು ವರ್ಷ ಭದ್ರವಾಗಿ ಬೀಗಹಾಕಿಡು. ಪ್ರಕಟಿಸದಿರುವುದನ್ನು ನೀನು ಯಾವಾಗ ಬೇಕಾದರೂ ನಾಶಪಡಿಸ

---

೫. ಆಂಟೊನಿ ಮತ್ತು ಅಗಸ್ಟಸರನ್ನು ಬಹಿಷ್ಕರಿಸುವ ನ್ಯಾಯಪತ್ರವನ್ನು ಬರೆಯಲು ನಿರಾಕರಿಸಿದನು. ನ್ಯಾಯಪಾಂಡಿತ್ಯ, ವಾಕ್ ಸ್ವಾತಂತ್ರ್ಯ, ಚಾಟೂಕ್ತಿಗಳಿಗೆ ಹೆಸರಾಗಿದ್ದನು.

೧. ಹೋಲಿಸಿ–ತದಲ್ಪಮಪಿ ನೋಪೇಕ್ಷ್ಯಂ ಕಾವ್ಯೇ ದುಷ್ಟಂ ಕಥಂಚನ |
ಸ್ಯಾದ್ವಪುಃ ಸುಂದರಮಪಿ ಶ್ವಿತ್ರೇಣೈಕೇನ ದುರ್ಭಗಂ ‖ ದಂಡಿ. I. ೫.

೨. ಎಂದರೆ ಉಚ್ಚ ಕುಲದಲ್ಲಿ ಹುಟ್ಟಿದವನು. ದಾಸವರ್ಗದಲ್ಲಿ ಹುಟ್ಟಿ ಅನಂತರ ಸ್ವಾತಂತ್ರ್ಯವನ್ನು ಸಂಪಾದಿಸಿಕೊಂಡವನಲ್ಲ.

೩. ಎಂದರೆ, ನಿನ್ನ ಸ್ವಭಾವಕ್ಕೆ, ಸಹಜ ಪ್ರಕೃತಿಗೆ ವಿರುದ್ಧವಾದ. ಮಿನರ್ವ ಇಟಾಲಿಯನರ ಕಲೆಜ್ಞಾನಗಳ ಅಭಿಮಾನ ದೇವತೆ.

೪. ನಾಟಕಗಳು ಪ್ರದರ್ಶನಕ್ಕೆ ಯೋಗ್ಯವೇ ಅಲ್ಲವೇ ಎಂಬುದನ್ನು ನಿರ್ಧರಿಸಲು ಪಾಂಪೆಯಿಂದ ನಿಯೋಜಿತನಾಗಿದ್ದ ಒಬ್ಬ ಅಧಿಕಾರಿ ಇವನೆಂದು ಪ್ರಾಚೀನ ವ್ಯಾಖ್ಯಾನಕಾರನೊಬ್ಬ ಸೂಚಿಸಿದ್ದಾನೆ.

ಬಹುದು, ಆದರೆ ಹೊರಕ್ಕೆ ಹಾರಿಬಿಟ್ಟ ಮಾತನ್ನು ಗೂಡಿಗೆ ಹಿಂದಿರುಗಿಸುವ ಕಲೆ ಯಾವುದೂ ಇಲ್ಲ.

[೩೯೧—೪೦೭. ಕಾವ್ಯದ ಉಗಮ ಮತ್ತು ಮಹತ್ವ]

ಒಂದಾನೊಂದು ಕಾಲದಲ್ಲಿ ಮನುಷ್ಯರು ಕಾಡಿನಲ್ಲಿ ವಾಸಿಸುತ್ತಿದ್ದರು. ಆಗ ದೇವಸಂದೇಶಕ ಪೂಜ್ಯ ಆರ್ಫ್ಯೂಸನು ಅವರನ್ನು ಕೊಲೆ ಮತ್ತು ಹೇಯವಾದ ಜೀವನಮಾರ್ಗಗಳಿಂದ ನಿವರ್ತಿಸಿದನು. ಹುಲಿಗಳು ಮತ್ತು ಕ್ರೂರ ಸಿಂಹಗಳನ್ನು ಅವನು ಪಳಗಿಸಿದನೆಂಬ ಕಥೆಗಳಿಗೆ ಆಧಾರ ಇದೇ. ಹೀಗೆಯೇ ಥೀಬ್ಸಿನ ಸ್ಥಾಪಕ ಅಂಫಿಯನ್ ತನ್ನ ಲೈರ್ ವಾದನದಿಂದ ಕಲ್ಲುಗಳನ್ನು ಎಬ್ಬಿಸಿ, ತನ್ನ ಮೆಲು ನುಡಿಯ ಪ್ರಾರ್ಥನೆಗಳಿಂದ ಅವುಗಳನ್ನು ತನಗೆ ಬೇಕಾದ ಸ್ಥಳಗಳಿಗೆ ನಡೆಸಿಕೊಂಡು ಹೋದನೆಂದು ಹೇಳುತ್ತಾರೆ.೧ ವೈಯಕ್ತಿಕ ಮತ್ತು ಸಾರ್ವಜನಿಕ ಆಸ್ತಿಪಾಸ್ತಿಗಳ ಎಲ್ಲೆಗಳ ನಿರ್ಧಾರ; ಲೌಕಿಕ ಮತ್ತು ಧಾರ್ಮಿಕ ವಿಷಯಗಳ ವಿಭಾಗ;೨ ಸ್ತ್ರೀಪುರುಷರ ಸ್ವೇಚ್ಛಾಸಂಪರ್ಕದ ನಿರೋಧ ಮತ್ತು ವೈವಾಹಿಕ ಜೀವನದ ವಿಧಿನಿಯಮಗಳ ರಚನೆ; ನಗರಗಳ ನಿರ್ಮಾಣ; ಮತ್ತು ಮರದ ಹಲಗೆಗಳ ಮೇಲೆ ನ್ಯಾಯಶಾಸನಗಳ ಉಲ್ಲೇಖನ೩—ಹಿಂದಿನ ಕಾಲದಲ್ಲಿ ಇವೆಲ್ಲವೂ ಜ್ಞಾನಿಯಾದವನ ಕರ್ತವ್ಯವಾಗಿದ್ದಿತು. • ದ್ರಷ್ಟಾರ ಕವಿಗಳಿಗೆ ಮತ್ತು ಅವರ ಕಾವ್ಯಗಳಿಗೆ ಖ್ಯಾತಿಗೌರವಗಳು ದೊರಕಿದುದು ಇವನ್ನು ಸಾಧಿಸಿದ್ದರಿಂದಲೇ. ಅನಂತರದಲ್ಲಿ ಪ್ರಖ್ಯಾತರಾದ ಹೋಮರ್ ಮತ್ತು ಟಿರ್ಟೆಯಸ್೪ ತಮ್ಮ ಕಾವ್ಯಗಳಿಂದ ಗಂಡೆದೆಗಳನ್ನು ಯುದ್ಧಕ್ಕೆ ಹುರಿದುಂಬಿಸಿದರು. ಕಾವ್ಯದ ಮೂಲಕ ದೇವವಾಣಿಗಳು ನುಡಿದವು. ಜೀವನದ ಮಾರ್ಗ ನಿರ್ದೇಶಿತವಾಯಿತು.೫ ಕಾವ್ಯ ದೇವಿಯರಿಂದ ಕಲಿತ ಗಾನದ ಮೂಲಕ ರಾಜರ ಪ್ರೀತಿವಿಶ್ವಾಸಗಳು ಸಂಪಾದಿತವಾದವು. ವರ್ಷದ ಕೊನೆಯಲ್ಲಿ ಅನೇಕ

---

೧. ಕಾವ್ಯದ, ಸಂಗೀತದ ಮಹಿಮೆಯನ್ನು ಸಾರುವ ಗ್ರೀಕ್ ಪುರಾಣ ಕಥೆಗಳಲ್ಲಿ ಇವುಗಳ ವರ್ಣನೆ ಇದೆ.

೨. ಹೋಲಿಸಿ—ಪಾಪಮಿದು ಪುಣ್ಯಮಿದು ಹಿತ
ರೂಪಮಿದಹಿತಪ್ರಕಾರಮಿದು ಸುಖಮಿದು ದುಃ |
ಖೋಪಾತ್ತಮಿದೆಂದಱಿಪುಗು
ಮಾ ಪರಮಕವಿ ಪ್ರಧಾನರಾ ಕಾವ್ಯಂಗಳ್ ॥ ನೃಪತುಂಗ I ೧೮

೩. ಸೋಲೋನ್‌ನ ಶಾಸನಗಳು ಉಲ್ಲೇಖವಾಗಿದ್ದುದು ಈ ರೀತಿಯಲ್ಲಿ.

೪. ಕ್ರಿ. ಪೂ. ೭ನೆ ಶತಕದ ಗ್ರೀಕ್ ಕವಿ. ಇವನು ತನ್ನ ಕಾವ್ಯದಿಂದ ಸ್ಪಾರ್ತನರ ಒಳಜಗಳಗಳನ್ನು ಪರಿಹರಿಸಿ, ಅವರಿಗೆ ಉತ್ಸಾಹ ತುಂಬಿ, ಗ್ರೀಕರ ಮೇಲೆ ಜಯಗಳಿಸುವಂತೆ ಮಾಡಿದನು.

೫. ಹೋಲಿಸಿ–ಕವಿವಚನಾಯತ್ತಾ ಲೋಕಯಾತ್ರಾ. ಸಾ ಚ ನಿಶ್ರೇಯಸಮೂಲಂ ಇತಿ ಮಹರ್ಷಯಃ ॥ ರಾಜಶೇಖರ. ಪು. ೨೭.

ಮಹತ್ಕಾರ್ಯಗಳ ಸಾಧನೆಯ ದೀರ್ಘಶ್ರಮವನ್ನು ಪರಿಹರಿಸಲು ನಾಟಕಾದಿ ವಿನೋದಗಳು ರಚಿತವಾದವು. ಆದ್ದರಿಂದ ಲೈರ್‌ವಾದ್ಯ ಪ್ರವೀಣೆಯಾದ ಕಾವ್ಯದೇವಿ ಮತ್ತು ಅದರ ಶ್ರುತಿಗೆ ಹಾಡುವ ಗಾಯಕದೇವ ಅಪೊಲ್ಲೋ ವಿಷಯದಲ್ಲಿ ನೀನು ನಾಚಿಕೆಪಡಬೇಕಾಗಿಲ್ಲ.೧

[೪೦೮—೪೧೮. ಸ್ವಭಾವ ಮತ್ತು ಕಲೆ]

ಉತ್ಕೃಷ್ಟವಾದ ಕಾವ್ಯವೊಂದು ರಚಿತವಾಗುವುದು ಕವಿಯ ಸ್ವಭಾವದಿಂದಲೇ ಅಥವಾ ಕಲೆಯಿಂದಲೇ ಎಂಬ ಪ್ರಶ್ನೆ ಬಹಳ ಹಳೆಯದು.೨ ಆದರೆ ನನ್ನ ಭಾವನೆಯಲ್ಲಿ ಅವುಗಳಲ್ಲಿ ಯಾವುದಾದರೂ ಒಂದರಿಂದಲೇ, ಎಂದರೆ ಸಹಜ ಶಕ್ತಿ ರಹಿತವಾದ ಅಭ್ಯಾಸದಿಂದ ಅಥವಾ ಅಭ್ಯಾಸರಹಿತವಾದ ಸಹಜಶಕ್ತಿಯಿಂದ ಅದು ಸಾಧ್ಯವಿಲ್ಲ, ಏಕೆಂದರೆ ಅವುಗಳ ಪರಸ್ಪರ ಸಾಪೇಕ್ಷತೆ ಅಂತಹದು, ಅವುಗಳ ಪರಸ್ಪರ ಮೈತ್ರಿ ಅಷ್ಟು ನಿಕಟವಾದುದು.೩

ಓಟದ ಪಂದ್ಯದಲ್ಲಿ ಗುರಿ ಮುಟ್ಟಬೇಕೆಂದಿರುವವನು ಚಿಕ್ಕಂದಿನಿಂದಲೂ ಬಹಳ ಶ್ರಮಪಟ್ಟು ಅಭ್ಯಾಸ ಮಾಡಿ, ಚಳಿಬಿಸಿಲುಗಳಿಗೆ ಹೆದರದೆ, ಮದ್ಯಪಾನ, ಸ್ತ್ರೀಸಂಗಗಳಿಂದ ದೂರವಿರುವಂತೆಯೇ, ಪಿಥಿಯದ ಸ್ಪರ್ಧೆಗಳಲ್ಲಿ ಭಾಗವಹಿಸುವ ವೇಣುವಾದಕನೂ ಕೂಡ ಮೊದಲಲ್ಲಿ ಶಾಲೆಗೆ ಹೋಗಿ ಗುರುವಿನಲ್ಲಿ ಭಯವಿನಯಗಳಿಂದ ನಡೆದುಕೊಂಡು ಅನೇಕ ವಿಷಯಗಳನ್ನು ಕಲಿತಿರುತ್ತಾನೆ. ಆದರೆ " ನಾನು ಎಷ್ಟು ಅದ್ಭುತವಾದ ಕಾವ್ಯಗಳನ್ನು ರಚಿಸಿದ್ದೇನೆ! ನಮ್ಮ ಪಂದ್ಯದಲ್ಲಿ ಹಿಂದೆ ಬಿದ್ದವನು

---

೧. ಎಂದರೆ, ಲಿರಿಕ್ ಕಾವ್ಯ, ಭಾವಗೀತೆಯ ವಿಷಯದಲ್ಲಿ.

೨. ಎಂದರೆ ಪ್ರತಿಭೆ ಅಥವಾ ವ್ಯುತ್ಪತ್ತಿ, ಶಕ್ತಿ ಅಥವಾ ಅಭ್ಯಾಸವೇ ಎಂಬ ಪ್ರಶ್ನೆ. ಹೋಲಿಸಿ-ಪ್ರತಿಭಾವ್ಯುತ್ಪತ್ಯೋಃ ಪ್ರತಿಭಾ ಶ್ರೇಯಸೀ ಇತ್ಯಾನಂದಃ . . . ವ್ಯುತ್ಪತ್ತಿಃ ಶ್ರೇಯಸೀ ಇತಿ ಮಂಗಲಃ . . . ಪ್ರತಿಭಾವ್ಯುತ್ಪತ್ತೀ ಮಿಥಃ ಸಮವೇತೇ ಶ್ರೇಯಸ್ಯೌ ಇತಿ ಯಾಯಾವರೀಯಃ . . . ಪ್ರತಿಭಾವ್ಯುತ್ಪತ್ತಿಮಾಂಶ್ಚ ಕವಿಃ ಕವಿರಿತ್ಯುಚ್ಯತೇ . . .

ಉಪಕಾರ್ಯೋಪಕಭಾವಂ ತು ಮಿಥಃ ಶಾಸ್ತ್ರಕಾವ್ಯಕವ್ಯೋಃ ಅನುಮನ್ಯಾಮಹೇ ‖
—ರಾಜಶೇಖರ, ಪು. ೧೬-೧೭.

೩. ಶೈಲಿಕೌಶಲವನ್ನು ಸಂಪಾದಿಸಬೇಕಾದರೆ ಕೇವಲ ವ್ಯುತ್ಪತ್ತಿ ಸಾಲದು, ಸಹಜ ಶಕ್ತಿ ಮತ್ತು ಅಭ್ಯಾಸ ಆವಶ್ಯಕ ಎಂದು ಟಾಸಿಟಸ್ ಹೇಳುತ್ತಾನೆ. ಸಹಜ ಶಕ್ತಿ, ಕಲೆ, ಮತ್ತು ಅಭ್ಯಾಸ ಭಾಷಣ ಅಥವಾ ಲೇಖನದ ಕೌಶಲವನ್ನು ಪರಿಪೂರ್ಣ ಮಾಡುತ್ತವೆ ಎಂದು ಕ್ವಿಂಟಿಲಿಯನ್ ಹೇಳುತ್ತಾನೆ. ಹೋಲಿಸಿ-

ನೈಸರ್ಗಿಕೀ ಚ ಪ್ರತಿಭಾ ಶ್ರುತಂ ಚ ಬಹುನಿರ್ಮಲಂ |
ಅಮಂದಶ್ಚಾಭಿಯೋಗೋಸ್ಯಾಃ ಕಾರಣಂ ಕಾವ್ಯಸಂಪದಃ ‖ ದಂಡಿ, I, ೧೦೩.
ನ ನಿಸರ್ಗಕವಿಃ ಶಾಸ್ತ್ರೇ ನ ಕ್ಷುಣ್ಣಃ ಕವತೇ ಚ ಯಃ |
ವಿಡಂಬಯತಿ ಸ್ವಾತ್ಮಾನಮಾಗ್ರಹಗ್ರಹಿಲಃ ಕಿಲ ‖ ರಾಜಶೇಖರ, ಪು. ೧೫.

ಹಾಳಾಗಲಿ. ಸ್ಪರ್ಧೆಯಲ್ಲಿ ಹಿಂದಾಗುವುದು ನನಗೆ ಅವಮಾನ. ಕಲಿಯದ ವಿಷಯಗಳನ್ನು ತಿಳಿಯದೆಂದು ಒಪ್ಪಿಕೊಳ್ಳುವುದಂತೂ ನನಗೆ ಇನ್ನೂ ಅವಮಾನಕರ"— ಇದು ಇಂದಿನ ಮನೋಭಾವವಾಗಿದೆ.

[೬೧೯—೬೫೨. ವಿಮರ್ಶಕರ ವಂಚನೆ]

ಹರಾಜುಮಾಡುವವನು ತನ್ನ ಸಾಮಾನುಗಳನ್ನು ಕೊಳ್ಳಲು ಜನಗಳನ್ನು ಕೂಗಿ ಕೂಡಿಸುವಂತೆಯೇ, ಭೂಮಿ ಮತ್ತು ಬಡ್ಡಿಗೆ ಹಾಕಿದ ಹಣ ಬಹಳವಾಗಿರುವ ಕವಿಯೂ ಕೂಡ ಲಾಭದಾಸೆಯ ಹೊಗಳುಭಟ್ಟರ ಹಿಂಡನ್ನೇ ತನ್ನೆಡೆಗೆ ಆಕರ್ಷಿಸುತ್ತಾನೆ. ಅವನು ಒಳ್ಳೆಯ ಔತಣಗಳನ್ನು ಕೊಡುವವನೋ, ಆಸ್ತಿಯನ್ನು ಕಳೆದುಕೊಂಡಿರುವ ನಿರ್ಗತಿಕನಿಗೆ ವಾರಸುದಾರನಾಗುವವನೋ, ಅಥವಾ ಬಗೆಹರಿಯದ ಕೋರ್ಟುವ್ಯಾಜ್ಯಗಳ ಕೋಟಲೆಗಳಿಂದ ಯಾರನ್ನಾದರೂ ಪಾರುಮಾಡುವವನೋ ಆಗಿದ್ದರಂತೂ, ಆ ಉದಾರ ಪ್ರಾಣಿ ತನ್ನ ಸ್ನೇಹಿತರಲ್ಲಿ ಯಾರು ಪ್ರಾಮಾಣಿಕರು, ಯಾರು ಬೂಟಾಟಿಕೆಯವರು ಎಂಬುದನ್ನು ಪತ್ತೆಹಚ್ಚಬಲ್ಲನೇ ಎಂಬುದು ನನಗೆ ಸಂದೇಹ. ಯಾರಿಗಾದರೂ ನೀನು ಯಾವುದಾದರೂ ಒಂದು ಬಹುಮಾನವನ್ನು ಕೊಟ್ಟಿದ್ದರೆ ಅಥವಾ ಕೊಡಬೇಕೆಂದಿದ್ದರೆ, ಅವನನ್ನು ನೀನು ನಿನ್ನ ಪದ್ಯಗಳನ್ನು ಕೇಳಲು ಕರೆಯಬೇಡ. ಏಕೆಂದರೆ ಮೊದಲೇ ಕೃತಜ್ಞತೆಯ ಸಂತೋಷದಿಂದ ತುಂಬಿ ತುಳುಕುತ್ತಿರುವ ಅವನು ನಿನ್ನ ಪದ್ಯಗಳನ್ನು ಕೇಳುತ್ತಿರುವಾಗ ಖಂಡಿತವಾಗಿಯೂ "ಭಲೆ! ಸುಂದರವಾಗಿದೆ! ಉತ್ಕೃಷ್ಟವಾಗಿ ರಚಿತವಾಗಿದೆ!" ಎಂದೆಲ್ಲಾ ಉದ್ಗಾರ ವೆಳೆಯುತ್ತಾನೆ. ನಿನ್ನ ಕೆಲವು ಪಂಕ್ತಿಗಳನ್ನು ಕೇಳುತ್ತಾ ಕೇಳುತ್ತಾ ಅವನು ವಿವರ್ಣನಾಗುತ್ತಾನೆ. ಅವನ ಸಹೃದಯ ನೇತ್ರಗಳಿಂದ ಅಶ್ರುಬಿಂದುಗಳನ್ನು ತೊಟ್ಟಿಕ್ಕಿಸುತ್ತಾನೆ. ಆನಂದಾತಿಶಯದಿಂದ ನೆಗೆದೆದ್ದು ಕಾಲಿನಿಂದ ನೆಲವನ್ನು ರಭಸವಾಗಿ ಅಪ್ಪಳಿಸುತ್ತಾನೆ.[೧]

ನಿಜವಾದ ದುಃಖವಿರುವವರಿಗಿಂತಲೂ ಕೂಲಿ ಕೊಟ್ಟು ಅಳಲು ಕರೆಸಿರುವವರೇ ಹೆಣದ ಹತ್ತಿರ ಹೆಚ್ಚು ಅಬ್ಬರಿಸಿ, ಅತ್ತು, ಕರೆದು, ಗೋಳಾಡುವಂತೆ, ನಿಜವಾಗಿ ನಿನ್ನನ್ನು ಪ್ರಶಂಸಿಸುವವನಿಗಿಂತಲೂ ನಿನ್ನ ಬೆನ್ನು ಹಿಂದೆ ನಗುವವನೇ ನಿನ್ನ ಕಾವ್ಯದಿಂದ ಹೆಚ್ಚು ಪ್ರಭಾವಿತನಾದಂತೆ ತೋರಿಸಿಕೊಳ್ಳುತ್ತಾನೆ. ಶ್ರೀಮಂತ ಪೋಷಕರು ಯಾವನಾದರೂ ತಮ್ಮ ಸ್ನೇಹವಿಶ್ವಾಸಗಳಿಗೆ ಯೋಗ್ಯನೇ ಎಂಬುದನ್ನು ಸರಿಯಾಗಿ ಪರೀಕ್ಷಿಸಲು ಅವನಿಗೆ ಮದ್ಯವನ್ನು ಕೊಟ್ಟು ಮೂಗಿನ ತನಕ ಕುಡಿಸಿ ನೋಡುತ್ತಾರೆಂದು ಜನಗಳು ಹೇಳುತ್ತಾರೆ. ಆದ್ದರಿಂದ ನೀನು ಪದ್ಯಗಳನ್ನು

---

೧. ಹೋಲಿಸಿ—ಪಿತುರ್ಗುರೋರ್ನರೇಂದ್ರಸ್ಯ ಸುತಶಿಷ್ಯಪದಾತಯಃ |
ಅವಿವಿಚ್ಯೈವ ಕಾವ್ಯಾನಿ ಸ್ತುವಂತಿ ಚ ಪಠಂತಿ ಚ ‖ ರಾಜಶೇಖರ, ಪು. ೫೧.

ಬರೆದಾಗ, ಕಥೆಯ ನರಿಯ ಹೃದಯದಲ್ಲಿ ಅಡಗಿದ್ದ ಭಾವನೆಗಳಿಗೆ ಸದೃಶವಾದ ಈ ವಿಮರ್ಶಕನ ಪ್ರಶಂಸೆಯ ಮರೆಯಲ್ಲಿರುವ ಭಾವವನ್ನು ಗಮನಿಸದೆ ಮೋಸಹೋಗಬೇಡ.೧

ಕ್ವಿಂಟಿಲಿಯಸನ೨ ಎದುರು ನೀನು ಹಿಂದೆ ಯಾವುದನ್ನಾದರೂ ಓದಿದ್ದರೆ, ಅವನು "ಅಯ್ಯಾ, ಬೇಕಾದರೆ ಈ ಪಂಕ್ತಿಯನ್ನು ತಿದ್ದು, ಅದನ್ನು ತಿದ್ದು" ಎಂದು ಹೇಳುತ್ತಿದ್ದನು.೩ ಯಾವುದಾದರೂ ಒಂದು ಭಾಗವನ್ನು ಎರಡು ಮೂರಾವರ್ತಿ ಪ್ರಯತ್ನಪಟ್ಟರೂ ಉತ್ತಮಗೊಳಿಸಲು ಆಗಲಿಲ್ಲವೆಂದು ನೀನು ಹೋಗಿ ಅವನಿಗೆ ಹೇಳಿದ್ದರೆ, ಅದನ್ನು ಸಂಪೂರ್ಣವಾಗಿ ಕೆಡಸಿ, ಆ ದುಷ್ಟ ಪಂಕ್ತಿಗಳನ್ನು ಕುಲುಮೆಗೆ ಹಾಕಿ ಪುನಃ ಬಡಿಗಲ್ಲಿನ ಮೇಲಿಟ್ಟು ಹೊಡಿ ಎಂದು ಅವನು ಸಲಹೆ ನೀಡುತ್ತಿದ್ದನು. ಆದರೆ ಆ ದೋಷಯುಕ್ತವಾದ ಪಂಕ್ತಿಯನ್ನು ತಿದ್ದುವ ಬದಲು ಅದನ್ನು ನೀನು ಸಮರ್ಥಿಸಲು ಉದ್ಯುಕ್ತನಾಗಿದ್ದರೆ, ಅವನು ಇನ್ನು ಹೆಚ್ಚು ಒಂದು ಮಾತನ್ನೂ ಆಡುತ್ತಿರಲಿಲ್ಲ ಮತ್ತು ವೃಥಾ ಯಾವ ಶ್ರಮವನ್ನೂ ವಹಿಸುತ್ತಿರಲಿಲ್ಲ. ಅನಂತರ ನೀನು ನಿನ್ನನ್ನೂ, ನಿನ್ನ ಕೃತಿಯನ್ನೂ ಏಕೈಕನಾಗಿ, ಪ್ರತಿಸ್ಪರ್ಧಿರಹಿತನಾಗಿ೪ ಆದರಿಸಕೊಳ್ಳಬಹುದಾಗಿದ್ದಿತು.

ನಿಜವಾಗಿ ವಿವೇಕಿಯಾದ ವಿಮರ್ಶಕನು ನಿಸ್ಸಾರವಾದ ಪಂಕ್ತಿಗಳನ್ನು ದೂಷಿಸುತ್ತಾನೆ; ಪರುಷವಾದುವನ್ನು ಖಂಡಿಸುತ್ತಾನೆ; ವಿಗುಣವಾದುವುಗಳ ಮೇಲೆ ಕಪ್ಪುಗೆರೆಗಳನ್ನು ಎಳೆಯುತ್ತಾನೆ; ಅಧಿಕವಾಗಿರುವ ಅಲಂಕಾರಗಳನ್ನು ಕತ್ತರಿಸಿ

---

೧. ಕಾಗೆ ನರಿಯ ಕಥೆ. ಕಾಗೆಯ ಕಂಠವನ್ನು ಹೊಗಳಿ, ಮಾಂಸದ ಚೂರನ್ನು ಕೆಳಗೆ ಬೀಳಿಸುವಂತೆ ಮಾಡಿದ ನರಿ ಈ ಸ್ವಾರ್ಥಿವಿಮರ್ಶಕ.

೨. ವರ್ಜಿಲ್ ಮತ್ತು ಹೊರೆಸರ ಸ್ನೇಹಿತ. ಸತ್ಯಸಂಧತೆ ಮತ್ತು ಮುಚ್ಚುಮರೆಯಿಲ್ಲದ ಅಭಿಪ್ರಾಯಕ್ಕಾಗಿ ಹೊರೆಸನು ಇವನನ್ನು ತನ್ನ ಭಾವಗೀತೆಯೊಂದರಲ್ಲಿ ಹೊಗಳಿದ್ದಾನೆ. ಈ ಪತ್ರದ ರಚನೆಯ ಕಾಲಕ್ಕೆ ಅವನು ಸತ್ತು ಇಪ್ಪತ್ತು ವರ್ಷಗಳಾಗಿದ್ದುವು. ವರ್ಜಿಲ್, ಹೊರೆಸ್ ಮತ್ತು ಅನೇಕ ಇತರ ಕವಿಗಳು ತಮ್ಮ ಕಾವ್ಯಗಳನ್ನು ಇವನಿಗೆ ಒಪ್ಪಿಸಿ ಸಲಹೆ ಕೇಳುತ್ತಿದ್ದರು. ಇಂದು ಇಂಗ್ಲಿಷರಲ್ಲಿ ಯುಗಕವಿ ಎನಿಸಿರುವ ಟಿ. ಎಸ್. ಎಲಿಯಟ್ ತನ್ನ ಕಾವ್ಯಗಳನ್ನು ಈ ರೀತಿ ಎಸ್ರಾ ಪೌಂಡ್, ಜಾನ್ ಹೇವರ್ಡ್‌ರಿಗೆ ಒಪ್ಪಿಸಿದ ಕವಿಸಹೃದಯ ಸಂಬಂಧವನ್ನೂ ಇಲ್ಲಿ ಸ್ಮರಿಸಿಕೊಳ್ಳಬಹುದು.

೩. ಇದೇ ವಿಧದ ಸಲಹೆಯನ್ನು ಹೊರೆಸನೂ ಇತ್ತಿದ್ದನು: "ಎರಡನೆಯ ಸಲ ಓದಬಹುದಾದ ಯೋಗ್ಯತೆಯುಳ್ಳ ಕೃತಿಯನ್ನು ನೀನು ಬರೆಯಬೇಕಾದಲ್ಲಿ, ನಿನ್ನ ಲೇಖನಿಯ (Stilus) ಮೊಂಡು ತುದಿಯನ್ನು ನೀನು ಪದೇ ಪದೇ ಉಪಯೋಗಿಸುತ್ತಿರಬೇಕು. ಯೋಗ್ಯರಾದ ಕೆಲವೇ ಜನಗಳ ಪ್ರಶಂಸೆಯಿಂದ ತೃಪ್ತನಾಗಬೇಕೇ ವಿನಾ, ಸಾಮೂಹಿಕ ಪ್ರಶಂಸೆಗೆ ಕಿವಿಗೊಡಬಾರದು" (ವಿಡಂಬನೆ I ೧೦). ಲೇಖನಿಯ ಮೊನೆಯಾದ ತುದಿಯನ್ನು ಮೇಣದ ಹಲಗೆಯ ಮೇಲೆ ಬರೆಯಲು ಉಪಯೋಗಿಸುತ್ತಿದ್ದರು. ಬರೆದುದನ್ನು ಅಳಿಸಲು ಅದರ ಮೊಂಡು ತುದಿಯನ್ನು ಬಳಸುತ್ತಿದ್ದರು.

೪. Solitary and unrivalled.

ಹಾಕುತ್ತಾನೆ; ಅಸ್ಪಷ್ಟವಾಗಿರುವುದನ್ನು ಸ್ಪಷ್ಟಗೊಳಿಸುವಂತೆ ಹೇಳುತ್ತಾನೆ; ಸಂದೇಹಾರ್ಥಕ ಪದಪ್ರಯೋಗಗಳನ್ನು ಟೀಕಿಸುತ್ತಾನೆ; ತಿದ್ದಬೇಕಾಗಿರುವ ವಿಷಯಗಳನ್ನು ಗುರುತುಹಾಕುತ್ತಾನೆ.೧ ವಸ್ತುತಃ ಅವನು ಇನ್ನೊಬ್ಬ ಅರಿಸ್ಟಾರ್ಕಸನೇ೨ ಆಗುತ್ತಾನೆ. "ಈ ಅಲ್ಪ ವಿಷಯಗಳಿಗಾಗಿ ನನ್ನ ಸ್ನೇಹಿತನ ಮನಸ್ಸನ್ನು ಏಕೆ ನೋಯಿಸಲಿ" ಎಂದು ಅವನು ಯಾವಾಗಲೂ ಹೇಳುವುದಿಲ್ಲ. ಏಕೆಂದರೆ ಹೀಗೆ ದುಷ್ಪರಿಣಾಮಿಕಾರಿಯಾದ ಸ್ತುತಿಯಿಂದ ಮೋಸಹೋದ ಆ ಕವಿಗೆ ಇವು ಬಹಳ ಹಾನಿಯನ್ನು ಉಂಟುಮಾಡುತ್ತವೆ.

[೪೫೩—೪೭೬. ಕವಿಗಳ ಹುಚ್ಚು]

ಕಜ್ಜಿ, ತುರಿ, ಕಾಮಾಲೆಗಳಿಂದ ನರಳುತ್ತಿರುವ ಅಥವಾ ಯಾವುದೋ ಒಂದು ಭ್ರಾಂತಿಯೋ ಹುಚ್ಚೋ ಹಿಡಿದಿರುವ ಮನುಷ್ಯನನ್ನು ಬುದ್ಧಿಯಿರುವ ಜನ ಮುಟ್ಟುವುದಕ್ಕೂ ಹೆದರಿ ದೂರ ಓಡುವಂತೆ, ಉನ್ಮತ್ತ ಕವಿಯಿಂದಲೂ ವಿವೇಕಿಗಳು ಹೆದರಿ ದೂರ ಓಡುತ್ತಾರೆ. ಹುಡುಗರು ಅವನನ್ನು ಕೂಗಿ ರೇಗಿಸುತ್ತಾ ತಮ್ಮ ಕ್ಷೇಮವನ್ನೂ ಲಕ್ಷಿಸದೆ ಅವನನ್ನು ಹಿಂಬಾಲಿಸಿ ಹೋಗುತ್ತಿರುತ್ತಾರೆ. ಬ್ಲಾಕ್‌ಬರ್ಡ್ ಹಕ್ಕಿಗಳನ್ನೇ ನೋಡಿಕೊಂಡು ಹೋಗುವ ಬೇಡನಂತೆ ಅವನು ಆಕಾಶವನ್ನು ನೋಡಿಕೊಂಡು ಶಬ್ದಾಡಂಬರದ ಪದ್ಯಗಳನ್ನು ಕಕ್ಕುತ್ತಾ ಓಡಾಡುತ್ತಿರುತ್ತಾನೆ. ಹೀಗಿರುವಾಗ ಯಾವುದಾದರೂ ಒಂದು ಹಳ್ಳಕ್ಕೋ ಭಾವಿಗೋ ಬೀಳುತ್ತಾನೆ.೩ ಆಗ ಅವನು "ಅಯ್ಯಾ, ಜನಗಳೇ ಸಹಾಯ ಮಾಡಿರಯ್ಯಾ" ಎಂದು ಅಲ್ಲಿಂದ ಗಟ್ಟಿಯಾಗಿ ಕೂಗಬಹುದು. ಆದರೆ ಅವನನ್ನು ಅಲ್ಲಿಂದ ಎತ್ತಲು ಒಬ್ಬರೂ ಮುಂದೆ ಬರುವುದಿಲ್ಲ. ಯಾರಾದರೂ ಒಂದು ವೇಳೆ ಅವನಿಗೆ ಸಹಾಯ ಮಾಡುವ ತೊಂದರೆ ವಹಿಸಿ ಭಾವಿಯೊಳಕ್ಕೆ ಹಗ್ಗವನ್ನು ಬಿಟ್ಟರೂ, "ಅವನು ತಾನಾಗಿಯೇ ಉದ್ದೇಶಪೂರ್ವಕವಾಗಿ ಭಾವಿಗೆ ಧುಮುಕಿಲ್ಲ, ಅವನಿಗೆ ಪಾರಾಗಿ ಬದುಕುವ ಇಚ್ಛೆ ಇಲ್ಲದೆ ಇಲ್ಲ ಎಂಬುದು ನಿಮಗೆ ಹೇಗೆ ಗೊತ್ತು?" ಎಂದು ನಾನು ಅವರನ್ನು ಕೇಳುತ್ತೇನೆ. ಆದ್ದರಿಂದ ನಿಮಗೆ ಸಿಸಿಲಿಯ ಎಂಪಿಡೊಕ್ಲಿಸನ೪ ಅಂತ್ಯದ ವೃತ್ತಾಂತವನ್ನು

---

೧. ಹೋಲಿಸಿ—ರಸಾವೇಶತಃ ಕಾವ್ಯಂ ವಿರಚಯತಃ ನ ಚ ವಿವೇಕ್ತ್ರೀ ದೃಷ್ಟಿಃ ತಸ್ಮಾದನುಪರೀಕ್ಷೇತ. ಅಧಿಕಸ್ಯ ತ್ಯಾಗೋ, ನ್ಯೂನಸ್ಯ ಪೂರಣಂ, ಅನ್ಯಥಾಸ್ಥಿತಸ್ಯ ಪರಿವರ್ತನಂ, ಪ್ರಸ್ಮೃತಸ್ಯ ಅನುಸಂಧಾನಂ ಚ-ರಾಜಶೇಖರ, ಪು. ೫೨.

೨. ಕ್ರಿ. ಪೂ. ೧೬೦. ಹೋಮರನ ಕಾವ್ಯಗಳ ಪ್ರಕ್ಷಿಪ್ತ ಭಾಗಗಳ ಮೇಲೆ ಗೆರೆ ಎಳೆದು ಗುರುತಿಸಿದ ಪ್ರಖ್ಯಾತ ಅಲೆಕ್ಸಾಂಡ್ರಿಯನ್ ವಿಮರ್ಶಕ. ಪೊಲಮಿಯ ಮಕ್ಕಳಿಗೆ ಗುರುವಾಗಿದ್ದನು. ಇವನು ರಚಿಸಿದ್ದನೆಂದು ಹೇಳಲಾದ ೮೦೦ ವ್ಯಾಖ್ಯಾನಗಳಲ್ಲಿ ಒಂದೂ ಸಿಕ್ಕಿಲ್ಲ.

೩. ನಕ್ಷತ್ರ ಎಣಿಸುವ ಭರದಲ್ಲಿ ಭಾವಿಗೆ ಬಿದ್ದ ಜ್ಯೋತಿಷಿಯಂತೆ.

೪. ಕ್ರಿ. ಪೂ. ೪೪೦. ಪ್ರಸಿದ್ಧ ದಾರ್ಶನಿಕ ಕವಿ.

ಹೇಳುತ್ತೇನೆ, ಕೇಳಿ. ತನ್ನನ್ನು ಅಮರನಾದ ದೇವತೆಯೆಂದು ಎಲ್ಲರೂ ಪರಿಗಣಿಸುವಂತಾಗಬೇಕೆಂಬ ಉದ್ದೇಶದಿಂದ ಅವನು ಧಗಧಗಿಸುತ್ತಿದ್ದ ಎಟ್ನಾದೊಳಕ್ಕೆ ತಂಪು ಮನಸ್ಸಿನಿಂದ೧ ಧುಮುಕಿದನು. ಕವಿಗಳು ತಮಗೆ ಬೇಕೆನಿಸಿದಾಗ ಪ್ರಾಣತ್ಯಾಗ ಮಾಡುವ ಹಕ್ಕನ್ನು ಅವಶ್ಯವಾಗಿ ಹೊಂದಿರಲಿ. ಸಾಯುವವನ ಇಚ್ಛೆಗೆ ವಿರೋಧವಾಗಿ ಅವನನ್ನು ಬದುಕಿಸುವವನು ಅವನನ್ನು ಕೊಂದಂತೆಯೇ ಆಗುತ್ತಾನೆ. ಆ ಕವಿಯು ಹೀಗೆ ಮಾಡಿರುವುದು ಇದೇ ಮೊದಲನೆಯ ಸಲವಲ್ಲ. ಒಂದು ವೇಳೆ ಈಗ ಮೇಲಕ್ಕೆ ಎಳೆದು ಹಾಕಿದರೆ, ಮುಂದೆಯಾದರೂ ಅವನು ಇತರರಂತೆ ವಿವೇಕಿಯಾಗುವುದೂ ಇಲ್ಲ, ನಾಟಕೀಯವಾದ ದುರ್ಮರಣದ ಆಸೆಯನ್ನು ಬಿಡುವುದೂ ಇಲ್ಲ. ಅವನು ಪದ್ಯಗಳನ್ನು ಏಕೆ ಬರೆಯುತ್ತಾನೆಂಬುದಕ್ಕೆ ಸ್ಪಷ್ಟವಾದ ವಿವರಣೆ ಯಾರಿಗೂ ದೊರಕಿಲ್ಲ. ಅವನು ತನ್ನ ತಂದೆಯ ಸಮಾಧಿಯ ಮೇಲೆ ಹೊಲಸು ಮಾಡಿದ್ದಾನೆಯೇ, ಅಥವಾ ಯಾವುದಾದರೂ ಪಾಪಭೂಮಿಯನ್ನು೨ ಅಶ್ರದ್ಧೆಯಿಂದ ಅಪವಿತ್ರಗೊಳಿಸಿದ್ದಾನೆಯೇ ಎಂಬುದು ತಿಳಿಯದು. ಆದರೆ ಅವನು ಕಡುಹುಚ್ಚನೆಂಬುದಂತೂ ನಿರ್ವಿವಾದವಾದುದು. ಬೋನಿನ ಸಲಾಕಿಗಳನ್ನು ಮುರಿದು ಹೊರಗೆ ಬಂದ ಕರಡಿಯಂತೆ ಅವನು ಪಂಡಿತಪಾಮರರೆಲ್ಲರನ್ನೂ ತನ್ನ ಕಾವ್ಯವಾಚನದ ಆರ್ಭಟದಿಂದ ಚೆದುರಿಸಿ ಓಡಿಸುತ್ತಾನೆ. ಯಾರಾದರೂ ಅವನ ಕೈಗೆ ಸಿಕ್ಕಿಬಿದ್ದರಂತೂ, ಅವರನ್ನು ಬಲವಾಗಿ ತಬ್ಬಿ ಹಿಡಿದು, ಪೂರ್ತಿಯಾಗಿ ರಕ್ತ ಹೀರುವವರೆಗೂ ಚರ್ಮ ಬಿಡದ ಜಿಗಣೆಯಂತೆ, ಅವರಿಗೆ ತನ್ನ ಪದ್ಯಗಳನ್ನು ಓದಿ ಓದಿ ಅವರನ್ನು ಕೊಲ್ಲುವವರೆಗೂ ಅವರನ್ನು ಬಿಡುವುದಿಲ್ಲ.

—ಎಸ್. ಬಾಲಸುಬ್ರಹ್ಮಣ್ಯ

---

೧. ಎಂದರೆ ತಾನು ಮಾಡುತ್ತಿರುವುದನ್ನು ಜ್ಞಾನಪೂರ್ವಕವಾಗಿಯೋ, ಅಥವಾ ತಣ್ಣಗಿರುವ ರಕ್ತ ಜನರನ್ನು ಮಂದಮತಿಗಳಾಗಿ ಮಾಡುತ್ತದೆ ಎಂಬ ತನ್ನ ಸಿದ್ಧಾಂತಕ್ಕೆ ತಾನೇ ಲಕ್ಷ್ಯವಾಗಿಯೋ, ಅಥವಾ ಚಳಿಯಾದುದರಿಂದ ಶಾಖವನ್ನು ಪಡೆಯಲೋ, ಅಥವಾ ಧಗಧಗಿಸುತ್ತಿರುವ ಎಟ್ನಾ ಎಂಬುದನ್ನು ಸರಿತೂಗಲೋ "ತಂಪು ಮನಸ್ಸಿನಿಂದ" ಎಂದು ಹೊರೆಸನು ವರ್ಣಿಸಿದ್ದಾನೆ. ಅದು ಹೇಗಾದರೂ, ಈ ಬಗೆಯ ಕವಿಯು ಹಾಸ್ಯಕ್ಕೆ ಯೋಗ್ಯ ಎಂಬುದು ಹೊರೆಸನ ಮುಖ್ಯ ಅಭಿಪ್ರಾಯ.

೨. ಸಿಡಿಲು ಅಥವಾ ಮಿಂಚು ಹೊಡೆದ ಪ್ರದೇಶ ಬಹಳ ದುಷ್ಪರಿಣಾಮಿಕಾರಿಯೆಂದು ರೋಮನರು ನಂಬಿದ್ದರು. ಅದನ್ನು ಪವಿತ್ರಗೊಳಿಸಲು ಕುರಿಯೊಂದನ್ನು ಬಲಿಕೊಟ್ಟು ಅದರ ರಕ್ತವನ್ನು ಆ ಜಾಗದಲ್ಲಿ ಸುರಿಯುತ್ತಿದ್ದರು.

ಠಾಕೂರರ ಕೃತಿಮಹತ್ವ

"....ಠಾಕೂರರ ಕವಿತೆಯಲ್ಲಿ ಕತೆಯಲ್ಲಿ ತತ್ವವಿಚಾರದಲ್ಲಿ ವಿಮರ್ಶೆಯಲ್ಲಿ, ಎಲ್ಲ ಲೇಖನದ ಹಿಂದೆಯೂ, ಭಾರತವರ್ಷದ ಪ್ರಾಚೀನ ಸಂಸ್ಕೃತಿಯ ಪಟವಿದೆ; ಅದರ ಮೇಲೆ ಈಗಣ ಜೀವನದ ಬಣ್ಣವಿದೆ. ಇವರ ಜೀವನ ಯಾವ ಸಂದರ್ಭದಲ್ಲಿ ಬೆಳೆಯಿತೋ ಆ ಸಂದರ್ಭದ ಬಿಸಿಲು ನೆರಳು ಇವರ ಬರಹದಲ್ಲೆಲ್ಲ ಕಾಣುತ್ತದೆ. ಠಾಕೂರರು ನೋಬಲ್ ಬಹುಮತಿ ಬಂದದು ತಮಗಲ್ಲ ತಮ್ಮ ಸೀಮೆಗೆ ಎಂದು ಹೇಳಿದರು. ಇದು ಅವರ ವಿನಯವನ್ನು ಸೂಚಿಸುತ್ತದೆ. ಆದರೆ ಇನ್ನೊಂದರ್ಥದಲ್ಲಿ ಈ ಮಾತು ತೀರಾ ನಿಜ. ಪರದೇಶಿಯರು ಮೆಚ್ಚಿ ಬಹುಮಾನಿಸಿದ ಇವರ ಕವಿತೆಯ ಒಳಗು ಹೊರಗು ಎಲ್ಲವೂ ಭಾರತವರ್ಷದ ಜೀವನದಿಂದ ಬಂದಿರತಕ್ಕದು. ಭಾರತ ವರ್ಷದ ಹಿರಿಯ ಭಾವನೆಯೇ ಠಾಕೂರರಲ್ಲಿ ಮಾತನಾಡಿತು. ಹೀಗೆಂದರೆ ಠಾಕೂರರ ಗೌರವ ಕಡಮೆಯಾದೀತೆಂದು ನಾವು ಹೆದರಬೇಕಾದುದಿಲ್ಲ. ಎಲ್ಲ ನಾಡೂ ತನ್ನ ಕವಿತೆಯನ್ನು ನುಡಿಯುವುದಕ್ಕೆ ನಾಲಗೆಯನ್ನು ಹುಡುಕುತ್ತದೆ. ಸರಿಯಾದ ನಾಲಗೆ ಸಿಕ್ಕಿದಾಗ ಆ ಕವಿತೆ ಹೊರಕ್ಕೆ ಕೇಳುತ್ತದೆ. ಭಾರತವರ್ಷದ ಹೃದಯ ದಾಸೆಯನ್ನು ರವೀಂದ್ರರು ತಮ್ಮ ಮಾತಿನಿಂದ ತೀರಿಸಿದರೆಂದರೆ ಅದು ಅವರ ಮಹಿಮೆಯನ್ನೆ ಹೇಳಿದಂತಾಯಿತು ಹೊರತು ಬೇರೆಯಲ್ಲ."

—ಮಾಸ್ತಿ ವೆಂಕಟೇಶ ಅಯ್ಯಂಗಾರ್

(" ರವೀಂದ್ರನಾಥ ಠಾಕೂರರು " ಗ್ರಂಥದಿಂದ.)

ವಚನ ಸಾಹಿತ್ಯದ ಉಗಮ

"ಕನ್ನಡ ಸಾಹಿತ್ಯದ ಜೀವರತ್ನಗಳು, ಕನ್ನಡ ನುಡಿಯ ಚೆಲುವುಗಳು" ಎಂದು ಮುಂತಾಗಿ ಹೊಗಳಿಸಿಕೊಂಡಿರುವ, ಕನ್ನಡ ಸಾಹಿತ್ಯದ ವೈಶಿಷ್ಟ್ಯ ಎನ್ನಿಸಿ ಕೊಂಡಿರುವ ವಚನಗಳನ್ನು ಅಭ್ಯಾಸಮಾಡುವ ವಿದ್ಯಾರ್ಥಿಗೆ ವಚನಗಳಲ್ಲಿ ನಿಯತ ವಾಗಿ ಅಲ್ಲದಿದ್ದರೂ ಗಮನಕ್ಕೆ ಬರುವ ರೀತಿಯಲ್ಲಿ ಪದ್ಯದ ಲಯವು ಗೋಚರವಾಗಿ, ಆ ವಚನ ಸಾಹಿತ್ಯವನ್ನು ಗದ್ಯಸಾಹಿತ್ಯ ಎಂದು ಕರೆಯಬೇಕೋ ಪದ್ಯಸಾಹಿತ್ಯ ಎಂದು ಕರೆಯಬೇಕೋ ಎಂಬ ಭ್ರಮೆಯುಂಟಾಗಿ ಪದ್ಯ ಗದ್ಯಗಳ ಮಧ್ಯೆ ಅದನ್ನು ಇಡುವ ಅಪೇಕ್ಷೆಯುಂಟಾಗುತ್ತದೆ. ವಚನಗಳಲ್ಲಿ ಕಂಡುಬರುವ ಲಯವನ್ನು ವಿದ್ವಾಂಸರಾಗಲೇ ಗುರುತಿಸಿದ್ದಾರೆ.

"ಇವರ (ವಚನಕಾರರ) ಅನೇಕ ವಚನಗಳಲ್ಲಿ ಒಂದು ಬಗೆಯ ಲಯ ಬದ್ಧತೆಯೇನೋ ಸ್ಫುಟವಾಗಿ ಗೋಚರವಾಗುತ್ತದೆ. ಇವುಗಳ ಧಾಟಿ ಪದ್ಯದಷ್ಟು ಬಿಗಿಯಲ್ಲ, ಸಾಮಾನ್ಯ ಗದ್ಯದಷ್ಟು ಸಡಿಲವೂ ಅಲ್ಲ....ಈಗ ವಚನವೆಂದು ಕರೆಯಿಸಿ ಕೊಳ್ಳುತ್ತಿರುವವುಗಳಲ್ಲಿ ಕೆಲವಾದರೂ ಮೊದಲಿಗೆ ಸಲಕ್ಷಣವಾದ ಹಾಡುಗಳಾ ಗಿದ್ದಂತೆಯೇ ತೋರುತ್ತದೆ."[1]

"They are in prose, but their word-magic and cadence lift them to the level of poetry."[2]

"The Vacanas are like upanishads in their Poetic fervour and profundity of meaning, fresh from the oven of spiritualised hearts."[3]

"ಕಂದವೃತ್ತಾದಿ ಪದ್ಯಗಳಂತೆ ವಚನಗಳು ಛಂದೋಬದ್ಧವಲ್ಲವಾದರೂ ಗದ್ಯದಂತೆ ಸ್ವಚ್ಛಂದವಾದುವೂ ಅಲ್ಲ, ಇವುಗಳ ರಚನೆಯಲ್ಲಿ ತೋರುವ ಒಂದು ವಿಧದ ಲಯಬದ್ಧತೆ (rhythm) ಇವುಗಳನ್ನು ಹಾಡುಗಳಂತೆ ಅನ್ನಲು ಅನುಕೂಲ ಕಲ್ಪಿಸಿದೆ."[4]

"ಸೂಕ್ಷ್ಮವಾಗಿ ವಿಚಾರಿಸಿದರೆ ವಚನಗಳು ಗದ್ಯ ಪದ್ಯದ ನಡುವಿನ ಒಂದು ಮಾದರಿಯೆಂದೇ ಹೇಳಬೇಕಾಗುವುದು. ವಚನಗಳಲ್ಲಿ ಗದ್ಯದ ನಿರರ್ಗಳತೆ ಇಲ್ಲ

---

1. ತೀ. ನಂ. ಶ್ರೀಕಂಠಯ್ಯ : ಕಾವ್ಯಸಮೀಕ್ಷೆ, ಪು. ೧೨೬.

2. S. C. Nandimath : A Hand book of Veerasaivism, P. 20.

3. Sakhare : History and Philosophy of Lingayat Religion—Being an introduction to Lingadharana Candrika of Nandikeswara, P. 676.

4. ಶಿ. ಶಿ. ಬಸವನಾಳ : ಶ್ರೀ ಬಸವಣ್ಣನವರ ಷಟ್‌ಸ್ಥಳದ ವಚನಗಳು, ಪೀಠಿಕೆ, ಪು. xxi. (ಈ ಲೇಖನದಲ್ಲಿ ಬರುವ ಬಸವಣ್ಣನವರ ವಚನಗಳ ಸಂಖ್ಯೆ ಈ ಪುಸ್ತಕದಲ್ಲಿಯವು.)

ದಿದ್ದರೂ ಅದರ ಸರಳತೆ ಇದೆ; ಪದ್ಯದ ಕ್ರಮಬದ್ಧ ಛಂದೋಗತಿ ಇಲ್ಲದಿದ್ದರೂ ಅದರ ಲಯವಿದೆ."[1]

"ಇವು ಶಿವಶರಣರ ಹೃದಯವಿದ್ರಾವಕವಾದ ಗೀತಗಳು."[2]

ಇಂತಹ ಅಪೂರ್ವವಾದ ರಚನೆ* ಹೇಗೆ ಮೂಡಿ ಬಂದಿತು, ಅದಕ್ಕೆ ಯಾವುದು ಪ್ರಚೋದನೆ ನೀಡಿರಬಹುದು ಎಂಬ ವಿಷಯದಲ್ಲಿ ಕುತೂಹಲ ಮೂಡುವುದು ಸಹಜವೇ. ವಚನಸಾಹಿತ್ಯ ಉಕ್ಕಿ ಹರಿದದ್ದು ಹನ್ನೆರಡನೆಯ ಶತಮಾನದ ಉತ್ತರಾರ್ಧದಲ್ಲಿ. ಹನ್ನೊಂದನೆಯ ಶತಮಾನದಲ್ಲಿಯೇ ಅದರ ಸುಳಿವನ್ನು ಕಾಣುತ್ತೇವೆ. ಈ ಕಾಲಕ್ಕಾಗಲೇ ಕನ್ನಡದಲ್ಲಿ ಪಂಪ ರನ್ನರಂತಹ ಶ್ರೇಷ್ಠ ಕವಿಗಳ ಕಾವ್ಯಗಳು, ವಡ್ಡಾರಾಧನೆಯಂತಹ ಶ್ರೇಷ್ಠ ಗದ್ಯ ಕೃತಿಗಳು ಮಾತ್ರವಲ್ಲದೆ ಅಲಂಕಾರಶಾಸ್ತ್ರದ ಮೇಲೆ ಒಂದು, ಛಂದಸ್ಸಿನ ಮೇಲೆ ಒಂದು ಲಕ್ಷಣ ಗ್ರಂಥಗಳು ಹುಟ್ಟಿದ್ದುವು. ಚಂಪೂಕಾವ್ಯಗಳಲ್ಲಿ ಪದ್ಯಗಳ ಮಧ್ಯೆ 'ವಚನ' ಎಂಬ ಹೆಸರಿನ ಗದ್ಯ ಕಾಣಿಸಿಕೊಂಡಿದ್ದರೂ ಅದು ಸಾಮಾನ್ಯವಾದ ಗದ್ಯವೇ ಆಗಿತ್ತು. ವಡ್ಡಾರಾಧನೆಯ ಗದ್ಯದ ಶೈಲಿ ಮನಮೋಹಕವಾಗಿದ್ದರೂ ಅದರಲ್ಲಿ ಪದ್ಯದ ಲಯವನ್ನು ಕಾಣುವುದು ಕಷ್ಟವೇ. ಗದ್ಯ ಉತ್ತಮವಾಗಿರಬೇಕಾದರೆ ಅದರಲ್ಲಿ ಪದ್ಯದ ಲಯವೇನೂ ಇರಬೇಕಾಗಿಲ್ಲ ತಾನೇ. ಶಾಸನಗಳ ಗದ್ಯವೂ ಅಷ್ಟೇ—ಸಾಮಾನ್ಯ ಗದ್ಯ. ಹೀಗೆ ವಚನ ಸಾಹಿತ್ಯದಂತಹ ಅಪೂರ್ವ ಶೈಲಿಯ ಬರಹ ಕನ್ನಡದಲ್ಲಿ ನಮಗೆ ಬೇರೆಡೆ ಕಂಡುಬಾರದು.

ಇಂತಹ ಬರಹ ಎಲ್ಲಿಂದ ಬಂದಿರಬಹುದು? ಈ ವಿಷಯವಾಗಿ ಒಂದೆರಡು ಕಡೆ ಸ್ವಲ್ಪ ಜಿಜ್ಞಾಸೆ ನಡೆದಿದೆ. (ಇದನ್ನೇ ಕುರಿತಾದ ಲೇಖನಗಳು ಇಲ್ಲವೇ ಇಲ್ಲ ಎನ್ನಬಹುದು.) ಪ್ರೊ. ಡಿ. ಎಲ್. ನರಸಿಂಹಾಚಾರ್ಯರು, "ಸಾಮಾನ್ಯ ಜನರು ತಂಡೋಪತಂಡವಾಗಿ ವೀರಶೈವ ಧರ್ಮಾನುಯಾಯಿಗಳಾದ್ದರಿಂದ ದೇಶೀಯ ಪದ್ಯ ಪ್ರಭೇದಗಳು ಸಾಹಿತ್ಯದಲ್ಲಿ ವಿಶೇಷವಾಗಿ ತಲೆದೋರಲು ಮೊದಲಾದುವು. ಬಹುಶಃ ವಚನಗಳೂ ಹೀಗೆ ಜನಸಾಮಾನ್ಯದಲ್ಲಿ ಬಳಕೆಯಲ್ಲಿದ್ದು ಬಸವಣ್ಣನವರ ಮತ್ತು

1. ಅದೇ, ಪು. xxvii.

2. ಡಿ. ಎಲ್. ನರಸಿಂಹಾಚಾರ್: "ಕೆಲವರು ವಚನಕಾರರು—೧", ಪ್ರಬುದ್ಧ ಕರ್ಣಾಟಕ, ೧೯, i, ಪು. ೬.

[*ಸು. ೧೪೩೦ ರಲ್ಲಿದ್ದ ಕಲ್ಲಮಠದ ಪ್ರಭುದೇವನು ತನ್ನ "ಲಿಂಗ ಲೀಲಾವಿಲಾಸ ಚಾರಿತ್ರ" ವೆಂಬ ಸಂಕಲನ—ವ್ಯಾಖ್ಯಾನ ಗ್ರಂಥದಲ್ಲಿ ವಚನ ಸಾಹಿತ್ಯದ ಲಕ್ಷಣವನ್ನು ಹೀಗೆ ವಿವರಿಸಿದ್ದಾನೆ—"ಪ್ರಭುದೇವರು ಬಸವಣ್ಣ ಚನ್ನಬಸವಣ್ಣ ಮಹದೇವಿಯಕ್ಕಗಳು ಮುಖ್ಯವಾದ ಶಿವಾನುಭಾವಿಗಳು ಶಿವಸುಖವನನುಭವಿಸಿ ತೃಪ್ತಿವಡೆದ ಸಂತುಷ್ಟಿನಿಮಿರ್ದು ವಾಙ್ಮನದಿಂದುಕ್ಕಿ ನುಡಿದ ನುಡಿಯೇ ಗುರುವಚನ." ಆವನ ದೃಷ್ಟಿಯಲ್ಲಿ ವಚನ ಸಾಹಿತ್ಯ ಕಾವ್ಯವೇ. ವರ್ಡ್ಸ್‌ವರ್ತನ ಮಾತುಗಳನ್ನು ಇಲ್ಲಿ ಹೋಲಿಕೆಗಾಗಿ ನೆನೆಯಬಹುದು—"....:all good poetry is the spontaneous overflow of powerful feelings."]

ಗಳಲ್ಲಿ. ಅಲ್ಲಿಯ ಅರುವತ್ತುಮೂವರು ಭಕ್ತರೇ ವೀರಶೈವರಿಗೆ ಪೂಜ್ಯರಾದ 'ಪುರಾತನ'ರು. ಆ ಶೈವಭಕ್ತರು ಅಥವಾ ನಾಯನಾರರು ಸ್ಥಳದಿಂದ ಸ್ಥಳಕ್ಕೆ ಪುಣ್ಯಕ್ಷೇತ್ರದಿಂದ ಪುಣ್ಯಕ್ಷೇತ್ರಕ್ಕೆ ಸುತ್ತುತ್ತಿದ್ದು, 'ಯಾಟ್' ಎಂಬ ವಾದ್ಯವನ್ನು ಹಿಡಿದು ಶಿವಸ್ತೋತ್ರಗಳನ್ನು ಹಾಡುತ್ತಿದ್ದಂತೆ ತಿಳಿದುಬಂದಿದೆ. ಹತ್ತು ವೃತ್ತಗಳಿರುವ ಪದಸಮೂಹಕ್ಕೆ 'ಪದಿಗಂ' ಎಂದು ಕರೆಯುತ್ತಾರೆ. ಈ ಪದಿಗಗಳ ಸಂಗ್ರಹಗಳೇ 'ತೇವಾರಂ'ಗಳು. 'ತೇವಾರಂ' ಎಂದರೆ 'ಭಗವಂತನ ನಾಮಸಂಕೀರ್ತನೆ' ಎಂದೂ, 'ಭಗವಂತನಿಗೆ ಅರ್ಪಿಸಿದ (ಸ್ತೋತ್ರಗಳ) ಹಾರ' ಎಂದೂ ಅರ್ಥವಾಗುತ್ತದೆ. ಈ ತೇವಾರಂಗಳನ್ನು ಈಗಲೂ ತಮಿಳುನಾಡಿನ ಶೈವ ದೇವಾಲಯಗಳಲ್ಲಿ ಹಾಡುತ್ತಾರೆ. ಅವುಗಳನ್ನು ಹಾಡುವವರನ್ನು 'ಓದುವಾರ್' ಎಂದು ಕರೆಯುತ್ತಾರೆ. ಪದಿಗದಲ್ಲಿ ಒಮ್ಮೊಮ್ಮೆ ಹನ್ನೊಂದು ವೃತ್ತಗಳಿರುವುದೂ ಉಂಟು. ಒಂದೊಂದು ಪದಿಗಕ್ಕೂ ರಾಗನಿರ್ದೇಶನವುಂಟು. ಒಂದೊಂದು ವೃತ್ತದಲ್ಲೂ ದ್ವಿತೀಯ ಪ್ರಾಸವಿರುವ ನಾಲ್ಕು ಪಾದಗಳಿರುತ್ತವೆ. ಅಷ್ಟೇ ಅಲ್ಲ, ಒಂದೊಂದು ಪಾದದಲ್ಲೂ ತೆಲುಗಿನ ವಡಿಯನ್ನು[1] ಹೋಲುವ ಒಳಪ್ರಾಸವುಂಟು, ಎಂದರೆ ಪಾದದ ಮೊದಲ ಅಕ್ಷರ ಪಾದದ ಮಧ್ಯೆ ಗಣದ ಮೊದಲನೆ ಅಕ್ಷರವಾಗಿ ಪುನರಾವರ್ತನೆಗೊಳ್ಳುತ್ತದೆ. ತಮಿಳಲ್ಲಿ ಇದನ್ನು ಮೋನೈ ಎಂದು ಕರೆಯುತ್ತಾರೆ. ಪಾದದ ಮೊದಲ ಅಕ್ಷರ ಲಘುವಾಗಿದ್ದರೆ ಉಳಿದ ಪಾದಗಳ ಮೊದಲ ಅಕ್ಷರಗಳೂ ಲಘುವಾಗಿರಬೇಕು, ಗುರುವಾಗಿದ್ದರೆ ಅವೂ ಗುರುವಾಗಿರಬೇಕು. ನಮ್ಮ ವಚನಕಾರರಲ್ಲಿ ಅತ್ಯಂತ ಪ್ರಾಚೀನನಾದ ದೇವರ ದಾಸಿಮಯ್ಯನ ವಚನಗಳಲ್ಲಿ ಇಷ್ಟು ನಿಯಮಗಳ ಅನುಸರಣೆ ಕಂಡುಬರುವುದಿಲ್ಲ. ಅವನ ವಚನಗಳಲ್ಲಿ ಎಲ್ಲೋ ಕೆಲವನ್ನು ಮಾತ್ರ ನಾಲ್ಕು ಸಾಲಿನ ಪದ್ಯಗಳಾಗಿ ವಿಂಗಡಿಸಲು ಸಾಧ್ಯವಾಗಬಹುದು. ದ್ವಿತೀಯ ಪ್ರಾಸವಿದ್ದರೂ, ತಮಿಳಿನ 'ಮೋನೈ' ಕಂಡುಬರುವುದಿಲ್ಲ. ಯಾವ ವಚನಕ್ಕೂ ರಾಗ ನಿರ್ದೇಶವಿಲ್ಲ. ಅಕ್ಕಮಹಾದೇವಿಯ ಒಂದೇ ಒಂದು ವಚನ ರಾಗ ನಿರ್ದೇಶನದೊಡನೆ ದೊರಕುತ್ತದೆ.[2] ಇನ್ನಾವ ವಚನವೂ ಈ ರೀತಿ ರಾಗಸಹಿತವಾಗಿ ದೊರಕಿರುವುದು ಕಂಡುಬಂದಿಲ್ಲ. ತಮಿಳಿನ ತೇವಾರಂ ಸ್ತೋತ್ರ ಗೀತಗಳನ್ನು ಹೋಲುವ ಯಾವುದಾದರೂ ರಚನೆ ಇದ್ದರೆ ಅದು ವಚನ ಸಾಹಿತ್ಯವಲ್ಲ, ಬಸವ, ಚನ್ನಬಸವ, ಸಿದ್ಧರಾಮ ಮುಂತಾದವರು ಹಾಡಿದರು ಎಂದು ರಾಗ ನಿರ್ದೇಶನದೊಂದಿಗೆ ಅವರವರ ಅಂಕಿತಗಳೊಂದಿಗೆ ಶೂನ್ಯ ಸಂಪಾದನೆ

---

1. ವಡಿಯ ವಿಚಾರವನ್ನು ತಿಳಿಯಬಯಸುವವರು ಡಾ|| ಎ. ಆರ್. ಕೃಷ್ಣಶಾಸ್ತ್ರಿಗಳವರು ಸಂಪಾದಿಸಿರುವ ಕವಿಜಿಹ್ವಾಬಂಧನದ ಮುನ್ನುಡಿಯನ್ನು ನೋಡಬಹುದು. ತೆಲುಗು ಛಂದೋಗ್ರಂಥಗಳಾದ ಕವಿಜನಾಶ್ರಯಮು ಮತ್ತು ಅಪ್ಪಕವೀಯಮುಗಳಲ್ಲಿ ವಡಿಯ ವಿಸ್ತಾರವಾದ ಪ್ರಸ್ತಾಪವಿದೆ.

2. ಕಾವ್ಯ ಸಮೀಕ್ಷೆ, ಪು. 126-127.

ಯಲ್ಲಿ ಸಿಗುವ 'ಪದ'ಗಳು. (ಇದರ ವಿವರಣೆಗೆ ಮುಂದೆ ನೋಡಿ.) ಹೀಗೆ ವಚನ ಸಾಹಿತ್ಯಕ್ಕೂ ಶೈವಸ್ತೋತ್ರ ಸಾಹಿತ್ಯಕ್ಕೂ ರೀತಿಯಲ್ಲಿ ಅಂತಹ ಸಂಬಂಧವೇನೂ ಇದ್ದಂತೆ ಕಾಣದು. ಇನ್ನು ವಚನ ಸಾಹಿತ್ಯದ ಮೂಲವನ್ನು ಸಂಸ್ಕೃತದ 'ಛಂದೋಗಂಧಿ' ಎಂಬ ಪ್ರಕಾರದಲ್ಲಿ ಹುಡುಕುವುದು ಎಷ್ಟರಮಟ್ಟಿಗೆ ಸಫಲವೋ ತಿಳಿಯದು. ವಚನರಚನೆಗೆ ಮೂಲವನ್ನು ಮಾದರಿಯನ್ನು ಅನ್ಯ ಭಾಷಾಸಾಹಿತ್ಯಗಳಲ್ಲಿ ಹುಡುಕುವುದಕ್ಕಿಂತ ನಮ್ಮ ಕನ್ನಡದಲ್ಲೇ ಹುಡುಕುವುದು ಹೆಚ್ಚು ಸೂಕ್ತ, ಫಲಕಾರಿ. ಅಲ್ಲದೆ ವಚನಕಾರರ ಪ್ರಧಾನ ಉದ್ದೇಶ ಅನ್ಯಭಾಷೆಗಳ ಮಾದರಿಯಲ್ಲಿ ಕನ್ನಡದಲ್ಲಿ ಸಾಹಿತ್ಯರಚನೆ ಮಾಡಿ ಕನ್ನಡಸಾಹಿತ್ಯವನ್ನು ಪುಷ್ಟಿಗೊಳಿಸುವುದಾಗಿರಲಿಲ್ಲ. ಸಾಹಿತ್ಯ ಸೃಷ್ಟಿಗೆಂದೇ ಹೊರಡುವವರು ನೂತನತೆಗಾಗಿ ಅನ್ಯಭಾಷೆಯ ಶೈಲಿಯನ್ನು ಹೊಸದಾಗಿ ತಮ್ಮ ಭಾಷೆಯಲ್ಲಿ ತರಲು ಪ್ರಯತ್ನಪಡಬಹುದು. ವಚನಕಾರರ ಸದ್ಯದ ಉದ್ದೇಶ ಜನಸಾಮಾನ್ಯರಿಗೆ ತಿಳಿಯುವಂತೆ ಅವರ ಭಾಷೆಯಲ್ಲಿ ಸಾಧ್ಯವಾದರೆ ಅವರ ಶೈಲಿಗೆ ಸಮೀಪವಾದ ಶೈಲಿಯಲ್ಲಿ ಅವರಿಗೆ ಪ್ರಿಯವಾಗುವಂತೆ ಗಹನವಾದ ವಿಚಾರಗಳನ್ನು ಹೇಳುವುದಾಗಿತ್ತು.

ವಚನಸಾಹಿತ್ಯ ಹುಟ್ಟಿದ್ದೇ ಧರ್ಮಪ್ರಸಾರಕ್ಕಾಗಿ. ಧರ್ಮಪ್ರಸಾರಕರು ಸಾಮಾನ್ಯ ಜನತೆಯ ಮಧ್ಯೆ ಧರ್ಮಪ್ರಸಾರ ಮತ್ತು ಬೋಧನೆಗಳನ್ನು ಮಾಡಬೇಕಾದಾಗ ಅವರಿಗೆ ಅರ್ಥವಾಗುವ ಮತ್ತು ಮೆಚ್ಚುಗೆಯಾಗುವ ಭಾಷೆ ಮತ್ತು ರೀತಿಗಳನ್ನು ಆಶ್ರಯಿಸುವುದು ಅತ್ಯಂತ ಸಹಜ. ಇತಿಹಾಸವೂ ಇದಕ್ಕೆ ಪುಷ್ಟಿ ಕೊಡುತ್ತದೆ. ವಚನಕಾರರೂ ಅದೇ ಕೆಲಸವನ್ನು ಮಾಡಿದರು. "ದೇವವಾಣಿಗೆ ಜನವಾಣಿಯಾಗುವುದು ಅಸಾಧ್ಯವಾದಾಗ ಜನವಾಣಿಯನ್ನೆ ದೇವವಾಣಿಯ ಮಟ್ಟಕ್ಕೇರಿಸಿದ ಪವಾಡ ವೀರಶೈವ ವಚನಕಾರರದು."[1] ಜನಸಾಮಾನ್ಯಕ್ಕೆ ಅತಿ ಪರಿಚಿತವಾಗಿದ್ದ ಸರಳಭಾಷೆಯನ್ನು ವಚನಕಾರರು ಬಳಸಿಕೊಂಡಂತೆ ಅವರಿಗೆ ಪರಿಚಿತವಾಗಿದ್ದ ಮತ್ತು ಅವರಲ್ಲಿ ಜೀವಂತವಾಗಿದ್ದ ರೀತಿಯನ್ನೂ ಬಳಸಿಕೊಂಡರು. ವಚನ ಸಾಹಿತ್ಯದ ಮೂಲವನ್ನು ಕಾಣಬಯಸುವವರು ಸಾಮಾನ್ಯ ಜನತೆಗೇ ಹೋಗಬೇಕು.

ವಚನಸಾಹಿತ್ಯವಾಹಿನಿ "ಕಣ್ಣಿಗೆ ಕಾಣುವನಿತು ಹೆಸರು ಹೊಂದುವನಿತು ವಿಶಾಲವಾದುದು ಬಸವಣ್ಣನವರ ಕಾಲದಲ್ಲಿಯೇ, ಅವರ ಕೈವಾಡದ ಫಲವಾಗಿಯೇ" ಎಂಬ ಮಾತು ನಿಜವಾದರೂ, "ಬಸವಣ್ಣನವರು, ಅಲ್ಲಮಪ್ರಭು, ಚನ್ನಬಸವೇಶ್ವರ-ಇವರ ವಚನಗಳಲ್ಲಿ ದೊರೆಯುವ ಎಲ್ಲ ಲಕ್ಷಣಗಳಿಗೂ ಮೂಲಸ್ಥಾನ ದೇವರ

1. ಶಿ. ಶಿ. ಬಸವನಾಳ: ಶ್ರೀ ಬಸವಣ್ಣನವರ ಷಟ್ಸ್ಥಲದ ವಚನಗಳು, ಪೀಠಿಕೆ, ಪು. ii.

ದಾಸಿಮಯ್ಯ"[1] ಎಂಬ ಮಾತೂ ನಿಜ. ಬಸವಣ್ಣನವರ ಕಾಲ ಸು. ೧೧೬೦ ಎಂದಿಟ್ಟುಕೊಂಡರೆ, ಅವರಿಗಿಂತ ಹೆಚ್ಚುಕಡಮೆ ನೂರಿಪ್ಪತ್ತು ವರ್ಷಗಳಷ್ಟು ಹಿಂದಿನವನು ದೇವರ ದಾಸಿಮಯ್ಯ. ಬಸವಣ್ಣನವರು ತಮ್ಮ ವಚನಗಳಲ್ಲಿ 'ಆದ್ಯರ ವಚನ'ಗಳನ್ನು ಕೊಂಡಾಡಿರುವುದಲ್ಲದೆ ಅನೇಕ ಕಡೆ ದೇವರ ದಾಸಿಮಯ್ಯನನ್ನು ಸ್ತುತಿಸಿದ್ದಾರೆ. (ಬಸವಣ್ಣನವರ ಷಟ್ಸ್ಥಲದ ವಚನಗಳು, ಪು. ೩೮, ೮೦, ೮೧, ೧೧೨, ೧೯೯.) ಬಸವಣ್ಣನವರ ಸಮಕಾಲೀನನಾದ ಅಂಬಿಗರ ಚೌಡಯ್ಯ ದೇವರ ದಾಸಿಮಯ್ಯನ ಇಡೀ ವಚನವೊಂದನ್ನು ತನ್ನ ವಚನದಲ್ಲಿ ಬಳಸಿಕೊಂಡಿದ್ದಾನೆ— "ಶುಕ್ಲ ಶೋಣಿತ ಪಿಂಡೈಕ್ಯನ ಚಿತ್ತವಾಯು ಆಱುದಳದ ಪದ್ಮದಲ್ಲಿಹುದು. ಮೊಲೆ ಮೂಡಿ ಬಂದರೆ ಆ ಪಿಂಡವನ್ನು ಹೆಣ್ಣೆಂಬರು, ಗಡ್ಡ ಮೀಸೆಗಳು ಬಂದಡೆ ಆ ಪಿಂಡ ವನು ಗಂಡೆಂಬರು, ಆ ಇಬ್ಬರ ನಡುವೆ ಸುೞಿವ ಆತ್ಮನು ಹೆಣ್ಣೂ ಅಲ್ಲ, ಗಂಡೂ ಅಲ್ಲ ನೋಡಾ. ಇವಱಂತುವ ತಿಳಿದು ನೋಡಿಹೆನೆಂದೊಡೆ ಶ್ರುತಿಗಗೋಚರವೆಂದಾತ ನಂಬಿಗರ ಚೌಡಯ್ಯ.[2]" ಈ ವಚನದಲ್ಲಿ "ಮೊಲೆ ಮುಡಿ ಬಂದರೆ ಹೆಣ್ಣೆಂಬರು ಗಡ್ಡ ಮೀಸೆ ಬಂದರೆ ಗಂಡೆಂಬರು, ನಡುವೆ ಸುಳಿವ ಆತ್ಮನು ಗಂಡೂ ಅಲ್ಲ ಹೆಣ್ಣೂ ಅಲ್ಲ ಕಾಣಾ ರಾಮನಾಥಾ"[3] ಎಂಬ ದಾಸಿಮಯ್ಯನ ವಚನ ಒಂದೆರಡು ವ್ಯತ್ಯಾಸ ಗಳೊಂದಿಗೆ ಅಡಗಿರುವುದನ್ನು ಕಾಣಬಹುದು. (ಮುಂದಿನ ವಚನಕಾರರ ಮೇಲೆ ಆದ ದಾಸಿಮಯ್ಯನ ತುಂಬು ಪ್ರಭಾವಕ್ಕೆ ಇದು ಒಂದು ಉತ್ತಮ ನಿದರ್ಶನ.) ದೇವರದಾಸಿಮಯ್ಯ .ಕ್ರಿ. ಶ. ೧೦೧೮ ರಿಂದ ೧೦೪೨ರವರೆಗೆ ಆಳಿದ ಚಾಳುಕ್ಯ ಜಯಸಿಂಹನ ಪತ್ನಿ ಸುಗ್ಗಲೆಗೆ ಧರ್ಮದೀಕ್ಷೆಯನ್ನು ಕೊಟ್ಟಂತೆ ವೀರಶೈವ ಪುರಾಣ ಗಳು ('ದೇಸಿಂಗ' ಎಂದು ಆ ರಾಜನನ್ನು ಹೆಸರಿಸಿವೆ) ಹೇಳುತ್ತವೆ. ಕವಿಚರಿತೆ ಕಾರರು ದಾಸಿಮಯ್ಯನಿಗೆ ಸು. ೧೦೪೨ ಎಂದು ಕಾಲವನ್ನು ಹೇಳಿದ್ದಾರೆ. ರಾಷ್ಟ್ರ ಕವಿ ಗೋವಿಂದಪೈ ಅವರು ಅವನ ಕಾಲವಿಚಾರವಾಗಿ ಒಂದು ಲೇಖನವನ್ನು

---

1. ಎಂ. ಆರ್. ಶ್ರೀನಿವಾಸಮೂರ್ತಿ : ವಚನಧರ್ಮಸಾರ, ಪು. ೨೨೩. ಶ್ರೀ ಜ. ಚ. ನಿ. ಅವರು "ಸೂತ್ರಪ್ರಾಯವಾದ ದಾಸಮಯ್ಯನ ವಚನಗಳಿಗೆ ಬಸವಣ್ಣನವರ ವಚನ ಭಾಷ್ಯದಂತಿದೆ" ಎಂದು ಹೇಳಿ ದಾಸಿಮಯ್ಯನ ಪ್ರಭಾವ ಬಸವಣ್ಣನವರ ಮೇಲೆ ಆಗಿರುವುದಕ್ಕೆ ಅನೇಕ ನಿದರ್ಶನಗಳನ್ನು ಕೊಟ್ಟಿದ್ದಾರೆ—ದೇವರ ದಾಸಿಮಾರ್ಯ ಪ್ರಶಸ್ತಿ, ಪು. ೧೪೦–೧೪೫.

2. ಆರ್. ನರಸಿಂಹಾಚಾರ್, ಕರ್ಣಾಟಕ ಕವಿಚರಿತೆ—೧, ಪು. ೯೯೧.

3. ಫ. ಗು. ಹಳಕಟ್ಟಿ : ದೇವರ ದಾಸಿಮಯ್ಯನ ವಚನಗಳು, ಪು. ೬೮. 'ದೇವರ ದಾಸಿಮಾರ್ಯ ಪ್ರಶಸ್ತಿ' ಎಂಬ ಗ್ರಂಥದಲ್ಲಿ ದಾಸಿಮಯ್ಯನ ವಚನಗಳನ್ನು ತಪ್ಪಿರುವ ಕಡೆ ತಿದ್ದಿ ಪ್ರಕಟಿಸಿರುವುದಾಗಿ ಹೇಳಿಕೊಂಡಿದ್ದಾರೆ. ಹೀಗೆ ತಿದ್ದಲು ಬೇರೆ ಪ್ರತಿಗಳನ್ನು ಬಳಸಿ ಕೊಂಡಂತೆ ತೋರುವುದಿಲ್ಲ. ಅಶುದ್ಧವಾಗಿದ್ದರೂ ರಾ. ಬ. ಹಳಕಟ್ಟಿಯವರ ಸಂಸ್ಕರಣವನ್ನೇ ಈ ಲೇಖನದಲ್ಲಿ ಬಳಸಿಕೊಂಡಿದೆ.

ಬರೆದು "ಆತನು ಕ್ರಿ. ಶ. ಸು. ೯೮೦ರಲ್ಲಿ ಹುಟ್ಟಿ ಕ್ರಿ. ಶ. ಸು. ೧೦೪೦ರಲ್ಲಿ ಶಿವೈಕ್ಯನಾಗಿರಬಹುದು" ಎಂದು ತೀರ್ಮಾನಿಸಿದ್ದಾರೆ.[1]

ನಮಗೆ ಈಗ ದೊರಕಿರುವ ವಚನಗಳಲ್ಲಿ ಅತ್ಯಂತ ಪ್ರಾಚೀನವೆಂದರೆ ಈ ದಾಸಿಮಾರ್ಯನ ವಚನಗಳು. ಅವನಿಗಿಂತ ಹಿಂದೆ ವಚನಸಾಹಿತ್ಯ ಇದ್ದಿರಬಹುದಾದರೂ ವಚನಗಳ ಅತ್ಯಂತ ಪ್ರಾಚೀನ ಸ್ವರೂಪವನ್ನು ಕಾಣಬಯಸುವವರು ಇವನ ವಚನಗಳಿಗೇ ಮರೆಹೊಗಬೇಕು. ಬಸವಣ್ಣ, ಅಲ್ಲಮ ಮುಂತಾದ ವಚನಕಾರರ ವಚನಗಳೇನಿದ್ದರೂ ದಾಸಿಮಯ್ಯನ ವಚನಗಳ ಬೆಳವಣಿಗೆಗಳು;[2] ಅವು ಪ್ರಾಚೀನ ವಚನ ಸಾಹಿತ್ಯದ ಲಕ್ಷಣಗಳನ್ನು ಅವಶೇಷರೂಪದಲ್ಲಿ ಅಥವಾ ಪಳೆಯುಳಿಕೆಗಳ ರೂಪದಲ್ಲಿ ಉಳಿಸಿಕೊಂಡಿರಬಹುದು ಅಷ್ಟೇ.

ದೇವರ ದಾಸಿಮಯ್ಯನ ವಚನಗಳಲ್ಲಿ ವಿಚಾರವಿದೆ, ಕಾಂತಿಯಿದೆ, ಹರಿತವಾದ ಶಕ್ತಿಯಿದೆ, ಕಾವ್ಯವಿದೆ, ಕಾವ್ಯದ ಲಯವಿದೆ. ನಮಗೆ ಪ್ರಸಕ್ತವಾದ್ದು ಕೊನೆಯದು. ಈ ಲಯ ಹುಡುಕಿದರೆ ಮಾತ್ರ ಸಿಕ್ಕುವಂತಹ ಸ್ಥಿತಿಯಲ್ಲಲ್ಲ, ಅಷ್ಟೊಂದು ಎಚ್ಚರಿಕೆಯಿಂದ ಓದದವನಿಗೂ ಕೂಡ ಅದು ಥಟ್ಟನೆ ಗೊತ್ತಾಗಬಲ್ಲುದು. ಅಷ್ಟೇ ಅಲ್ಲ, ಕೆಲವು ವಚನಗಳು ಪದ್ಯಗಳೋ ಏನೋ ಎಂಬ ಭ್ರಾಂತಿಯನ್ನು ಬರಿಸಬಲ್ಲವು. ಕೆಲವು ಉದಾಹರಣೆಗಳು—

ಕೆಲವು ವಚನಗಳನ್ನು ನಾಲ್ಕು ಸಾಲಿನ ಪದ್ಯಗಳಾಗಿ ವಿಂಗಡಿಸಬಹುದು, ಪ್ರಾಸದ ಸಹಾಯದಿಂದ.

ಮಣಿಗಳ ಸೂತ್ರದಂತೆ ತ್ರಿನಯನ ನೀನಿಪ್ಪೆಯಯ್ಯಾ
ಎಣಿಸುವಡೆ ತನುಭಿನ್ನ ಆತ್ಮನೊಬ್ಬನೇ
ಅಣುರೇಣು ಮಧ್ಯದಲ್ಲಿ ಗುಣಭರಿತ ನೀನೆಂದು
ಮಣಿವುತಿಪ್ಪೆನಯ್ಯ ರಾಮನಾಥಾ || [ವಚನ. ೩]
ಪರವಧುವ ನೆರೆಯದೆ ಪರಧನವ ತುಡುಕದೆ
ಪರದೈವದಿಚ್ಛೆ ನಡೆಯದೆ ಗುರುಲಿಂಗ ಜಂಗಮಕ್ಕೆ
ವರದಾಸನಾದಾತನೆ ಧರೆಮೂರಕ್ಕೆ
ಗುರುವಾಗಿಪ್ಪನೈ ರಾಮನಾಥಾ || [೬೧]

ಮೇಲಿನ ವಚನಗಳು ಮಾತ್ರಾಗಣದ ವಿವಕ್ಷೆಗಾಗಲಿ ಅಂಶಗಣದ ವಿವಕ್ಷೆಗಾಗಲಿ ಸಿಗುವುದಿಲ್ಲ. ಕೆಲವು ವಚನಗಳನ್ನು ಮೂರು ಸಾಲಿನ ಪದ್ಯಗಳಾಗಿ ವಿಂಗಡಿಸಬಹುದು.—

---

1. ದೇವರ ದಾಸಿಮಾರ್ಯ ಪ್ರಶಸ್ತಿ, ಪು. ೧೯೧.

2. ಶೂನ್ಯ ಸಂಪಾದನೆಕಾರನು ದಾಸಿಮಯ್ಯನನ್ನು ಬಸವ, ಅಲ್ಲಮ ಮುಂತಾದವರ ಸಮಕಾಲೀನನೆಂದು ಭಾವಿಸಿದ್ದಾನೆ. ಬಸವ, ಅಲ್ಲಮ, ಸಿದ್ಧರಾಮ ಮುಂತಾದವರಿದ್ದ ಗೋಷ್ಠಿಯಲ್ಲಿ ಇವನೂ ಒಂದು ವಚನವನ್ನು ನುಡಿದಂತೆ ನಿರೂಪಿತವಾಗಿದೆ. ನೋಡಿ—ಶ್ರೀ ಭೂಸನೂರ ಮಠ ಅವರು ಸಂಪಾದಿಸಿರುವ ಶೂನ್ಯ ಸಂಪಾದನೆ, ಪು. ೨೧೫.

ನಾನೊಂದು ಸುರಿಗೆಯನೇನೆಂದು ಹಿಡಿವೆನು
ಏನಕಿತ್ತೇನನಿರಿವೆನು ಜಗವೆಲ್ಲ
ನೀನಾಗಿಪ್ಪೆ ಕಾಣಾ ರಾಮನಾಥಾ || [೪೪]

ಇಲ್ಲಿಯೇನೋ ಅಂಶಗಣ ಘಟಿತ ತ್ರಿಪದಿಯೊಂದರ ಲಕ್ಷಣಗಳಿವೆ. ೯ ಮತ್ತು ೧೧ನೆ ಗಣಗಳು ವಿಷ್ಣು ಬದಲು ರುದ್ರ ಆಗಿವೆ. ಇಷ್ಟು ಸಲಕ್ಷಣವಾದ ವಚನಗಳು ತುಂಬಾ ಕಡಿಮೆ.

ಜ್ವರವಿಡಿದ ಬಾಯಿಗೆ ನೊರೆವಾಲು ಒಲಿವುದೆ
ನರಕದಲ್ಲಿ ಬೀಳುವ ಮನುಜರಿಗೆ ಶಿವಭಕ್ತಿ ಏಂಬುದು
ಕರಗಹಿ ಕಾಣಾ ರಾಮನಾಥಾ [೨೬]

ಇಲ್ಲಿ ನಾಲ್ಕು ಕಡೆ ವಿಷ್ಣುವಿನ ಬದಲು ರುದ್ರ ಬಂದಿರುವುದಲ್ಲದೆ,[1] ಎರಡನೆಯ ಪಾದದಲ್ಲಿ 'ಎಂಬುದು' ಎಂಬ ಪದ ಹೆಚ್ಚಾಗಿ ಬಂದದ್ದರಿಂದ ಪದ್ಯದ ಪದ್ಯತ್ವ ಸ್ವಲ್ಪ ಕುಂದಿರುವುದನ್ನು ಗಮನಿಸಬಹುದು.

ಈಶನ ಶರಣರು ವೇಶಿಯ ಹೋದರೆ
ಮೀಸಲೋಗರವ ಹೊರಗಿರಿಸಿದಡೆ ಹಂದಿ
ಮೂಸಿ ನೋಡಿದಂತೆ ಕಾಣಾ ರಾಮನಾಥಾ || [೬೩]

ಇಲ್ಲಿ ಎರಡನೆಯ ಪಾದದಲ್ಲಿ ಮೂರನೆಯ ಗಣ ರುದ್ರವಾಗಿದೆ, ವಿಷ್ಣುವಿನ ಬದಲು. ಮೂರನೆಯ ಪಾದದಲ್ಲಿ ಹೆಚ್ಚು ಅಕ್ಷರಗಳನ್ನು ತಂದದ್ದರ ಪರಿಣಾಮವಾಗಿ ಅಂಶಗಣ ಘಟಿತ ತ್ರಿಪದಿಯಾಗಬಹುದಾಗಿದ್ದ ಪದ್ಯ ವಚನವಾಗಿ ಮಾರ್ಪಟ್ಟಿದೆ. ದಾಸಿಮಯ್ಯ ಬೇಕೆಂದೇ ಈ ಮಾರ್ಪಾಟನ್ನು ಮಾಡಿಕೊಂಡ ಎಂದು ಹೇಳುವುದಕ್ಕಿಂತ, ಅವನಿಗಿಂತ ಹಿಂದಿನ ವಚನಗಳು ತ್ರಿಪದಿಗಳಿಗೆ ಸಮೀಪವಾಗಿದ್ದು-ಕೆಲವು ವೇಳೆ ತ್ರಿಪದಿಗಳೇ ಆಗಿದ್ದು-,ಅವು ಪರಿವರ್ತನೆಯನ್ನು ಹೊಂದಿ ದಾಸಿಮಯ್ಯನ ಕಾಲಕ್ಕೆ ತ್ರಿಪದಿಯ ಕೆಲವು ಲಕ್ಷಣಗಳನ್ನು ಅದರ ಲಯವನ್ನು ಉಳಿಸಿಕೊಂಡು 'ವಚನ'ಗಳೆನ್ನಿಸಿಕೊಂಡುವು ಎಂದು ಹೇಳುವುದು ಹೆಚ್ಚು ಸಮರ್ಪಕವೆಂದು ಕಾಣುತ್ತದೆ. ಅವನ ವಚನಗಳು ಪದ್ಯಗಳಂತೂ ಅಲ್ಲ. ಪದ್ಯಗಳಂತೆ ಕಂಡುಬರುವ ವಚನಗಳು ಸರಿಯಾಗಿ ಗಣವಿಭಾಗವಾಗುವುದಿಲ್ಲ. ಕೆಲವು ವಚನಗಳು ಹದಿನೆಂಟು ಅಚ್ಚಿನ ಸಾಲುಗಳಷ್ಟು

---

1. ನಾಗವರ್ಮ ಹೇಳುವ ಚಿತ್ರಾ ಮತ್ತು ಚಿತ್ರಲತಿಕೆ ಎಂಬ ತ್ರಿಪದಿಯ ಪ್ರಭೇದಗಳಿಗೆ ಲಕ್ಷ್ಯಗಳು ಬೇರೆಡೆ ಅಷ್ಟಾಗಿ ಸಿಗುವುದಿಲ್ಲ. ತ್ರಿಪದಿಯ ಮೊದಲ ಮತ್ತು ಕೊನೆಯ ಗಣಸ್ಥಾನಗಳಲ್ಲಿ ವಿಷ್ಣು ಬದಲು ರುದ್ರವನ್ನು ತರುವ ಸಂಪ್ರದಾಯದ ಸೂಚನೆ ದಾಸಿಮಯ್ಯನ ವಚನಗಳಲ್ಲಿ ದೊರಕುತ್ತದೆ. ಆ ಸಂಪ್ರದಾಯಕ್ಕೆ ಮಾನ್ಯತೆ ಸಿಗದೆ ಕ್ರಮೇಣ ಬಿದ್ದುಹೋಗಿರಬೇಕು. ಅಥವಾ, ವಿಷ್ಣುಗಣಗಳ ಸ್ಥಾನದಲ್ಲಿ ೫ ಮಾತ್ರೆಗಳಷ್ಟು ಬೆಲೆಯುಳ್ಳ ಮಾತ್ರಾಗಣಗಳನ್ನು ತರುವ ರೂಢಿ ಆರಂಭವಾಗಿ, ಆ ಮಾತ್ರಾಗಣಗಳನ್ನೇ ರುದ್ರಗಣಗಳೆಂದು ನಾಗವರ್ಮ ಭ್ರಮಿಸಿದನೋ ?

ದೀರ್ಘವಾಗಿದ್ದರೆ ಇನ್ನು ಕೆಲವು ಒಂದೂವರೆ ಸಾಲಿನಷ್ಟು ಚಿಕ್ಕ ವಚನಗಳು. ಆದ್ದರಿಂದ ಇವು ನಿಜವಾಗಿಯೂ 'ವಚನ'ಗಳೇ.

ಇನ್ನು ಬಹುಪಾಲು ವಚನಗಳಲ್ಲಿ ಮೊದಲ ಪಾದದಲ್ಲಿ ಒಳಪ್ರಾಸ, ಮೊದಲೆರಡು ಪಾದಗಳಲ್ಲಿ ದ್ವಿತೀಯ ಪ್ರಾಸವಿದ್ದು ಆರಂಭದಲ್ಲಿ ತ್ರಿಪದಿಯ ಲಯವುಳ್ಳವು ಬೇಕಾದಷ್ಟಿವೆ.

ಕರಿಯ ನಿತ್ತಡೆ ಒಲ್ಲೆ ಸಿರಿಯನಿತ್ತಡೆ ಒಲ್ಲೆ
ಹಿರಿದಪ್ಪ ರಾಜ್ಯವನಿತ್ತಡೆ ಒಲ್ಲೆ................|| [೧]
ಧರಣಿಯ ಪಸರಿಸಿ ಉರಗನನಡಿಯಿಟ್ಟು
ಶರಧಿ ಏಳಕ್ಕೆ ಎರೆದನು...............|| [೬]
ಆಡಗನೊಳಗಣ ಹಾಲು ಅಡಗಿಪ್ಪ ಭೇದವನು
ಬೆಡಗಪ್ಪ ತುಪ್ಪದ.................|| [೮]
ಹಸಿವೆಂಬ ಹೆಬ್ಬಾವು ಬಸುರ ಬಂದು ಹಿಡಿದಡೆ
ವಿಷವೇರಿತ್ತಯ್ಯ............... || [೨೫]
ಹೊಲಬನರಿಯದ ಗುರುವು ಸುಲಭನಲ್ಲದ ಶಿಷ್ಯ
ಕೆಲಬಲನ ನೋಡಿ ವಿಚಾರಿಸಿ..........|| [೧೯]

ಹೀಗೆಯೇ ಅನೇಕ ನಿದರ್ಶನಗಳನ್ನು ಬೆಳಸಬಹುದು. ತ್ರಿಪದಿಯ ಲಯ ಈ ವಚನಕಾರನ ಮನಸ್ಸನ್ನು ತುಂಬಿತ್ತು ಎಂಬುದು ಸ್ಪಷ್ಟವಾಗುತ್ತದೆ.[1]

ಮೇಲೆ ಉದಾಹರಿಸಿರುವ ನಿದರ್ಶನಗಳಲ್ಲೆಲ್ಲಾ ಅಂಶಲಯವೋ ಅಥವಾ ಮಾತ್ರಾಲಯವೋ-ಅಂತೂ ಒಂದು ಲಯದ ಪ್ರತೀತಿ ನಮಗುಂಟಾಗುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಕನ್ನಡಕ್ಕೆ 'ಅತಿಶಯ'ವಾದ ದ್ವಿತೀಯ ಪ್ರಾಸ ಮತ್ತು ಒಳಪ್ರಾಸಗಳನ್ನು ಕಾಣಬಹುದು. ತ್ರಿಪದಿಯ ಅಥವಾ 'ಒಂದು ರೀತಿಯ' ಚತುಷ್ಪದಿಯ ಲಕ್ಷಣಗಳನ್ನು ಈತನ ವಚನಗಳು ಗರ್ಭೀಕರಿಸಿಕೊಂಡಿವೆ. ಇವೇ ಮುಂತಾದ ಕಾರಣಗಳಿಂದ ವಚನ ಸಾಹಿತ್ಯವು ಸಂಸ್ಕೃತದ 'ಛಂದೋ ಗಂಧಿ' ರಚನೆಯಿಂದ ಪ್ರಚೋದನೆ ಪಡೆಯಿತು ಎನ್ನುವುದಕ್ಕಿಂತ, ತಮಿಳಿನ ಸ್ತೋತ್ರಗೀತಗಳನ್ನು ಮಾದರಿಯಾಗಿಟ್ಟುಕೊಂಡು ಉದಯವಾಯ್ತು ಎನ್ನುವುದಕ್ಕಿಂತ, ಅದು ಕನ್ನಡದ ದೇಶೀಯವಾದ ಪದ್ಯಜಾತಿಯಿಂದಲೇ ಮೂಡಿಬಂದಿತು ಎಂಬುದು ಹೆಚ್ಚು ಸಕಾರಣವಾದುದು.

ಈಗ ದಾಸಿಮಯ್ಯನ ವಚನಗಳನ್ನು ಬಿಟ್ಟು ನಮ್ಮ ಛಂದಸ್ಸಿನ ಕಡೆ ಸ್ವಲ್ಪ ಹೊರಳೋಣ. ದಾಸಿಮಯ್ಯನ ಕಾಲಕ್ಕೆ ಕಾವ್ಯಗಳಲ್ಲಿ ಶಾಸನಗಳಲ್ಲಿ ಬಳಕೆಯಲ್ಲಿದ್ದ ಕನ್ನಡ ಮಟ್ಟುಗಳೆಂದರೆ ತ್ರಿಪದಿ, ಷಟ್ಪದಿ ಮತ್ತು ಪಿರಿಯಕ್ಕರಗಳು. ಇವುಗಳ

---

1 ದಾಸಿಮಯ್ಯನ ವಚನಗಳಲ್ಲಿ ನೂರಕ್ಕೆ ೫೮ ರಷ್ಟು ವಚನಗಳಲ್ಲಿ ತ್ರಿಪದಿಯ ಮೊದಲೆರಡು ಪಾದಗಳ ಲಯವಿದೆ.

ಜೊತೆಯಲ್ಲಿ ನಾಗವರ್ಮ ಮದನವತಿ, ಚೌಪದಿ, ಗೀತಿಕೆ, ಏಳೆ, ಉತ್ಸಾಹ, ಅಕ್ಕರಿಕೆ ಮತ್ತು ಛಂದೋವತಂಸಗಳ ಲಕ್ಷಣಗಳನ್ನು ಹೇಳುತ್ತಾನೆ; ಆದರೆ ಇವುಗಳಿಗೆ ಲಕ್ಷ್ಯ ಪದ್ಯಗಳು ಅಂಶದ ಲಯವು ಮಾತ್ರಾಲಯವಾಗಿ ತಿರುಗುವುದಕ್ಕೆ ಮುನ್ನ—ಎಂದರೆ ಸುಮಾರು ಹನ್ನೆರಡನೆ ಶತಮಾನಕ್ಕೆ ಮುನ್ನ ದೊರೆಯುವುದಿಲ್ಲ. ಕೆಲವಕ್ಕೆ ಮುಂದೆಯೂ ದೊರೆಯುವುದಿಲ್ಲ.[1] ಪಿರಿಯಕ್ಕರವನ್ನು ನಮ್ಮ ಈ ಸಮಾಲೋಚನೆಯಲ್ಲಿ ಬಿಟ್ಟುಬಿಡಬಹುದು. ಅದು ಎಂದೂ ಜನಪ್ರಿಯವಾಗಿದ್ದಿಲ್ಲ, ಅದರಲ್ಲಿ ಸ್ವತಂತ್ರ ಕೃತಿಗಳೂ ಹುಟ್ಟಲಿಲ್ಲ. ಹನ್ನೊಂದನೆ ಶತಮಾನದ ಹೊತ್ತಿಗೆ ಷಟ್ಪದಿಗೆ ದೊರಕುವ ಲಕ್ಷ್ಯ ಪದ್ಯಗಳು ಬೆರಳ ಮೇಲೆಣಿಸುವಷ್ಟು—ನಾಲ್ಕು ಅಥವಾ ಐದು. ಪ್ರಾಚೀನ ಷಟ್ಪದಿಯ ಎಲ್ಲ ಲಕ್ಷಣಗಳನ್ನೂ ಒಳಗೊಂಡಿದ್ದು ಯಾವ ಸಂದೇಹಕ್ಕೂ ಅವಕಾಶವೀಯದೆ ಪಾಠಾಂತರಗಳ ಕ್ಲೇಶವಿಲ್ಲದೆ ಸಿಗುವ ಪದ್ಯವೆಂದರೆ ಶಾಂತಿನಾಥನ 'ಸುಕುಮಾರ ಚರಿತೆ' ಯದು.[2] ಷಟ್ಪದಿ ಜನಪ್ರಿಯವಾದದ್ದು ರಾಘವಾಂಕನಿಂದ ಈಚೆಗೆ, ಎಂದರೆ ಹದಿಮೂರನೇ ಶತಮಾನದ ನಂತರ. ಕನ್ನಡ ಛಂದಸ್ಸಿನ ಇತಿಹಾಸದಲ್ಲಿ ಹಿಂದೆ ಜನಪ್ರಿಯವಾಗಿದ್ದು ಉದ್ದಕ್ಕೂ ಜನಪ್ರಿಯತೆಯನ್ನು ಉಳಿಸಿಕೊಂಡು ಬಂದ ಪದ್ಯಜಾತಿಯೆಂದರೆ ತ್ರಿಪದಿಯೊಂದೇ.[3] ನಮ್ಮ ಜನಪದ ಗೀತೆಗಳೆಲ್ಲಾ ತ್ರಿಪದಿಮಯ.[4] ಅತ್ಯಂತ ಜನಪ್ರಿಯಗಳಾಗಿರುವ ಸರ್ವಜ್ಞನ ವಚನಗಳೂ ತ್ರಿಪದಿಗಳೇ. (ತ್ರಿಪದಿಗಳನ್ನು ವಚನಗಳೆಂದು ಕರೆದಿರುವುದು ಗಮನಾರ್ಹ. ಮುಪ್ಪಿನ ಷಡಕ್ಷರಿಯ ಷಟ್ಪದಿಗಳನ್ನೂ ವಚನಗಳೆಂದು ಕರೆದಿದ್ದಾರೆ.) ಅಷ್ಟೇ ಅಲ್ಲ, ೧೨ ನೇ ಶತಮಾನಕ್ಕೆ ಮುನ್ನ ನಮಗೆ ಕಾವ್ಯಗಳಲ್ಲಿ ಶಾಸನಗಳಲ್ಲಿ ನೂರಾರು ತ್ರಿಪದಿಗಳು ದೊರಕುತ್ತವೆ (ಅನುಬಂಧವನ್ನು ನೋಡಿ). ಇನ್ನುಳಿದ ದೇಶೀಯವಾದ ಪದ್ಯ ಜಾತಿಗಳಿಗಿಂತ ತ್ರಿಪದಿ ಹೆಚ್ಚು ಸಂಖ್ಯೆಯಲ್ಲಿ ದೊರಕುವುದು ಅದರ ಜನಪ್ರಿಯತೆಯನ್ನು ಸೂಚಿಸುತ್ತದೆ. ಶಾಸನ ಕವಿಯೊಬ್ಬ ತಾನು ವೇದವೇದಾಂಗ

---

1. ಕವಿರಾಜ ಮಾರ್ಗದಲ್ಲಿ ಮತ್ತು ಕಾವ್ಯಾವಲೋಕನದಲ್ಲಿ 'ಗೀತಿಕೆ' ಗಳು ದೊರೆತರೂ ನಾಗವರ್ಮನ ಲಕ್ಷಣಗಳಿಗೆ ಅನುಸಾರಿಯಾಗಿಲ್ಲ.

2. ತೀ. ನಂ. ಶ್ರೀಕಂಠಯ್ಯ : ಸಮಾಲೋಕನ, 'ಅಪೂರ್ವ ಷಟ್ಪದಿಯ ಲಕ್ಷಣ.'

3. ತ್ರಿಪದಿಯ ಇತಿಹಾಸಕ್ಕೆ ನೋಡಿ—ಕನ್ನಡ ಕೈಪಿಡಿ (ಸಂಪುಟ ೧), ಪು. ೧೨೦-೧೨೫.

4. ತ್ರಿಪದಿಯನ್ನು ಕುರಿತು ಶ್ರೀ. ಬಿ. ಎಂ. ಶ್ರೀ. ಅವರ ಮಾತುಗಳು—"ಇವುಗಳ ಛಂದಸ್ಸು ಬಹು ಸಹಜ, ಸರಳ; ಭಾಷೆಯೂ ಸಹಜ, ಸರಳ; ಆಡುವ ಮಾತು, ಹಾಡುವ ಮಟ್ಟು". ಶ್ರೀ. ದ. ರಾ. ಬೇಂದ್ರೆ ಅವರ ಮಾತುಗಳು— "ಜೀವನವೇ ದೇವತೆಯಾದ, ತ್ರಿಪದಿ ಛಂದದಲ್ಲಿ ಹೊರಹೊಮ್ಮಿದ 'ಗರತಿಯ ಹಾಡಿ'ನ ಋಷಿಗಳು ಹೆಣ್ಣುಮಕ್ಕಳು—ನಮ್ಮ ತಾಯಿ ತಂಗಿಯರು, ಅಮ್ಮ ಅಕ್ಕಂದಿರು, ಮುದದಿ ಮಕ್ಕಳು; ಹಾಗೆ ವಿಚಾರಿಸಿ ನೋಡಿದರೆ ಅವರದೇ ನಿಜವಾದ ಕಾವ್ಯ; ಉಳಿದುದು ಕಾವ್ಯದ ಛಾಯೆ........ತ್ರಿಪದಿಯೇ ಕನ್ನಡ ವೃತ್ತಗಳ ಗಾಯತ್ರಿ."

(ಗರತಿಯ ಹಾಡು, ಪ್ರಸ್ತಾವನೆ ಮತ್ತು ಪರಿಚಯ.)

ಗಳನ್ನು ಓದದೆ ಇದ್ದರೂ ಶಾಸ್ತ್ರದ ಆದಿ ಮಧ್ಯಾಂತಗಳನ್ನು ಅರಿಯದಿದ್ದರೂ ತನಗೆ ಕವಿತಾ ಶಕ್ತಿ ಸಹಜವಾಗಿ ಬಂದಿದೆ ಎಂದು ತ್ರಿಪದಿಯೊಂದರಲ್ಲಿ ಹೇಳಿಕೊಂಡಿದ್ದಾನೆ. (ಅವನು ತಕ್ಕಮಟ್ಟಿಗೆ ವಿದ್ಯಾವಂತನಾಗಿದ್ದ ಎಂಬುದಕ್ಕೆ ಆ ಶಾಸನದಲ್ಲಿ ಎರಡು ತ್ರಿಪದಿಗಳ ಜೊತೆಯಲ್ಲಿ ಎರಡು ಕಂದಪದ್ಯಗಳೂ ಇವೆ).[1] ತ್ರಿಪದಿ ಜನತೆಗೆ ಮೆಚ್ಚುಗೆಯಾಗಿದ್ದ ಲಯದಿಂದೊಡಗೂಡಿ ಜನತೆ ಸುಲಭವಾಗಿ ಕಟ್ಟಲು ಸಾಧ್ಯವಿದ್ದ ಬಂಧವನ್ನು ಒಳಗೊಂಡಿತ್ತು. ಆದ್ದರಿಂದ ಜನತೆಗೆ ಅತ್ಯಂತ ಸಮಿಾಪವಾಗಿದ್ದು ಅದರ ಆದರವನ್ನು ಗಳಿಸಿದ್ದ ತ್ರಿಪದಿಯನ್ನೇ ಮಾರ್ಪಡಿಸಿಕೊಂಡು ಮತ ಬೋಧೆಯನ್ನು ಮನಮುಟ್ಟುವಂತೆ ನಿರೂಪಿಸಲು 'ವಚನ'ದ ಶೈಲಿಯ ಬೇರೊಂದು ವಿಧಾನವನ್ನು ವಚನಕಾರರು ರೂಪಿಸಿಕೊಂಡಿರಬಹುದು. ಇದು ಪ್ರಜ್ಞಾಪೂರ್ವಕವಾಗಿ ಆಯ್ತೋ, ಅವರಿಗೆ ಅರಿವಿಲ್ಲದೆಯೇ ಆಯ್ತೋ ಹೇಳುವುದು ಕಷ್ಟ. ತ್ರಿಪದಿ ತುಂಬಾ ಚಿಕ್ಕ ವೃತ್ತವಾದ್ದರಿಂದ ಹೇಳಬೇಕಾದ ವಿಷಯವನ್ನು ಮೊಟಕು ಮಾಡಬೇಕಾಗುತ್ತದೆ. ಒಂದೊಂದು ಹೇಳಿಕೆಯಲ್ಲೂ ವಚನಕಾರನ ಅಂಕಿತವಿರಬೇಕಾದ್ದರಿಂದ ಪದ್ಯ ಅಲ್ಲಿಗೇ ನಿಂತುಬಿಡಬೇಕು, ಭಾವವನ್ನು ಮುಂದಿನ ಪದ್ಯಕ್ಕೆ ಮುಂದುವರಿಸಲು ಅವಕಾಶವಿಲ್ಲ. ಇಲ್ಲಿ ಒಂದು ಸಣ್ಣ ಊಹೆಯನ್ನು ಮಾಡಬಹುದು. ದಾಸಿಮಯ್ಯನ ಕಾಲಕ್ಕೆ ಮುನ್ನ ವೀರಶೈವ ಧರ್ಮದ ಸ್ವರೂಪ ಏನಿತ್ತು ಎಂಬುದಾಗಲಿ, ಅದಕ್ಕೂ ಕಾಳಾಮುಖ–ಪಾಶುಪತ ಶೈವಕ್ಕೂ ಯಾವ ಸಂಬಂಧವಿದ್ದಿತೆಂದು ತಿಳಿಯುವುದಕ್ಕಾಗಲಿ ನಮಗೆ ಆಧಾರಗಳೇ ಇಲ್ಲ. ವೀರಶೈವದ ಪ್ರಾಚೀನ ಅನುಯಾಯಿಗಳು 'ಜಂಗಮ' ರಾಗಿದ್ದು, ಎಂದರೆ ಸ್ಥಳದಿಂದ ಸ್ಥಳಕ್ಕೆ ತಿರುಗುತ್ತಿದ್ದು, ತ್ರಿಪದಿ ಹಾಡುಗಳ ಮೂಲಕ ಧರ್ಮ ಬೋಧನೆ ಮಾಡುತ್ತಿದ್ದು, ಕ್ರಮೇಣ ವ್ಯವಸ್ಥೆಗೊಂಡು ಮಠಗಳಲ್ಲಿ ನಿಂತು ಜನಕ್ಕೆ ಧರ್ಮ ಪ್ರವಚನವನ್ನು ಮಾಡಲು ಆರಂಭಿಸಿದಾಗ 'ತ್ರಿಪದಿ'ಯು 'ವಚನ'ವಾಗಿ ಪರಿವರ್ತನೆ ಹೊಂದಿತೋ ಏನೋ! (ದಾಸಿಮಯ್ಯನ ಕಾಲಕ್ಕಾಗಲೇ ಅವನ ಪಂಥದ ಗೋಷ್ಠಿಗಳು ನಡೆಯುತ್ತಿದ್ದುವು, ಮಠಗಳೂ ಸ್ಥಾಪಿತವಾಗಿದ್ದುವು ಎಂಬುದು ಅವನ ವಚನಗಳಿಂದಲೇ ತಿಳಿದು ಬರುತ್ತದೆ. ನೋಡಿ, ವಚನ ೧೨೬; ೩೪.) ಈ ಊಹೆ ನಿಜವಿರಬಹುದು ಅಥವಾ ಇಲ್ಲದಿರಬಹುದು. ತ್ರಿಪದಿ ಮೂಲವನ್ನು ಒಪ್ಪಿಕೊಂಡರೆ ವಚನಗಳ ಉಗಮದ ಸಮಸ್ಯೆಗೆ ಪರಿಹಾರವನ್ನು ಕಂಡುಕೊಂಡಂತಾಗುವುದಲ್ಲದೆ ಅವುಗಳಲ್ಲಿ ಕಂಡುಬರುವ ಛಂದೋಲಯಕ್ಕೆ ಕಾರಣವನ್ನೂ ಹೇಳಿದಂತಾಗುತ್ತದೆ. ಶ್ರೀ. ಎಂ. ಆರ್. ಶ್ರೀ.

---

1. Bombay Karnatak Inscriptions, I. i. No. 42, Dated 971 A. D.

ವೇದವೇದಾಂಗಮನೋದದೆ ಶಾಸ್ತ್ರಮು
ನಾದಿ ಮಧ್ಯಾಂತಮಱಿಯದೆ ನಾರಣಂ
ಗಾದುದು ಕವಿತೆ ಸಹಜಮೇ ‖

ಅವರು ಹೇಳಿರುವಂತೆ, "ವಚನಸಾಹಿತ್ಯ ಎರವಲು ತಂದದ್ದಲ್ಲ; ಅದು ಕನ್ನಡದ ಸ್ವಾರ್ಜಿತಸ್ವತ್ತು. ವಚನಕಾರರು ಸಂಸ್ಕೃತದ ಆಚಾರ್ಯರಲ್ಲ, ಅವರು ಅಚ್ಚಕನ್ನಡದ ಬೇಸಾಯಗಾರರು."[1]

ದಾಸಿಮಯ್ಯನ ವಚನಗಳಲ್ಲಿ ಕೆಲವನ್ನು ನಾಲ್ಕುಸಾಲಿನ ಪದ್ಯಗಳಂತೆ ವಿಂಗಡಿಸಲು ಸಾಧ್ಯವೆಂಬುದನ್ನು ಹಿಂದೆ ನೋಡಿದ್ದೇವೆ. ನಾಗವರ್ಮ ಹೇಳುವ ಚೌಪದಿಯೇ ಬೇರೆ. ಆ ಚೌಪದಿಗಳನ್ನು ಈ ವಚನಗಳಲ್ಲಿ ಕಾಣುವುದು ಅಸಾಧ್ಯ. ತ್ರಿಪದಿ ನೋಡಲು ಮೂರು ಸಾಲಿನ ಪದ್ಯವಾದರೂ ಓದುವಾಗ ಎರಡನೆಯ ಪಾದ ಪುನರಾವರ್ತನೆಗೊಳ್ಳುವುದರಿಂದ ಕೇಳಲು ಅದು ನಾಲ್ಕು ಸಾಲಿನ ಪದ್ಯವೇ.[2]

ದೇವರ ದಾಸಿಮಯ್ಯನ ವಚನಗಳಲ್ಲಿ ಕಂಡುಬರುವ ಪದ್ಯದ ಲಕ್ಷಣಗಳು ಅವನಿಗಿಂತ ಮುಂದಿನ ಬಸವಾದಿ ವಚನಕಾರರ ವಚನಗಳಲ್ಲಿ ಅಷ್ಟು ಎದ್ದು ಕಾಣುವುದಿಲ್ಲ. ಇವರ ವಚನಗಳಲ್ಲೂ ಪದ್ಯದ ಲಯವುಂಟು: ಹಿಂದಾಗಲೇ ತಿಳಿಸಿದಂತೆ ಇವರ ವಚನಗಳು ದಾಸಿಮಯ್ಯನ ವಚನಗಳ ಬೆಳವಣಿಗೆಗಳು. ಅವರಿಗೂ ಅವನಿಗೂ ಸುಮಾರು ನೂರಿಪ್ಪತ್ತು ವರ್ಷಗಳ ಅಂತರವನ್ನು ಗಮನಿಸಬೇಕು. ಬಸವಣ್ಣನವರೇ ತಮ್ಮ ಒಂದು ವಚನದಲ್ಲಿ ತಮ್ಮ ವಚನಗಳು ತಾಳ

---

1. ವಚನಧರ್ಮಸಾರ, ಪು. ೯.

2. ವಚನಕಾರರಲ್ಲಿ ಕೆಲವರು, ವಚನಕಾರರಲ್ಲದವರು ಕೆಲವರು ಕೆಲವು 'ತ್ರಿವಿಧಿ'ಗಳನ್ನು ಬರೆದಿದ್ದಾರೆ. ಅಕ್ಕಮಹಾದೇವಿಯ 'ಯೋಗಾಂಗ ತ್ರಿವಿಧಿ', ಶೀಲವಂತಯ್ಯನ 'ಆತ್ಮಲಿಂಗ ಪ್ರಣವ ಸಂಯೋಗ ಸ್ಥಲದ ತ್ರಿವಿಧಿ', ನಿಜಗುಣ ಶಿವಯೋಗಿಗಳ 'ಪುರಾತನರ ತ್ರಿವಿಧಿ', ಮೈಲಾರ ಬಸವಲಿಂಗ ಶಿವಯೋಗಿಯ 'ಗುರುಕರುಣ ತ್ರಿವಿಧಿ' ಗಳು ತ್ರಿಪದಿ ಛಂದಸ್ಸಿನಲ್ಲಿವೆ. ಆದರೆ ಸಿದ್ಧರಾಮನ 'ಬಸವಸ್ತೋತ್ರದ ತ್ರಿವಿಧಿ', 'ಮಿಶ ಸ್ತೋತ್ರ ತ್ರಿವಿಧಿ', 'ಅಷ್ಟಾವರಣ ಸ್ತೋತ್ರ ತ್ರಿವಿಧಿ' ಗಳು ಮಾತ್ರ ಚತುಷ್ಪದಿಗಳು. ತ್ರಿಪದಿ ಎಂಬುದು ತಿವದಿ, ತಿವಿದಿಯಾಗಿ ಕಾಣಿಸಿಕೊಂಡು ಅದೇ ಸಂಸ್ಕೃತಕ್ಕೆ 'ತ್ರಿವಿಧಿ' ಯಾಗಿ ಹಿಂದಕ್ಕೆ ಪರಿವರ್ತನೆ ಹೊಂದಿರಬಹುದೆಂದೂ, ತ್ರಿಪದಿಯನ್ನು ಓದಿದಾಗ ಅದು ಚತುಷ್ಪದಿಯೇ ಆಗುವುದರಿಂದ ಸಿದ್ಧರಾಮನ ಚತುಷ್ಪದಿಗಳಿಗೂ 'ತ್ರಿವಿಧಿ' ಎಂಬ ಹೆಸರೇ ಬಂದಿರಬಹುದೆಂದೂ ಪ್ರೊ. ಡಿ.ಎಲ್. ನರಸಿಂಹಾಚಾರ್ಯರು ಸಕಾರಣವಾಗಿ ಊಹಿಸಿದ್ದಾರೆ. ಇದರ ಚರ್ಚೆಗೆ ಉತ್ತಂಗಿ ಚನ್ನಪ್ಪನವರು ಸಂಪಾದಿಸಿರುವ "ಸಿದ್ಧರಾಮ ಸಾಹಿತ್ಯ ಸಂಗ್ರಹ" ದ ಪ್ರಸ್ತಾವನೆ (ಪು ೯-೧೦) ನೋಡಿ. ಈ ಚತುಷ್ಪದಿಗಳ ನಾಲ್ಕು ಸಾಲುಗಳಲ್ಲಿ ದ್ವಿತೀಯ ಪ್ರಾಸವುಂಟು, ಆದರೆ ಕಡ್ಡಾಯವಲ್ಲ; ಮೊದಲ ಪಾದದಲ್ಲಿ ಒಳಪ್ರಾಸವುಂಟು, ಇದೂ ಕಡ್ಡಾಯವಲ್ಲ.

ಸಿದ್ಧರಾಮನ ತ್ರಿವಿಧಿಗಳ ಅಂತ್ಯದಲ್ಲಿ ದಾಸಿಮಯ್ಯನ ಅಂಕಿತವನ್ನು ನೆನಪಿಗೆ ತರುವ 'ಯೋಗಿನಾಥ' ಎಂಬ ಅಂಕಿತವಿದೆ. ಅದೇ 'ತ್ರಿವಿಧಿ'ಗಳ ಛಂದಸ್ಸಿನಲ್ಲಿ ರಚಿತವಾಗಿದ್ದು 'ಶ್ರೀ ಮಲ್ಲಿಕಾರ್ಜುನಾ' ಎಂಬ ಅಂಕಿತವನ್ನೊಳಗೊಂಡು ಸಿದ್ಧರಾಮ ಹೇಳಿದುದು ಎಂಬ ಒಂದು ಚತುಷ್ಪದಿ ಶೂನ್ಯ ಸಂಪಾದನೆ (ಪು. ೨೩೦) ಯಲ್ಲಿ ದೊರಕುತ್ತದೆ. 'ಕಪಿಲ ಸಿದ್ಧ ಮಲ್ಲಿಕಾರ್ಜುನ' ಎಂಬುದು ಸಿದ್ಧರಾಮನ ಪೂರ್ಣವಾದ ಅಂಕಿತ.

ಮಾನಕ್ಕಾಗಲಿ ಗಣವಿಭಾಗಕ್ಕಾಗಲೀ ಒಳಪಡುವುದಿಲ್ಲವೆಂದೂ ತಾವು ಒಲಿದಂತೆ ಎಂದರೆ ಇಷ್ಟ ಬಂದಂತೆ ಹಾಡುವುದಾಗಿಯೂ ಹೇಳಿಕೊಂಡಿದ್ದಾರೆ. ಆದರೂ ಪಳೆಯುಳಿಕೆಗಳ ರೂಪದಲ್ಲಿ ಪದ್ಯದ ಲಕ್ಷಣಗಳು ಅವರ ವಚನಗಳಲ್ಲಿ ಉಳಿದಿರುವುದುಂಟು. ಬಸವಣ್ಣನವರಿಂದ ಕೆಲವು ಉದಾಹರಣೆಗಳು—

“ ನಾನೊಂದು ನೆನೆದೊಡೆ ತಾನೊಂದ ನೆನೆವುದು
ನಾನಿತ್ತಲೆಳೆದೊಡೆ ತಾನತ್ತಲೆಳೆವುದು ” (ಪು. ೫)

“ ಬೆಳೆಯ ಭೂಮಿಯಲೊಂದು ಪ್ರಳಯದ ಕಸಹುಟ್ಟಿ
ತಿಳಿಯಲೀಯದು . . . . ” (ಪು. ೧೪)

“ ಧರಣಿಯ ಮೇಲೊಂದು ಹಿರಿದಪ್ಪ ಅಂಗಡಿಯನಿಕ್ಕಿ
ಹರದ ಕುಳ್ಳಿದ್ದ ನಮ್ಮ ಮಹಾದೇವ ಸೆಟ್ಟಿ ” (ಪು. ೩೦)

“ ಹರನೀವ ಕಾಲಕ್ಕೆ ಸಿರಿಯು ಬೆನ್ನಲಿ ಬರ್ಕ್ಕು
ಹರಿದು ಹೆದ್ದೊಱೆಯು ಕೆಱೆತುಂಬಿದಂತಯ್ಯ ” (ಪು. ४३)

“ ಸುರರ ಬೇಡಿದಡಿಲ್ಲ ನರರ ಬೇಡಿದಡಿಲ್ಲ
ಬರಿದೆ ಧೃತಿಗೆಡಬೇಡ ಮನವೇ ” (ಪು. ೭೦)

ದಾಸಿಮಯ್ಯನ ವಚನಗಳನ್ನು ನಾಲ್ಕು ಸಾಲಿನ ಅಥವಾ ಮೂರು ಸಾಲಿನ ಪದ್ಯಗಳಾಗಿ ವಿಭಾಗಿಸಲು ಬರುವಂತೆ ಬಸವಣ್ಣನವರ ವಚನಗಳನ್ನು ವಿಭಾಗಿಸಲು ಬಾರದು. ಕಾರಣವೂ ಸ್ಪಷ್ಟವೇ. ಆದರೆ ಬಸವಣ್ಣನವರ ವಚನಗಳನ್ನು ಛಂದಸ್ಸಿನ ದೃಷ್ಟಿಯಿಂದ ಅಭ್ಯಾಸಮಾಡಿದರೆ ತುಂಬಾ ಕುತೂಹಲಜನಕವಾದ ಫಲಿತಾಂಶಗಳು ಹೊರಬೀಳುತ್ತವೆ. ಕೆಲವೆಡೆ ಅಂಶದ ಲಯ ; ಕೆಲವೆಡೆ ೩, ೪, ೫ ಮಾತ್ರೆಗಳ ಓಟ ; ಕೆಲವೆಡೆ ೬ ಮಾತ್ರೆಗಳ ಲಯ. ಯಾವುದೋ ಒಂದು ಲಯದಲ್ಲಿ ಸಾಗುತ್ತಿದ್ದ ವಚನ ಇದ್ದಕ್ಕಿದ್ದಂತೆ ಬೇರೊಂದು ಲಯಕ್ಕೆ ತಿರುಗಿ, ನಂತರ ಯಾವ ಗಣವಿವಕ್ಷೆಗೂ ಸಿಗದ ಗದ್ಯದ ಧಾಟಿಯಲ್ಲಿ ಮುಕ್ತಾಯವಾಗುವುದು ; ಆದಿಪ್ರಾಸ, ಒಳಪ್ರಾಸ, ಅಂತ್ಯಪ್ರಾಸಗಳು ; ಮನೋಹರವಾದ ರೀತಿಯಲ್ಲಿ ಹೇಳುವ ವಿಷಯವನ್ನು ಓದುವವರ ಮನಸ್ಸಿನಲ್ಲಿ ಅಚ್ಚೊತ್ತುವುದಕ್ಕಾಗಿ ಒಂದೇ ಪದದ ಅಥವಾ ಒಂದೇ ರೀತಿಯ ಪದಗಳ ಪುನರಾವರ್ತನೆ ; ಕೆಲಕಡೆ ತೆಲುಗಿನ ವಡಿಯ ಪ್ರಯೋಗದಂತಹ ಪ್ರಯೋಗ–ಹೀಗೆ ಛಂದಸ್ಸಿನ ದೃಷ್ಟಿಯಿಂದ ಇವುಗಳನ್ನು ಅಭ್ಯಾಸಮಾಡತಕ್ಕವರಿಗೆ ಕಾವ್ಯವೊಂದರ ವಿಭಜನೆಯಿಂದ ದೊರಕುವ ಫಲಗಳು ಇಲ್ಲೂ ದೊರಕಬಲ್ಲುವು. ಬಸವಣ್ಣನವರ ವಚನಗಳಲ್ಲಿ ಪದ್ಯದ ಲಕ್ಷಣಗಳು ಎದ್ದು ಕಾಣದಿರಬಹುದು ; ತಿಳಿನವುರಾದ ಕಂಪಿನಂತೆ ಒಂದು ಸೂಕ್ಷ್ಮಲಯ ಅವರ ವಚನಗಳನ್ನು ಆವರಿಸಿದೆ. ದೇವರ ದಾಸಿಮಯ್ಯನ ವಚನಗಳ ಲಯಕ್ಕೆ ಅಷ್ಟು ಆಳವಾದ ಅಭ್ಯಾಸವೇನೊ ಬೇಕಿಲ್ಲ, ಕೆಲವು ಮಾತುಗಳಲ್ಲಿ ಅದನ್ನು ಹೇಳಿಯೂ ಬಿಡಬಹುದು. ಕಾರಣ, ಅಲ್ಲಿ ವೈವಿಧ್ಯವಿಲ್ಲ. ಇಲ್ಲಿ ನಿಯಮಗಳು ಕಡಿಮೆ, ವೈವಿಧ್ಯ ಹೆಚ್ಚು.

ಅಲ್ಲಮನ ವಚನಗಳಲ್ಲಿಯೂ ಅಲ್ಲಿ ಇಲ್ಲಿ ತ್ರಿಪದಿಯ ಮೊದಲೆರಡು ಪಾದಗಳ ಸುಳುಹು ಕಾಣಿಸುವುದುಂಟು.

"ನೆಲದ ಬೊಂಬೆಯ ಮಾಡಿ ಜಲದ ಬಣ್ಣವನುಡಿಸಿ
ಹಲವು ಪರಿಯಾತ್ರಮದಲ್ಲಿ . . . . . "
(ಅಲ್ಲಮನ ವಚನಚಂದ್ರಿಕೆ, ಪು. ೧೫)

"ಮುಗಿಲ ಬಣ್ಣದ ಪಕ್ಷಿ ಮುಗನಕ್ಕೆಯ ಅರಗಿಳಿ
ಗಗನದ ಕೋಲಂಬಿನಲ್ಲಿ . . . . . " (ಪು. ೩೪)

"ತಲೆಯಲಟ್ಟುಂಬುದ ಒಲೆಯಲಟ್ಟುಂಬರು
ಒಲೆಯುಲುಳ್ಳುದ . . . . . " (ಪು. ೨೨೬)

ಅಕ್ಕಮಹಾದೇವಿಯಿಂದ ಒಂದೆರಡು ನಿದರ್ಶನಗಳು.—

"ಅರಲುಗೊಂಡ ಕೆರೆಗೆ ತೊರೆ ಬಂದು ಹಾಯ್ದಂತೆ
ಬರಲುಗೊಂಡ ಸಸಿಗೆ . . . . . " (ವಚನ-೫೫)

"ಕಡೆಗೆ ಮಾಡದ ಭಕ್ತಿ ದೃಢವಿಲ್ಲದಾಳುತನ
ಮೃಡನೊಲಿಯ ಹೇಳಿದರೆ . . . . . " (ವಚನ-೧೦೪)

"ಉರಿಯ ಫಣಿಯನೆ ಉಡಿಸಿ ಊರಿಂದ ಹೊರಗಿರಿಸಿ
ಕರೆಯಲಟ್ಟಿದ ಸಖಿಯ . . . . . " (ವಚನ-೪೩)

ಇಲ್ಲೆಲ್ಲಾ ಪ್ರಾಚೀನ ವಚನಗಳ ಲಕ್ಷಣಗಳು ಉಳಿದುಕೊಂಡಿವೆ.

ವಚನಗಳನ್ನು ಹಿಂದೆ ಹಾಡುತ್ತಿದ್ದರು[1] ಎಂಬುದು ವಚನಕಾರರ ವಚನಗಳಿಂದಲೂ ಹರಿಹರನಿಂದಲೂ ನಮಗೆ ತಿಳಿದುಬರುತ್ತದೆ. ಪದ್ಯವೇ ವಚನಗಳಿಗೆ ಮೂಲ ಎಂಬ ಭಾವನೆಗೆ ಇದು ಪುಷ್ಟಿಕೊಡುತ್ತದೆ. ಅಕ್ಕಮಹಾದೇವಿಯ ವಚನವೊಂದು ಪದ್ಯರೂಪದಲ್ಲಿ ರಾಗಸಮೇತವಾಗಿ ದೊರಕುತ್ತದೆ.[2] ಮುಪ್ಪಿನ ಷಡಕ್ಷರಿಯ ಷಟ್ಪದಿಗಳನ್ನು 'ವಚನ' ಎಂದೇ ಕರೆದಿದೆ. ಸರ್ವಜ್ಞನ ತ್ರಿಪದಿಗಳಿಗೆ ವಚನವೆಂಬ ಹೆಸರಿರುವುದು ಪ್ರಸಿದ್ಧವೇ. ಕವಿಚರಿತೆಕಾರರು ಬಸವಣ್ಣನವರದೆಂದು

1. ಬಹುಶಃ "ದಂಡಿಗೆ"ಯೆಂಬ ವಾದ್ಯವನ್ನು ನುಡಿಸುತ್ತ ವಚನಗಳನ್ನು ಹಾಡುತ್ತಿದ್ದರು. ಬಸವಣ್ಣನವರು ಒಂದೆಡೆ "ಎನ್ನ ಕಾಯವ ದಂಡಿಗೆಯ ಮಾಡಯ್ಯ" ಎಂದು ಕೂಡಲ ಸಂಗಮದೇವನನ್ನು ಬೇಡಿಕೊಂಡಿದ್ದಾರೆ. ಶೂನ್ಯಸಂಪಾದನೆಯಲ್ಲಿ (ಪು. ೨೫, ೨೬) ಅಲ್ಲಮಪ್ರಭುಗಳು ಬಲದ ದಂಡದಲ್ಲಿ ವೀಣಾದಂಡವನ್ನು ಹಿಡಿದು ದಿವ್ಯವಚನಗಳನ್ನು ಹಾಡುತ್ತ ದೇಶ ದೇಶಗಳಲ್ಲಿ ಸುಳಿಯುತ್ತಿದ್ದಂತೆ ಹೇಳಿದೆ. ವೀಣೆ ಎಂದು ಸ್ವಲ್ಪ ನಾಗರಿಕವಾಗಿ ಹೇಳಿದೆ. ಅದು ವಾಸ್ತವವಾಗಿ ಏಕನಾದದಂತಹ ವಾದ್ಯವಿರಬೇಕು. ಈಗಲೂ ಏಕನಾದವನ್ನು ಮಿಡಿಯುತ್ತ ವಚನಗಳನ್ನು ಪದಗಳನ್ನು ಹಾಡುವ ಸಂಪ್ರದಾಯವಿದೆ. (ಹರಿಹರನ ಪ್ರಭುದೇವರ ರಗಳೆಯಲ್ಲಿ, ಚಾಮರಸನ ಪ್ರಭುಲಿಂಗ ಲೀಲೆಯಲ್ಲಿ ಅಲ್ಲಮನು ಮುರಜವನ್ನು ಬಾರಿಸುತ್ತಿದ್ದಂತೆ ಹೇಳಿದೆ.)

2. ಕಾವ್ಯಸಮೀಕ್ಷೆ, ಪು. ೧೨೭.

'ಕಾಲಜ್ಞಾನ ವಚನ'ದಿಂದ ಒಂದು ಪದ್ಯವನ್ನು ಉದ್ಧರಿಸಿದ್ದಾರೆ. ಆ ಪದ್ಯ ವಾಸ್ತವವಾಗಿ ಸಾಂಗತ್ಯ ಛಂದದಲ್ಲಿದೆ.[1] ಚನ್ನಬಸವ ಮುಂತಾದವರು ನುಡಿದ ಭವಿಷ್ಯವೆಂದು ಹೇಳಿಕೊಳ್ಳುವ 'ಕಾಲಜ್ಞಾನದ ವಚನ'ಗಳು ಕೆಲವು ದೊರಕುತ್ತವೆ. ಇವು ಅತ್ಯಂತ ಸಾಮಾನ್ಯವಾದ ಗದ್ಯವಾಗಿದ್ದು, ಕಾಲದಲ್ಲಿ ತುಂಬಾ ಇತ್ತೀಚಿನವು ಎಂಬುದು ಓದಿದ ಯಾರಿಗಾದರೂ ಗೋಚರವಾಗುತ್ತದೆ.

ದಾಸಿಮಯ್ಯನಲ್ಲಿ 'ವಚನ' ಎಂಬ ಮಾತು ಬಂದಿಲ್ಲ. 'ಸೂಳ್ನುಡಿ' ಎಂಬ ಮಾತು ಬಂದಿದೆ—"ಕರಿಯನಿತ್ತಡೆ ಒಲ್ಲೆ, ಸಿರಿಯನಿತ್ತಡೆ ಒಲ್ಲೆ, ಹಿರಿದಪ್ಪ ರಾಜ್ಯವನಿತ್ತಡೆ ಒಲ್ಲೆ; ನಿಮ್ಮ ಶರಣರ ಸೂಳ್ನುಡಿಯ ಒಂದರಗಳಿಗೆ ಇತ್ತಡೆ ನಿಮ್ಮ ನಿತ್ತೆ ಕಾಣಾ ರಾಮನಾಥಾ"—ಇಲ್ಲಿ 'ಸೂಳ್ನುಡಿ' ಎಂಬ ಮಾತಿಗೆ 'ವಚನ' ಎಂಬರ್ಥವನ್ನು ಹೇಳುವ ಮನಸ್ಸಾಗುತ್ತದೆ. "ಸೂೞ್" ಎಂಬ ಮಾತಿಗೆ ಹಳಗನ್ನಡದಲ್ಲಿ 'ಬಾರಿ, ಸರದಿ' ಎಂಬರ್ಥಗಳಿವೆ. 'ಸೂೞ್ನುಡಿ' ಎಂದರೆ 'ಸರದಿಯ ಪ್ರಕಾರ ಆಡುವ ಮಾತು, ಸಂಭಾಷಣೆ' ಎಂದರ್ಥ. ರಾಘವಾಂಕನ ಹರಿಶ್ಚಂದ್ರಕಾವ್ಯದಲ್ಲಿ (೮.೬೬) ಇದೇ ಅರ್ಥದಲ್ಲಿ ಈ ಮಾತು ಬಂದಿದೆ. ಹೀಗೆ 'ಸೂಳ್ನುಡಿ' ಎಂಬ ಮಾತು ಆ ಕಾಲದ ಧಾರ್ಮಿಕ ಜೀವನಕ್ಕೆ ಒಂದು ಕೈಗನ್ನಡಿ ಇದ್ದಂತಿದೆ. ಶಿವಶರಣರ ಗೋಷ್ಠಿಗಳು, ಅಲ್ಲಿ ನಡೆಯುತ್ತಿದ್ದ ಸಂಭಾಷಣೆ, ಸಂಭಾಷಣೆಯ ಕಾಲದಲ್ಲಿ ರಚಿತವಾಗುತ್ತಿದ್ದ ವಚನಸಾಹಿತ್ಯ—ಇಷ್ಟನ್ನೂ ತನ್ನ ಗರ್ಭದಲ್ಲಿ ಈ ಪದ ಒಳಗೊಂಡಿರುವಂತಿದೆ. ಶೂನ್ಯ ಸಂಪಾದನೆಯಲ್ಲಿ ವಚನಗಳನ್ನು ಸಂಭಾಷಣೆಯ ರೂಪದಲ್ಲಿ ಜೋಡಿಸಿರುವುದನ್ನು ಜ್ಞಾಪಿಸಿಕೊಳ್ಳಬಹುದು.

ಬಸವಣ್ಣನವರು 'ವಚನ' ಎಂಬ ಪದವನ್ನು ಅದರ ಸಾಮಾನ್ಯಾರ್ಥದಲ್ಲಿ ವಿಶೇಷಾರ್ಥದಲ್ಲಿ ಅನೇಕ ಕಡೆ ಬಳಸಿದ್ದಾರೆ. 'ಆಜ್ಞೆ', 'ಮಾತು', 'ಒಂದು ರೀತಿಯ ವಿಶಿಷ್ಟವಾದ ಬರಹ' ಎಂಬರ್ಥಗಳಲ್ಲೇ ಅಲ್ಲದೆ ವೇದ ಉಪನಿಷತ್ತು ಆಗಮಗಳಿಂದ ವಾಕ್ಯಗಳನ್ನು ಉದ್ಧರಿಸಿದ್ದರೆ ಅವುಗಳನ್ನೂ 'ವಚನ'ಗಳೆಂದು ಕರೆದಿದ್ದಾರೆ. ಕನ್ನಡದ ಗಾದೆಯ ಮಾತುಗಳನ್ನೂ 'ವಚನ'ಗಳೆಂದು ಕರೆದಿದ್ದಾರೆ.

---

1. ಮೞೆಯಿಲ್ಲ ಬೆಳೆಯಿಲ್ಲ ಹೊೞೆಯಿಲ್ಲ ಕೆಱೆಯಿಲ್ಲ
ನೆಟಿಲಿಲ್ಲ ಉದಕ ಮುನ್ನಿಲ್ಲ
ಮೊಳೆಯಿಲ್ಲ ಸೂರ್ಯನ ಕಳೆಯಿಲ್ಲ ಗೆಲವಿಲ್ಲ
ಉೞಿವಿಲ್ಲ ಆ ಪಾಪಿಗಳಿಗೆ ॥

ಈ ಪದ್ಯ ನಿಜವಾಗಿಯೂ ಬಸವಣ್ಣನವರದಾದರೆ ಇದೇ ಅತ್ಯಂತ ಪ್ರಾಚೀನ ಸಾಂಗತ್ಯ ವಾಗುತ್ತದೆ. ಡಾ. ಡಿ. ಎಸ್. ಕರ್ಕಿಯವರು ತಮ್ಮ 'ಕನ್ನಡ ಛಂದೋ ವಿಕಾಸ'ದಲ್ಲಿ ಇದನ್ನು ಗುರುತಿಸಿದ್ದಾರೆ. ಆದರೆ ಕಾಲಜ್ಞಾನ ಗ್ರಂಥಗಳೆಲ್ಲವೂ ತುಂಬಾ ಈಚಿನವೆಂಬುದೂ ಅವು ಯಾರೋ ಬರೆದು ಹಿಂದಿನವರ ತಲೆಗೆ ಕಟ್ಟಿದ ಗ್ರಂಥಗಳೆಂಬುದೂ ಅವುಗಳ ವಿಷಯ ಶೈಲಿ ಗಳನ್ನು ನೋಡಿದ ಯಾರಿಗಾದರೂ ಅನ್ನಿಸುತ್ತದೆ.

ಮಾತಿನಲ್ಲಿ ಬ್ರಹ್ಮವನ್ನು ಕಾಣಿಸುತ್ತಿದ್ದವರನ್ನು 'ವಚನಬ್ರಹ್ಮ'ರೆಂದು ಹಾಸ್ಯ ಮಾಡಿದ್ದಾರೆ. ಭಕ್ತಿಯ ಸುಳಿವಿಲ್ಲದೆ ವಚನರಚನೆಯ ಸಂಭ್ರಮದಲ್ಲಿಯೇ ತೃಪ್ತರಾಗುತ್ತಿದ್ದವರನ್ನು "ವಚನದ ಗಡಣೆ ಕೆಲಬರಿಗುಂಟು, ಪ್ರಾಣಲಿಂಗದ ಗಡಣೆ ಆರಿಗೂ ಇಲ್ಲ" ಎಂದು ನಿಂದಿಸಿದ್ದಾರೆ.

ಶೂನ್ಯಸಂಪಾದನೆ ಒಂದು ವಚನ ಸಂಗ್ರಹವಾಗಿರುವಂತೆ ಹಾಡುಗಳ ಸಂಗ್ರಹವೂ ಹೌದು. ಶಿವಶರಣರು ಒಟ್ಟಿಗೆ ಕೂಡಿ ಸಂಭಾಷಣೆಯ ಮೂಲಕ ಧರ್ಮ ಪರವಸ್ತುಗಳ ಜಿಜ್ಞಾಸೆಮಾಡಿದ ವಚನಗಳನ್ನು ಬಳಸಿಕೊಂಡು ಅನೇಕ ಸನ್ನಿವೇಶಗಳನ್ನು ಕಲ್ಪಿಸಲಾಗಿದೆ. ಈ ವಿಷಯವನ್ನು ಶೂನ್ಯಸಂಪಾದನೆಕಾರ ಮೊದಲೇ ಒಪ್ಪಿಕೊಳ್ಳುತ್ತಾನೆ. ತಾನು ಚಿತ್ರಿಸಿರುವ ಸನ್ನಿವೇಶದಲ್ಲಿಯೇ ಆಯಾ ವಚನಗಳನ್ನು ನುಡಿದರು ಎಂದು ಅವನೇನೂ ಹೇಳಿಲ್ಲ. ವಚನಗಳನ್ನು ಒಂದು ಸರಣಿಯಲ್ಲಿ ಜೋಡಿಸಲು ಅನೇಕ ಅವಕಾಶಗಳನ್ನು ಕಲ್ಪಿಸಿಕೊಂಡಿದ್ದಾನೆ. ಆದರೆ ಎಲ್ಲವೂ ಕಾಲ್ಪನಿಕವೆಂದಲ್ಲ. ಅವುಗಳಲ್ಲಿ ಕೆಲವಾದರೂ ಐತಿಹಾಸಿಕ ಘಟನೆಗಳಾಗಿರಬೇಕು. ಅಲ್ಲಿ ಅನೇಕ ವಚನಕಾರರು ವಚನಗಳಿಂದ ಅಲ್ಲಮನನ್ನು ಹೊಗಳಿರುವುದಲ್ಲದೆ, 'ಪದ'ಗಳಿಂದಲೂ ಸ್ತುತಿಸಿದ್ದಾರೆ. ಈ ಪದಗಳಿಗೆ ರಾಗಗಳ ಹೆಸರುಗಳನ್ನು ಕೊಟ್ಟಿದ್ದಾರೆ. ಅಷ್ಟೇ ಅಲ್ಲ, ಆಯಾ ವಚನಕಾರ ಹಾಡಿದ ಪದಗಳಲ್ಲಿ ಅವನ ಅಂಕಿತವಿರುತ್ತದೆ ವಚನಗಳಲ್ಲಿರುವಂತೆ. ಈ ಪದಗಳು ವಚನಕಾರರೇ ಹಾಡಿದುವೋ ಅಥವಾ ಮುಂದಿನವರು ಅವರ ಅಂಕಿತಗಳಲ್ಲಿ ಕಟ್ಟಿದ ಹಾಡುಗಳೋ—ಈ ವಿಷಯದಲ್ಲಿ ಸಂಶೋಧನೆ ನಡೆಯಬೇಕಾಗಿದೆ. ಈ ಪದಗಳನ್ನೂ ವಚನಗಳೆಂದೇ ಕರೆದಿದೆ.

ತಮಿಳು ಸ್ತೋತ್ರಗೀತಗಳು ಮತ್ತು ಕನ್ನಡದ ವಚನಗಳು–ಇವುಗಳ ತೌಲನ ಅಭ್ಯಾಸ ಇನ್ನೂ ನಡೆದಿಲ್ಲ. ಸಂಶೋಧನೆ ಮಾಡಲಿಚ್ಛಿಸುವವರಿಗೆ ಇದು 'ಕನ್ನೆನೆಲ'ವಾಗಿದೆ. ವೀರಶೈವಧರ್ಮ ತಮಿಳುನಾಡಿನ ಶೈವಕ್ಕೆ ಎಷ್ಟರಮಟ್ಟಿಗೆ ಋಣಿ, ಹಾಗೆಯೇ ವಚನಕಾರರ ವಚನಗಳು ಶೈವಸ್ತೋತ್ರಗಳಿಗೆ ಎಷ್ಟರಮಟ್ಟಿಗೆ ಋಣಿ ಎಂಬ ವಿಷಯದಲ್ಲಿ ನಮಗಿನ್ನೂ ಖಚಿತ ಜ್ಞಾನವಿಲ್ಲವೇ ಇಲ್ಲ ಎನ್ನಬಹುದು. ತಮಿಳು ಕನ್ನಡಗಳನ್ನು ಚೆನ್ನಾಗಿ ಬಲ್ಲವರಾರಾದರೂ ಈ ದಿಶೆಯಲ್ಲಿ ಕೆಲಸಮಾಡಿದರೆ ತುಂಬಾ ಉಪಯುಕ್ತವಾದ ಫಲಗಳನ್ನು ಅಂತಹ ಕೆಲಸದಿಂದ ನಿರೀಕ್ಷಿಸಬಹುದು.

ಪರಿಶಿಷ್ಟ

ಶಾಸನಗಳಲ್ಲಿ ಕಂಡುಬರುವ ತ್ರಿಪದಿಗಳನ್ನು ಕಾಲಾನುಕ್ರಮವಾಗಿ ಒಂದೆಡೆ ಕೊಡಬೇಕೆಂಬ ಉದ್ದೇಶವಿದ್ದಿತು. ಈ ಲೇಖನದಲ್ಲಿ ತ್ರಿಪದಿ ಜನಪ್ರಿಯವಾದ ಛಂದೋರೂಪವಾಗಿತ್ತೆಂದು ಪ್ರತಿಪಾದಿಸಿ ಅದರಿಂದ 'ವಚನ' ಎಂಬ ರೀತಿಯ ನವೀನ ಸೃಷ್ಟಿ ಮೂಡಿರಬಹುದು ಎಂದು ಸೂಚಿಸಿದೆ. ಅದರ ಜನಪ್ರಿಯತೆಗೆ ಸಾಕ್ಷಿಯಾಗಿ ಶಾಸನಗಳಲ್ಲಿ ಬಹುಸಂಖ್ಯೆಯಲ್ಲಿ ಕಂಡುಬರುವ ತ್ರಿಪದಿಗಳನ್ನು ತಿದ್ದುವ

ಗೋಜಿಗೆ ಹೋಗದೆ ಅಲ್ಲಿರುವ ಪಾಠವನ್ನೇ ಇಟ್ಟುಕೊಂಡು, ಪಾದ ಪಾದಗಳಾಗಿ ವಿಂಗಡಿಸಿಕೊಟ್ಟಿದೆ.

ಇಂಡಿಯನ್ ಆ್ಯಂಟಿಕ್ವೆರಿ, ಸಂ. X. ಪು. ೬೧. ಸು. ಕ್ರಿ. ಶ. ೭೦೦.

ಈ ತ್ರಿಪದಿಗಳನ್ನು ಕನ್ನಡ ಕೈಪಿಡಿಯಲ್ಲಿ ಬಳಸಿಕೊಳ್ಳಲಾಗಿದೆ.

ಸಾಧುಗೆ ಸಾಧು ಮಾಧುರ್ಯ್ಯಂಗೆ ಮಾಧುರ್ಯ್ಯಂ |
ಬಾಧಿಪ್ಪ ಕಲಿಗೆ ಕಲಿಯುಗ ವಿಪರೀತನ್ |
ಮಾಧವನೀತನ್ ಪೆಱನಲ್ಲ ||

ಒಳ್ಳಿತ್ತ ಕೆಯ್ವೊರಾರ್ ಪೊಲ್ಲದುಮದಱಂತೆ |
ಬಲ್ಲಿತ್ತು ಕಲಿಗೆ [ವಿ] ಪರೀತಾ ಪುರಾಕೃತ |
ಮಿಲ್ಲಿ ಸಂಧಿಕ್ಕುಮದು ಬಂದು ||

ಕಟ್ಟಿದ ಸಿಂಘಮನ್ ಕೊಟ್ಟೊದೇನೆಮಗೆಂದು |
ಬಿಟ್ಟವೋಲ್ ಕಲಿಗೆ ವಿ [ಪ] ರೀತಂಗಹಿತರ್ಕಳ್ |
ಕೆಟ್ಟರ್ಮೆಣ್ಣಸ್ತ್ತರವಿಚಾರಮ್ ||

ಎಪಿಗ್ರಫಿಯ ಕರ್ನಾಟಿಕ, ಸಂ. VIII, ನಗರ ೬೨. ಸು. ೮೦೦.

ಶಿವಮೊಗ್ಗ ಜಿಲ್ಲೆಯ ಪ್ರಸಿದ್ಧ ಧಾರ್ಮಿಕ ಕ್ಷೇತ್ರವಾದ ಹುಂಚದ ಕಮಠೇಶ್ವರ ದೇವಸ್ಥಾನದ ಬಾಗಿಲಿನ ದಾಲವಂದಕ್ಕೆ ಹಾಕಿರುವ ಕಲ್ಲಿನ ತುಂಡಿನ ಮೇಲೆ ಈ ಶಾಸನವಿದೆ. ಆ ಶಾಸನದಲ್ಲಿ ಒಂದು ಪದ್ಯಕ್ಕೂ ಮತ್ತೊಂದು ಪದ್ಯಕ್ಕೂ ಮಧ್ಯೆ ಗೆರೆಯಿದೆ. ಆ ಪದ್ಯಗಳು ವಾಸ್ತವವಾಗಿ ತ್ರಿಪದಿಗಳು. ಆ ಶಾಸನದಿಂದ ತ್ರಿಪದಿಗಳನ್ನು ಬಿಡಿಸಿ ಕೆಳಗೆ ಕೊಡಲಾಗಿದೆ.

. . ಮುಂಪಾಱಿಯು ಮನದನಿಮ್ಮ್ರ್ಳಿ. ಯು |
ಮನಿತುಯೊಳ್ಗುಣಮುಮಱಿವು ಧರ್ಮಮುಂಜಕ್ಕ |
ನಿನಗಲ್ಲದಿಲ್ಲ ಭುವನದೊಳ್ ||

ಬ್ರಹ್ಮನಿಂದಱಿವು ಸುಸಮ್ಮ್ರನಾಪ್ಪಿನೊಳ್ಳೊರೆ |
ಧರ್ಮದೊಳ್ಪಲಿಯ ಸಮನೆಂಬ ಜಕ್ಕಯ್ಯ |
ನಿರ್ಮಲ ಸುದ್ಧ ಭುವನದೊಳ್ ||

ಮನ್ನೆ ಖೇಟದಿ ತೆಂಕ ನಿನ್ನ ದೇಗುಲ ಚಲ್ವು |
.... ಜಕ್ಕಯ್ಯ |
ನನ್ನರಾ ಧರ್ಮದಱವಿನೊಳ್ ||

ಮಾಸರ ಜಕ್ಕಯ್ಯನೀಶ್ವರಗತಿಬಕ್ತ
.... ನೊಳಗೆನೆ ನೆಗಟ್ಟಿ ದೇಗುಲಕನ
.... ||

ಬ್ರತಿಯನೂಮತ ಜಕ್ಕ .... |
....
.... ||

ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್, IX, i, No. ೩೧. ಕ್ರಿ. ಶ. ೯೬೬-೬೭

ಈ ಶಾಸನವನ್ನು ಸಾಲುಸಾಲಾಗಿ ಗದ್ಯದಂತೆ ಬರೆಯಲಾಗಿದೆ. ಪದ್ಯಗಳನ್ನು ಸೂಚಿಸಲು ಗೆರೆಗಳೂ ಇಲ್ಲ, ಪದ್ಯಜಾತಿಯನ್ನೂ ಹೆಸರಿಸಿಲ್ಲ. ಪ್ರಾಸ ಮತ್ತು ಲಯಗಳ ಸಹಾಯದಿಂದ ತ್ರಿಪದಿಗಳನ್ನು ಗುರುತಿಸಬೇಕಾಗಿದೆ.

ಏರಣಿಗೆಱಿಗನಂ ಧಾರಿಣಿಯೊಳಗೆಲ್ಲಂ |
ಪೋರನ್ತೆ ಪೊಗಳ್ವರಳವಲ್ಲ ಗಂಡಿನೊ |
ಳಾರುಂದೊರೆಯೆ ಭುವನವಳೆಯದೊಳ್ ||

ಗಂಡವಾತಿನ ಪೆಂಪಂ ಕಂಡು ಕೇಳ್ದಿಲ್ಲರುಂ ।
ಮಂಡಲದೊಳಗೆ ಪೊಗಟ್ದಿಪ್ಪರೆಱಿಯಮ್ಮ |
ಗಂಡಗಟ್ಟಳೆಯೂದೊಂ ಭುವನದೊಳ್ ||

ಆಟ್ಟದೆಲೆಯ ಮಾತನ್ನೆಟ್ಟನೆ ಕೇಳ್ದಿಂತು |
ದಟ್ಟಳ್ಸಿರಗುಂ ಬೆರಗವಂ ಬಗೆಯದೆ
ಕಟ್ಟಳ್ಸತ್ತನೆಱಿಯಮ್ಮ ||

ನೋಡವೆಳೆಗೆದಪ್ಪಿ ರೂಢಿಯೊಳೆಸೆದಿರ್ಪ್ಪ |
...ನಿಂಪೊಗಱಿದೆ....ತೆಪಡಿವಂದಂ |
ಮಾಡಿದಂ ಪೊಗಱು ವೆಱಿಗನ ||

ಜಾರಲ್ಚು ಕೇಳ ಪೆಂಜ್ಜೆಱಿಲ್ಲಂ ಪೊಗಱಿಲ್ಕೆ
ವೀಱಿನ ಸಾವು ಕತೆಯಾಗಿ ಪರೆದುದು
ಮೂಱುವೀ ಲೋಕದೊಳಗೆಲ್ಲ ||

ಬಾಂಬೆ ಕರ್ನಾಟಿಕ್ ಇನ್‌ಸ್ಕ್ರಿಪ್ಷನ್ಸ್, I, i, No. ೪೨. ಕ್ರಿ. ಶ. ೯೭೧

ಈ ಶಾಸನದಲ್ಲಿ ಪದ್ಯಕ್ಕೂ ಪದ್ಯಕ್ಕೂ ಮಧ್ಯೆ ಪ್ರತ್ಯೇಕಿಸುವ ಗೆರೆಯಿದೆ. ತ್ರಿಪದಿಯೆಂದು ಕರೆದಿಲ್ಲ, ತ್ರಿಪದಿಯಾಗಿ ಬಿಡಿಸಿಯೂ ಕೊಟ್ಟಿಲ್ಲ. ತಾನು ವೇದ ವೇದಾಂಗಗಳಲ್ಲಿ ಪಾರಂಗತನಲ್ಲದಿದ್ದರೂ ಕವಿತೆ ತನಗೆ ಸಹಜವಾಗಿ ಬಂದಿದೆ ಎಂದು ಈ ಶಾಸನ ಕರ್ತೃ ತ್ರಿಪದಿಯಲ್ಲಿ ಹೇಳಿಕೊಂಡಿರುವುದು ಗಮನಾರ್ಹ. ಅಷ್ಟು ವಿದ್ಯಾವಂತರಲ್ಲದ ಜನಸಾಮಾನ್ಯರು ತ್ರಿಪದಿ ಛಂದಸ್ಸಿನಲ್ಲಿ ತಮ್ಮ ಭಾವಗಳನ್ನು ಅಭಿವ್ಯಕ್ತಗೊಳಿಸುತ್ತಿದ್ದರು ಎಂಬ ಅಭಿಪ್ರಾಯಕ್ಕೆ ಈ ಹೇಳಿಕೆ ಪೋಷಣೆಯನ್ನೊದಗಿಸುತ್ತದೆ.

ಬಲವರ್ಮ್ಮಂ ತಂದೆತಾಯ್ಸಲೆ ಪ್ರ [ಗುಳೆಯ] ಬ್ಬೆ |
ಕುಲವಧು ತನಗೆಯರ [ಗ] ಬ್ಬೆಯೆನೆ ಪೆಂಪು |
ಸಲೆಸತಿ ಧರೆಗೆ ಗಱ್ದಿಗನ ||

ವೇದವೇದಾಂಗ [ಮನೋದ] ದೆ ಸಾಸ್ತ್ರಮ |
ನಾದಿಮಧ್ಯಾಂತಮಱಿಯದೆ ನಾರಣಂ |
ಗಾದುದು ಕವಿತೆ ಸಹಜಮೇ || ....

ಎಪಿಗ್ರಫಿಯ ಇಂಡಿಕ, XVIII, ಹೂಲಿ ಶಾಸನಗಳು. ಕ್ರಿ. ಶ. ೯೮೫

ಈ ಶಾಸನದ ಸಂಪಾದಕರಾದ ಬಾರ್ನೆಟ್ ಕೆಳಗೆ ಕೊಟ್ಟಿರುವ ತ್ರುಟಿತವಾಗಿರುವ ಪದ್ಯ ಬಹುಶಃ ದ್ವಿಪದವಿರಬಹುದೆಂದು ಊಹಿಸಿದ್ದಾರೆ. ಆದರೆ ಅದು ನಿಜವಾಗಿ ತ್ರಿಪದಿಯೇ.

ಸಿಂಗಮಿಭಂಗಳಂ ನುಗುವಂತೆ ತರ....ಗಿ |
ಸಂಗದೊಳ್ ಕಱಿದ ಕೆಂದರಮುಱಿಸಿಂಗಂ |
ಮೆ....ವ್ ಗಂಡನದಟನೋ ||

ಎಪಿಗ್ರಫಿಯ ಕರ್ನಾಟಕ, VI. ಚಿಕ್ಕಮಗಳೂರು, ೯೪, ಕ್ರಿ. ಶ. ೧೦೬೦

ಎಂಟುಂ ದಿಗ್ದಂತಿಗಳ್ ಕಂಟೀರವಕದಿರ್ವ್ವಂತೆ |
ಟುಂಟುಣಿಪಹಿತರ್ ತಲೆದೋಱಿರ್ ಮಾವನ |
ಬಂಟ ನಿನ್ನೊಂದೆ ಕರವಾಳಂ ||

ಮುಸಕಂದಿಂ ಕಂಕಣೆ ಪುಸಿನಸೆ ಬಂಚನೆ |
ಕುಸುರಿಯ ಚಿತ್ರಂ ದ್ರಿಡವಂ ವಸುಧೆಯೊಳ್ |
ಪಸುಗೆಗೊಳ್ಗಂಡಂ ಕಡುಜಾಣಂ ||

ತೊರ್ಕ್ಕಿಯ ಸೂತ್ರದಿಂದೊಕ್ಕೈಯ್ಯಂ ಬಲ್ಲಂಗ |
ಮೂರ್ಕ್ಕಂಗಾ ಪದವ ನೋಪ್ರ್ಪಡವಂ ಜವದೊಳ್|
ಮಾರ್ಕ್ಕೋಲ-ಭೈರವಂ ಕಡುಜಾಣಂ ||

ಮಲ್ಲಮಲ್ಲಿಯ ಸೂಱಿನೆಲ್ಲರ ಪೊಗಳ್ವಿನ್ನು
ಮಲ್ಲಗಾಯದೊಳ್ ಪಿಡಿದೊತ್ತಿ ಕಟ್ಟಲ್ಕೇ
ಬಲ್ಲನೀ ಖಚರ ಚೂಡಾಮಣಿ ||

ಎಫಿಗ್ರಫಿಯ ಕರ್ನಾಟಕ, VII. ಶಿಕಾರಿಪುರ, ೧೨೫, ಕ್ರಿ. ಶ. ೧೦೬೧.

ಕೆಳಗಿನ ತ್ರಿಪದಿಗಳಲ್ಲಿ ಎರಡನ್ನು ಕನ್ನಡ ಕೈಪಿಡಿಯಲ್ಲಿ ಬಳಸಿಕೊಂಡಿದೆ.

ಮುಕ್ತಿ ಶ್ರೀ ಸತಿಗನುರಕ್ತಂ ಸಂಸಾರವಿ |
ರಕ್ತಂ ನಿರ್ವಿಷಯ ನಿರಪೇಕ್ಷಂ ಸುಚಿಜೀವ |
ನ್ಮುಕ್ತಂ ನಿರ್ಬಾಣಿ ಗುಣಗಳ್ಳ ||

ಆಳೆಟ್ಟಿ ಬಸನಂಗಳೇಳುಮನೆಲ್ದುನಿ |
ಮ್ರ್ಮಾಳಿಸಿ ಪರಿದನಂ ಷಡ್ವರ್ಗ....|
ಕಾಳಾಗ್ನಿಯಂತೆ ಗುಣಗಳ್ಳ ||

ಅಱಿವಣ್ಮು ವೈರಾಗ್ಯಂ ತಱಿಸಲ [ವ] ಭ್ಯಾಸಂ |
ನೆಱೆಭಕ್ತಿ ಶಾಂತಿ ಧೃತಿತುಷ್ಟಿಯೆಂಬಿವ |
ರ್ಕ್ಕೆಱೆವಟ್ಟೋಗಿಟ್ಟಿಂ ಗುಣಗಳ್ಳ ||

ನುಡಿವ ತತ್ವದಮಾತಂ ಬಿಡಲಾಱೆನುವಂ
ನುಡಿವಳಿಯನ್ತೆ ನಡೆವಳಿಯೆನಿಸಿದಂ |
ನುಡಿದಂತೆ ಗಂಡಂ ಗುಣಗಳ್ಳ ||

ಎಪಿಗ್ರಫಿಯ ಕರ್ನಾಟಕ, VIII, ನಗರ, ೩೫. ಕ್ರಿ. ಶ. ೧೦೭೭.

ಈ ಶಾಸನದಲ್ಲಿ ಈ ಪದ್ಯವನ್ನು ತ್ರಿಪದಿ ಎಂದು ಕರೆದಿದೆ.

ಜಾಹ್ನವೀಶಾಕ್ಷಿ ಮಧ್ಯಾಹ್ನಾರ್ಕ್ಕ ಸಮಕೋಪ |
ವಹ್ನಿ ಲಲ್ಲಯನಳುರೆ ಬೂತುಗಂ ರಾಜ್ಯ |
ಚಿಹ್ನಮಂ ತದಂತುಳಿಗಂಗೆ ||

ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್, IX, i. ನಂ. ೧೪೧ ಕ್ರಿ. ಶ. ೧೦೭೯.

ಕೆಳಗಿನ ಪದ್ಯಗಳನ್ನು 'ತ್ರಿಪದಿ' ಎಂದು ಕರೆದಿದೆ.

ನಾಡುಗಳೊಳಗೆಲ್ಲ ಗಾಡಿವೆತ್ತಸಮುದ |
ನಾಡಗಳರಸನತಿ ಚೆಲ್ವ ಕೋಗಳಿ |
ನಾಡುನೋಡಲ್ಕೆ ಸೊಗಯಿಕ್ಕುಂ ||

ಆ ನಾಡೊಳೆಸೆವುದು ನಾನಾ ವಿದ್ವಜ್ಜನ |
ಸ್ಥಾನಂ ಸೀಗ್ಗುಂದವೆನಿಪಗ್ರಹಾರವ |
ತ್ಯಾನನ್ದಕಾರಿ ಜಗಕೆಲ್ಲಂ ||

ಎಪಿಗ್ರಫಿಯ ಕರ್ನಾಟಕ, VII. ಶಿಕಾರಿಪುರ, ೧೮೫. ಕ್ರಿ. ಶ. ೧೧೫೮.

"ತ್ರಿವದಿ" ಎಂದು ಕೆಳಗಿನ ಪದ್ಯವನ್ನು ಕರೆದಿದೆ.

ಅದು ಕರ್ಮಭೂಮಿಯಪ್ಪುದಱಿಂದವಲ್ಲಿ ಮಾ
ಡಿದ ಕರ್ಮಬೀಜಂ ಶತಕೋಟಿ ಫಳವನೀ
ವುದು ಬಿತ್ತಿ ಬೆಳವ ತೆಱನಂತೆ ||

ಎಂ. ಚಿದಾನಂದಮೂರ್ತಿ

ಕಣದಲ್ಲಿ ಒಂದು ರಾತ್ರಿ

ಚಿನ್ನಮ್ಮನ ಕಣಗೆಲಸ ಮೊದಲಾಯಿತು. ಆಕೆಯ ಒಬ್ಬನೇ ಮಗ ಲಕ್ಕಣ್ಣ ಎಂಥ ಕೆಲಸವನ್ನಾದರೂ ನೀರು ಕುಡಿದ ಹಾಗೆ ಮಾಡಿ ಮುಗಿಸುತ್ತಿದ್ದ. ಅವನ ಜೊತೆಯಲ್ಲಿ ಕಣಗೆಲಸಮಾಡಲು ಮೂರು ನಾಲ್ಕು ಆಳುಗಳು ಇದ್ದರೂ ಕೂಡ, ಅವನೇ ಎಲ್ಲರಿಗೂ ಮುಂದಾಳಾಗಿ ಕೆಲಸಮಾಡಬೇಕಾಗಿತ್ತು. ಹುಲ್ಲು ಮೆದೆಗೆ ಏಣಿ ಇಲ್ಲದೆ ಹತ್ತಲು ಲಕ್ಕಣ್ಣನಿಗಲ್ಲದೆ ಬೇರೆಯವರಿಗೆ ಸಾಧ್ಯವಾಗುತ್ತಿರಲಿಲ್ಲವಾದುದರಿಂದ ಲಕ್ಕಣ್ಣನೇ ಮೆದೆ ಹತ್ತಿ ಒಕ್ಕಬೇಕಾದ ಹುಲ್ಲನ್ನು ತಬ್ಬಿ ಕಣಕ್ಕೆ ಹಾಕುತ್ತಿದ್ದ. ಕಣದಲ್ಲಿ ಮೇಟಿಯ ಸುತ್ತಲೂ ರೋಣು ಸುಲಭವಾಗಿ ತಿರುಗಲು ಅನುಕೂಲವಾಗಿರುವಂತೆ ಹುಲ್ಲು ಒಡ್ಡಬೇಕಾದರೆ ಲಕ್ಕಣ್ಣನಿಗಲ್ಲದೆ ಬೇರೆ ಯಾರಿಗೂ ಬರುತ್ತಿರಲಿಲ್ಲ. ಆದುದರಿಂದ ಲಕ್ಕಣ್ಣ ಬೇಗ ಬೇಗ ಮೆದೆಯಿಂದ ಹುಲ್ಲನ್ನು ತಬ್ಬಿ ಕಣಕ್ಕೆ ಹಾಕಿ ಮೆದೆಯಿಂದ ಧುಮುಕಿ ಮೇಟಿಯ ಸುತ್ತಲೂ ತಾನೇ ಹುಲ್ಲನ್ನು ಒಡ್ಡುವ ಕೆಲಸದಲ್ಲಿ ನಿರತನಾಗಿರುತ್ತಿದ್ದ. ಹೊಸದಾಗಿ ಕೊಂಡ ಎತ್ತುಗಳನ್ನು ಹತೋಟಿಗೆ ತಂದು ಕೆಲಸಮಾಡಲು ಲಕ್ಕಣ್ಣ ಒಬ್ಬ ಮಾತ್ರ ಸಮರ್ಥನಾಗಿದ್ದ. ಅವನು ಮಧ್ಯಾಹ್ನ ಹನ್ನೆರಡು ಗಂಟೆಗೆ ಎತ್ತುಗಳನ್ನು ರೋಣಿಗೆ ಕಟ್ಟಿ, ತೊಟ್ಟಿದ್ದ ಅಂಗಿಯನ್ನು ಕಳಚಿ ತಲೆಗೆ ಸಿಕ್ಕಿಸಿಕೊಂಡು ರೋಣು ಹೊಡೆಯಲು ಕುಳಿತನೆಂದರೆ ಸಂಜೆ ಐದು ಗಂಟೆಯವರೆಗೂ ರೋಣನ್ನು ಬಿಟ್ಟು ಕದಲುತ್ತಿರಲಿಲ್ಲ. ಅವನು ಬಿಸಿಲಿನ ಝಳದಲ್ಲಿ ಬೆಂದು ಬಾಯಾರಿ ಕುಡಿಯಲು ನೀರನ್ನು ಕೇಳಿದಾಗ ಹಲಸಿನ ಮರದ ಹತ್ತಿರದ ಗುಡ್ಲಿನಲ್ಲಿ ಚೌಕಾಭಾರ ಆಡುತ್ತ ಕುಳಿತಿದ್ದ ಮಿಕ್ಕ ಕೆಲಸಗಾರರಲ್ಲಿ ಯಾರಾದರೂ ಒಬ್ಬ ತತ್‌ಕ್ಷಣ ಚೆಂಬಿನಲ್ಲಿ ನೀರು ತುಂಬಿಕೊಂಡು ಓಡಿಹೋಗಿ ರೋಣುಗಲ್ಲಿನ ಮೇಲೆ ಕುಳಿತ ಲಕ್ಕಣ್ಣನಿಗೆ ಕೊಡುತ್ತಿದ್ದ. ಲಕ್ಕಣ್ಣ ಎತ್ತುಗಳನ್ನು ಹಿಡಿದೆಳೆದು ನಿಲ್ಲಿಸದೆ ಚೆಂಬನ್ನು ಎತ್ತಿ ನೀರನ್ನು ಗಟಗಟನೆ ಕುಡಿಯುತ್ತಿದ್ದ. ನೀರು ಕೊಟ್ಟವನು ನಾಲ್ಕಾರು ಸುತ್ತು ಕಣದ ಮೇಟಿಯನ್ನು ಸುತ್ತಿ ಬರಿ ಚೆಂಬಿನೊಡನೆ ಗುಡ್ಲಿಗೆ ಧಾವಿಸುತ್ತಿದ್ದನು.

ಸಂಜೆ ಸುಮಾರು ಐದು ಗಂಟೆ ಹೊತ್ತಿನ ತರುವಾಯ ಲಕ್ಕಣ್ಣ ರೋಣು ಬಿಟ್ಟು, ಎತ್ತುಗಳನ್ನು ಹಲಸಿನ ಮರದಡಿಯ ಗೊಂತುಗಳಲ್ಲಿ ಕಟ್ಟಿ, ಹುಲ್ಲು ಹಾಕಿ, ಮೆರೆಯನ್ನು ತೆಗೆದುಕೊಂಡು ಹುಲ್ಲನ್ನು ತಿರುವಿಹಾಕಲು ನಿಂತನೆಂದರೆ, ಕೋಲುಗಳನ್ನು ಹಿಡಿದು ಹುಲ್ಲುಬಡಿಯುವ ನಾಲ್ಕಾಳುಗಳೂ ಬಳಲಿ ಬೆಂಡಾಗುತ್ತಿದ್ದರು. ಹುಲ್ಲುಬಡಿದ ತರುವಾಯ ಹುಲ್ಲನ್ನೆಲ್ಲಾ ಒಂದೆಡೆಗೆ ಒಟ್ಟುಗೂಡಿಸಿ, ಪರ್ವತಾಕಾರದ ಹೊರೆಯನ್ನು ಕಟ್ಟಿ ಲಕ್ಕಣ್ಣನ ತಲೆಯ ಮೇಲೆ ಹೊರಿಸಿದರೆ ಲಕ್ಕಣ್ಣ ಸ್ವಲ್ಪವೂ ಪ್ರಯಾಸವಿಲ್ಲದೆ ಲೀಲಾಜಾಲವಾಗಿ ಕಣದ ಹುಲ್ಲು ಬಣಬೆಯ ಮೇಲಕ್ಕೆ ಹತ್ತಿ ಹೊರೆಯ ಹಗ್ಗವನ್ನು ಬಿಚ್ಚಿ ಚೆಂಗನೆ ಬಣಬೆಯಿಂದ ಧುಮುಕುತ್ತಿದ್ದ. ರಾಗಿಯನ್ನು

ಉಬ್ಬಲಿನ ಸಂಗಡ ಗುಡಿಸಿ ಗುಡ್ಡೆ ಮಾಡುವುದರಲ್ಲೂ ಅವನದೇ ಮೇಲುಗೈ. ಸಂಜೆ ಹೊತ್ತು ಲಕ್ಕಣ್ಣ ಉದಿಗೆ ಮೇಲೆ ನಿಂತು ರಾಗಿ ತೂರಲು ಮೊದಲು ಮಾಡಿದನೆಂದರೆ ಮಿಕ್ಕ ನಾಲ್ಕಾಳುಗಳೂ ಗುಡ್ಡೆಯಿಂದ ಮೊರಗಳಲ್ಲಿ ಮಿದಿ ತುಂಬಿ ಓಡಾಡಿದರೂ ಲಕ್ಕಣ್ಣನೇ ಗೆಲ್ಲುತ್ತಿದ್ದ.

ಒಂದು ದಿನ ಸಂಜೆ ಏಳುಗಂಟೆ ಸಮಯ. ಲಕ್ಕಣ್ಣನ ತಾಯಿ ಚೆನ್ನಮ್ಮ ಮಕ್ಕರಿಯಲ್ಲಿ ಊಟವನ್ನು ಹೊತ್ತುತಂದು ಗುಡ್ಲಿನಲ್ಲಿಟ್ಟು ಜರಡೆಯಾಡುತ್ತಿದ್ದವರ ಬಳಿಗೆ ಹೋಗಿ, "ಏಳ್ರೋ ಉಣ್ಣಕ್ಕೆ; ಉಪ್ಪಿನ ಉದಕ ಮಾಡಿ ತಂದಿನ್ನಿ" ಎಂದಳು.

"ತಡಿಯವ್ವ ತುಸ, ನನಗೂ ಈ ಬೋರನಿಗೂ ಪಂದ್ಯ ಬಿದ್ದದೆ. ಯಾರು ಗೆಲ್ಲುತ್ತಾರೆ ನೋಡುವ!" ಎಂದ ಲಕ್ಕಣ್ಣ.

"ಲೋ ಬೋರ, ನಮ್ಮ ಹೈದನ ಜೊತೆ ಸವಾಲು ಮಾಡಕ್ಕೆ ನಿನ್ನ ಕೈಲಿ ಆಗ್ತದೇನೊ? ನಿನ್ನ ಗಾತ್ರದ ಬೆಣ್ಣೆ ತಿನ್ನಿಸಿ ಸಾಕೀವ್ನಿ!" ಎಂದು ಮಗನ ಕಡೆ ವಕಾಲತ್ತು ವಹಿಸಿ ಮಾತನಾಡಿ, "ಏಳ್ರೋ ಮುದ್ದೆ ತಣ್ಣಗಾಗ್ತದೆ. ತಿಂಗಳ ಬೆಳಕು ಹಾಲು ಚೆಲ್ಲಿದ ಹಾಗಿದೆ. ಜರಡೆ ಆಡುವಿರಂತೆ, ಉಂಡು" ಎಂದು ಅವಸರಪಡಿಸಿದಳು. ಜರಡೆಯನ್ನು ಕೆಳಗಿಟ್ಟು ಮೇಲೆದ್ದ ಬೋರ, "ಬೇಕಾದರೆ ಕೊಳಗ ಹಾಕಿಸಿ ಅಳೆಸಿ ನೋಡಿರಿ, ನನ್ನ ರಾಗಿಯೇ ಜಾಸ್ತಿ ಅದೆ" ಎಂದ.

"ಬಿಡೋ, ಬಿಡೋ ನಾನೊಪ್ಪೊಲ್ಲ! ಅವನಿಗೂ ನಿನಗೂ ಸಾಟಿಯಾ!" ಎಂದಳು ಚೆನ್ನಮ್ಮ. ಲಕ್ಕಣ್ಣ ಜರಡೆಯನ್ನು ಹಿಡಿದು ತ್ವರೆಯಿಂದ ರಾಗಿಯನ್ನು ಜರಡೆಯಾಡಿ ರಾಗಿ ರಾಶಿಯ ಶಿಖರವನ್ನು ಬೆಳೆಸುತ್ತಿದ್ದುದನ್ನು ನೋಡಿ, ಬೋರ "ತಡೀರವ್ವ ನೋಡಿಯೇ ಬಿಡ್ತೀನಿ" ಎಂದು ಹೇಳಿ ಕುಳಿತು ಮತ್ತೆ ಜರಡೆ ಹಿಡಿದ. ಇಷ್ಟುಹೊತ್ತಿಗೆ ಉಬ್ಬಲು ಗುಡ್ಡೆಮಾಡುತ್ತಿದ್ದ ಜವರಪ್ಪ ಮತ್ತು ವೆಂಕಟಯ್ಯ ಅಲ್ಲಿಗೆ ಬಂದು ಪೈಪೋಟಿಯಿಂದ ಕೆಲಸ ನಡೆಯುತ್ತಿರುವುದನ್ನು ನೋಡಿ, "ಬಿಡೋ ಬೋರ, ನಿನ್ನ ಕೈಲಾಗೋದಿಲ್ಲ. ಅದು ಮುದ್ದೆಯಲ್ಲ ನುಂಗೋಕೆ!" ಎಂದು ಬೋರನನ್ನು ಹಾಸ್ಯಮಾಡಿ ಲಕ್ಕಣ್ಣನ ಶಕ್ತಿಸಾಮರ್ಥ್ಯಗಳನ್ನು ಕೊಂಡಾಡಿದರು.

"ನಾನು ಹೇಳಿದರೆ ಆ ಮೂದೇವಿ ಕೇಳೊಲ್ಲ! ನೆಲ ಗುದ್ದಿ ಕೈನೋಯಿಸಿಕೊಳ್ತಾನೆ" ಎಂದು ನುಡಿದ ಚೆನ್ನಮ್ಮ ವೆಂಕಟಯ್ಯನನ್ನು ಕುರಿತು, ದೊಡ್ಡ ರಾಶಿಯನ್ನು ನಿರ್ದೇಶಿಸಿ, "ಎಷ್ಟು ಖಂಡುಗ ಆಗಬಹುದು ಎಂಕಟಣ್ಣ?" ಎಂದಳು.

ವೆಂಕಟಯ್ಯ ತುಟಿಯ ಮೇಲೆ ಬೆರಳಿಟ್ಟು ದೀರ್ಘವಾಗಿ ಆಲೋಚಿಸಿ, "ರಾಗಿ ಇದೆ, ಕಾಣೋದಿಲ್ಲ ಅಷ್ಟೆ! ಹದಿನೈದು ಖಂಡುಗಕ್ಕೆ ಬಿದ್ದುಹೋಗೋದಿಲ್ಲ" ಎಂದ.

ಜವರಪ್ಪ ಬಾಯಿಹಾಕಿ, "ಹದಿನೈದು ಖಂಡುಗ ಕಾಣೋದಿಲ್ಲವ್ವ, ಮಾತಿಗೇನಂತೆ ಕೊರತೆ" ಎಂದು ಹೇಳಿ, ಅನಂತರ ವೆಂಕಟಯ್ಯನ ಕಡೆ ತಿರುಗಿ, "ಮಾಗಡಿ ಕೊಳಗವಿದೆಯಣ್ಣ!" ಎಂದನು.

"ನಿನಗೇನು ಗೊತ್ತು. ಕೊಳಗ ಹಾಕಿ ಅಳೆಯಲಿ, ಹದಿನೈದು ಖಂಡುಗಕ್ಕೆ

ಒಂದು ಐದು ಕೊಳಗ ಹೆಚ್ಚ್ಕೋ ಅಥವಾ ಕಡಿಮೆಯೋ! ಅದಕ್ಕಿಂತ ಹೆಚ್ಚು ವ್ಯತ್ಯಾಸವಿದ್ದರೆ ನನ್ನ ಮೂಗು ಮೂರುತುಂಡು ಮಾಡಿಸಿಕೊಳ್ತೀನಿ" ಎಂದು ವೆಂಕಟಯ್ಯ ಸವಾಲುಹಾಕಿದ.

"ಕೊಳಗ ಹಾಕಿ ನೋಡಲಿ ಗೊತ್ತಾಗ್ತದೆ ಬಂಡವಾಳ. ಅದು ಇನ್ನಾವ ಕೊಳಗಾನೂ ಅಲ್ಲ; ಮಾಗಡಿ ಕೊಳಗ! ರಾಗೀನ ಎಳೆದುಹಾಕಿಬಿಡ್ತದೆ!" ಎಂದು ಜವರಪ್ಪ ಪಟ್ಟುಹಿಡಿದು ವಾದಿಸಿದ.

"ನಾಲ್ಕು ಖಂಡುಗ ಜಾಸ್ತಿ ಇದ್ದರೇ ಉತ್ತಮ! ನನಗೂ ಹದಿನೈದು ಖಂಡು ಗಕ್ಕೆ ಬಿದ್ದುಹೋಗಲ್ಲ ಅನ್ನಿಸುತ್ತದೆ. ಖರ್ಚು ಬಹಳ ಅದೆ. ಈ ಸಾಲಿನಲ್ಲಿ ನಮ್ಮ ಹುಡುಗನ ಲಗ್ನ ನಿಲ್ಲಿಸೋಕೆ ಆಗೋದಿಲ್ಲ; ಮಾಡೇಬಿಡಬೇಕು" ಎಂದು ಚಿನ್ನಮ್ಮ ವೆಂಕಟಯ್ಯನ ಪಕ್ಷವನ್ನೇ ಹಿಡಿದು ಮಾತನಾಡಿದುದರಿಂದ ಜವರಪ್ಪ ತನ್ನ ಮಾತನ್ನು ಮುಂದುವರಿಸದೆ ಸುಮ್ಮನಾದನು.

ಲಕ್ಕಣ್ಣ ಮತ್ತು ಬೋರ ಬೇರೆ ಕಡೆ ತಮ್ಮ ಗಮನ ಹರಿಸದೆ ರಾಗಿ ಜರಡೆ ಯಾಡುತ್ತಿದ್ದರು. ವೆಂಕಟಯ್ಯ ಜವರಪ್ಪ ಬೇರೆ ಜರಡೆಗಳನ್ನು ತೆಗೆದುಕೊಂಡು ಅವರಿಗೆ ನೆರವಾಗಲು ಕುಳಿತರು. "ಬ್ಯಾಡ, ನೀವು ಜರಡೆ ಆಡಬೇಡಿ, ನೋಡಿ ನನ್ನ ಸಾಹಸ" ಎಂದು ಬೋರ ಪ್ರತಿಭಟಿಸಿ, "ನಡೀರಪ್ಪ ಹಲಸಿನ ಎಲೆ ಕಿತ್ತುಕೊಳ್ಳಿ" ಎಂದು ಹೇಳಿದ.

"ಲೋ ಬಿಡೋ ಜರಡೇನ, ನಿನ್ನ ರಾಶಿ ಲಕ್ಕಣ್ಣನ ರಾಶಿಯ ಅರ್ಧದಷ್ಟಿಲ್ಲ. ಬಿಡೋ ಒಣ ಜಂಬಾನ, ಏಳೋ ಮೇಲೆ, ಇಲ್ಲೇ ಇಲ್ಲ ಕೈಲಾಸ" ಎಂದು ವೆಂಕಟಯ್ಯ ಜವರಪ್ಪ ಇಬ್ಬರೂ ಒಟ್ಟಾಗಿ ಮಾತನಾಡಿದರು. ಬೋರನಿಗೆ ಮುಖ ಭಂಗವಾದಂತಾಗಿ ರಪ್ಪನೆ ಜರಡೆಯನ್ನು ಕೆಳಕ್ಕೆ ಹಾಕಿ, ಹಲಸಿನ ಮರದೆಡೆಗೆ ನಡೆದ; ಹಲಸಿನ ಮರದ ಕತ್ತಲೆಯಲ್ಲಿ ಅಡ್ಡಾಡಿ, ಬುಡವನ್ನು ಆಶ್ರಯಿಸಿ, ಚೆಡ್ಡಿ ಜೇಬಿನಿಂದ ಮೋಟು ಬೀಡಿಯನ್ನು ತೆಗೆದು ಸೇದಿ, ಬಿಸಾಡಿ, ಕಾಲಿನಿಂದ ತುಳಿದು ಬೆಂಕಿಯನ್ನು ಆರಿಸಿ, ಗುಡ್ಲಿನ ಹತ್ತಿರಕ್ಕೆ ಬಂದು ತನಗಾಗಿ ಸಿದ್ಧವಾಗಿದ್ದ ಎಲೆಯ ಮುಂದೆ ಕುಳಿತು, ಒಂದು ಮಾತನ್ನೂ ಆಡದೆ ಊಟಮಾಡತೊಡಗಿದ.

"ಬೇಗ ಬೇಗ ಕಣ ಮುಗಿಸಿರಪ್ಪ, ಮದುವೆಗೆ ಸಾಮಾನು ಹೊಂಚಬೇಕು, ಈ ಸಾರಿ ಲಗ್ನಾ ನಿಲ್ಲಿಸಾಕೆ ಆಗೋದಿಲ್ಲ" ಎಂದಳು ಚಿನ್ನಮ್ಮ.

"ಮುಗಿದುಹೋಗ್ತದೆ ಬಿಡ್ರವ್ವ. ಇಷ್ಟಕ್ಕೆ ಬಂದಿದ್ದು, ಅಷ್ಟು ಉಳೀತದ, ಬುಧವಾರದೊಳಗೆ ದೌಡೆದ್ದು ಹೋಗ್ತದೆ. ಅಲ್ಲ, ಹೆಣ್ಣು ಎಲ್ಲಿ ನೋಡಿದ್ದೀರವ್ವ. ನಿಮ್ಮ ಅಣ್ಣನ ಮಗಳನ್ನೇ ತರ್ತಾರೆ ಅಂತಿದ್ರು ನಿಜವೇನವ್ವ!" ಎಂದ ಜವರಪ್ಪ.

ಜವರಪ್ಪನ ಮಾತು ಕೇಳಿ ಲಕ್ಕಣ್ಣ ಸಿಡಿಮಿಡಿಗೊಂಡು, ಅವನ ಕಡೆ ಕಣ್ಣೊರಳಿಸಿ ನೋಡಿದ. ಆದರೆ ಮದುವೆ ವಿಷಯದಲ್ಲಿ ಲಜ್ಜೆ ಅವನನ್ನು ಆವರಿಸಿದ್ದು ದರಿಂದ ಅವನು ತುಟಿ ತೆರೆಯಲಿಲ್ಲ. ತಲೆ ಬಗ್ಗಿಸಿ ಊಟಮಾಡುತ್ತಾ, ತನ್ನ

ಎರಡು ಕಿವಿಗಳನ್ನು ದೊಡ್ಡದುಮಾಡಿಕೊಂಡು ಅವರ ಸಂಭಾಷಣೆಯನ್ನು ಕೇಳುತ್ತಾ ಒಳಗೊಳಗೇ ಆನಂದಪಡುತ್ತಿದ್ದ.

"ನಿಜ ಜವರಪ್ಪ, ಅವರು ಪರಾಣ ಬಿಡುವಾಗ ಹೇಳಿಯೇ ಸತ್ತರು, ಅಣ್ಣನ ಮನೆ ಸಂಬಂಧ ಬಿಡಬೇಡ, ನಮ್ಮ ಲಕ್ಕಣ್ಣನಿಗೆ ನಿನ್ನ ಅಣ್ಣನ ಮಗಳು ಸಿದ್ದಿಯನ್ನೇ ತಂದುಕೋ ಎಂದು. ಹುಡುಗಿಯೂ ಪಸಂದಾಗಿದೆ. ಈಗಲೇ ಎರಡಾಳು ಕೆಲಸ ಮಾಡ್ತದೆ. ನಮ್ಮೂರು ಆಳವಾದ ಬಾವಿಯಿಂದ ಒಬ್ಬಳೇ ನೀರು ಸೇದಿ ತಲೆಯ ಮೇಲೊಂದು ಹೊತ್ತು, ಕಂಕುಳಲ್ಲೊಂದು ಇರುಕಿ ತರ್ತ್ತಾಳೆ. ಹುಡುಗೀನೂ ಬಲು ಚಾಲೂಕು. ಉಪ್ಪಿನುದಕ ಮಾಡ್ತಾಳೆ! ಅಷ್ಟು ಚೆನ್ನಾಗಿ ಮಾಡ್ತಾಳೆ; ಬಾಯಿ ಚಪ್ಪರಿಸಿಕೊಂಡು ಉಣ್ಣಬೇಕು ಎರಡು ಮುದ್ದೆ,. ಹಂಗಿರುತ್ತದೆ. ನಮ್ಮ ಅಣ್ಣ ಊರಿನಲ್ಲಿ ಇಲ್ದೆ ಇದ್ದಾಗ ಅವಳೇ ದನಗಳನ್ನೆಲ್ಲಾ ಮೇಯಿಸಿಕೊಂಡು ಬರ್ತಾಳೆ. ಗಂಡಸಾಗಿ ಹುಟ್ಟಬೇಕಾಗಿತ್ತು ಅವಳು!" ಎಂದು ಚೆನ್ನಮ್ಮ ತನ್ನ ಭಾವೀ ಸೊಸೆಯ ಗುಣಗಾನ ಮಾಡಿದಳು. ಲಕ್ಕಣ್ಣ ಅಮ್ಮನ ಹೊಗಳಿಕೆಯ ಮಾತುಗಳನ್ನು ಕೇಳಿ ಮನದಲ್ಲಿಯೇ ಹಿಗ್ಗಿದ.

"ಹಾಂಗಾದರೆ ಅಣ್ಣನ ಮಗಳನ್ನೇ ತರ್ರಿ‍ೀರಿ. ಇನ್ನೇನು ಖರ್ಚು ಸುಲಭಾನೇ ಆಗಿಹೋಯ್ತು" ಎಂದು ಹೇಳಿದ ವೆಂಕಟಯ್ಯ.

"ಮುಕ್ಕಾಲು ವೀಸೆ ನಮ್ಮ ಆ ಹುಡ್ಗೀನೆ ನನ್ನ ಸೊಸೆಯಾಗೋಳು. ನಮ್ಮ ಪರ್ಯತ್ನನೆಲ್ಲಾ ಮಾಡಾನ. ಆಮೇಲೆ ಬ್ರಹ್ಮಗಂಟು ಇದೆಯಲ್ಲ!"

"ಆಗ್ತದೆ ಬಿಡ್ರವ್ವ, ನಡೆದು ಹೋಗ್ತದೆ ಸಾಂಗವಾಗಿ, ನಿಲ್ಲೋದಿಲ್ಲ" ಎಂದು ವೆಂಕಟಯ್ಯ ಚೆನ್ನಮ್ಮನಿಗೆ ಧೈರ್ಯ ಹೇಳಿದ.

"ಋಣಾನುಬಂಧ ಬೇಕಪ್ಪ ಯಾವುದಕ್ಕೂ. ಹೆಣ್ಣು, ಹೊನ್ನು, ಮಣ್ಣು ಕೈವಶವಾಗಬೇಕಾದರೆ ಅದೃಷ್ಟಾನೂ ಬೇಕು!" ಎಂದಳು ಚೆನ್ನಮ್ಮ.

"ಈ ರಾಜನಂಥ ಮಗನಿಗೆ ಹೆಣ್ಣಿಗೇನೂ ಪೇಚಾಡಬೇಕಾಗಿಲ್ಲ ತಗೀರವ್ವ. ಯಾರಾದರೂ ಹಣ ಕೊಟ್ಟು ಹೆಣ್ಣು ಕೊಡ್ತಾರೆ!"

"ಅದಕ್ಕೇನೂ ಪೇಚಾಡಬೇಕಾಗಿಲ್ಲ, ಎಂಕಟಣ್ಣ! ನಮ್ಮಪ್ಪನ ಮನೆ, ನನ್ನ ಯಜಮಾನರ ಮನೆ ಎರಡೂ ಬೆಳೀತವೆ ಸಿದ್ದಮ್ಮನ್ನ ನಮ್ಮ ಹುಡುಗನಿಗೆ ತಂದು ಕೊಂಡರೆ."

"ಇನ್ನೇನು ಅದೇ ಹೆಣ್ಣಾಗ್ತದೆ ತಗೀರವ್ವ! ಲಕ್ಕಣ್ಣನು ಖುಷಿಯಾಗವನೆ. ಅವನಿಗೂ ಇಷ್ಟ ಅಂತಾ ಕಾಣ್ತದೆ, ಆ ಹೈದ್ಲನ್ನು ಲಗ್ನ ಆಗಾಕೆ!"

"ಆದರೂ ನಂಗೆ ಒಂದು ಯೋಚನೆ. ಅಣ್ಣ ನಮ್ಮೋನಾದ್ರೂ ಅತ್ತಿಗೆ ನಮ್ಮೋಳಾಗ್ತಾಳಾ ಎಂಕಟಣ್ಣ. ಅವಳೆಲ್ಲಿ ತಲೆಮೇಲೆ ಕಲ್ಲು ಎಳೀತಾಳೋ ಎಂದು ನನಗೆ ಗಾಬರಿ."

"ಅಣ್ಣ ಒಪ್ಪಿದ ಮೇಲೆ ಹುಡುಗಿ ಕತ್ತಿಗೆ ಲಕ್ಕಣ್ಣ ತಾಲಿ ಕಟ್ಟಬಿಡ್ತಾನೆ. ಅನುಮಾನವಿಲ್ಲ ಲಗ್ನ ಆಗೋದರಲ್ಲಿ!"

"ನಂಬುವುದಕ್ಕಾಗೊಲ್ಲ; ಹೆಣ್ಣುಮಾಯ! ಹೆಡ್ತಿಮಾತಿಗೆ ನಮ್ಮಣ್ಣ ಕಿವಿ ಜೋಲು ಬಿಡ್ತಾನೆ. ನಮ್ಮ ಅತ್ತಿಗೆ ತನ್ನ ತಮ್ಮನಿಗೆ ಆ ಚೆಂದುಳ್ಳಿ ಚೆಲುವೇನ ಗಂಟುಹಾಕಬೇಕೆಂದು ಸಂಚುಮಾಡ್ತಾ ಅವಳೆ ಅಂತಾ ಕೇಳಿವ್ನಿ!"

"ಏಕೆ ನಿಮ್ಮ ಅತ್ತಿಗೆ ತಮ್ಮ ಚೆಂದಾಗಿಲ್ವ?" ಎಂದು ಜವರಪ್ಪ ಮಧ್ಯೆ ಬಾಯಿಹಾಕಿ ಕೇಳಿದ.

"ತುಂಬಾ ಪೀಚಾಳು ಅವನು. ನಮ್ಮ ಲಕ್ಕಣ್ಣನಿಗೂ ಅವ್ನನಿಗೂ ಸಾಟಿಯಾ? ಹುಲಿಯ ಮುಂದೆ ಇಲಿಯಾ! ಅವನೊಬ್ಬ ದಾಸಯ್ಯ, ಮೈ ಬಗ್ಗಿಸಿ ದುಡಿದು ಬೆವರು ಸುರಿಸದೆ ನೆಂಟರ ಮನೆ ಹುಡುಕಿಕೊಂಡು ಆ ಊರು, ಈ ಊರು ತಿರುಗ್ತಾನೆ ಕೂಳಿಗೆ" ಎಂದಳು ಚೆನ್ನಮ್ಮ.

"ಬಿಡ್ರವ್ವಾ ಹಂಗಾದರೆ, ನಿಮ್ಮಣ್ಣ ಒಪ್ಪೋದಿಲ್ಲ ಆ ಊರು ಬಸವನಿಗೆ ಮಗಳ ಕೊಡೋಕೆ. ಆ ಹುಡುಗಿ ಲಕ್ಕಣ್ಣನಿಗೇ ದಕ್ತಾಳೆ. ನೀವು ಯಾರ ಕಣೀನೂ ಕೇಳಬೇಕಾಗಿಲ್ಲ ಇದಕ್ಕೆ. ಹೊಂಚರವ್ವ ಸಾಮಾನ್ನೆಲ್ಲಾ ಬೇಗ ಬೇಗ. ಮುಂಗಾರು ಮಳೆ ಸುರುವಾಗುವುದಕ್ಕೆ ಮುಂಚೇನೆ ಮಾಡಿಬಿಡ್ರವ್ವ ಮದ್ವೆ" ಎಂದ ವೆಂಕಟಯ್ಯ.

"ತಿಂಗಳುಬೆಳಕು ಸಿಕ್ಕುವ ಹಾಗೆ ಲಗ್ನ ಕಟ್ಟಸಿರವ್ವ! ಜನಕ್ಕೆ ಊಟ ಹಾಕುವುದಕ್ಕೆ ಸರಿಹೋಗ್ತದೆ; ಬಂದ ನೆಂಟರಿಗೂ ಹಿತವಾಗಿರ್ತದೆ. ಅಗಸನ ಪಂಜಿಗೆ ಸುರಿಯುವ ಹೊಂಗೆ ಎಣ್ಣೆಯೆಲ್ಲಾ ಉಳೀತದೆ. ಕಣದಲ್ಲೇ ಜನಾನೂ ಊಟಕ್ಕೆ ಕೂರಿಸಬಹುದು. ಒಂದೇ ಪಂಕ್ತಿಯಲ್ಲಿ ಜನರೆಲ್ಲಾ ದೌಡಾಗಿ ಹೋಗ್ತಾರೆ; ಬೆಳಗಾನ ನಿದ್ದೆಕೆಡಬೇಕಾಗಿಲ್ಲ!" ಎಂದು ಜವರಯ್ಯ ಸಲಹೆ ನೀಡಿದ.

"ಏನೋ ನೀವೆಲ್ಲಾ ಕೈಹಾಕಬೇಕ್ರಪ್ಪ. ಒಬ್ಬಳ ಕೈಲಿ ಆಗೋ ಕೆಲಸಾ ಅಲ್ಲ. ಮದುವೆ ಮಾಡಿ ನೋಡು, ಮನೆ ಕಟ್ಟಿ ನೋಡು! ಎಂದು ಗಾದೇನೆ ಇದೆ" ಎಂದಳು ಚೆನ್ನಮ್ಮ.

ಇದುವರೆವಿಗೂ ಒಂದು ಮಾತನ್ನೂ ಆಡದಿದ್ದ ಬೋರ, "ಬಿಡು ಚೆನ್ನಕ್ಕ ಅದ್ಯಾಕೆ ಅಷ್ಟು ಯೋಚನೆ, ನಾವೆಲ್ಲ ಸತ್ತುಹೋಗಿದ್ದೀವ! ನಮ್ಮ ಕೆಲ್ಸ ಅಂತಾ ಮುತುವರ್ಜಿ ಮಾಡ್ತೀವಿ" ಎಂದ.

"ಒಪ್ದೆ ಕಣೋ, ಹಂಗಿರಬೇಕು ಹುಡುಗರೆಂದರೆ!" ಎಂದು ಬೋರನಿಗಿಂತ ವಯಸ್ಸಿನಲ್ಲಿ ಸ್ವಲ್ಪ ಹಿರಿಯವನಾದ ಜವರಪ್ಪ ಮೆಚ್ಚಿಕೆಯ ಮಾತನ್ನಾಡಿ, ತನ್ನ ಎಡಭಾಗದಲ್ಲಿ ಕುಳಿತು ದೊನ್ನೆಯ ಸಾರನ್ನು ನೆಕ್ಕುತ್ತಿದ್ದ ಬೋರನ ಭುಜ ವನ್ನು ತನ್ನ ಎಡಗೈಯಿಂದ ತಟ್ಟಿದ. ಜವರಪ್ಪ ತಂಬಿಗೆಯ ನೀರನ್ನು ಕುಡಿದು "ಉದಕ ಪಸಂದಾಗೇನೋ ಇದೆ; ಸ್ವಲ್ಪ ಖಾರ ಮುಂದು. ಯಾರ ಯಾರ ಮನೆಯ ಉದಕದ ರುಚಿ ನೋಡಿವ್ನಿ. ನೀವು ಮಾಡಿದ ಹಾಂಗೆ ಉದಕ ಮಾಡೋಕೆ

ಯಾವ್ದೋಳ ಹಣೇಲೂ ಬರೆದಿಲ್ಲ. ಇನ್ನೇನು ಬಿಡಿ, ಅತ್ತೆಗೆ ತಕ್ಕ ಸೊಸೆ ಸಿಕ್ಕಳಲ್ಲ, ಅತ್ತೆ ಹೆಸರು ಉಳಿಸಾಕೆ!" ಎಂದನು.

"ಬಿಡು ಜವರಣ್ಣ, ನಮ್ಮ ಸಿದ್ದಿ ಮುಂದೆ ನನ್ನ ಕೈ ನಡೆಯೋದಿಲ್ಲ!" ಎಂದು ಹೇಳಿ, ಚಿನ್ನಮ್ಮ ಊಟ ಮಾಡಿ ಮುಗಿಸಿದ ಎಲ್ಲರ ಕೈಗೂ ನೀರು ಹಾಕಿದಳು. ಕೈತೊಳೆದು ಬಂದು ಎಲ್ಲರೂ ಕಣದಲ್ಲಿ ಒಂದೆಡೆ ಹುಲ್ಲು ಒರಗಿ ಕುಳಿತರು. ಚಿನ್ನಮ್ಮ ಊಟಮಾಡಿದ ಎಲೆಗಳನ್ನು ದೂರ ಬಿಸಾಡಿ, ಕೈ ತೊಳೆದುಕೊಂಡು, ಖಾಲಿ ಪಾತ್ರೆಗಳನ್ನೆಲ್ಲ ಮಕ್ಕರಿಗೆ ಜೋಡಿಸಿ, ಮಿಕ್ಕವರು ಕುಳಿತೆಡೆಗೆ ಬಂದು, ನಡುವಿನಲ್ಲಿ ಸಿಕ್ಕಿಸಿದ್ದ ಎಲೆ ಅಡಕೆ ಚೀಲವನ್ನು ತೆಗೆದು ವೆಂಕಟಯ್ಯನಿಗೂ ಜವರಯ್ಯನಿಗೂ ಎಲೆ ಅಡಕೆ ಹೊಗೆಸೊಪ್ಪನ್ನು ಹಂಚಿ, ಬೋರನಿಗೆ ಎರಡು ಬೀಡಿ ಕೊಟ್ಟಳು.

"ಲೋ ಹುಷಾರೋ ಹುಲ್ಲಿದೆ, ಹಲಸಿನ ಮರದಕಡೆ ಹೋಗಿ ಸೇದಿ ಬಾರೋ! ಆ ಹಾಳು ಬೀಡಿ ಏಕೆ ಸೇದಿ ಸೇದಿ ಪ್ರಾಣ ಬಿಡ್ತಿಯೋ? ಸೇದುವುದನ್ನು ಬಿಟ್ಟುಬಿಟ್ಟರೆ ನಿಮ್ಮಪ್ಪನ ಗಂಟು ಏನು ಹೋಗ್ತದೆ" ಎಂದು ಜವರಯ್ಯ ಬೋರನನ್ನು ಕೇಳುತ್ತಿದ್ದ ಹಾಗೆಯೇ, ಅವನು ಜವರಯ್ಯನ ಮಾತುಗಳಿಗೆ ಕಿವಿಗೊಡದೆ ಹಲಸಿನ ಮರದ ದಿಕ್ಕಿಗೆ ನಡೆದ.

"ಲಕ್ಕಣ್ಣ ವೀಳೆದೆಲೆ ಹಾಕಬೇಕಪ್ಪ, ಒಳ್ಳೇದು. ನಾಳೆ ಸಿದ್ದಕ್ಕ ಮಡಚಿ ಬಾಯಿಗೆ ಕೊಡ್ತಾಳಲ್ಲ, ಏನು ಮಾಡ್ತೀಯೆ? ತಗೋ ಅಭ್ಯಾಸವಾಗಲಿ" ಎಂದು ವೆಂಕಟಯ್ಯ ಲಕ್ಕಣ್ಣನಿಗೆ ವೀಳೆದೆಲೆ ಕೊಡಲು ಹೋದ.

"ತಗೀ ಎಂಕಟಣ್ಣ, ನೀನು ದಿನದಿನಕ್ಕೆ ಹುಡುಗ ಆಗ್ತಾ ಬರ್‍ತಿದ್ದೀಯ" ಎಂದು ಹೇಳಿ ಸ್ವಲ್ಪ ದೂರ ಹೋಗಿ ಕುಳಿತು, ಮನದಲ್ಲಿಯೇ ವೆಂಕಟಯ್ಯ ಹೇಳಿದ ಮಾತುಗಳನ್ನು ನೆನೆನೆನೆದು ಉಲ್ಲಾಸಗೊಂಡ.

ಹಲಸಿನ ಮರದ ಬುಡದಲ್ಲಿ ಬೀಡಿ ಸೇದಿ ಹಿಂದಿರುಗಿದ ಬೋರನನ್ನು ಕುರಿತು, "ಲೋ, ಥೂ ಏನು ವಾಸನೆಯೊ ನಿನ್ನ ಬಾಯಿ, ಅದ್ಯಾಕೆ ಸೇದಬೇಕು ಆ ಗಬ್ಬು! ದೂರ ಕುಳಿತುಕೊಳ್ಳೊ!" ಎಂದು ಹೇಳಿದ ಜವರಯ್ಯ ಬಾಯಿಂದ 'ಚಿರ್' ಎಂದು ಅಡಕೆಲೆ ರಸವನ್ನು ಹಲ್ಲುಗಳ ಸಂದಿನಿಂದ ಚಿಮ್ಮಿಸಿದ.

"ನಿಮ್ಮ ಕಾಟ ತಡಿಯೋಕೆ ಆಗೋದಿಲ್ಲ! ಬಟ್ಟೆಯೆಲ್ಲಾ ಕೆಟ್ಟುಹೋಗ್ತದೆ. ದುಷ್ಟರ ಕಂಡರೆ ದೂರ ಇರು ಅಂತಾ ಗಾದೇನೆ ಇದೆ" ಎಂದು ಹೇಳಿ ಬೋರ ಲಕ್ಕಣ್ಣನ ಪಕ್ಕದಲ್ಲಿ ಬಂದು ಕುಳಿತ.

ಇಲ್ಲಿಯವರೆಗೂ ಗುಡ್ಲಿನ ಹತ್ತಿರ ರಾಗಿ ಗುಡ್ಡೆ ಮಾಡುತ್ತಿದ್ದ ಚಿನ್ನಮ್ಮ ಅಲ್ಲಿಗೆ ಬಂದು ಕುಳಿತು, "ಎಂಕಟಣ್ಣ ನಮ್ಮ ಹುಡುಗನ ಮದುವೆಗೆ ಎಷ್ಟು ರಾಗಿ ಬೀಸಿಸಬೇಕಾದೀತು? ನಾನೇನೋ ಎರಡು ಖಂಡುಗ ರಾಗಿ, ಒಂದು ಖಂಡುಗ ಭತ್ತ ಆದರೆ ಸಾಕೆಂದು ಅಂದಾಜು ಮಾಡಿದ್ವಿ" ಎಂದು ಕೇಳಿದಳು.

"ಸಾಕು ಎಂದು ಕಣ್ತದ್ರವ್ವ, ಗೌಡರು ಮಗನ ಮದುವೆಯಲ್ಲಿ ಎರಡು

ಖಂಡುಗ ದವಸ ಹಾಕಿಸಿದ್ರು. ಸೀಮೇ ಜನ ಎಲ್ಲಾ ಉಂಡ್ರು. ಕಡೆಗೂ ಉಳಿದೇ ಹೋಯ್ತು ಎರಡು ಮಕ್ಕರಿ ಮುದ್ದೆ, ಎರಡು ಬೆಂಡುಗೂಡೆ ಅನ್ನ. ಅಷ್ಟೆಯಾಗೇ ಮಾಡಿಸಿರವ್ವ. ಸುಮ್ಮನೆ ಕ್ಯಾಣವಿಲ್ಲದೆ ಬೇಯಿಸಿ ತಿಪ್ಪೆಗೆ ಯಾಕೆ ಸುರಿಸ್ತೀರಿ" ಎಂದ ವೆಂಕಟಯ್ಯ.

ಲಕ್ಕಣ್ಣನ ಪಕ್ಕದಲ್ಲಿ ಕುಳಿತಿದ್ದ ಬೋರ ತಟ್ಟನೆ ಎದ್ದು ವೆಂಕಟಯ್ಯನನ್ನು ಕುರಿತು, "ಎಂಕಟಣ್ಣ, ಲಕ್ಕಣ್ಣನ ಮದುವೇಲಿ ನೀನೇನು ವಹಿಸಿಕೊಳ್ತಿ; ಚಪ್ಪರಾನೋ, ಅಡುಗೆಯೋ, ವಾಲಗದವರ ಉಸ್ತುವಾರಿಯೋ?" ಎಂದು ಪ್ರಶ್ನಿಸಿದ.

"ಯಾಕೋ ಹೆದರಿಸ್ತೀಯ. ಎಲ್ಲಾ ಕೆಲ್ಸಾನೂ ನಾನೇ ನೋಡ್ಕೊಳ್ತೀನಿ. ಬಿಡ್ರವ್ವ ಯೋಚ್ನೆ. ಹಸೇಕಂಬ ತರಿಸ್ತೀನಿ, ಚಪ್ಪರಕ್ಕೆ ಮಾವಿನಸೊಪ್ಪು ಕಟ್ಟಿಸ್ತೀನಿ, ಬಾಳೇಕಂಬ ತರಿಸ್ತೀನಿ" ಎಂದ ವೆಂಕಟಯ್ಯ.

"ಅದೆಲ್ಲಾ ಹುಡುಗರು ಮಾಡಿಕೊಳ್ತಾರೆ. ಅಡಕೆ ಬೆಲೆ ದುಬಾರಿಯಾಗಿ ಹೋಗಿದೆ. ವೀಳೆದೆಲೆ ಯಾರಾದರೂ ಕೊಡ್ತಾರೆ. ನೀನು ಮಾತ್ರ ಅಡಕೆ ಜವಾಬ್ದಾರಿ ವಹಿಸಿ ಬಂದವರಿಗೆಲ್ಲಾ ಸೌರಿಸಬೇಕು. ಹುಚ್ಚೆಳ್ಳೆಣ್ಣೆ ಯಾರಾದರೂ ಹಾಕ್ತಾರೆ. ನೀನು ಮಾತ್ರ ತುಪ್ಪದ ಬಟ್ಟಲು ತೆಗೆದುಕೊಳ್ಳಬೇಕು" ಎಂದು ಚೆನ್ನಮ್ಮ ಹೇಳುತ್ತಿದ್ದ ಹಾಗೆಯೇ ಗಾಳಿ ಬೀಸತೊಡಗಿತು; ಒಣ ಹುಲ್ಲು ಗಾಳಿಗೆ ಹಾರಾಡತೊಡಗಿತು. ಕಣದಲ್ಲಿದ್ದ ಉಬ್ಬಲು ತೂರಿ ಚೆನ್ನಮ್ಮನ ಕಣ್ಣಿಗೆ ಬಿದ್ದು, ಚೆನ್ನಮ್ಮ ಸೆರಗಿನಿಂದ ಕಣ್ಣುಜ್ಜಿಕೊಂಡಳು.

"ಎಂಕಟಣ್ಣ ಏಳಿ, ಗಾಳಿ ಎದ್ದಿದೆ, ಉಳಿದಿರುವ ಮಿದಿಯನ್ನೆಲ್ಲಾ ತೂರಿಬಿಡಿ" ಎಂದು ಚೆನ್ನಮ್ಮ ಮೇಲೆದ್ದಳು. ಗುಡ್ಲಿನ ಹತ್ತಿರ ಹೋಗಿ ಊಟ ತಂದಿದ್ದ ಮಕ್ಕರಿಯನ್ನು ತಲೆಯಮೇಲೆ ಹೊತ್ತು, ನಾಲ್ಕು ಹೆಜ್ಜೆ ನಡೆದಳು.

"ಎಂಕಟಣ್ಣ ಮರ್ತಿದ್ದೆ, ಒಂದು ತಬ್ಬು ಹುಲ್ಲು ಕಟ್ಟಿಕೊಡಪ್ಪ. ಆ ಹಾಳು ತಿಗಣೆ ಏನು ಹೆಚ್ಚಿವೆ. ಬೆಳಗಾನ ನಿದ್ದೆ ಕೊಡಲ್ಲ. ಗೋಡೆ ಒರಗಿ ಕುಳಿತುಕೊಳ್ಳುವ ಹಾಗಿಲ್ಲ, ಬೆಲ್ಲಕ್ಕೆ ನೊಣ ಮುತ್ತುವಂತೆ ಮುತ್ತುತ್ತವೆ. ಗೋಡೆ, ಕಂಬಗಳ ಸುತ್ತ ಹುಲ್ಲು ಹಾಕಿ, ನೀರು ಚಿಮುಕಿಸಿ, ಅರೆ ನಿದ್ದೆಯನ್ನಾದರೂ ಮಾಡ್ತೀನಿ. ಮೈಯಲ್ಲಿ ಒಂದು ತೊಟ್ಟು ರಕ್ತನಾದ್ರೂ ಉಳೀಲಿ" ಎಂದಳು. ವೆಂಕಟಯ್ಯ ಒಂದು ತಬ್ಬು ಹುಲ್ಲನ್ನು ತಬ್ಬಿ, ಕತ್ತಾಳೆ ನಾರನ್ನು ಸೀಳಿ ಕಟ್ಟುಹಾಕಿ ಚೆನ್ನಮ್ಮನ ಕೈಗೆ ಕೊಟ್ಟ. ಚೆನ್ನಮ್ಮ ಹುಲ್ಲನ್ನು ಕಂಕುಳಲ್ಲಿರುಕಿ, "ಎಂಕಟಣ್ಣ, ನಮ್ಮ ಲಕ್ಕಣ್ಣನ ಮದುವೆ ಹೊತ್ತಿಗಾದರೂ ಕರೀ ಗೋಡೆಯನ್ನೆಲ್ಲಾ ಕೆರೆಸಿ, ಮಳಗಾಜು ಮಾಡಿಸಿ, ಸುಣ್ಣ ಬಳಿಸಬೇಕು," ಎಂದು ಹೇಳಿ ಊರ ದಾರಿಯನ್ನು ಹಿಡಿದಳು.

ಲಕ್ಕಣ್ಣ ಉದಿಗೆಯ ಮೇಲೆ ಹತ್ತಿನಿಂತು, "ತಗೋಬನ್ರೋ ಬೇಗ ಬೇಗ, ವಾಯುದೇವರು ವರಕೊಟ್ಟವನೆ" ಎಂದ. ಮಿಕ್ಕ ಮೂವರು ಮೊರಗಳನ್ನು ಹಿಡಿದು ಓಡಾಡಿದರು.

ಬೋರ ಮಿದಿಯನ್ನು ತುಂಬಿದ ಮೊರವನ್ನು ಉದಿಗೆಯ ಮೇಲಿಟ್ಟು, "ಲಕ್ಕಣ್ಣ, ನಿನ್ನ ಮದುವೇಲಿ ನನ್ನ ಮರೀಬ್ಯಾಡಪ್ಪೋ, ಗಂಡಿನ ಜೊತೆ ಓಡಾಡ ಬೇಕು ಅಂತಾ ಆಸೆ ಆಯ್ತುದೆ" ಎಂದ.

ಲಕ್ಕಣ್ಣ ಮುಗುಳುನಗೆಯಿಂದ ಬೋರನನ್ನು ಗದರಿಸಿ, "ಲೋ ಬೋರ ಹೆಚ್ಚಿಗೆ ಮಾತಾಡಿದರೆ ತಲೆಮೇಲೆ ಮೊರ ಹಾಕ್ತೇನಿ" ಎಂದು ಹೇಳಿ, ವೆಂಕಟಯ್ಯ ನನ್ನು ಕುರಿತು, "ಎಂಕಟಣ್ಣ ಬೋರನ ಮೊರಕ್ಕೆ ಹೆಚ್ಚುಹೆಚ್ಚಾಗಿ ತುಂಬಿ ಕಳಿಸು. ಅವನು ಬಹಳ ಕೊಬ್ಬಿಹೋಗವನೆ" ಎಂದ.

"ಹೊಸ ಮದುವೆ ಗಂಡಪ್ಪ, ಹಂಗೆಲ್ಲ ರೇಗಿಸಬ್ಯಾಡ. ರಾತ್ರಿ ನಿದ್ದೆ ಬರದೆ ಹೋದಾತು" ಎಂದು ಜವರಪ್ಪ ಬೋರನ ಪಕ್ಷವನ್ನು ವಹಿಸಿ ಮಾತನಾಡಿದ.

ಅವರು ಬಹಳ ಹೊತ್ತು ತಮಾಷೆಯಲ್ಲಿಯೇ ಕೆಲಸಮಾಡಿದರು. ತೂರುವ ಮಿದಿ ಮುಗಿದುಹೋಯಿತು. ವೆಂಕಟಯ್ಯ ಮತ್ತು ಜವರಪ್ಪ ಎಂದಿನಂತೆ ಗುಡ್ಲಿಗೆ ಹೋಗಿ ಮಲಗಿದರು. ಲಕ್ಕಣ್ಣನ ಜೊತೆಯಲ್ಲಿ ರಾಗಿಯನ್ನು ರಾಶಿ ಮಾಡುತ್ತಿದ್ದ ಬೋರ ಮೇಲೆದ್ದು ಹಲಸಿನಮರದ ಬುಡವನ್ನಾಶ್ರಯಿಸಿ ಒಂದು ಮೋಟು ಬೀಡಿ ಸೇದಿ, ಇನ್ನೂ ಒಕ್ಕಬೇಕಾದ ಅರ್ಧ ಮೆದೆಯನ್ನು ಹತ್ತಿ, ಹರಕಲು ಚಾಪೆಯ ಅರ್ಧದಲ್ಲಿ ಮಲಗಿ ಮಿಕ್ಕರ್ಧವನ್ನು ಮೈಮೇಲೆ ಎಳೆದುಕೊಂಡು ಮಲಗಿದ. ತನ್ನ ಮದುವೆಗೆ ಸಂಬಂಧಿಸಿದ ಸವಿ ಮಾತುಗಳನ್ನು ನೆನೆನೆನೆದು ಉಲ್ಲಾಸದಿಂದ ರಾಗಿ ರಾಶಿ ಮಾಡುತ್ತ ಲಕ್ಕಣ್ಣ ಬಹಳ ಹೊತ್ತು ಕಳೆದ.

ತರುವಾಯ ಲಕ್ಕಣ್ಣ ಕಣದ ಪಕ್ಕದಲ್ಲಿ ದೊಡ್ಡ ಮೆದೆಯಂತೆ ರಾಶಿ ಬಿದ್ದಿದ್ದ ಹುಲ್ಲಿನ ಮೇಲಕ್ಕೆ ಹತ್ತಿದನು. ತನ್ನ ಎರಡು ಕಾಲುಗಳನ್ನು ಹುಲ್ಲಿನೊಳಗೆ ಸಿಕ್ಕಿಸಿ, ಬೆಳಗಿನ ಜಾವದಲ್ಲಿ ಚಳಿಯಾದಾಗ ಹುಲ್ಲನ್ನು ತನ್ನ ಕತ್ತಿನವರೆಗೂ ಕವಚಿಕೊಳ್ಳು ವಂತೆ ಅನುಕೂಲಮಾಡಿಕೊಂಡು ಆಕಾಶದ ಕಡೆ ಮುಖಮಾಡಿ ಮಲಗಿದ. ನಿರ್ಮಲಾಕಾಶದಲ್ಲಿ ಪೂರ್ಣಚಂದ್ರ ಹಲಸಿನ ಮರದ ತುಟ್ಟತುದಿಯವರೆಗೂ ಬಂದಿದ್ದ. 'ಕೂರಿಗೆ ದಾಳಗಳು' ಎಂದು ಪ್ರಸಿದ್ಧಿ ಪಡೆದ ಮೂರು ದೊಡ್ಡ ನಕ್ಷತ್ರಗಳು ಲಕ್ಕಣ್ಣನ ಎದುರಿಗೆ ಆಕಾಶದಲ್ಲಿ ಮಿನುಗುತ್ತಿದ್ದವು. ತಣ್ಣನೆಯ ತಂಗಾಳಿ ಮೂಡಣ ದಿಕ್ಕಿನಿಂದ ಬೀಸುತ್ತಿದ್ದಿತು. ಬೆಳಗಿನಿಂದ ದುಡಿದು ಬಳಲಿದ್ದ ಲಕ್ಕಣ್ಣನ ಮನಸ್ಸು ಚಂದ್ರ ಮನ ತಂಪಿನಿಂದ ಮತ್ತೆ ಸ್ಫೂರ್ತಿಗೊಂಡಿತು. ಅವನು ಉಲ್ಲಾಸಗೊಂಡು ಹಿಂದಿನ ರಾತ್ರಿ, ವೆಂಕಟಯ್ಯ ಕೋಳಿ ಮತ್ತು ಕೋಳಿ ಮರಿಗಳು, ಬೆಳುವನ ಹಕ್ಕಿ ಮತ್ತು ಅದರ ಮೊಟ್ಟೆಗಳು ಎಂದು ತೋರಿಸಿದ್ದ ನಕ್ಷತ್ರಗಳನ್ನು ಹುಡುಕಲು ಪಡುವಣದಿಕ್ಕಿಗೆ ಕಣ್ಣೋರಳಿಸಿದ. ಒಂದು ದೊಡ್ಡನಕ್ಷತ್ರ ಮತ್ತು ಅದರ ಸುತ್ತಲೂ ಪಣಪಣನೆ ಮಿನುಗುವ ಏಳೆಂಟು ಸಣ್ಣ ನಕ್ಷತ್ರಗಳನ್ನು ಗುರ್ತಿಸಿ, "ಇದೇ ಕೋಳಿ, ಅದು ತನ್ನ ಮರಿಗಳನ್ನು ಎಷ್ಟು ಚೆನ್ನಾಗಿ ಆಡಿಸಿಕೊಂಡು ಮೇವು ಮೇಯಿಸುತ್ತಿದೆ" ಎಂದು ಕೊಂಡ. ಆ ನಕ್ಷತ್ರಗಳಿಗೆ ಅನತಿ ದೂರದಲ್ಲಿ ಪ್ರಕಾಶಿಸುತ್ತಿದ್ದ ಬೇರೊಂದು

ನಕ್ಷತ್ರವನ್ನು ನೋಡಿ, "ಎಲಾ, ಕೋಳಿಮರಿಗಳನ್ನು ಅಪಹರಿಸಲು ಹದ್ದು ಹೊಂಚುಹಾಕುತ್ತಿದೆ! ಎಂಕಟಣ್ಣ ಇದನ್ನು ಹೇಳಲೇ ಇಲ್ಲವಲ್ಲ!" ಎಂದು ಎಂಕಟಯ್ಯನನ್ನು ನಿಂದಿಸಿದ. ಆ ನಕ್ಷತ್ರವನ್ನೇ ಬಹಳಹೊತ್ತು ದಿಟ್ಟಿಸಿ ನೋಡಿದ. ಅನಂತರ ಒಂದರ ಪಕ್ಕದಲ್ಲಿ ಒಂದು ಗೋಲಿಗಳ ಗಾತ್ರದ ನಕ್ಷತ್ರಗಳು ಮಿನುಗುಟ್ಟು ವುದನ್ನೂ, ಆ ಎರಡು ನಕ್ಷತ್ರಗಳಿಗೂ ಸ್ವಲ್ಪ ದೂರದಲ್ಲಿ ಬೇರೊಂದು ನಕ್ಷತ್ರ ಪ್ರಕಾಶಿಸುವುದನ್ನೂ ಎವೆಯಿಕ್ಕದೆ ದಿಟ್ಟಿಸಿ, "ಓಹೋ! ಬೆಳುವನ ಹಕ್ಕಿ ತನ್ನ ಮೊಟ್ಟೆಗಳ ಮೇಲಿಂದ ಹಾರಿಹೋಗುತ್ತಿದೆ!" ಎಂದು ಆಶ್ಚರ್ಯಗೊಂಡ.

ಲಕ್ಕಣ್ಣನ ಕಣದ ಪೂರ್ವದಿಕ್ಕಿನಲ್ಲಿದ್ದ ತೊರೆಯ ಕಡೆಯಿಂದ ತೇನೆಹಕ್ಕಿ ಕೂಗಿತು. ಹಕ್ಕಿಯ ಮಧುರವಾದ ಉಲಹು ಅವನ ಕರ್ಣಪಟಲಕ್ಕೆ ತಾಗುತ್ತಲೆ ಅವನ ಮೈ ನವಿರೆದ್ದು, ಹೃದಯ ಅರಳಿ ಅವನ ಕಿವಿಗಳು ಮತ್ತೆ ಮತ್ತೆ ಆ ಇಂಪಾದ ಇಂಚರವನ್ನು ಕೇಳಬಯಸಿದವು. ಹಕ್ಕಿಯ ಧ್ವನಿ ಮತ್ತೆ ಕೇಳಿಬರಲಿಲ್ಲ; ಆದರೆ ಹಲಸಿನ ಮರದಡಿಯ ತರಗೆಲೆಯಲ್ಲಿ ಸರಸರನೆ ಸದ್ದಾಯಿತು. ಮೇಗಲ ಹಟ್ಟಿ ಕೆಂಚಯ್ಯನ ಮಡದಿ ಎರಡು ಮಕ್ಕಳನ್ನು ಬಿಟ್ಟು ಹೆರಿಗೆ ಕಾಲದಲ್ಲಿ ಸಾವನ್ನಪ್ಪಿದ್ದಳು. "ಅವಳು ದೆವ್ವ ಆಗವಳೆ, ಕೆಂಚಯ್ಯನ ಹಟ್ಟಿಯ ಎರಡು ಕುರಿಗಳನ್ನು ಅವಳೇ ಮುರಿದುಕೊಂಡವಳು. ನಿಂಗಮ್ಮ ಬಾವಿಯ ನೀರು ಸೇದುತ್ತಿದ್ದಾಗ ಅವಳನ್ನು ನೂಕಿದ ಹಾಗಾಯಿತಂತೆ. ಕೆಂಚಯ್ಯನ ಹಟ್ಟಿಯ ಹೆಂಚುಗಳೆಲ್ಲ ಅಮಾವಾಸ್ಯೆಯ ದಿನ ಸೊರಸೊರನೆ ಸದ್ದುಮಾಡಿದುವಂತೆ" ಎಂದು ಊರಿನಲ್ಲೆಲ್ಲಾ ಪುಕಾರು ಎದ್ದು ಜನರು ಮಾತನಾಡಿಕೊಳ್ಳುತ್ತಿದ್ದ ಮಾತುಗಳು ತಟ್ಟನೆ ಅವನ ಜ್ಞಾಪಕಕ್ಕೆ ಬಂದು, ಎದೆ ದಡದಡನೆ ಹೊಡೆದುಕೊಳ್ಳಲು ಮೊದಲಾಯಿತು. ಅವನು ಹೆಚ್ಚಾದ ಭಯದಿಂದ ವೆಂಕಟಯ್ಯನನ್ನು ಕೂಗಿಕೊಳ್ಳಬೇಕೆಂದು ಮನಸ್ಸು ಮಾಡಿದ. ಆದರೆ ಅವನು ತುಟಿ ತೆರೆಯಲಾಗಲಿಲ್ಲ. ಬಾಯಿ ಒಣಗಿ, ಮೈ ಬೆವರಿತು. ಅವನು ಪಕ್ಕದ ಹುಲ್ಲನ್ನು ಮೈಮೇಲೆ ಎಳೆದುಕೊಂಡು, ಕಣ್ಣು ಮೂಗುಗಳನ್ನುಳಿದು ಮಿಕ್ಕೆಲ್ಲ ಭಾಗಗಳನ್ನೂ ಮರೆಮಾಡಿಕೊಂಡು ತನ್ನ ಎರಡು ಕಣ್ಣುಗಳನ್ನೂ ಭದ್ರವಾಗಿ ಮುಚ್ಚಿಕೊಂಡ.

ಬೆಳಗಿನ ಜಾವ. ಹಕ್ಕಿಗಳು ಚಿಲಿಪಿಲಿಗುಟ್ಟಲು ತೊಡಗಿದುವು. ವೆಂಕಟಯ್ಯ ಗುಡ್ಲಿನಿಂದ ಹೊರಗೆ ಬಂದ.

"ಲೋ ಜವರ, ಬೋರ ಏಳ್ರೋ ಮೇಲೆ, ಹೊತ್ತಾಯ್ತು ಉಳಿದಿರುವ ರಾಗೀನ ಜರಡೇನಾದ್ರು ಆಡಾನ!" ಎಂದು ಕೂಗಿ ಅಬ್ಬರಿಸಿದ. ಜವರ ಮತ್ತು ಬೋರ ಮೇಲೆದ್ದು ತಮ್ಮ ಕಣ್ಣುಗಳನ್ನು ಕೈಗಳಿಂದ ಉಜ್ಜಿಕೊಳ್ಳುತ್ತಾ ಕಣಕ್ಕೆ ಕಾಲಿಟ್ಟರು.

"ಇದೇನು ಬಗೆಯಪ್ಪ, ಲಕ್ಕಣ್ಣ ಇಷ್ಟುಹೊತ್ತಿನವರೆಗೂ ನಿದ್ದೆಹೊಡೀತವನೆ, ದಿನವೂ ಎಲ್ಲರಗಿಂತ ಮುಂಚೆ ಏಳ್ತಿದ್ದ ಆಸಾಮಿ; ಅದೇನು ಸುಖನಿದ್ದೆ ಬಂತಪ್ಪ

ಇವನಿಗೆ!" ಎಂದು ವೆಂಕಟಯ್ಯ ಹುಲ್ಲಿನ ಮೇಲಕ್ಕೆ ಹತ್ತಿ, "ಲಕ್ಕಣ್ಣ ಏಳೋ ಮಾರಾಯ, ಹೊತ್ತಾಯ್ತು" ಎಂದು ಅಬ್ಬರಿಸಿದರೂ ಲಕ್ಕಣ್ಣ ಮಾತನಾಡದಿರಲು, ವೆಂಕಟಯ್ಯ ಲಕ್ಕಣ್ಣನ ಸುತ್ತಲೂ ಕವುಚಿದ್ದ ಹುಲ್ಲನ್ನು ಕೀಳುತ್ತಾ "ಅದೇನು ಹೀಗೆ ಸುತ್ತಿಕೊಂಡವನೆ ಹುಲ್ಲ!" ಎಂದು ಪಕ್ಕಕ್ಕೆ ಹೊರಳಿಸಿದ.

"ಏಳ್ತೀನಿ ಬಿಡು ಎಂಕಟಣ್ಣ! ಹಾಳು ಸಪ್ನ ಏನೇನೋ ಬೀಳ್ತದೆ" ಎಂದು ತಟ್ಟನೆ ಮೇಲೆದ್ದು, ಹಲಸಿನ ಮರದೆಡೆಗೆ ದೃಷ್ಟಿಯನ್ನು ಹರಿಸಿ, ವೆಂಕಟಯ್ಯ ನೊಡನೆ ಕಣಕ್ಕೆ ಕಾಲಿಟ್ಟ. ಎಲ್ಲರೂ ಜರಡೆಗಳನ್ನು ತೆಗೆದುಕೊಂಡು ರಾಗಿ ಸುತ್ತಲೂ ಕುಳಿತರು.

"ಕೋಳಿ ಕೂಗೋ ಹೊತ್ಗೆ ಏಳ್ತಿದ್ದೆ, ಅದೇನು ಬಂತು ನಿನಗೆ ಈಹೊತ್ತು" ಎಂದ ಜವರಯ್ಯ.

"ಕೆಟ್ಟ ಕೆಟ್ಟ ಸಪ್ನಾನೇ ಬೀಳ್ತದೆ ಅದ್ಯಾಕೋ!" ಎಂದು ಲಕ್ಕಣ್ಣ ಗೊಣ ಗುಟ್ಟಿದ.

"ಅದೇನಪ್ಪ ಅಂಥದು ಪ್ರಾಯದ ಹುಡುಗನಿಗೆ, ಮದುವೆ ಆಗೋ ಗಂಡಿಗೆ!" ಎಂದ ಬೋರ.

"ಸಪ್ನದಲ್ಲಿ ನನ್ನ ಮದುವೆ ನಮ್ಮ ಮಾವನ ಮಗಳ ಜೊತೇಲೆ ಆಗಿ ಹೋಯ್ತು!" ಎಂದು ಹೇಳಿದ ಲಕ್ಕಣ್ಣ.

"ಇದು ಕೆಟ್ಟ ಸಪ್ನಾನ. ಸರಿಹೋಯ್ತು, ಕರೆದು ಹೆಣ್ಣುಕೊಟ್ಟರೆ ಮಲ್ಲಾಗರ," ಎಂದ ವೆಂಕಟಯ್ಯ.

"ಎಂಕಟಣ್ಣ ಅಷ್ಟೇ ಅಲ್ಲ, ಹೇಳ್ತೀನಿ ಮೊದಲಿನಿಂದ ಕೊನೇವರೆಗೂ, ತಟ್ಟನೆ ಎಲ್ಲಾ ಗ್ಯಾಪನಕ್ಕೆ ಬರೋದಿಲ್ಲಾ ತಡೀ ಹೇಳ್ತೀನಿ!" ಎಂದು ರಾತ್ರಿ ನಡೆದ ಸಮಾಚಾರವನ್ನೆಲ್ಲಾ ಹೇಳತೊಡಗಿದ.

"ಎಂಕಟಣ್ಣ ಕೆಂಚಯ್ಯನ ಹೆಡ್ತಿ ಗಾಳಿ ಆಗವಳೆ, ನಿಜ! ರಾತ್ರಿ ನಾನೂ ನೋಡ್ದೆ. ನನ್ನ ಕುತ್ತಿಗೆ ಹಿಸುಗೋಕ್ಕೆ ಬಂದಿದ್ದಳು."

"ಹಾ! ಏನಂದೆ, ಕೆಂಚಯ್ಯನ ಹೆಡ್ತಿ ಬಂದಿದ್ದಳ. ಅವಳಿಗೂ ನಿನಗೂ ಏನಪ್ಪ ಸಂಬಂಧ. ಅವರಪ್ಪನ ಮನೆಗಂಟು ನೀನೇನು ತಿಂದಿದ್ದಿ, ನಿನ್ನ ಕಣ್ಣಿಗೆ ಅವಳು ಕಾಣಿಸಿಕೊಳ್ಳುವುದಕ್ಕೆ. ಮುಂಡೇನ ಹಳೇ ಕೆರದಲ್ಲಿ ಹೊಡೀಲಿಲ್ವ!" ಎಂದು ವೆಂಕಟಯ್ಯ ಕೆಂಚಯ್ಯನ ಹೆಂಡತಿಯನ್ನು ಬಾಯಿಗೆ ಬಂದಂತೆ ಬಯ್ದು, "ಚೆನ್ನಕ್ಕನಿಗೆ ಹೇಳ್ತೀನಿ, ಒಂದು ಯಂತ್ರಾನಾದ್ರೂ ಕಟ್ಟಿಸಿಕೊ" ಎಂದು ಲಕ್ಕಣ್ಣನಿಗೆ ಸಲಹೆಕೊಟ್ಟ.

"ನನ್ನ ಕಣ್ಣಿಗೆ ಕಾಣಲಿಲ್ಲ ಎಂಕಟಣ್ಣ, ಕಂಡಿದ್ರೆ ಬಿಡ್ತಿದ್ದಿನ ಅವಳ ಕಿವಿ ಕೊಯ್ಯದೆ. ಹಲಸಿನ ಮರದ ತರಗೆಲೆಯನ್ನು ಬಹಳ ಹೊತ್ತು ಸರಸರ ಅನ್ನಿಸಿದಳು. ನಾನು ಹತ್ತಿರ ಬರ್ತಾಳೇನೋ ಅಂತಾ ಕಣ್ಣುಬಿಟ್ಟುಕೊಂಡೇ ಕಾಯ್ದೆ, ಅವಳು

ಸುಳೀಲಿಲ್ಲ. ಅವಳಿಗೆ ಅಷ್ಟು ಧೈರ್ಯ ಎಲ್ಲಿ ಬರಬೇಕು, ಹತ್ತಿರ ಬರಾಕೆ! ಕಡೆಗೆ ನಿದ್ದೆ ಬಂದುಬಿಟ್ಟಿತು."

"ಅದೇನೋ ನಿಮ್ಮ ಮಾವನ ಮಗಳನ್ನು ಮದುವೆಯಾದೆ ಅಂದಲ್ಲ, ಕೆಟ್ಟ ಸಪ್ನ ಅಂದಲ್ಲ!" ಎಂದು ಕೇಳಿದ ವೆಂಕಟಯ್ಯ.

"ಎಂಕಟಣ್ಣ, ನಾವೆಲ್ಲಾ ಎತ್ತಿನ ಗಾಡಿ ಕಟ್ಟಿಕೊಂಡು ಮದುವೆಗೆ ಹೊರಟೆವು. ಮಧ್ಯಾಹ್ನದ ಉರಿಬಿಸಲಿನ ಬೇಗೆ. ದಾರಿಯಲ್ಲಿ ಬೋರ ಹೊಂಗೆ ಕೊಂಬೆಗಳನ್ನು ಕಡಿದುಕೊಟ್ಟೆ, ಬಿಸಿಲಿನ ತಾಪಕ್ಕೆ ಮರೆಮಾಡಿಕೊಳ್ಳುವುದಕ್ಕೆ. ಹೆಂಗಸರು ಕುಳಿತಿದ್ದ ಗಾಡಿಗೂ ಗಂಡಸರು ಕುಳಿತಿದ್ದ ಗಾಡಿಗೂ ಪೈಪೋಟಿ ಬಿದ್ದಿತು. ನಾನು ಎತ್ತುಗಳ ಹಗ್ಗಗಳನ್ನು ಒಂದುಸಾರಿ ಜಡಿದೆಳೆದು ಬಾರುಗೋಲಿನಿಂದ ಒಂದೊಂದು ಏಟು ಬಿಗಿದೆ. ನನ್ನ ಗಾಡಿಯೇ ಮುಂದೆ ಹೋಯಿತು. ಇನ್ನೇನು ಊರು ತಲುಪಬೇಕು, ಅಷ್ಟುಹೊತ್ತಿಗೆ ಸರಿಯಾಗಿ ನಮ್ಮ ಅತ್ತೆಯ ತಮ್ಮ ಗಾಡಿ ತಡೆದು, ಭುಜ ತಟ್ಟಿ ನನ್ನನ್ನು ಕುಸ್ತಿಗೆ ಕರೆದ. ನಾನು ಚೆಂಗನೆ ಗಾಡಿಯಿಂದ ನೆಗೆದು ಅವನ ಕೈಕಾಲು ಕಟ್ಟಿ ಪಕ್ಕದ ಕೊಳಕ್ಕೆ ಹಾಕಿ, ಮಾವನ ಮನೆಗೆ ಓಡೋಡಿ ಹೋದೆ. ನಮ್ಮ ಅತ್ತೆ ಮಗಳನ್ನು ಕೋಣೆಗೆ ಕೂಡಿ ಬೀಗ ಹಾಕಿ, 'ನಾ ನಿನಗೆ ಹೆಣ್ಣು ಕೊಡೋದಿಲ್ಲ!' ಎಂದು ಬಾಗಿಲಲ್ಲಿ ನಿಂತು ರಂಪು ಮಾಡಿದಳು. ನಾನು ಒಂದುಸಾರಿ ಕಾಲಿನಿಂದ ಬಾಗಿಲನ್ನು ಒದ್ದಕೂಡಲೆ ಬಾಗಿಲು ಕಿತ್ತುಬಂದು ಸಿದ್ದಿ ನನ್ನನ್ನು ಅಪ್ಪಿದಳು. ಧಾರೇನೂ ಆಯ್ತು. ನಾನೇ ತಾಲೀನೂ ಕಟ್ಟಿದೆ. ನಮ್ಮ ಮಾವ ಅವನ ಗಾಡೀನೇ ಕಟ್ಟಿ ಕಳುಹಿಸಿದ. ನನ್ನ ಗಾಡಿಗೂ ಮಾವನ ಗಾಡಿಗೂ ಪೈಪೋಟಿ ಸುರುವಾಯಿತು. ಆ ಕಲ್ಲು ಹಾದೀಲಿ ಓಡಿಸಿ ಓಡಿಸಿ ಮೈಯೆಲ್ಲಾ ನೋವು ಬಂದಿತು. ಸಿದ್ದಿ ಕುಳಿತಿದ್ದ ಗಾಡಿಯೇ ಮುಂದಾಯಿತು. ಆದರೆ ಚಿಕ್ಕತೊರೆ ಮರಳಿನಲ್ಲಿ ಅದರ ಚಕ್ರಗಳು ಹೂತುಕೊಂಡು, ಎತ್ತುಗಳು ಎಳೆಯಲಾರದೇ ಕಣೀ ಹಾಕಿಕೊಂಡವು. ನಾನು ಓರೆಮಾಡಿ ನನ್ನ ಎತ್ತುಗಳನ್ನು ಮಿಸಗಿದೆ. ಎತ್ತುಗಳು ತಲೆಯನ್ನು ನೆಲಕ್ಕೆ ಊರಿ ಜಗ್ಗಿಸಿ ಗಾಡಿ ಎಳೆದವು. ಗಾಡಿಯು ತೇರಿನ ಹಾಗೆ ಹರಿದು ಆಚೆ ದಡ ಸೇರಿತು. ನಾನು ಗಾಡಿ ಇಳಿದು ಸಿದ್ದಿ ಕುಳಿತಿದ್ದ ಗಾಡಿಯ ಹತ್ತಿರ ಹೋಗಿ, ಅವಳ ಕೈಹಿಡಿದು, ಗಾಡಿಯಿಂದ ಇಳಿಸಿ ಕರೆದುಕೊಂಡು ಬಂದು ನನ್ನ ಗಾಡಿ ಹತ್ತಿಸಿದೆ.

"ನನ್ನ ಗಾಡಿಯೇ ಜಯಿಸಿತು, ನಾನೇ ಗೆದ್ದೆ" ಎಂದೆ. ಅವಳ ಮುಖ ಕೆಂಪೇರಿ ನಾಚಿಕೆಯಿಂದ ತಲೆ ತಗ್ಗಿಸಿದಳು. ಗಾಡಿಗಳು ಮತ್ತೆ ಹೊರಟವು. ನಮ್ಮ ಮಾವನ ಎತ್ತುಗಳು ಎಲ್ಲಾ ಗಾಡಿಗಳನ್ನೂ ಹಿಂದಾಕಿ ಮುನ್ನುಗ್ಗಿದುವು. "ನೋಡಿದಿರಾ, ನಮ್ಮ ಎತ್ತುಗಳೇ ಗೆದ್ದುವು!" ಎಂದು ಸಿದ್ದಿ ಅಣಕವಾಡಿದಳು. ನಾನು ಗಾಡಿಯ ಮೂಕಿಯ ಮೇಲೆ ನಿಂತು ನನ್ನ ಬಲವನ್ನೆಲ್ಲ ಬಿಟ್ಟು ಅಬ್ಬರಿಸಿದೆ. ಬಾರುಗೋಲಿನಿಂದ ಒಂದೊಂದು ಎತ್ತಿಗೂ ನಾಲ್ಕು ಚಾಚಿದೆ. ಎತ್ತುಗಳು ನಾಗಾಲೋಟದಲ್ಲಿ ಓಡತೊಡಗಿದುವು. ಸಿದ್ದಿ ನನ್ನ ಗಾಡಿಯಲ್ಲಿ ಕುಳಿತು ಕೇಕೆ

ಹಾಕುತ್ತಾ, ಅವರ ಮನೆ ಆಳನ್ನು ಕುರಿತು "ಹೊಡಿಯೋ ಹೊಡಿಯೋ ಮೂದೇವಿ," ಎಂದು ಕೂಗಿಕೊಂಡಳು. ಎರಡು ಗಾಡಿಗಳೂ ಒಂದರ ಪಕ್ಕದಲ್ಲಿ ಒಂದು ಹೋಗುತ್ತಿದ್ದುವು. ನನ್ನ ಗಾಡಿಯ ಚಕ್ರ ಪಕ್ಕದ ದಿಬ್ಬದ ಮೇಲೆ ಹತ್ತಿ ದಡಾರನೆ ಮಗುಚಿಕೊಂಡು ಒಂದು ದೊಡ್ಡ ಹಳ್ಳಕ್ಕೆ ಬಿದ್ದುಬಿಟ್ಟಿತು. ನಾನು ಮಾತ್ರ ದಡದ ಮೇಲೆ ಕುಳಿತು, ಸಿದ್ದಿಗಾಗಿ ಹುಡುಕಾಡಿದೆ. ಸಿದ್ದಿ ಸಿಕ್ಕದಿರಲು ಗೋಳೋ ಎಂದು ಅಳುತ್ತಾ ಊರಬಾಗಿಲಿಗೆ ಬರುವ ಹೊತ್ತಿಗೆ ಸಿದ್ದಿ, ನಮ್ಮಪ್ಪ ಆರತಿಯೊಡನೆ ನನ್ನನ್ನು ಎದುರುಗೊಂಡರು. ನಾನು ವಾದ್ಯದೊಡನೆ ಮೆರವಣಿಗೆ ಹೊರಟೆ. ನಮ್ಮ ಮನೆ ಹೊಸಿಲು ದಾಟುತ್ತಿದ್ದ ಹಾಗೆಯೆ ಸಿದ್ದಿ ಮೈಮೇಲೆ ಕೆಂಚಯ್ಯನ ಹೆಡ್ತಿ ಬಂದು, ಮನೆಯಲ್ಲೆಲ್ಲ ಥಕಥಕನೆ ಕುಣಿದಾಡಿ, ನನ್ನ ತಲೆಯ ಮೇಲೆ ಒಂದು ಬಿಂದಿಗೆ ನೀರು ಸುರಿದು, ದಡದಡನೆ ಬಾವಿಯ ಕಡೆ ಓಡಿದಳು. ನಾವೆಲ್ಲಾ ಅವಳನ್ನು ಹಿಡಿಯಲು ಎಷ್ಟು ಪರ್ಯತ್ನಮಾಡಿದರೂ ಅವಳು ಕೈಗೆ ಸಿಕ್ಕದೆ ಬಾವಿಯಲ್ಲಿ ದಡಾರನೆ ಬಿದ್ದಳು. ನಾನು ಅಯ್ಯೋ ಎಂದು ಕೂಗಿಕೊಂಡೆ; ಥಟ್ಟನೆ ಕಣ್ಣುಬಿಟ್ಟೆ! ನಾನು ಸಿದ್ದಿಯನ್ನು ಮದುವೆಯಾಗಿಲ್ಲ. ಕಣದ ಹುಲ್ಲು ಬಣಬೆ ಮೇಲೆ ಮಲಗಿದ್ದೀನಿ ಅಂದುಕೊಂಡೆ. ಆದರೂ ನನ್ನ ಎದೆ ಬಹಳ ಹೊತ್ತು ಒಂದೇ ಸಮನೆ ಡಬಡಬನೆ ಹೊಡೆದುಕೊಳ್ಳುತ್ತಿತ್ತು" ಎಂದು ಲಕ್ಕಣ್ಣ ತನ್ನ ಸ್ವಪ್ನವೃತ್ತಾಂತವನ್ನು ವಿಶದವಾಗಿ ವಿವರಿಸಿದ.

"ಇದೇನು ಹಾಳು ಸಪ್ನಾನಪ್ಪ! ಅವಳೇಕೆ ನಿನ್ನ ಹಿಂಗೆ ಕಾಡಸ್ತಾಳೆ? ನಿಮ್ಮಪ್ಪ ಚೆನ್ನಕ್ಕನಿಗೆ ಹೇಳಿ ಕಾವುಕಟ್ಟನ್ನಾದರೂ ಮಾಡಿಸಬೇಕು. ಅವಳು ಪ್ರಾಯದ ಹುಡುಗನ ಬೆನ್ನು ಹತ್ತವಳಲ್ಲ! ಇದೇನು ಗಾಚಾರ ಬಂತಪ್ಪ!" ಎಂದು ವೆಂಕಟಯ್ಯ ಪಶ್ಚಾತ್ತಾಪಪಡುತ್ತಿದ್ದ.

ಅಷ್ಟು ಹೊತ್ತಿಗೆ ಸರಿಯಾಗಿ ಚೆನ್ನಮ್ಮ ಕಣಕ್ಕೆ ಕಾಲಿಟ್ಟಳು.

ಚೆನ್ನಮ್ಮ ತಲೆಯ ಮೇಲಿನ ನೀರಿನ ಚೆಂಬನ್ನೂ ರೊಟ್ಟಿಯ ಗಂಟನ್ನೂ ಗುಡ್ಲಿನ ಹತ್ತಿರ ಇಟ್ಟು 'ಕೆಲಸ ನಿಲ್ಲಿಸಿ ಬನ್ರೋ, ರೊಟ್ಟೀ ತಿನ್ನಿವ್ರಂತೆ' ಎಂದಳು.

"ಅಗೋ ಚೆನ್ನಕ್ಕ ಬಂದೇಬಿಟ್ಟಳು! ಏಳ್ರೋ ಮಾರಾಯರ, ಮುಖ ತೊಳಕೊಳ್ಳಿ" ಎಂದು ಹೇಳಿ ವೆಂಕಟಯ್ಯ ಗುಡ್ಲಿನ ಹತ್ತಿರಕ್ಕೆ ಬಂದ.

"ಚೆನ್ನಕ್ಕ, ಮದ್ವೆ ತಲೇ ಮೇಲೆ ಕಲ್ಲು ಬಿದ್ದ ಹಾಗೆ ಕಾಣ್ತದೆ. ಆ ಶನಿಮುಂಡೆ ಋಣ ನೀನೇನು ತಿಂದಿದ್ದೀಯೆ? ನಿನ್ನ ಮನೆ ಹೊಸಲು ತುಳಿಯೋಕೆ ಅವಳು!" ಎಂದ.

"ತಗೀ ಎಂಕಟಣ್ಣ, ಹಾಳು ಬಾಯಲ್ಲಿ ಅಪಶಕುನ ನುಡಿಬ್ಯಾಡ. ಏನಾದರೂ ಈ ವರ್ಷ ಮದ್ವೆ ನಿಲ್ಸಾಕೆ ಆಗೊಲ್ಲ. ನಾಲ್ಕು ದಿನ ಮಗ ಸೊಸೆಯರ ಸಂಸಾರ ಕಣ್ಣು ತುಂಬ ನೋಡಬ್ಯಾಡ್ವ! ಅವಳು ಎಂದರೆ ಯಾರು? ಏನಾಯ್ತು?" ಎಂದು ತವಕದಿಂದ ಕೇಳಿದಳು.

"ಅಯ್ಯೋ ಅವ್ವ, ನೆನೆಸಿಕೊಂಡರೆ ಎದೆ ಹೊಡೆದುಹೋಗ್ತದೆ. ಕುಳಿತುಕೊಳ್ಳಿ ಹೇಳ್ತೀನಿ. ರಾತ್ರಿ ಅವಳು ಸಿಕ್ಕಿದ್ರೆ ಅವಳ ತಲೆ ಬೋಳಿಸಿ ಕಳಿಸ್ತಿದ್ವಿ!" ಎಂದು ಚೆನ್ನಮ್ಮನಿಗೆ ಲಕ್ಕಣ್ಣನ ಕನಸಿನ ವೃತ್ತಾಂತವನ್ನೆಲ್ಲಾ ವಿವರವಾಗಿ ಹೇಳಿದನು.

"ಎಂಕಟಣ್ಣ, ರಾತ್ರಿ ಒಂದು ಹೊತ್ತಿನಲ್ಲಿ ನಮ್ಮ ಮನೆ ಮಾಳಿಗೆಯಲ್ಲೂ ದಡದಡನೆ ಸದ್ದಾಯಿತು. ಇಲಿಗಳು ಓಡಾಡುತ್ತಿರಬಹುದೆಂದುಕೊಂಡೆ. ಇದೆಲ್ಲಾ ಅವಳ ಕಾಟಾನೇ ಅಂತಾ ಈಗ ಅನ್ನಿಸುತ್ತಿದೆ. ಅವಳ ಹತ್ತಿರ ಒಂದು ಪಾವು ಉಪ್ಪು ಸಾಲಮಾಡಿದ್ದೆ. ಹಿಂದಕ್ಕೆ ಕೊಟ್ಟುಬಿಟ್ಟೆ ಹಾಂಗೂ ಗ್ಯಾಪ್ನ. ಕೊಡ ಬೇಕಾದ್ದು ಇದ್ದರೆ ಬಿಸಾಕಿಸಿಕೊಳ್ತಾಳೆ, ಕಾಯಿ ಹುಡುಗನ ಬೆನ್ನು ಹತ್ತಿ ಕಾಡಿಸೋದು ಯಾಕೆ? ರಾತ್ರಿ ಏನಾದರೂ ಬರಲಿ ಹಳೆ ಪರಕೆ ತಗೊಂಡು ಮುಖ ಕೆರೀತೀನಿ" ಎಂದಳು ಚೆನ್ನಮ್ಮ.

"ಹುಷಾರವ್ವ, ಒರಟಾಟ ಮಾಡಬ್ಯಾಡಿ. ದೆವ್ವದ ಜೊತೆ ಸರಸವಾಡಿ ಬದುಕೋದು ಕಷ್ಟ; ರಕ್ತಕಾರಿ ನೆಲಕ್ಕೆ ಬೀಳಬೇಕಾದಾತು. ಉಪಾಯದಲ್ಲಿ ಅವಳ ಸೊಕ್ಕು ಮುರಿಬೇಕು. ನಿಮ್ಮ ಮನೆ ದ್ಯಾವರಿಗೆ ಹರಕೆ ಮಾಡಿಕೊಳ್ಳಿ. ಅವನು ತಹಬಂದಿಗೆ ತರ್ತಾನೆ," ಎಂದು ವೆಂಕಟಯ್ಯ ತಿಳಿವಳಿಕೆಯಿತ್ತ.

"ಕೆಂಚಯ್ಯನ ಕರೆಸಿ ಛೀಮಾರಿಮಾಡಿ. ಹೆಂಡತೀನ ಹದ್ದುಬಸ್ತಿನಲ್ಲಿ ಇಟ್ಟುಕೊಳ್ತಾನೋ, ಇಲ್ಲದಿದ್ದರೆ ಎಲ್ಲರ ಮನೆ ಮುರಿಸಿ ಮನೆಹಾಳ ಆಗ್ತಾನೋ ಕೇಳಿಬಿಡಿ. ಮಾರೀಗುಡಿ ಮುಂದೆ ನ್ಯಾಯಕ್ಕೆ ಸೇರಿಸಿ, ಅವನ ಮನೆಗೆ ಬೆಂಕಿ ನೀರು ಕೊಡದಹಾಂಗೆ ಕಟ್ಟುಮಾಡಿಬಿಡಬೇಕು" ಎಂದು ಜವರಪ್ಪ ಹೇಳಿದ.

"ರಾತ್ರೀನಾಗ ಲಕ್ಕಣ್ಣ ಏಳಿಸದೆ ಹೋದ್ನಲ್ಲ! ಹಲಸಿನ ಮರಕ್ಕೆ ಕಟ್ಟಿ ಚಮಡಾ ತೆಗೀಬೋದಿತ್ತು!" ಎಂದು ಬೋರ ಕಟಕಟನೆ ಹಲ್ಲು ಕಡಿದ.

"ಲೋ ತಗಿಯೋ, ಉತ್ತರನ ಪೌರುಷ ಒಲೇ ಮುಂದೆ ಅಂತಾ ಗಾದೇನೆ ಇದೆ. ಎಲೆ ಮುಂದೆ ಕುಳಿತು ಜಂಬ ಕೊಚ್ಚಬ್ಯಾಡ. ರೊಟ್ಟಿ ಕಡಿಯೋ. ಲಕ್ಕಣ್ಣ ನಂಥ ಧೀರ ಗಂಡೇ ಹೆದರಿ, ಉಸಿರುಕಟ್ಟಿ ಹುಲ್ಲಿನೊಳಗೆ ಮಿಲಮಿಲನೆ ಒದ್ದಾಡಿ ಹೋದ ಅಂದಮೇಲೆ. ಈ ಅಂಜುಪುರುಕನ ಕೈಲಾಗುತ್ತದಂತೆ, ಹಲಸಿನ ಮರಕ್ಕೆ ಕಟ್ಟಿ ಚಮಡಾ ತೆಗಿಯೋಕೆ!" ಎಂದು ಜವರಪ್ಪ ಬೋರನನ್ನು ಅವಹೇಳನ ಮಾಡಿದ. ಬೋರ ಮನಸ್ಸಿನಲ್ಲಿಯೇ ಗೊಣಗುಟ್ಟುತ್ತ, ತಲೆ ತಗ್ಗಿಸಿ ಮೆಣಸಿನಕಾಯಿ, ಈರುಳ್ಳಿ ಸಮೇತ ರೊಟ್ಟಿ ತಿನ್ನತೊಡಗಿದ.

"ಚೆನ್ನಕ್ಕ, ಈ ಸಾಲಿನಲ್ಲಿ ಮದ್ವೆ ನಿಲ್ಸೋದು ಒಳ್ಳೇದು ಅಂತಾ ಅನ್ನಿಸುತ್ತದೆ. ರತ್ನದಂಥ ಹೆಣ್ಣುತಂದು ಈ ಮಾರಿಗೆ ಯಾಕೆ ಬಲೀಕೊಡ್ತಿ. ಅವಳು ಸಪ್ನದಾಗೆ ಬಂದು ಸೂಚನೆಕೊಟ್ಟವಳೆ ಮಾರಾಗಿತ್ತಿ. ಎಚ್ಚರ ತಗೊಂಡು ಲಗ್ನದ ಏರ್ಪಾಟು ನಿಲ್ಸಿಬಿಡೋದು ವಾಸಿ" ಎಂದ ವೆಂಕಟಯ್ಯ.

"ಮದ್ವೆ ತಲೇಮೇಲೆ ಬೀಳ್ತಲ್ಲ ಕಲ್ಲು ಕೊನೆಗೂ ಎಂಕಟಣ್ಣ. ನಮ್ಮ ಬಾವ

ಏನಾದ್ರೂ ಮಾಟಾಮಾಡಿ ಅವಳನ್ನ ಕಳಸನ್ವ, ಹುಡುಗನನ್ನು ಕಾಡಿಸು ಎಂದು! ಇಲ್ಲದೆ ಹೋದರೆ ನಮ್ಮ ಅತ್ತಿಗೆ ಕೈವಾಡವೇನಾದರೂ ಇದೆಯೆ ಇದರಲ್ಲಿ? ನೆನ್ನೆ ಸಂಜೆ ಮದ್ವೆ ಇಚಾರ ಮಾತನಾಡಿದಿವಿ. ರಾತ್ರಿ ಅವನ ಕಣ್ಣಿಗೆ ಕಾಣಿಸಿಕೊಂಡವಳೆ."

"ಇದ್ದರೂ ಇರಬಹುದವ್ವ, ನಿಮ್ಮ ಬಾವ ವಿಷಕಾರ್‍ತಾನೆ ಲಕ್ಕಣ್ಣನ ಮೇಲೆ. ಮಾಟಾ ಮಾಡಿದರೂ ಹಾಂಗಾಗ್ತದಂತೆ! ಬೇಕಾದರೆ ಪೂಜೆ ಹಾಕಿಸಿ ಹಿಂದಿರುಗಿಸ ಬಹುದು, ವಂಶವೇ ನಿರ್ನಾಮವಾಗಿಬಿಡ್ತದೆ!"

"ಆ ಪಾಪ ನಂಗ್ಯಾಕೆ ಬಿಡು, ಎಂಕಟಣ್ಣ. ಮಾಡಿದವರ ಪಾಪ ಆಡಿದವರ ಬಾಯಲ್ಲಿ ಅಂತಾ. ಅದರ ಫಲ ಅವರಿಗೇ ಇರಲಿ," ಎಂದು ಹೇಳಿ ಚೆನ್ನಮ್ಮ ಕಣ್ಣೀರು ಮಿಡಿದಳು.

"ಹಾಂಗಾದರೆ ಲಗ್ನ ನಿಲ್ಲಿಸಿಬಿಡಬೇಕು. ಈ ಸಾಲಿನಲ್ಲಿ ಮಾಡೋಕೆ ಆಗೋದಿಲ್ಲ. ಕೆಂಚಯ್ಯನೂ ಅವಳನ್ನು ಹಿಡಿಸೋಕೆ ಬಹಳ ಪರ್‍ಯತ್ನಮಾಡ್ತಾ ಅವನಂತೆ. ಅಟ್ಟಲಕ್ಕಮ್ಮನ ಗುಡೀತಾವ ಕಲ್ಲು ಹೊಯ್ಸಿದನಂತೆ! ಎರಡು ಸಾರಿ ಏಟಿಗೆ ಸಿಕ್ಕಿದ್ದವಳು ತಪ್ಪಿಸಿಕೊಂಡಳಂತೆ. ಈ ಹೊತ್ತಲ್ಲ ನಾಳೆ ಸಿಕ್ಕೇ ಸಿಕ್ತಾಳೆ. ಅವಳ ಆಟ ಎಷ್ಟು ದಿನ ನಡಿದೀತು? ಲಗ್ನ ಒಂದು ವರ್ಷ ಮುಂದಕ್ಕೆ ಹಾಕಿ, ಎಲ್ಲಾ ಸರಿಹೋಗ್ತದೆ" ಎಂದ ವೆಂಕಟಯ್ಯ.

"ಎಂಕಟಣ್ಣ, ನಮ್ಮ ಬಾವ, ನಮ್ಮ ಅತ್ತಿಗೆ, ಕೆಂಚಯ್ಯ ಎಲ್ಲಾ ಸೇರಿ ನಮ್ಮ ಹುಡುಗನ ಮದವೆ ತಲೇಮೇಲೆ ಕಲ್ಲು ಎಳೆದರು. ಹೊಟ್ಟೇಲಿ ಸಂಕಟ ಆಗ್ತದೆ" ಎಂದು ಹೇಳಿ ಸೆರಗಿನಿಂದ ಕಣ್ಣೀರೊರಸಿಕೊಂಡು, "ಹಂಗೇ ಮಾಡ್ತೀನಿ ಎಂಕಟಣ್ಣ. ಅಮಾಸೆಯಿಂದೀಚೆಗೆ ಅವಳ ಕಾಟ ಬಹಳ ಆಗಿದೆಯಂತೆ. ರಾತ್ರಿ ಹೊತ್ತು ಕೆಂಚಯ್ಯನ ಮನೆಯ ಮಡಕೆಗಳೆಲ್ಲಾ ಲಟಪಟನೆ ಸದ್ದುಮಾಡ್ತವಂತೆ! ಕುರಿ ಹಟ್ಟೇಲಿ ಕುರಿಗಳು ಬೆದರಿ ಓಡಾಡ್ತವಂತೆ! ಸುಬ್ಬಣ್ಣ ಮುಚ್ಚಂಜೆಯಲ್ಲಿ ಕೆರೆಯ ಹಾದಿಯಲ್ಲಿ ಬರುತ್ತಿದ್ದಾಗ ದೊಡ್ಡ ಆಲದ ಮರದತಾವ ಕಣ್ಣಿಗೆ ಮಣ್ಣು ಎರಚಿದ ಹಾಂಗಾಯಿತಂತೆ! ದೇವರಿಗೆ ಹರಕೆಹೊತ್ತು ನೋಡಾನ. ದೊಡ್ಡ ತಿಮ್ಮಯ್ಯನ ಕರೆಸಿ ಒಂದು ಯಂತ್ರಾನೂ ಕಟ್ಟಿಸ್ತೀನಿ" ಎಂದಳು.

ಲಕ್ಕಣ್ಣ ತನ್ನ ಕೈಯಲ್ಲಿದ್ದ ಅರ್ಧ ರೊಟ್ಟಿಯನ್ನು ಮಡಚಿ, ಹಲಸಿನ ಮರದೆಡೆಗೆ ಹೋಗಿ, ಎತ್ತುಗಳ ಬಾಯಿಗೆ ರೊಟ್ಟಿಯನ್ನು ಕೊಟ್ಟು, ತನ್ನ ಎರಡು ಕೈಗಳನ್ನು ಹಲಸಿನ ಎಲೆಯಿಂದ ತಿಕ್ಕುತ್ತ ಹುಲ್ಲುಮೆದೆಯ ದಿಕ್ಕಿಗೆ ನಡೆದ.

"ಎಂಕಟಣ್ಣ, ಹುಡುಗ ಇಳಿದುಹೋಗವನೆ. ಅವನೊಬ್ಬನನ್ನೇ ಬಿಟ್ಟು ನೀವೆಲ್ಲೂ ಹೋಗಬೇಡಿ. ಬಾವಿಯ ಹತ್ತಿರ ಒಬ್ಬನನ್ನೇ ಕಳಿಸಬೇಡಿ. ನಾನು ದೊಡ್ಡತಿಮ್ಮಯ್ಯನಿಗೆ ಹೇಳಿಕಳಿಸ್ತೀನಿ," ಎಂದು ಹೇಳಿ ಚೆನ್ನಮ್ಮ ಬರಿ ಚೆಂಬನ್ನೂ ರೊಟ್ಟಿ ಮುದುರಿ ತಂದಿದ್ದ ಮಾಸಲು ಬಟ್ಟೆಯನ್ನೂ ಹಿಡಿದು ಊರಕಡೆ ನಡೆದಳು.

—ಹೆಚ್. ನರಸಣ್ಣ.

ಪಂಪಭಾರತದ ಶ್ರೀಕೃಷ್ಣ

ಪಂಪಭಾರತದ ಶ್ರೀಕೃಷ್ಣ ಬಹು ಜನ ವಿಮರ್ಶಕರ ಮನಸ್ಸನ್ನು ಕೆಣಕಿದ್ದಾನೆ. ಕೆಲವರಿಗೆ ಸಾಮಾನ್ಯನೂ, ಲೌಕಿಕ ವ್ಯಕ್ತಿಗಳ ಪಂಕ್ತಿಗೆ ಸೇರಿದಷ್ಟು ಅಗಣ್ಯನೂ, ಅಪ್ರಮುಖನೂ ಆಗಿ ಕಾಣಿಸುತ್ತಾನೆ. ಇನ್ನು ಕೆಲವರಿಗೆ ಅವನು ಮಹಾಮಹಿಮನಾಗಿ, ಪುರುಷೋತ್ತಮನಾಗಿ ಕಂಗೊಳಿಸುತ್ತಾನೆ. ಇಷ್ಟೆಲ್ಲ ವಾದ ವಿವಾದಗಳಾಗುವುದಕ್ಕೆ ಮೂಲ ಕಾರಣಪುರುಷ, ವೈಶಿಷ್ಟ್ಯಪೂರ್ಣವಾದ ಈ ಪಾತ್ರರಚನೆ ಮಾಡಿರುವ ಮಹಾಕವಿ ಪಂಪ. ಆತ ತನ್ನ ಕಾವ್ಯದ ಕೊನೆಯಲ್ಲಿ ಮಹಾಭಾರತದ ಪ್ರಮುಖ ವ್ಯಕ್ತಿಗಳ ಗುಣವಿಶೇಷಗಳನ್ನು ಸ್ತುತಿಸಿರುವ—

> ಚಲದೊಳ್ ದುರ್ಯೋಧನಂ ನನ್ನಿಯೊಳಿನತನಯಂ ಗಂಡಿನೊಳ್ ಭೀಮಸೇನಂ |
> ಬಲದೊಳ್ ಮದ್ರೇಶನತ್ಯುನ್ನತಿಯೊಳಮರ ಸಿಂಧೂದ್ಭವಂ ಚಾಪವಿದ್ಯಾ ||
> ಬಲದೊಳ್ ಕುಂಭೋದ್ಭವಂ ಸಾಹಸದ ಮಹಿಮೆಯೊಳ್ ಫಲ್ಗುಣಂ ಧರ್ಮದೊಳ್ ನಿ |
> ರ್ಮಲ ಚಿತ್ತಂ ಧರ್ಮಪುತ್ರಂ ಮಿಗಿಲಿವರ್ಗಳಿನೀ ಭಾರತಂ ಲೋಕಪೂಜ್ಯಂ ||(೧೨-೬೫)

ಎಂಬ ಈ ಪದ್ಯದಲ್ಲಿ ಕೃಷ್ಣನ ಹೆಸರನ್ನೇ ಎತ್ತಿಲ್ಲ! ವ್ಯಾಸಭಾರತದ ಪ್ರಕಾರ ಶ್ರೀಕೃಷ್ಣ ಪುರುಷೋತ್ತಮ. ಕನ್ನಡಜನಪ್ರಿಯ ಕಾವ್ಯಮಂಜರಿಯಾದ ಕುಮಾರ ವ್ಯಾಸಭಾರತದ ಪ್ರಕಾರ ಕೃಷ್ಣನೇ ಸರ್ವಶಕ್ತ. ಭಾರತ ಕಥೆ 'ಕೃಷ್ಣ ಕಥೆ', 'ಪಂಚಮ ಶ್ರುತಿ,' 'ಹಲವು ಜನ್ಮದ ಪಾಪರಾಶಿಯ ತೊಳೆವ ಜಲ.' ಅದನ್ನು ಅವನು ಹೇಳಿದ್ದು 'ಕೃಷ್ಣ ಮೆಚ್ಚಲಿಕೆ'. ಆದರೆ ಪಂಪನ ಕಾವ್ಯೋದ್ದೇಶವೇ ಬೇರೆ. ಅವನದು ಲೌಕಿಕ ಕಾವ್ಯ; ಲೌಕಿಕ ವ್ಯಕ್ತಿಗಳ ನಡೆ ನುಡಿ, ರೀತಿ ನೀತಿಗಳನ್ನು ಚಿತ್ರಿಸುವುದಕ್ಕಾಗಿ ತನ್ನ ರಾಜನಾದ ಅರಿಕೇಸರಿಯನ್ನು ಕಥಾನಾಯಕನನ್ನಾಗಿ ಆರಿಸಿಕೊಂಡು ಭಾರತವೀರನಾದ ಅರ್ಜುನನೊಡನೆ ಅವನನ್ನು ಹೋಲಿಸಿ, ತನ್ನ ಕಾಲದ ಸಾಮಾಜಿಕ ಮೌಲ್ಯಗಳನೇಕವನ್ನು ಮೇಳಗೊಳಿಸಿದ್ದಾನೆ. ಈ ಮುಖ್ಯ ವ್ಯತ್ಯಾಸ ಹಾಗೂ ಕವಿದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಪಂಪಭಾರತದ ಪಠನವಾದರೆ ಕವಿಯ ಉದ್ದೇಶ ವ್ಯಕ್ತವಾಗುತ್ತದೆ; ವಿಮರ್ಶೆಯ ಒರೆಗಲ್ಲಿನಲ್ಲಿ ಬರುವ ಗೆರೆಯ ಸತ್ಯಾಂಶ ತಿಳಿಯುತ್ತದೆ.

ಪಂಪ ತನ್ನ ಭಾರತದಲ್ಲಿ ಕೃಷ್ಣನ ಪಾತ್ರವನ್ನು ಕಡೆಗಣಿಸಿದ್ದಾನೆಂದು ತಿಳಿಯಲು ಅವಕಾಶವೇ ಇಲ್ಲ. ಪಂಪಭಾರತವನ್ನು ಆಮೂಲಾಗ್ರವಾಗಿ ಎಚ್ಚರಿಕೆಯಿಂದ ಗಮನಿಸುತ್ತಾ ಹೋದಲ್ಲಿ ಕೃಷ್ಣ ಪಾತ್ರದ ಪ್ರಾಧಾನ್ಯತೆ ಪ್ರೊ. ತೀ. ನಂ. ಶ್ರೀ. ಅವರು ಹೇಳಿರುವ ಹಾಗೆ "ಕೃಷ್ಣನು ಪುರುಷೋತ್ತಮ ಮಾತ್ರವಲ್ಲ, ಅವನು ಅವತಾರಪುರುಷನೆಂಬುದನ್ನೂ ಪಂಪನು ಅರಿತು ಅದೇ ರೀತಿಯಾಗಿ ನಿರೂಪಿಸಿರುವುದು ಅವನ ಕೃತಿಯಲ್ಲಿ ಎಷ್ಟೋ ಕಡೆ ಗೋಚರವಾಗುತ್ತದೆ. ಆದರೆ ಪಂಪನಲ್ಲಿ

ಶ್ರೀಕೃಷ್ಣನನ್ನು ಕುರಿತು ಭಕ್ತಿಯ ಉದ್ರೇಕವಿಲ್ಲವೆಂಬುದು ದಿಟ............ಅವನ ಕಾವ್ಯದಲ್ಲಿ ಅದನ್ನು ನಿರೀಕ್ಷಿಸುವುದೂ ಅನುಚಿತ.''[೧] ಇದಕ್ಕೆ ವಿರುದ್ಧ ಹೇಳಿಕೆಯೂ ಇಲ್ಲದಿಲ್ಲ. "ಸ್ವೇಚ್ಛೆಯಾಗಿ ಪಂಪನು ಭಾರತವನ್ನು ವ್ಯತ್ಯಾಸಪಡಿಸದೇ ಹೋದರೂ, ಕಥಾವಸ್ತುವಿನಲ್ಲಿ, ಪಾತ್ರರಚನೆಯಲ್ಲಿ, ಸೂಕ್ತಿಮಾಲೆಗಳಲ್ಲಿ, ವ್ಯಾಸ ಮಹರ್ಷಿಗಳ ಹಿಂದೆಯೇ ಪಂಪನು ನಮ್ರನಾಗಿ ನಡೆದಿದ್ದರೂ ಒಂದು ವೇಳೆ ತನ್ನ ಕೆಲವು ವ್ಯತ್ಯಾಸಗಳಿಂದ, ರಚನಾಕೌಶಲ್ಯದಿಂದ ಮೂಲಗ್ರಂಥಕ್ಕೆ ಒಂದು ಕಳೆಯನ್ನು ಏರಿಸಿದ್ದಾನೆಂದು ಹೇಳಬಹುದಾದರೂ, ಎಲ್ಲಕ್ಕೂ ಬಹು ಮುಖ್ಯವಾದ ಅಂಶದಲ್ಲಿ ಮಹಾಭಾರತವೆಂಬ ವೇದಕ್ಕೆ ಬೃಹದ್ದೇವತೆಯಾದ ಶ್ರೀಕೃಷ್ಣನ ವಿಷಯದಲ್ಲಿ, ಆತನ ದಿವ್ಯಾವತಾರ, ದಿವ್ಯೋಪದೇಶ, ದಿವ್ಯಲೀಲೆಗಳ ವಿಷಯದಲ್ಲಿ, ಆದಿತೀರ್ಥೇಶ್ವರನಲ್ಲಿ ಪಂಪನಿಗಿದ್ದ ಅನನ್ಯ ಶರಣಭಾವವಿಲ್ಲದೆ ಇದ್ದದ್ದರಿಂದ, ತನ್ನ ಜೈನ ಶ್ರದ್ಧೆಗೂ, ತನ್ನ ಪೂರ್ವಿಕರ ವೈದಿಕ ಸಂಸ್ಕಾರಕ್ಕೂ ಹೋರಾಟ ಹುಟ್ಟಿ ಒಳಗೆಯೇ ಪಂಪನ ಮನಸ್ಸು ಎರಡು ಕವಲಾಗಿ ಒಡೆದು, ಆತನ ಕವಿದೃಷ್ಟಿಯನ್ನೂ, ಆತನ ಉತ್ಸಾಹ ಧ್ವನಿಯನ್ನೂ ಸ್ವಲ್ಪಮಟ್ಟಿಗೆ ಕುಗ್ಗಿಸಿತೆಂದು ಹೇಳಬೇಕಾದ ನಿರ್ಬಂಧ ಒದಗಿದೆ."[೨] ಎಂಬುದಾಗಿ ದಿ|| ಬಿ. ಎಂ. ಶ್ರೀಕಂಠಯ್ಯನವರು ಹೇಳಿದ್ದಾರೆ. ಇನ್ನು ಶ್ರೀ ಎಂ. ಚಿದಾನಂದ ಮೂರ್ತಿ ಅವರು, ಪಂಪನ ಹಿಂದಿನ ಮತ್ತು ಮುಂದಿನ ಶತಮಾನಗಳ ಶಾಸನಗಳಲ್ಲಿ ಕೃಷ್ಣನ ಪ್ರಸಕ್ತಿ ಬಂದಿಲ್ಲದಿರುವುದರಿಂದ 'ಸಾಮಾಜಿಕ ಮೌಲ್ಯಗಳಲ್ಲಿ ಯಾವುದಕ್ಕೂ ಅವನು ಪ್ರತಿನಿಧಿಯಾಗಿಲ್ಲದಿದ್ದಿರಬಹುದೆಂದೂ, ಅದರಿಂದ ಕವಿಯೂ ಕಾಲಸ್ಥಿತಿಗೆ ಬಂಧಿತನಾಗಿ ಕೈ ಬಿಟ್ಟಿದ್ದಿರಬಹುದೆಂದೂ ಅಭಿಪ್ರಾಯಪಟ್ಟು, ಹೀಗೆ ಇದನ್ನು "ಒಪ್ಪಿಕೊಂಡರೆ ಶಾಸನಗಳಿಗೆ ಕೊಡಬೇಕಾದ್ದಕ್ಕಿಂತ ಹೆಚ್ಚು ಬೆಲೆ ಕೊಟ್ಟಂತಾಗುವುದಿಲ್ಲವೆ? ಅವು ಆ ಕಾಲವನ್ನು ಜನಮನವನ್ನು ಸಂಪೂರ್ಣವಾಗಿ ಪ್ರತಿಬಿಂಬಿಸಿವೆ ಎಂದು ಹೇಗೆ ಹೇಳುವುದು? ಅಂತೂ ಈ ವಿಷಯ ವಿಚಾರಯೋಗ್ಯವಾದುದು"[೩] ಎಂದು ವಿಚಾರಕರ ನಿರ್ಧಾರಕ್ಕೇ ಬಿಟ್ಟಿದ್ದಾರೆ.

ಈ ಹೇಳಿಕೆಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡು ವಿವರವಾಗಿ, ಶ್ರೀಕೃಷ್ಣನಿಗೆ ಪ್ರಾಧಾನ್ಯವನ್ನು ಕೊಟ್ಟಿರುವ ಕಾವ್ಯಭಾಗಗಳನ್ನು[೪] ಪರಿಚಯ ಮಾಡಿಕೊಳ್ಳುವುದರ ಮೂಲಕ ಸತ್ಯಾಂಶವನ್ನು ತಿಳಿಯಲು ಪ್ರಯತ್ನಿಸಬಹುದು.

---

೧ ಸಮಾಲೋಕನ, ಪು. ೯೮.

೨ ಕನ್ನಡ ಕೈಪಿಡಿ, ಸಂ. ೨, ಪು. ೫೧೮-೯.

೩ ಪ್ರಬುದ್ಧ ಕರ್ಣಾಟಕ, ಸಂ. ೪೨, ಸಂಚಿಕೆ ೧, ಪು. ೯೨ ರಲ್ಲಿ 'ಪಂಪಕವಿ ಮತ್ತು ಮೌಲ್ಯಪ್ರಸಾರದ' ಅಡಿಟಿಪ್ಪಣಿ ೩೦.

೪ ಆಯಾ ಆಶ್ವಾಸಗಳಲ್ಲಿ ಕೃಷ್ಣನ ಪಾತ್ರದ ಪದ್ಯ ಮತ್ತು ವಚನಗಳನ್ನು ಸೂಚಿಸುತ್ತವೆ: ೧/೫೭ ವ. ೮೮ ; ೨/೭ ; ೩/೫೬, ೭೧ ವ ; ೪/೩೩, ೪೩ ವ, ೪೪, ೪೫, ೫೩, ೮೫ ; ೫/೧೯ ವ. ೨೦+ವ. ೨೨+ವ. ೨೩ ವ. ೨೪+ವ ೨೬, ೪೭ ವ. ೪೮, ೫೦ ವ. ೫೩ ವ. ೬೭ ವ. ೭೧+ವ.

ಕವಿ, ಕಥೆಯನ್ನು ಆರಂಭಮಾಡುವಲ್ಲಿ ಕುರುಜಾಂಗಣದ ವರ್ಣನೆಯನ್ನು ಮಾಡುವಾಗ ಅದರ ಪ್ರಾಮುಖ್ಯತೆಯನ್ನು ಹೇಳುತ್ತಾ 'ಕೈಟಭಾರಾತಿಯ ವಿಶಾಲೋರಸ್ಥಳಕ್ಕೆ ಕೌಸ್ತುಭಮಿರ್ಪಂತೆ ಸೊಗಯಿಸುತಿರ್ದುದು ಹಸ್ತಿನಪುರಮ್' ಎಂದು ಹರಿಯ ಎದೆಯಲ್ಲಿ ರಂಜಿಸುವ ಕೌಸ್ತುಭವನ್ನೇ ಹೆಸರಿಸುತ್ತಾನೆ. ಇದು ಒಂದು ವಿಧದಲ್ಲಿ ಕಾವ್ಯಾರಂಭದಲ್ಲಿ ಕೃಷ್ಣಧ್ಯಾನವೇ ಸರಿ. ಕುಂತಿ ಯಾರೆಂದು ಪಾಠಕರಿಗೆ ಪರಿಚಯಿಸುವಾಗ—

. . . . ಪುರು |
ಷೋತ್ತಮನ ಪಿತಾಮಹಂಗೆ ಶೂರಂಗೆ ಮಗಳ್ ||
ಮತ್ತಗಜಗಮನೆ ಯದುವಂ |
ಶೋತ್ತಮೆಯೆನೆ ಕುಂತಿ . . . . (೧-೮೮)

ಎಂಬುದಾಗಿ ಪುರುಷೋತ್ತಮನ ಮುಖಾಂತರ ಕುಂತಿಯ ಖ್ಯಾತಿಯನ್ನು ತಿಳಿಸುತ್ತಾನೆ. ಹಾಗೆಯೆ ತನ್ನ ಕಥಾನಾಯಕನಾದ ಅರಿಕೇಸರಿಯ ಬಾಲಕ್ರೀಡೆಯನ್ನು 'ಮುರಾರಿಯ ಬಾಲಕ್ರೀಡೆಯನನುಕರಿಪುದಾದುದು' ಎಂದು ಹೇಳುತ್ತಾನೆ. ತನ್ನ ಕಥಾನಾಯಕನನ್ನು ಬೇರೆಯವನಿಗೆ (ಕೃಷ್ಣನಿಗೆ) ಹೋಲಿಸಬೇಕಾದಲ್ಲಿ, ಆ ವ್ಯಕ್ತಿಯ (ಕೃಷ್ಣನ) ಮಹಿಮೆ, ಕೀರ್ತಿ ಎಷ್ಟೆಂಬುದನ್ನು ಗಮನಿಸಬೇಕು. ದ್ರೌಪದಿಯ ಸ್ವಯಂವರ ಸಂದರ್ಭದಲ್ಲಿ ನೆರೆದಿದ್ದ ರಾಜಕುಮಾರರ ಮಧ್ಯದಲ್ಲಿ, ಸಮಸ್ತ ಪರಿವಾರದ ನಡುವೆ ಕಾಂತಿಯುಕ್ತರಾಗಿ ಕುಳಿತಿದ್ದ ಕೃಷ್ಣ ಬಲರಾಮರನ್ನು ಸುಂದರಮಾಲೆಯೆಂಬ ಸಖಿಯಿಂದ ದ್ರೌಪದಿಗೆ ಪರಿಚಯಿಸುವುದರ ಜೊತೆಯಲ್ಲೇ ಪಾಠಕರಿಗೂ ಕವಿ ಪರಿಚಯಿಸುತ್ತಾನೆ.

ಕವಿಗೆ ನಾಲ್ಕನೆಯ ಆಶ್ವಾಸದವರೆಗೂ ತನ್ನ ಕಥಾಸರಣಿಯ ಪ್ರಕಾರ ಕೃಷ್ಣನನ್ನು ಕಾವ್ಯದೊಳಗಡೆ ತರಲು ಅವಕಾಶವಿಲ್ಲ. ನಾಲ್ಕನೇ ಆಶ್ವಾಸದ ಪೂರ್ವಾರ್ಧದಲ್ಲಿ ಕೃಷ್ಣನನ್ನೂ ತನ್ನ ಕಥಾನಾಯಕನಾದ ಅರಿಕೇಸರಿಯನ್ನೂ ಒಂದೆಡೆಯಲ್ಲಿ ಮೊದಲ ಬಾರಿಗೆ ಸೇರಿಸುತ್ತಾನೆ. ತೀರ್ಥಯಾತ್ರಾರ್ಥಿಯಾಗಿ ಬಂದ ಅರ್ಜುನನಿಗೆ ಕೃಷ್ಣನು ಆತಿಥ್ಯವನ್ನು ಕೊಟ್ಟು ಆದರದಿಂದ ದ್ವಾರಕಾವತಿಯಲ್ಲಿ ಸತ್ಕರಿಸಿ, ಅವನೊಡನೆ ಸಂತೋಷದಿಂದ ಕಾಲ ಕಳೆಯುತ್ತ,

ಆಯತಿಯಿಂದಂ ನರ ನಾ |
ರಾಯಣರೆನೆ ನೆಗಟ್ದಿವರಿಗ ನಾವಿರ್ವರುಮಿಂ ||

೭೨+ವ–೭೭+ವ. ೮೦ ವ–೮೪, ೯೩ ವ. ೯೮, ೯೯ ; ೬/೨೦ ವ–೨೪, ೨೬ ವ. ೨೭ ವ. ೨೮, ೪೨–೬೬+ವ ; ೯/೭ ವ–೯ ವ. ೧೦ ವ–೧೯, ೨೫ ವ–೨೮ ವ. ೨೯ ವ–೫೭, ೫೯–೬೭, ೬೯ ವ. ೮೭ ವ. ೮೮ ; ೧೦/೬–೮, ೧೧, ೧೪, ೬೩ ವ–೬೪+ವ ; ೧೧/೧೬, ೨೫–೨೭, ೭೭, ೧೩೦–೩೧ ; ೧೨/೪೮, ೨೦೦, ೨೦೮–೯, ೨೧೦ ವ–೧೧ ; ೧೩/೮೬, ೮೯, ೯೦, ೯೮ ವ. ೧೦೫ ; ೧೪/೩೭.

ತೀ ಯುಗದೊಳೀಗಳಾಂ ನಾ |
ರಾಯಣನೆಂ ನೀನುದಾತ್ತನಾರಾಯಣನೈ ॥ ೪-೪೫ ॥

ಎನ್ನುತ್ತಾನೆ. ಹೀಗೆ ಕವಿ ತನ್ನ ಕಾವ್ಯೋದ್ದೇಶದ ದೃಷ್ಟಿಯಿಂದ, ಕೃಷ್ಣನಿಂದ ಅರ್ಜುನನನ್ನು ಹೊಗಳಿಸಿದರೂ, ಕೃಷ್ಣನ ನಾರಾಯಣತ್ವಕ್ಕೇನೂ ಕುಂದು ತಂದಿಲ್ಲ.

ದುರ್ಯೋಧನನಿಗೆ ಕೃಷ್ಣನ ಬಗ್ಗೆ, ಅವನು ಪಾಂಡವರ ಕಡೆಯಿಂದ ದೂತನಾಗಿ ಬಂದಿದ್ದಾನೆಂಬುದು ತಿಳಿಯುವುದಕ್ಕೆ ಮುಂಚೆ ಬಹಳ ಭಕ್ತಿ ಗೌರವಗಳಿರುತ್ತವೆ. ದುರ್ಯೋಧನನು ಸಭೆಯಲ್ಲಿ ಸಿಂಹಾಸನದ ಮೇಲೆ ಕುಳಿತಿರುವಾಗ ಶ್ರೀಕೃಷ್ಣ ಬಂದಿದ್ದಾನೆ ಎಂಬುದನ್ನು ದ್ವಾರಪಾಲಕನಿಂದ ತಿಳಿದು, ಭೀಷ್ಮರ ಮುಖವನ್ನು ನೋಡಿ—

ಲೋಕಗುರು ಶಂಖ ಚಕ್ರ ಗ |
ದಾ ಕರನತಿಶಯ ಚತುರ್ಭುಜಂ ಜನಜನಿತ ॥
ವ್ಯಾಕುಳದೆ ಬಂದನೆಂದೊಡೆ |
ಲೋಕದೊಳಿನ್ನೆನ್ನ ದೊರೆಗೆ ಪಿರಿಯರುಮೊಳರೇ ॥ ೯-೩೦ ॥

ಎಂದು ಹೇಳುತ್ತಾ ಒಳಕ್ಕೆ ಕರೆಸುತ್ತಾನೆ. ದರಹಸಿತವದನಾರವಿಂದನಾಗಿ ಬಂದ ಅಂಬುಜೋದರನನ್ನು ನೋಡಿ ಆಸನಾರೂಢನಾಗಿದ್ದವನು ಮೇಲೆದ್ದು, ಆಲಿಂಗಿಸಿಕೊಂಡು, ನಮಸ್ಕರಿಸಿ, ಉಚ್ಚಾಸನದಲ್ಲಿ ಕುಳ್ಳಿರಿಸಿ, ಅರ್ಘ್ಯವನ್ನಿತ್ತು, ಆಮೇಲೆ ತಾನು ಕುಳಿತುಕೊಂಡು, ಕೃಷ್ಣನ ಮುಖವನ್ನು ನೋಡಿ,

ಸಂಸಾರದೊಳಿನ್ನೆನ್ನವೊ |
ಲೇಂ ಸೈಪಂ ಪಡೆದರೊಳರೆ ನೀಂ ಬರೆ ಪೆಱತೇಂ ॥
ಕಂಸಾರೀ ಯುಷ್ಮತ್ಪದ |
ಪಾಂಸುಗಳಿಂದಾಂ ಪವಿತ್ರ ಗಾತ್ರನೆನಾದೆಂ ॥ ೯-೩೨ ॥

ಎಂದು ಹೊಗಳುತ್ತಾನೆ. ಕೃಷ್ಣ ಅವತಾರಪುರುಷ, ಪುರುಷೋತ್ತಮನೆಂಬ ಭಾವ ಕವಿಗಿಲ್ಲದಿದ್ದಲ್ಲಿ ದುರ್ಯೋಧನನಿಂದ ಕೃಷ್ಣನನ್ನು ಈ ರೀತಿಯಾಗಿ ಸ್ತೋತ್ರ ಮಾಡಿಸುತ್ತಿರಲಿಲ್ಲವೆಂದು ಊಹಿಸಬಹುದು.

ಪಂಪಭಾರತ ಲೌಕಿಕ ಕಾವ್ಯ. ಅದರಲ್ಲಿನ ವ್ಯಕ್ತಿಗಳು ಲೌಕಿಕ ವ್ಯಕ್ತಿಗಳು. ಆದರೆ ಕೃಷ್ಣನ ಪಾತ್ರವೊಂದು ಅದಕ್ಕೆ ಹೊರತಾದುದು. ಅವನು ಅಜಿತ, ಅನಂತ, ಅಂಬುಜೋದರ, ನಾರಾಯಣ ಈ ಮೊದಲಾದ ಹೆಸರುಗಳಿಂದ ಕೀರ್ತಿವಡೆದವನು. ಜೈನ ಪುರಾಣಗಳಲ್ಲಿ ಮೊದಲ ಎರಡು ಹೆಸರುಗಳಲ್ಲಿ ತೀರ್ಥಂಕರರು ಉಂಟು. ಆದ್ದರಿಂದಲೊ ಏನೊ ಪಂಪನಿಗೆ ಈ ಪಾತ್ರದ ವಿಷಯದಲ್ಲಿ ಎಲ್ಲಿಲ್ಲದ ಗೌರವವಿದೆ. ಅವನ ಹಿಂದಿನ ಜನ್ಮಗಳ ಸಾಹಸದಿಂದೊಡಗೂಡಿದ ಮಹಿಮಾನ್ವಿತವಾದ ಅನೇಕ

ಸಂಗತಿಗಳನ್ನು ಆಗಾಗ್ಗೆ ಬೇರೆ ಬೇರೆ ಪಾತ್ರಗಳಿಂದಂ, ಜೊತೆಗೆ ಕೃಷ್ಣನಿಂದಲೇ೨ ಹೇಳಿಸುತ್ತಿರುತ್ತಾನೆ. ಆದ್ದರಿಂದಲೇ ಕೃಷ್ಣನು ಇಲ್ಲಿ ಜ್ಞಾನಿಯಾಗಿ ಕಂಗೊಳಿಸುವುದು; ಮುಂದೆ ಏನಾಗಬಹುದು ಎಂಬುದನ್ನು ಇಂದೇ ಯೋಚಿಸಿ ಅದಕ್ಕನುಗುಣವಾಗಿ ಪಾಂಡವರು ನಡೆಯುವಂತೆ ಪ್ರಚೋದಿಸುವುದು.

ಪಾಂಡವರ ಧರ್ಮನಿಷ್ಠೆಗೆ ಕಟ್ಟುಬಿದ್ದು ಸರ್ವವಿಧದಲ್ಲಿಯೂ ಅವರಿಗೆ ಜಯವನ್ನುಂಟುಮಾಡುವಾಗ ಕೃಷ್ಣನ ಲೌಕಿಕ ವ್ಯಕ್ತಿತ್ವವನ್ನು ಕವಿ ಬಹಳ ಸ್ವಾಭಾವಿಕವಾಗಿ ಚಿತ್ರಿಸಿದ್ದಾನೆ. ಅರ್ಜುನನು ತೀರ್ಥಯಾತ್ರೆಗೆ ಹೊರಟು ದ್ವಾರಕಾವತಿಯನ್ನು ಸೇರಿ, ಕೃಷ್ಣನ ಸ್ನೇಹವನ್ನು ಮಾಡಿದಾಗ ಸಮಯವನ್ನು ನೋಡಿ ಸುಭದ್ರೆಯನ್ನು ಅರ್ಜುನನೊಡನೆ ಕಳುಹಿಸಿಕೊಡುವ ಏರ್ಪಾಡು ಮಾಡಿ, ಕುಪಿತನಾದ ಬಲರಾಮನನ್ನೂ ಬಹಳ ಚತುರತೆಯಿಂದ ಒಪ್ಪಿಸಿ, ಅವರಿಬ್ಬರಿಗೂ ಮದುವೆ ಮಾಡಿಸುತ್ತಾನೆ. ಅಗ್ನಿದೇವನು, ಅರ್ಜುನನನ್ನು ಅವನ ಬಳಿ ಕೃಷ್ಣನಿಲ್ಲದ ಸಮಯದಲ್ಲಿ, ಖಾಂಡವವನವನ್ನು ಆಹಾರಕ್ಕಾಗಿ ಬೇಡುತ್ತಾನೆ. ಅರ್ಜುನ ಹಿಂದು ಮುಂದು ನೋಡದೆ ಒಪ್ಪಿಗೆ ಸೂಚಿಸುತ್ತಾನೆ. ಆದರೆ ಮುಂಗಾಣಬಲ್ಲ ಮಹಿಮಾವಂತನದನ್ನು ತಿಳಿದು 'ಶರಣಾಗತ ಜಳನಿಧಿಯನೆಯ್ದೆವಂದನೀ ಬಕವೇಷಿ ನಿನ್ನನೇನಂ ಬೇಡಿದಂ ನೀನೀತಂಗೇನನಿತ್ತೆಯೆನೆ,

> ಪಸಿದುಣವೇಡಿದಂ ಬಡವನಾನುಣಲಿತ್ತೆನದಲ್ಲದಿಲ್ಲಿ ದಲ್ |
> ಕುಸುರಿಯ ಮಾತುಗಾಣೆನೆನೆ ಕೇಳ್ದು ಮುರಾಂತಕನೇಂ ತಗುಳ್ದಿಯಿ ‖
> ನ್ನುಸಿರದಿರೀವ ಮಾತನಿವನುಣ್ಬುದು ಖಾಂಡವಮಿಾತನಗ್ನಿ ಮುಂ |
> ಪುಸಿದಿವನಿಂತೆ ಪಾಯಿಸಿದನಿಂದ್ರನೊಳಾದಿ ನರೇಂದ್ರರೆಲ್ಲರಂ ‖೫-೭೨ ‖

ಈತನಜಮುಖವ್ಯಾಘ್ರಂ ಶ್ವೇತಕೃಷ್ಣಕಾರಕನೀತನ ಮಾತು ಮಾತಲ್ಲ' ಎನ್ನುತ್ತಾನೆ. ಇಷ್ಟು ಸೂಕ್ಷ್ಮಗ್ರಾಹಕತ್ವ ಭಾರತದಲ್ಲಿ ಬೇರಾರಿಗುಂಟು ? ಆದರೂ ಅರ್ಜುನ, ಕೊಟ್ಟ ಮಾತಿನಂತೆ ಕೃಷ್ಣನೊಡಗೂಡಿ ಖಾಂಡವವನವನ್ನು ಅಗ್ನಿಗೆ ಆಹುತಿಯಾಗಿ ಕೊಡುತ್ತಾನೆ.

ನಾರದನು ಪಾಂಡವರ ಬಳಿಗೆ ಬಂದು ರಾಜಸೂಯಯಾಗವನ್ನು ಮಾಡುವಂತೆ ಪ್ರೇರೇಪಿಸಿ ಹೋಗುತ್ತಾನೆ. ಧರ್ಮರಾಯನಿಗೆ ಕೃಷ್ಣನೊಡನೆ ಆಲೋಚನೆ ಮಾಡದೆ ಯಾವ ಕಾರ್ಯವನ್ನು ಕೈಗೊಳ್ಳುವುದಕ್ಕೂ ಮನಸ್ಸಿಲ್ಲ. ಆದ್ದರಿಂದ ಅವನು, ತನ್ನ ತಮ್ಮಂದಿರೊಡನೆ ಆಲೋಚಿಸಿ ಪುರುಷೋತ್ತಮನನ್ನು ಕರೆಸಿಕೊಂಡು ನಾರದನ ಆದೇಶವನ್ನು ತಿಳಿಸುತ್ತಾನೆ. ಸ್ವತಃ ಅನುಭವಶಾಲಿಯಾದ ಕೃಷ್ಣನು ಅವರ ಮನಸ್ಸು, ಹಿಡಿದ ಕಾರ್ಯದಲ್ಲಿ ನೆಲೆ ನಿಲ್ಲುವಂತೆ ಮಾಡುವುದಕ್ಕಾಗಿ ಬಹಳ

---

೧ : ೫/೬೮, ೧೦೧, ೧೦೨; ೬/೪೧, ೫೭ ; ೮/೫೫; ೯/೧೫, ೧೬, ೩೦ ; ೧೧/೧೬ ; ೧೩/೮೪.
೨ : ೯/೨೦; ೧೧/೭೮.

ಉಪಾಯದಿಂದ, ರಾಜಸೂಯಯಾಗವನ್ನು ಮಾಡುವುದಕ್ಕೆ ಇದಿರಾಗುವ ತೊಂದರೆಗಳನ್ನು ಹೇಳಿ,

> ಗಾಳು ಗೊರವಂ ತಗುಳ್ವಿ ಪ |
> ಳಾಳಮನೇನೊಂದನಪ್ಪೊಡಂ ಗಟಿಪಿದೊಡಾ ||
> ಬೇಳು ನುಡಿಗೇಳ್ದು ಕೆಮ್ಮನೆ |
> ಬೇಳಲ್ ನಿಮಗಂತು ರಾಜಸೂಯಂ ಪೊಗ್ಗೇ || ೬–೨೪ ||

ಎಂದು ಉತ್ಸಾಹಿಗಳ ಮುಖಕ್ಕೆ ನೀರೆರಚುವಂತೆ ಮಾತನಾಡುತ್ತಾನೆ. ಆಗ ಧರ್ಮರಾಯನ ಸೋದರರೆಲ್ಲ ತಮ್ಮ ತಮ್ಮ ಪ್ರತಾಪವನ್ನು ರಾಜಸೂಯಕ್ಕಾಗಿ ತೋರಿಸಲು ಮುಂದೆ ಬರುತ್ತಾರೆ. ಭೀಮಸೇನನಂಥವರನ್ನು ಬಹಳ ಚಾತುರ್ಯದಿಂದ ತನ್ನ ಇಚ್ಛೆಯಂತೆ ಉದ್ಯೋಗಿಸುವುದು ಕೃಷ್ಣನಂತಹವರಿಂದ ಮಾತ್ರ ಸಾಧ್ಯ. ಇದೇ ಉಪಾಯ ಅಥವಾ ಲೌಕಿಕ ತತ್ವದಿಂದ ಕುರುಕ್ಷೇತ್ರ ಯುದ್ಧದಲ್ಲಿ ಅರ್ಜುನನಿಗೆ ಸಾರಥ್ಯವನ್ನು ವಹಿಸಿಕೊಂಡು ಎಲ್ಲಾ ಪರಾಕ್ರಮಿಗಳನ್ನೂ ಉರುಳಿಸುತ್ತಾನೆ. ಕರ್ಣನನ್ನು ಭೇದಿಸುವುದಕ್ಕೂ ಇದೇ ಮಂತ್ರ ಪ್ರಯೋಗವಾಗುತ್ತದೆ. "ಭೇದಿಸಲೆಂದೆ ದಲ್ ನುಡಿದರೆನ್ನದಿರೊಯ್ಯನೆ ಕೇಳ ಕರ್ಣ" ಎನ್ನುತ್ತಲೇ, ಮುಂದೆ ಅವನಿಂದ ಅರ್ಜುನನಿಗೆ ಒದಗಬಹುದಾದ ತೊಂದರೆಯನ್ನು ತಿಳಿದು ಕರ್ಣನ ಜನ್ಮ ವೃತ್ತಾಂತದ ರಹಸ್ಯವನ್ನು ತಿಳಿಸುತ್ತಾನೆ. ದುರ್ಯೋಧನನಿಗೆ ಕರ್ಣನ ಜನ್ಮ ರಹಸ್ಯ ತಿಳಿದಿದ್ದೂ ತನ್ನ ಕಾರ್ಯಸಾಧನೆಗಾಗಿ ಅದನ್ನು ಅವನು ಕರ್ಣನಿಗೆ ತಿಳಿಸದೆ ಇರುವನು ಎನ್ನುವಂತೆ ಮಾತನಾಡುತ್ತಾನೆ. ಆದರೆ ಅದರಿಂದ ಕರ್ಣನನ್ನು ತನ್ನತ್ತ ಸೆಳೆಯಲು ಸಾಧ್ಯವಾಗದೆ ಕುಂತಿಯಿಂದಲೆ ಅವನನ್ನು ಭೇದಿಸುತ್ತಾನೆ.

ಕೃಷ್ಣನ ಮಹಿಮೆ[೧] ಸರ್ವರಿಗೂ ವಿದಿತವಾಗುವುದು ರಾಜಸೂಯಯಾಗ ಸಂದರ್ಭದಲ್ಲಿ; ಅಗ್ರಪೂಜೆಯನ್ನು ಅಂಗೀಕರಿಸಿಕೊಂಡಮೇಲೆ. ಅದಕ್ಕಿಂತ ಮೊದಲು ಭೀಷ್ಮರಂತಹ ಪ್ರಾಜ್ಞರು ಬಲ್ಲರೆಂಬುದರಲ್ಲಿ ಸಂಶಯವಿಲ್ಲ. ಆದರೆ ಅದು

---

೧ ದ್ರೌಪದಿಯ ವಸ್ತ್ರಾಪಹರಣದ ಕಥೆಯನ್ನು ಪಂಪ ಸಂಪೂರ್ಣವಾಗಿ ಬಿಟ್ಟಿದ್ದಾನೆ. ಇದು ಮೂಲಭಾರತದಲ್ಲಿ ಇಲ್ಲದಿದ್ದಿರಬಹುದೆಂದು ಪಂಡಿತರು ಅಭಿಪ್ರಾಯಪಟ್ಟಿದ್ದಾರೆ. ಹತ್ತನೇ ಶತಮಾನದಿಂದೀಚೆಗೆ ಪ್ರಕ್ಷಿಪ್ತವಾಗಿ ಸು. ೧೪-೧೫ ನೇ ಶತಮಾನದಲ್ಲಿ ಸೇರಿರಬೇಕು. ಅಂತೂ ನಾರಣಪ್ಪನ ಕಾಲಕ್ಕಾಗಲೇ ದಾಕ್ಷಿಣಾತ್ಯ ಪ್ರತಿಗಳಲ್ಲಾದರೂ ಕಂಡುಬಂದಿದೆ. ಅದನ್ನು ಕೃಷ್ಣ ಭಕ್ತನಾದ ಅವನು ಬಳಸಿಕೊಂಡು ಕೃಷ್ಣನ ಮಹಿಮೆ ಎಷ್ಟೆಂಬುದನ್ನು ಭಕ್ತರು ಮೆಚ್ಚುವಂತೆ ಮಾಡಿದ. ಪಂಪನಿಗೆ ಆ ರೀತಿಯ ಕಥಾಸರಣಿ ಬೇಡವಾಗಿ ಕಂಡುಬಂದು ಬಿಟ್ಟಿರಬೇಕು.—ಪ್ರೊ|| ತೀ. ನಂ. ಶ್ರೀ.

"ಕಥೆಗೆ ಆವಶ್ಯಕವಾದದ್ದು ದ್ರೌಪದಿಗೆ ಸಭೆಯಲ್ಲಿ ಅವಮಾನವಾಯಿತೆಂಬುದು; ಆ ಅವಮಾನದ ಫಲವಾಗಿ ದ್ರೌಪದಿಯೂ ಭೀಮನೂ ಘೋರವಾದ ಪ್ರತಿಜ್ಞೆಗಳನ್ನು ಮಾಡಿದರೆಂಬುದು. ಮಾನವತಿಯೂ ಮಹಾರಾಜ್ಞಿಯೂ ಆದ ಆಕೆಯನ್ನು ರಜಸ್ವಲೆಯಾಗಿ ಏಕ

ಲೋಕವಿದಿತವಾಗುವುದು ಅಂಥ ಹಿರಿಯರಿಂದ ಪ್ರಾಚುರ್ಯ ಹೊಂದಿದಮೇಲೆಯೆ. ರಾಜಸೂಯಯಾಗಾಂತ್ಯದ ಮಹಾಪೂಜೆಗೆ ಬಂದು ಸೇರಿದ ಬಂಧುಬಾಂಧವರನ್ನೂ ರಾಜಮಹಾರಾಜರನ್ನೂ ಸತ್ಕರಿಸಿ, ಧರ್ಮರಾಯನು 'ಈ ಸಭೆಯಲ್ಲಿ ಅಗ್ರಪೂಜೆಗೆ ಯಾರು ಅರ್ಹರು?' ಎನ್ನಲು, ಗಾಂಗೇಯರು,

ಬಲಿಯಂ ಕಟ್ಟಿದನಾವನೀಧರಣಿಯಂ ವಿಕ್ರಾಂತದಿಂದಂ ರಸಾ |
ತಲದಿಂದೆತ್ತಿದನಾವನಂದು ನರಸಿಂಹಾಕಾರದಿಂ ದೈತ್ಯನಂ ||
ಚಲದಿಂ ಸೀಳ್ದವನಾವನಬ್ಧಿ ಮಥನ ಪ್ರಾರಂಭದೊಳ್ ಮಂದರಾ |
ಚಲಮಂ ತಂದವನಾವನಾತನೆ ವಲಂ ತಕ್ಕಂ ಪೆಱರ್ ತಕ್ಕರೇ || ೬-೪೧ ||

ಎಂದು ಕೃಷ್ಣನು ಹಿಂದಿನ ಜನ್ಮಗಳಲ್ಲಿ ನಡಸಿದ ಮಹತ್ಕಾರ್ಯಗಳ ವರ್ಣನೆಯನ್ನೇ ಮಾಡಿ ಅವನು ಅವತಾರಪುರುಷನೆಂಬುದನ್ನು ತಿಳಿಸುತ್ತಾರೆ. ಇದೇ ರೀತಿಯಲ್ಲಿ ಕೃಷ್ಣನ ಜನ್ಮಗಳ ಬಗ್ಗೆ ಇರುವ ಇನ್ನೂ ಹಲವಾರು ಪದ್ಯಗಳು ಪಂಪಭಾರತದಲ್ಲಿ ತುಂಬ ಪ್ರಸಿದ್ಧವಾಗಿವೆ.೧

ವನವಾಸಾನಂತರದಲ್ಲಿ ಪಾಂಡವರು ಅಜ್ಞಾತವಾಸಕ್ಕಾಗಿ ವಿರಾಟನ ನಗರಕ್ಕೆ ವೇಷಾಂತರಿಸಿಕ್ಕೊಂಡು ಹೋಗುತ್ತಾರೆ. ಎಲ್ಲರಿಗಿಂತಲೂ ಅರ್ಜುನನ ವೇಷ ಬದಲಾವಣೆಯ ಜೊತೆಗೆ ರಂಭೆಯಿಂದೊದಗಿದ ಶಾಪದಿಂದ ಬೃಹಂದಳೆಯಾದುದನ್ನು ಕೃಷ್ಣನ ಒಂದು ಅವತಾರದ ದೃಷ್ಟಾಂತವಾಗಿಸಿದ್ದಾನೆ ಕವಿ.

ಎಳೆಯಂ ವಿಕ್ರಮದಿಂ ತರಲ್ ಮಹಿಧರಂ ಮುನ್ ಪಂದಿಯಾದಂತೆ ಪೋ |
ದೆಳೆಯಂ ದಾಯಿಗರಂ ಪಡಲ್ವಡಿಸಿ ಕೊಂಡಾಳಲ್ಕಮಾದೇವದಿಂ |
ಮುಳಿಸಿಂ ರಂಭೆಯ ಕೊಟ್ಟ ಶಾಪಮನದಂ ನೀಗಲ್ಕಮಾಗಳ್ ಬೃಹಂ |
ದಳೆಯಾದಂ ನರನಾತ್ಮಕಾರ್ಯವಶದಿಂ ಶುದ್ಧಾಂತದೊಳ್ ಮತ್ಸ್ಯನಾ || (೮-೫೫)

ಕುರುಕ್ಷೇತ್ರಯುದ್ಧಕ್ಕಾಗಿ ಕೃಷ್ಣನ ಸಹಾಯವನ್ನು ಕೇಳಲು ಅರ್ಜುನನು ದ್ವಾರಕಾವತಿಗೆ ಹೋಗಿ ಶ್ರೀಕೃಷ್ಣನು ಮಲಗಿರುವುದನ್ನು ಕಂಡು ಅವನ ಕಾಲ ಬಳಿಯಲ್ಲಿ ಕುಳಿತುಕೊಂಡು ಕಾಲುಗಳನ್ನು ಒತ್ತುತ್ತಿರುತ್ತಾನೆ. ಕಾವ್ಯದುದ್ದಕ್ಕೂ ಸಕಲರಾಜರೂ ಅರ್ಜುನನ ಪಾದಸೇವೆ ಮಾಡುತ್ತಾರೆ, ಇಲ್ಲ ಅವನಿಂದ ನಾಶ ಹೊಂದುತ್ತಾರೆ ಎಂದು ವರ್ಣಿಸುವ ಕವಿ, ಹೀಗೆ ಮಾಡಿರುವುದರಿಂದ ಅವನಿಗೆ

ವಸ್ತ್ರಧಾರಿಣಿಯಾಗಿದ್ದಾಗ ದುಶ್ಶಾಸನನಂಥ ಪರಪುರುಷನು ಮುಟ್ಟಿ, ಬಹಿರಂಗ ಸಭೆಗೆ ಎಳೆದು ತಂದು, "ತೊಟ್ಟಿತ್ತೊಟ್ಟುವೆಸಕೆಯ್ ಪೋ ಪೋಗು ನೀನೆಂದು ಬಯ್ದೆನಿತಾನುಂ ತೆಱದಿಂದ ಮುಟ್ಟಿದುವರಂ ಕೆಯ್ದಂದು....ಆಕೆಯ ಕಬರೀ ಭಾರಮಂ ಮೇಗಿಲ್ಲದೆ ತೆಗೆ" ದದ್ದು ದ್ರೌಪದಿಯೂ ಭೀಮನೂ ಘೋರ ಪ್ರತಿಜ್ಞೆ ಮಾಡುವುದಕ್ಕೆ ಸಾಲದೆ?

—ಟಿ. ಎಸ್. ವೆಂಕಣ್ಣಯ್ಯ, ಪ್ರ. ಕ. ಸಂ. ೧೫.

೧. ೫/೬೮ ; ೬/೫೭ ; ೮/೫೫ ; ೯/೧೫, ೧೬, ೨೦ ; ೧೧/೭೮ ; ೧೩/೮೪.

ಕೃಷ್ಣನಲ್ಲಿ, ತನ್ನ ಕಥಾನಾಯಕನಲ್ಲಿರುವಷ್ಟೇ ಅಥವಾ ಇನ್ನೂ ಮಿಗಿಲಾಗಿಯೇ ಗೌರವವಿದೆಯೆಂದು ಹೇಳಬಹುದು. ಇದಕ್ಕೆ ಇನ್ನೂ ಸಮರ್ಥನೆಯನ್ನು ಕಾಣಬಹುದು. ದುರ್ಯೋಧನನಿಗೆ ಯದುಕುಲ ಸೇನೆಯ ಸಹಾಯವನ್ನು ಕೊಟ್ಟು ತಾನು ಅರ್ಜುನನೊಡನೆ ವಿರಾಟಪುರಕ್ಕೆ ಧರ್ಮರಾಯನಿದ್ದಲ್ಲಿಗೆ ಬರುತ್ತಾನೆ. ಪಂಚೇಂದ್ರಿಯಗಳು ಮನಸ್ಸನ್ನಾಶ್ರಯಿಸಿರುವಹಾಗೆ ಪಾಂಡವರು ಕೃಷ್ಣನನ್ನು ಆಶ್ರಯಿಸಿರುತ್ತಾರೆ. ಅವನು ಬಂದಾಗ,

ಎಳೆ ರಸೆಯೊಳಟ್ಟಿದಂ ಭುಜ |
ಬಳದಿಂ ಮುನ್ನೆತ್ತಿದಂತೆ ವಿಷಯಾಂಬುಧಿಯೊಳ್ ||
ಮುಱುಗಿರ್ದೆಮ್ಮಯ್ವರುಮಂ |
ಬಳಿಹರ ಪಿಡಿದೆತ್ತಲೆಂದು ಬಂದೈ ಬರವಂ || ೯-೧೫ ||

ಬಸಿಱೊಳ್ ಜಗತೀ ತ್ರಯಮುಮು |
ನೊಸೆದಿಟ್ಟೋರಂತೆ ಕಾದ ಪೆಂಪಿನ ನಿಮ್ಮಾ ||
ಬಸಿಱಿಂ ಪೊಕ್ಕೆಮ್ಮಯ್ವರ |
ನಸುರಕುಳಾಂತಕ ಕಡಂಗಿ ಕಾವುದು ಪಿರಿದೇ || ೯-೧೬ ||

ಎಂಬುದಾಗಿ ಹರಿಯ ಮಹಿಮೆಯನ್ನು ಧರ್ಮರಾಯನು ಇನ್ನಿಲ್ಲದೆ ಹೀಗೆ ಹೊಗಳುತ್ತಾನೆ. "ಎನ್ನ ನನ್ನಿಯ ಪೆಂಪು ನಿನ್ನ ಮಹತ್ವದಿಂದ" ಆದುದು. ಇಲ್ಲದಿದ್ದಲ್ಲಿ ತನ್ನ ಭಾಗವನ್ನು ದುರ್ಯೋಧನನಿಗೆ ಕೊಟ್ಟು ಅರಣ್ಯದಲ್ಲಿ "ಬನ್ನಮಿಲ್ಲದೆ ಬಾೞ್ವುದೇಂ ಪುೞುವಾನಸಂಗೆನಗಕ್ಕುಮೇ" ಎಂದು ನಮ್ರತೆಯನ್ನು ತೋಡಿಕೊಳ್ಳುತ್ತಾನೆ. ದುರ್ಯೋಧನನು ಯುದ್ಧಮಾಡದೆ ರಾಜ್ಯವನ್ನು ಕೊಡುವವನಲ್ಲ. ಸೋದರರೆಂದು ಸುಮ್ಮನಿದ್ದಲ್ಲಿ ಭೂತಳದಲ್ಲಿ ಅವಸ್ತುಭೂತನೆಂದು ತೆಗಳಿಕೆಗೆ ಗುರಿಯಾಗಬೇಕಾಗುತ್ತದೆ. ಆದ್ದರಿಂದ ಅದಕ್ಕೆ ತಕ್ಕ ಉಪಾಯವನ್ನು ಕೇಳುತ್ತಾನೆ. ಕೃಷ್ಣ ಒಳ್ಳೆಯ ರಾಜನೀತಿಜ್ಞನಾಗಿ ಧರ್ಮರಾಯನಿಗೆ ಸಲಹೆ ಸೂಚಿಸುತ್ತಾನೆ. 'ಮೊದಲು ಸಾಮವನ್ನು ಪ್ರಯೋಗಿಸಿ ಅನಂತರದಲ್ಲಿ ದಂಡವನ್ನು ಮುಂದಿಡಬೇಕು. ಅದು ಸರಿಯಾದ ಲಕ್ಷಣ. "ಇಳೆಯಂ ಮುಂ ಬೇಡಿಯಟ್ಟು+ಅಟ್ಟೆ ಮಾರ್ಮಲೆದಾತಂ ಕುಡದಿರ್ದೊಡಂದಿಱಿಯ ನೀಂ ಲೋಕಂ ಗುಣಂಗೊಳ್ಗುನಂ" ಎಂದು ಧರ್ಮರಾಯನಿಗೂ ರಾಜನೀತಿಯ ರಹಸ್ಯವನ್ನುಸಿರಿ ತಾನೇ ದೂತಕಾರ್ಯವನ್ನು ಹೊತ್ತು ದುರ್ಯೋಧನನ ಸಭೆಗೆ ಹೋಗುತ್ತಾನೆ. ಇಲ್ಲಿ ಕೃಷ್ಣನ ವ್ಯವಹಾರ ನೀತಿ ಎಷ್ಟು ಚೆನ್ನಾಗಿ ನಿರೂಪಿತವಾಗಿದೆಯೆಂಬುದನ್ನು ಕಾಣಬಹುದು. ಧರ್ಮರಾಯನನ್ನು "ಅವಸ್ತುಭೂತನೆಂದಾದಮೆ ಭೂತಳಂ ಪೞಿ" ಯದ ಹಾಗೆ, "ಮೆಲ್ಪು ಬಲ್ಪನೞಿ"ಯದ ಹಾಗೆ, ದಂಡಕ್ಕಿಂತಲೂ ಮುಂಚೆ ಸಾಮವನ್ನು ಪ್ರಯೋಗಿಸಿ, ತನ್ನ ಚಾತುರ್ಯದಿಂದ ದುರ್ಯೋಧನನು ಕೋಪಗೊಳ್ಳುವಂತೆ ಮಾಡುತ್ತಾನೆ.

ಆತನು ಕೃಷ್ಣನ ಮೇಲೆ ಕದನಕ್ಕೆ ಹಾಯಲು ವಿಶ್ವರೂಪವನ್ನು ತೋರಿ ಸಭೆಯಿಂದ ಹೊರಬರುತ್ತಾನೆ.

ಯುದ್ಧ ಪ್ರಾರಂಭವಾಗುತ್ತದೆ. ಅರ್ಜುನ ತನ್ನ ಬಂಧು ಬಾಂಧವರ ವಿಷಯದಲ್ಲಿ ವಾತ್ಸಲ್ಯಹೊಂದಿ, ಆವೇಗದಿಂದ ಅನುತಾಪ ಪಡುತ್ತಿರಲು ಕೃಷ್ಣ, ಅವನ ಮನಸ್ಸಿನಲ್ಲುಂಟಾದ ವ್ಯಾಮೋಹವನ್ನು ಕಳೆಯುವುದಕ್ಕಾಗಿ ವಿಶ್ವರೂಪವನ್ನು ತೋರಿ, "ಸೈತಜಿತನಾದಿಯ ವೇದರಹಸ್ಯದೊಳ್ ನಿರಂತರದ ಪರಿಚರ್ಯೆಯಿಂ ನೆಱೆಯೆ ಯೋಜಿಸಿದಂ ಕದನತ್ರಿಣೇತ್ರನಂ". ಗೀತೋಪದೇಶವನ್ನು ಯುದ್ಧ ಭೂಮಿಗೆ ರಥ ಹೋಗುತ್ತಿರುವಲ್ಲಿ ಎಷ್ಟು ಸಂಕ್ಷಿಪ್ತವಾಗಿ ನಡೆಯಬೇಕೊ ಅಷ್ಟರಲ್ಲಿ ಪಂಪ ಔಚಿತ್ಯವರಿತು ಪರಿಣಾಮಕಾರಕ ರೀತಿಯಲ್ಲಿ ಸಂಗ್ರಹಿಸಿದ್ದಾನೆ. ಕೃಷ್ಣನ ಚಲನ ವಲನಗಳು, ನಡೆ ನುಡಿಗಳು ಲೌಕಿಕ ವ್ಯಕ್ತಿಗಳೊಡನೆಯೆ ಸಾಗುತ್ತಿದ್ದರೂ, ಅವನ ಆಂತರ್ಯ ಅಲೌಕಿಕವಾದುದು. ಸಾತ್ವಿಕ ವ್ಯಕ್ತಿಗಳಿಗೆ ಸಹಾಯಮಾಡಿ ಭೂಭಾರವನ್ನು ನೀಗಿ ಲೋಕೋದ್ಧಾರ ಮಾಡುವುದು ಆತನ ಮಹಾ ಕರ್ತವ್ಯ. ಅದು ಪಂಪನ ಮನಸ್ಸಿನಲ್ಲಿರುವುದಂತೂ ಸ್ಪಷ್ಟ. ಕೃಷ್ಣನ ವಿಷಯದಲ್ಲಿ ಆ ಒಂದು ರೀತಿಯ ಗರಿಮೆಯಿದ್ದರೂ, ದಾಸಸಾಹಿತ್ಯದ ಕವಿಗಳಂತೆ ಹರಿಯ ಭಜನೆಯನ್ನೇ ನಡಸುವಂಥ ಹೆಚ್ಚು ಪದ್ಯಗಳನ್ನು ಒಂದೇ ಕಡೆಯಲ್ಲಿ ಅಡಕುವುದಿಲ್ಲ. ಅದರಲ್ಲೂ ಪಂಪನಲ್ಲಿ ಅದನ್ನು ಕಾಣುವುದು ದುಸ್ಸಾಧ್ಯ. ಅವನ ಕಥೆ ನಾಗಾಲೋಟದಲ್ಲಿ ಓಡುತ್ತಿರುತ್ತದೆ. ಒಂದೊಂದು ಸಂಗತಿಯನ್ನೂ ವರ್ಣಿಸುವ ವ್ಯವಧಾನವಿಲ್ಲ.

ಯುದ್ಧದ ಉದ್ದಕ್ಕೂ, ಭಾರತದಲ್ಲಿ ಇನ್ನಾವ ವ್ಯಕ್ತಿಗಳಿಗೂ ಬರದ ತಂತ್ರಗಳನ್ನು ಕೃಷ್ಣ ಆಲೋಚಿಸಿ ಅನುಷ್ಠಾನಕ್ಕೆ ತರುತ್ತಾನೆ; ಬೇರೆಯವರಿಗೆ ಹೇಳಿಕೊಡುತ್ತಾನೆ; ಅಂತೂ ತನ್ನನ್ನು ನಂಬಿದವರನ್ನು ಕಾಪಾಡುತ್ತಾನೆ. ಕೃಷ್ಣನ ಉಪಾಯಗಳಿಂದಲೇ ಪಾಂಡವರು ಗೆಲವನ್ನು ಪಡೆಯುವುದು. ಭೀಷ್ಮರಿಂದ ಪಾಂಡವರ ಧ್ವಜಿನಿಯೆಲ್ಲಾ ನಾಶ ಹೊಂದುತ್ತಿರಲು ಅವರನ್ನು ಭೇದಿಸತಕ್ಕ ಉಪಾಯವನ್ನು ಹೇಳಿಕೊಡುವವನು ಕೃಷ್ಣ. ಸುಪ್ರತೀಕಗಜಾರೂಢನಾಗಿ ಭೀಮಸೇನನೊಡನೆ ಅದಿರದಿದಿರಿಸಿದ ಭಗದತ್ತನನ್ನು ಕೊಲ್ಲಿಸಿದವನೂ ಅವನೇ. ಅರ್ಜುನನ ಮೇಲೆ ಭಗದತ್ತ ದಿವ್ಯಾಂಕುಶವನ್ನು ಪ್ರಯೋಗಿಸಿದಾಗ ಕೃಷ್ಣ ಅದನ್ನು ಮಾಲೆಯೋಪಾದಿಯಲ್ಲಿ ಕೊರಳಲ್ಲಿ ಧರಿಸುತ್ತಾನೆ. ಆಗ ಅರ್ಜುನ ಆಶ್ಚರ್ಯ ಚಕಿತನಾಗಿ ಅದಕ್ಕೆ ಕಾರಣವನ್ನು ಕೇಳಲು,

ಇದು ಪೆಱತಲ್ತು ಭೂತಲಮನಾಂ ತರಲಾದಿವರಾಹನಾದೆನಂ |
ದದಱ ವಿಷಾಣಮಂ ಬಟಿಯಮಾ ವಸುಧಾಂಗನೆಗಿತ್ತೆ ನೀತನಾ ||
ಸುದತಿಯ ಪೌತ್ರನಾಕೆ ಕುಡೆ ಬಂದುದಿವಂಗೆನಗಲ್ಲದಾನಲಾ |
ಗದುದಱಿನಾಂತೆನಿಂ ತಱಿವುದೀ ಕರಿ ಕಂಥರಮಂ ಗುಣಾರ್ಣವಾ || (೧೧-೭೮)

ಎಂದು ತಿಳಿಸುತ್ತಾನೆ. ಹೀಗೆಯೆ ಸೈಂಧವನನ್ನು ವಧಿಸಲಿಕ್ಕಾಗಿ ಶಿವನಿಂದ

ಪಾಶುಪತಾಸ್ತ್ರ ಪ್ರಯೋಗದ ರಹಸ್ಯವನ್ನು ಸಕಾಲದಲ್ಲಿ ಅರ್ಜುನನು ಪಡೆದು ಕೊಳ್ಳುವಂತೆ ಮಾಡಿದವನು ಕೃಷ್ಣನೇ. ದರ್ಭಶಯನದಲ್ಲಿ ಮಲಗಿದ್ದ ವಿಜಯನನ್ನು ಚಕ್ರಿ, ಮನಃಪವನ ವೇಗದಿಂದ ಕೈಲಾಸಕ್ಕೆ ತೆಗೆದುಕೊಂಡು ಹೋಗಿ ತ್ರಿಣೇತ್ರ ನಿಂದ ಪಾಶುಪತಾಸ್ತ್ರ ಪ್ರಯೋಗದ ಕ್ರಮವನ್ನು ಉಪದೇಶಿಸಿಕೊಂಡು ಬರುತ್ತಾನೆ.

ಕರ್ಣಾರ್ಜುನರ ಯುದ್ಧಸಘುಯದಲ್ಲಿ ಕೃಷ್ಣನ ಪಾತ್ರಕ್ಕೆ ಎಲ್ಲಿಲ್ಲದ ಪ್ರಾಮುಖ್ಯತೆಯನ್ನು ಕೊಡಬೇಕು. ಕರ್ಣನು ಅರ್ಧಾವಳೀಕ ಶರವನ್ನು ಅರ್ಜುನನ ಕುತ್ತಿಗೆಗೆ ಗುರಿಯಿಟ್ಟು ಪ್ರಯೋಗಿಸಲು "ಚಕ್ರಿ ನೆಲನೊಳೆಣ್ಬೆರಲಡಂಗೆ ನರರಥ ಮನೊತ್ತಿದಂ ನಿಪುಣತೆಯಿಂ". ಆಗ ಶರವು ನರನ ಕಿರೀಟವನ್ನು ಕಿತ್ತೊಯ್ಯುತ್ತದೆ. ಬಂದೊದಗಿದ್ದ ವಿಪತ್ತಿನಿಂದ ವಿಜಯನನ್ನು ಕಾಯುತ್ತಾನೆ.

ಭೀಮ ದುರ್ಯೋಧನರಿಗೆ ಕುರುಕ್ಷೇತ್ರದ ಕೊನೆಯಲ್ಲಿ ಗದಾಯುದ್ಧ ಸಂಘಟಿಸುತ್ತದೆ. ಅಲ್ಲಿಯೂ ಕೂಡ ಕೃಷ್ಣನ ಪಾತ್ರದ ಪ್ರಾಮುಖ್ಯತೆ ಅಸಾಧಾರಣ ವಾದುದು. ವೈಶಂಪಾಯನ ಸರೋವರದಿಂದ ಮೇಲೆದ್ದ ದುರ್ಯೋಧನ, ಪಾಂಡು ನಂದನರನ್ನು ಮೂದಲಿಸುವಾಗ,

ಎಳೆ ಮುಂ ದೈತ್ಯನ ಕೆಯ್ಗೆ ಪೋಗೆ ತರಲೆಂದೀ ಚಕ್ರಿ ಮುನ್ನಂ ರಸಾ |
ತಳಮಂ ಪೊಕ್ಕುದುಮಿಾ ಮಹೋಗ್ರ ರಣದೊಳ್ ನಿಮ್ಮೊಂದು ಕೆಯ್ವಿಟ್ಟಿ ಭೂ ||
ತಳಮಂ ಮತ್ತೆ ತರಲ್ ವಿಶುದ್ಧ ನಿಯಮ ಪ್ರಾರಂಭದಿಂದಾನುಮಿಾ |
ಕೊಳನಂ ಪೊಕ್ಕುದುಮಾವ ದೋಷಮೆನಗಿಂ ಮಾಜೊಂಪರಾರ್ ತೋಱಿರೇ ||
(೧೩-೮೪)

ಎಂಬುದಾಗಿ ಕೃಷ್ಣನ ಒಂದು ಅವತಾರದ ದೃಷ್ಟಾಂತವಾಗಿಸಿದ್ದಾನೆ. ಅವನ ಒಂದು ಸಾಹಸದ ಕಾರ್ಯದಂತೆ ದುರ್ಯೋಧನ ತಾನು ನಡೆದು ತನ್ನ ಕಾರ್ಯ ಸಾಧಿಸುತ್ತೇನೆ ಎಂದು ಹೇಳುವುದು ಆಶ್ಚರ್ಯವೇ ಸರಿ! ಜೈನನಾದ ಪಂಪನಿಗೆ 'ಕೃಷ್ಣನ ವಿಷಯದಲ್ಲಿ, ಆತನ ದಿವ್ಯಾವತಾರ, ದಿವ್ಯೋಪದೇಶ, ದಿವ್ಯ ಲೀಲೆಗಳ ವಿಷಯದಲ್ಲಿ, ಆದಿ ತೀರ್ಥೇಶ್ವರನಲ್ಲಿದ್ದ ಅನನ್ಯ ಶರಣಭಾವವಿಲ್ಲದೆ ಇದ್ದಿದ್ದರೆ' ಇಂಥ ಕಡೆಗಳಲ್ಲಿ ಈ ರೀತಿಯ ಪದ್ಯಗಳ ರಚನೆಯ ಆವಶ್ಯಕತೆಯೇನಿತ್ತು? ವ್ಯಾಸಭಾರತವನ್ನೇ ಅನುಸರಿಸಿ ಬರೆಯುತ್ತಿದ್ದರೂ, ಕೃಷ್ಣನ ವಿಷಯದಲ್ಲೇನಾದರೂ ಕವಿಗೆ ತಾತ್ಸಾರ ಮನೋಭಾವವಿದ್ದಲ್ಲಿ ಕಥೆಯನ್ನು ಬಹಳ ಸಂಗ್ರಹವಾಗಿ ಹೇಳು ತ್ತಿರುವ ಪಂಪನಿಗೆ ಕೃಷ್ಣನ ಪಾತ್ರಕ್ಕೆ ಇಷ್ಟು ಹಿರಿಮೆಯನ್ನು ಕೊಡದೆ ಮಾರ್ಪಡಿಸಿ ಕೊಳ್ಳುವ ಒಂದು ಅಸಾಧಾರಣವಾದ ಪ್ರತಿಭೆಯಿತ್ತು ಎನ್ನುವುದು ಅವನ ಕಾವ್ಯ ಗಳನ್ನು ನೋಡುವುದರ ಮೂಲಕವೇ ತಿಳಿಯುತ್ತದೆ.೧

---

೧ ಉದಾಹರಣೆ: ತನ್ನ ಕಥಾನಾಯಕನಾದ ಅರ್ಜುನನಿಗೆ ಪ್ರತಿಸ್ಪರ್ಧಿಯಾದ ಕರ್ಣನ ಪಾತ್ರರಚನೆಯನ್ನು ಮೂಲದಲ್ಲಿರುವುದಕ್ಕೆ ಬಹುಪಾಲು ಭವ್ಯವಾಗಿ, ಆದರ್ಶರೀತಿಯಲ್ಲಿ, ಸಹೃದಯರಿಗೆ ಕರುಣೆಯಿಂದ ಹೃದಯ ಕರಗುವ ರೀತಿಯಲ್ಲಿ ಚಿತ್ರಿಸಿದ್ದಾನೆ. ವ್ಯಾಸಭಾರತದ

ಕೃಷ್ಣ ತನ್ನ ವಾಕ್ಚಾತುರ್ಯದಿಂದಲೆ ದುರ್ಯೋಧನನನ್ನು ಭೀಮನ ಮೇಲೆ ಯುದ್ಧಮಾಡುವ ರೀತಿಯಲ್ಲಿ ಪ್ರಚೋದಿಸುತ್ತಾನೆ. ಧರ್ಮಪುತ್ರನು ತನ್ನ ಸ್ವಭಾವಕ್ಕನುಗುಣವಾಗಿ ಸಂಧಿಗೆ ದುರ್ಯೋಧನನನ್ನು ಒಪ್ಪಿಸಲು ಪ್ರಯತ್ನಪಟ್ಟರೆ, ಕೃಷ್ಣ ಅವನು ಒಪ್ಪದ ರೀತಿಯಲ್ಲಿ 'ಹಿಂದಿನ ನಿನ್ನ ಔದ್ಧತ್ಯದಿಂದ ಈ ಸ್ಥಿತಿಯುಂಟಾಯಿತು, ಹೋಗಲಿ ಇನ್ನಾದರೂ ಒಪ್ಪಿಕೊ' ಎಂದಲ್ಲಿ ಯಾರ ಮನಸ್ಸು ತಾನೆ ಒಗ್ಗೀತು! ಯುದ್ಧ ನಿರ್ಧರವಾಗುತ್ತದೆ. ಅಷ್ಟರಲ್ಲಿ ಬಲರಾಮನೂ ತೀರ್ಥಯಾತ್ರೆಯಿಂದ ಹಿಂದಿರುಗುತ್ತಾನೆ. ದುರ್ಯೋಧನನೇ ಯುದ್ಧಕ್ಕೆ ಕಾರಣನು ಎಂಬುದನ್ನು ಕೃಷ್ಣನಿಂದ ತಿಳಿದ ಬಲರಾಮನು ಅವನನ್ನು ಕೇಳಲು, "ಹರಿಯೆಂದಂದಮದಂತೆ ಪಾಂಡುತನಯರ್ ನಿರ್ದೋಷಿಗಳ್ ತಥ್ಯಮ್" ಎಂದು ಒಪ್ಪಿಗೆ ಸೂಚಿಸುತ್ತಾನೆ. ಎಷ್ಟು ಸುಲಭದಲ್ಲಿ ವೈರಿಯ ಅಪಕರ್ಷವನ್ನು ಕೃಷ್ಣ ಮಾಡಬಲ್ಲನೆಂಬುದು ಇದರಿಂದಲೆ ವ್ಯಕ್ತವಾಗುತ್ತದೆ. ಭೀಮ ದುರ್ಯೋಧನರಿಗೆ ಯುದ್ಧ ನಡೆಯುತ್ತದೆ. ದುರ್ಯೋಧನ ತೊಡೆಯುಡಿದು ರಣರಂಗದಲ್ಲಿ ಬೀಳುತ್ತಾನೆ. ಚಕ್ರಿ ಕಾಲಕುಶಲನಾದ್ದರಿಂದ ಅಶ್ವತ್ಥಾಮನಿಂದುಂಟಾಗತಕ್ಕ ಅಪಾಯದಿಂದ ರಕ್ಷಿಸಲು ಪಾಂಡವರನ್ನು ನೀಲಗಿರಿಗೆ ತೆಗೆದುಕೊಂಡು ಹೋಗುತ್ತಾನೆ.

ದುರ್ಯೋಧನನಿಗೆ ಕೃಷ್ಣನ ಮೇಲೆ ಎಷ್ಟೇ ಮಾತ್ಸರ್ಯವಿದ್ದರೂ, ಅವನು ಅಜೇಯ, ಪುರುಷೋತ್ತಮ; ಅವನ ಬೆಂಬಲವಿದ್ದಲ್ಲಿ ಜಯ ಸಿದ್ಧ ಎನ್ನುವ ಸಿದ್ಧಾಂತಕ್ಕೆ ಬಂದಿರುತ್ತಾನೆ. ರಣರಂಗದಲ್ಲಿ ತಾನು ಅವಸಾನ ಕಾಲದಲ್ಲಿರುವಾಗ ಅಶ್ವತ್ಥಾಮನು ಬಂದು ಪಾಂಡವರ ಸಂಹಾರಕ್ಕೆ ಅಪ್ಪಣೆ ಕೇಳಿದರೆ, "ಆಗದು ಪಾಂಡವರಂ ಗೆಲಲ್ ಪುರಾತನ ಪುರುಷಂ ಮುರಾರಿ ಕೆಲದೊಳ್ ನಿಲೆ" ಎನ್ನುತ್ತಾನೆ.

ಭಾರತ ಕಥೆಯನ್ನು ಸಿಂಹಾವಲೋಕನ ಕ್ರಮದಿಂದ ಗದಾಯುದ್ಧವೆಂಬುದಾಗಿ ನಿರೂಪಿಸಿದ ರನ್ನ ಕೃಷ್ಣನಿಗೆ ಯಾವ ಪ್ರಾಮುಖ್ಯತೆಯನ್ನೂ ಕೊಟ್ಟಿಲ್ಲ. ಕೃಷ್ಣನ ಹೆಸರೆತ್ತಿದಲ್ಲೆಲ್ಲಾ ಅವನನ್ನು ಕೃಷ್ಣನ ವಿರೋಧಿಗಳಿಂದ ಹೀಯಾಳಿಸುವ ರೀತಿಯಲ್ಲೇ ಬಹುಮಟ್ಟಿಗೆ ಬಳಸಿಕೊಂಡಿದ್ದಾನೆ:

ಸಂಜಯನು ಪಾಂಡವರ ಶೌರ್ಯವನ್ನು ದುರ್ಯೋಧನನಿಗೆ ತಿಳಿಸುತ್ತಾ ಅವರೊಡನೆ ಸಂಧಿ ಮಾಡಿಕೊಳ್ಳುವುದು ಉಚಿತವೆಂದು ಸೂಚಿಸುತ್ತಾನೆ. ಆಗ ದುರ್ಯೋಧನನು, ಧರ್ಮರಾಯಾದಿಗಳನ್ನು ಒಬ್ಬೊಬ್ಬರನ್ನಾಗಿ ಹೀಯಾಳಿಸಿ ಕೊನೆಗೆ ಕೃಷ್ಣನನ್ನೂ ಕೂಡ,

ಅನುಜೆಯನಿತ್ತು ನರಂಗಾ |
ತನ ತನಯಂಗಿತ್ತು ತನ್ನ ಮಗಳಂ ತಾನಾ ||

ಕರ್ಣ 'ದುಷ್ಟ ಚತುಷ್ಟಯ' ರಲ್ಲಿ ಅಗ್ರಗಣ್ಯನಾಗಿ ಪಾಂಡವರಿಗೆ ನಾನಾ ರೀತಿಯ ಕೆಡುಕುಗಳನ್ನು ಹುಡುಕುತ್ತಾನೆ. ಇಲ್ಲಾದರೋ ಮಾನವ ಪಾತ್ರಗಳಲ್ಲೇ ಪುಟವಿಟ್ಟ ಮಿಸುನಿಯಂತೆ ಮಿರುಗುತ್ತಾನೆ.

ತನ ರಥಮನೆಸಗಿ ಧರ್ಮಜ |
ನನುಜನ ನೆವದಿಂದಮುರಸುಗೆಯ್ವಂ ಕೃಷ್ಣಂ ||

(ಗ. ಸಂ.* ೩-೩೨)

ಪುರುಷರ್ ಮೂವರೊಳೊರ್ಬನೆಂಬರಸುರಪ್ರಧ್ವಂಸಿಯೆಂಬರ್ ಜಗ |
ದ್ಗುರುವೆಂಬರ್ ಪೆಱಗೇಕೆ ತೇರನೆಸಪಂ ಧರ್ಮಾನುಜಂಗೇಕೆ ಕಿಂ ||
ಕರನಾದಂ ಕರವೇೞೆಯಾದನದಱಿಂ ಸೂತಂ ಭಟಂ ಪೇೞೆಯೆಂ |
ಬರ ಮಾತೊಪ್ಪುಗುಮಾದಿದೇವನೆನಿಸಲ್ ಕೃಷ್ಣಂಗದೆಂತೊಪ್ಪುಗುಂ ||

(ಗ. ಸಂ. ೩-೩೩)

ಮತ್ಸ್ಯಾವತಾರವೇ ಮೊದಲಾದ ದಶಾವತಾರಗಳಲ್ಲಿ ಭಂಗಪಟ್ಟದ್ದು ಸಾಲದೆ ಅರ್ಜುನನ ರಥವನ್ನು ನಡಸುವ 'ಸೂತಾವತಾರ' ವನ್ನೂ ತಾಳಿದ್ದಾನೆ ಎಂಬುದಾಗಿ ಅಲ್ಲಗಳೆಯುತ್ತಾನೆ. ಇದರಲ್ಲಿ ವೈದಿಕ ಧರ್ಮದ ವಿಡಂಬನೆಯ ನವಿರಾದ ಎಳೆಯನ್ನೂ ಕಾಣಬಹುದು. ಆದರೆ ಅದೇ ಪಂಪನಲ್ಲಿ ಅದು ದುರ್ಲಭ.

ಹೀಗೆಯೆ ಗದಾಯುದ್ಧ ಸಂದರ್ಭದಲ್ಲೂ ದುರ್ಯೋಧನ, ಕೃಷ್ಣನನ್ನು,

ವನವಾಸಮಲಿನನಂ ಯಮು |
ತನಯನನುಜ್ಜ್ವಳಿಸಿ ಗೋತ್ರಧವಳನನೆನ್ನಂ ||
ಘನಮಲಿನಂ ಮಾಡಿದೆ ಕೃ |
ಷ್ಣ ಭಿನ್ನವೋಲ್ ಶ್ವೇತಕೃಷ್ಣಕಾರಕರೊಳರೇ || (ಗ. ಸಂ. ೭-೫೮)

'ಯದುಕುಲವೆಂಬ ಜಳಧಿಯಲ್ಲಿ ನೀನೂ, ಬಲರಾಮನೂ ಕ್ರಮವಾಗಿ ವಿಷ ಅಮೃತ ಹುಟ್ಟುವ ರೀತಿಯಲ್ಲಿ ಹುಟ್ಟಿದಿರಿ; ಅವನು ಗುಣವಂತ ನೀನಾದರೊ ನಿರ್ಗುಣಿ' ಎನ್ನುತ್ತಾನೆ. ಇಂಥ ಮಾತುಗಳು ಪಂಪನಲ್ಲಿ ಕಂಡುಬರುವುದಿಲ್ಲ.

ಊರುಭಂಗಾನಂತರ ದುರ್ಯೋಧನನ ಕಡೆಯಿದ್ದ ಲಕ್ಷ್ಮಿ,ನಾರಾಯಣನ ಆದೇಶದಂತೆ ಪಾಂಡವರ ಕಡೆಗೆ ಹೋಗುತ್ತಿರುವುದನ್ನು ಅಶ್ವತ್ಥಾಮನು ತಡೆದು ಆಡುವ ಮಾತಿನಲ್ಲಿ ಪಂಪ ರನ್ನರು ಕೃಷ್ಣನನ್ನು ನೋಡಿರುವ ದೃಷ್ಟಿ ವ್ಯಕ್ತವಾಗುತ್ತದೆ. ಪಂಪನ ಅಶ್ವತ್ಥಾಮ—

ಪೊಸತಲರ್ದಂಬುಜಂಗಳೆಸಱೊಳ್ ನಡೆಪಾಡುವಳೇಂ ಪಯೋಧಿಯಂ |
ಪೊಸೆದೊಡೆ ಪುಟ್ಟಿದೈ ಮುರವಿರೋಧಿಯ ಪತ್ನಿಯೆ ಮಿಂಚುತಿರ್ಪ ಕೂ ||
ರಸಿಗಳ ಮೇಲೆ ಸಂಚರಿಪೆ ವೈರಿ ನರಾಧಿಪ ಸೈನ್ಯವಾರ್ಧಿಯಂ |
ಪೊಸೆದೊಡೆ ಪುಟ್ಟಿದೀ ನಿನಗೆ ವಕ್ರಿಸಲೆನ್ನನದೆಂತು ತೀರ್ಗುಮೋ || (೧೩-೧೦೧)

ಎಂಬುದಾಗಿ ಸೌಮ್ಯರೀತಿಯಲ್ಲಿದ್ದರೆ, ಅದೇ ರನ್ನನಲ್ಲಿ—

ಚಳಮತಿಯಾದೆ ನೀಂ ಜಲಧಿಸಂಭವೆಯಪ್ಪುದಱಿಂ ಸರೋಜಸಂ |
ಕುಳರಜದಿಂದೆ ನೀಂ ಪೊರೆದು ರಾಜಸದೊಳ್ ನೆಲಸಿರ್ಪೆ ಗೋವುಗಾ ||

---

* ಗದಾಯುದ್ಧ ಸಂಗ್ರಹ—ತೀ. ನಂ. ಶ್ರೀ.

ದಳವಟಿಂದಿರ್ದ ಕೃಷ್ಣನೊಡನಿರ್ದುದಱಿಂದವೆ ಗೋವಿಯಾದೆಯ।
ಗ್ಗಳದ ವಿವೇಕಮಿಲ್ಲ ನಿನಗೆತ್ತಱಿವಾ ಪುರುಷಾಂತರಂಗಳಂ॥
(ಗ. ಸಂ. ೯-೩)

ಎಂದು ಕೃಷ್ಣ ಮತ್ತು ಲಕ್ಷ್ಮಿಯರನ್ನು ಹೀಯಾಳಿಸುವಂತಿದೆ.

ಹೀಗೆ ಪಂಪ ರನ್ನರ ದೃಷ್ಟಿಯೇ ಈ ವಿಷಯದಲ್ಲಿ ಬಹುಮಟ್ಟಿಗೆ ಬೇರೆಯಾಗಿದೆ. ಇದಕ್ಕೆ ಕಾರಣವೇನಿರಬಹುದು? ಕೃಷ್ಣ ಜೈನ ಧರ್ಮದ ಪ್ರಕಾರ ವಾಸುದೇವರಲ್ಲಿ ಒಬ್ಬ. ಅವನು ಈ ಕೃಷ್ಣ ಜನ್ಮದಲ್ಲಿ ನರಕಕ್ಕೆ ಹೋಗುತ್ತಾನೆ. ಆಮೇಲೆ ಜನ್ಮಾಂತರಗಳು ಕಳೆದು ತೀರ್ಥಂಕರ ಜನ್ಮದಲ್ಲಿ ಕೈವಲ್ಯ ಪಡೆಯುತ್ತಾನೆ. ಒಂದು ವಿಧದಲ್ಲಿ, ಈ ಅಭಿಪ್ರಾಯಕ್ಕೆ ಪೋಷಕವಾಗುವ ರೀತಿಯಲ್ಲಿ ಕೃಷ್ಣನ ಪಾತ್ರ ಭಾರತದಲ್ಲಿ ಉಚಿತವಾಗಿ ರಚನೆಗೊಂಡಿದೆ. ದ್ಯೂತಪ್ರಸಂಗದಿಂದ ಕುರುಕ್ಷೇತ್ರವು ನಡೆಯುವಂತೆ ಏರ್ಪಾಡುಮಾಡುವವನು ಕೃಷ್ಣ. ಯುದ್ಧ ನಡೆಯುವಾಗಲಂತೂ ಕೃಷ್ಣನ ತಂತ್ರಕ್ಕೆ ಒಳಗಾಗದ ವ್ಯಕ್ತಿ ವಿರಳ. ಭೀಷ್ಮರನ್ನು ಭೇದಿಸುವಂತೆ ಧರ್ಮರಾಯನನ್ನು ಪ್ರೇರೇಪಿಸುವವನು ಕೃಷ್ಣ. ಕರ್ಣನ ಕೊಲೆಗೆ ಕಾರಣ ಕರ್ತ ಕೃಷ್ಣ. ದುರ್ಯೋಧನನ ಅಳಿವಿಗೆ ಮೂಲಪುರುಷ ಕೃಷ್ಣ. ಭಗದತ್ತನನ್ನು ಕೊಲ್ಲಿಸುವವನೂ ಅವನೇ. ಒಟ್ಟಿನಲ್ಲಿ ಎಲ್ಲ ರಕ್ತಪಾತಕ್ಕೂ ಕಾರಣ ಕೃಷ್ಣನೇ! ಅದು ಸತ್ಪಕ್ಷಕ್ಕೆ ಸಹಾಯಕವಾಗಿಯಾಗಲೀ, ಧರ್ಮ ಸಂಸ್ಥಾಪನೆಗಾಗಿಯಾಗಲೀ ಅದು ಜೈನಧರ್ಮದ ಪ್ರಕಾರ ಮಾಡಬಾರದ ಕೃತ್ಯ. ಪಂಚಾಣುವ್ರತಾಚರಣೆಯನ್ನು ಕೈಕೊಂಡು ಕೈವಲ್ಯದ ಕಡೆಗೆ ಮನಸ್ಸನ್ನು ಕೊಡಬೇಕಾಗಿರುವಲ್ಲಿ ಹೀಗೆ ಮಹಾಬಲಶಾಲಿಗಳಿಗೆ ಮೃತ್ಯುರೂಪನಾದ ಕೃಷ್ಣ ನರಕಕ್ಕೆ ಹೋಗುವುದು ಸರಿಯೇನೊ ಅನ್ನಿಸುತ್ತದೆ. ರನ್ನನ ಕೃಷ್ಣನನ್ನು ನೋಡಿದರೆ ಕವಿಗೆ ಈ ಭಾವವೇ ಪುಷ್ಟಿಗೊಟ್ಟಿರುವಂತೆಯೂ ಕಾಣುತ್ತದೆ. ಮೇಲೆ ನಾವು ನೋಡಿದ ವಿವರದಿಂದ ಪಂಪನಲ್ಲಿ ಅದಕ್ಕೆ ಎಡೆಯಿಲ್ಲದಿರುವುದು ಕಂಡುಬರುತ್ತದೆ. ಇದರ ಜೊತೆಗೆ ಪಂಪನ ತಂದೆ 'ಜಾತಿಯೊಳೆಲ್ಲಮುತ್ತಮದ ಜಾತಿಯ ವಿಪ್ರಕುಲ' ದವನಾದ ಅಭಿರಾಮದೇವರಾಯ ವೈದಿಕಧರ್ಮವನ್ನು ಬಿಟ್ಟು ಜೈನಧರ್ಮವನ್ನು ಸ್ವೀಕರಿಸಿದವನು. ಕೇವಲ ಪಂಪನ ಎರಡನೇ ತಲೆಮಾರಿನವರು ಆಚರಿಸುತ್ತಿದ್ದ ಧರ್ಮದಮೇಲೆ ಮಾತ್ಸರ್ಯ ಹುಟ್ಟದೆ ಆ ಧರ್ಮದ ದೇವನಾದ ಕೃಷ್ಣನಲ್ಲಿ ಅಪಾರವಾದ ಗೌರವವುಂಟಾಗಿ ಅವನನ್ನು ಪುರುಷೋತ್ತಮನೆಂದು ಭಾವಿಸಿ ಲೌಕಿಕ ನಾಯಕರಿಗಿಂತ ಮೇಲಾದವನು ಎಂಬ ಭಾವನೆಯಿಂದ ಆ ಪದ್ಯದಲ್ಲಿ ಸೇರಿಸದೆ ಇರಬೇಕೆಂದು ಊಹಿಸಬಹುದು.[೧]

ಕೃಷ್ಣನ ಪಾತ್ರವು ಅಷ್ಟು ಪ್ರಮುಖವಲ್ಲದೇ ಇದ್ದ ಪಕ್ಷದಲ್ಲಿ ಬೇರೆ ಬೇರೆ ಪಾತ್ರಗಳಿಂದ ಅವನ ಹಿರಿಮೆ, ಗರಿಮೆ, ಸ್ತುತಿ, ಸಾಹಸ, ತಂತ್ರ ಇವುಗಳನ್ನು ಕವಿ ಚಿತ್ರಿಸುವ ಆವಶ್ಯಕತೆ ಏನಿತ್ತು? ಕವಿದೃಷ್ಟಿ ಹೀಗೆಂದು ಕಾಣುತ್ತದೆ. ಕೃಷ್ಣ,

೧ ಈ ಸೂಚನೆಗಾಗಿ ಪ್ರೊ. ತೀ. ನಂ. ಶ್ರೀ. ಅವರಿಗೆ ಋಣಿಯಾಗಿದ್ದೇನೆ.

ಭಾರತಕಥೆಗೇ ಸಂಚಾಲಕ ಶಕ್ತಿಯಾಗಿದ್ದಾನೆ. ಆ ಪಾತ್ರಕ್ಕೆ ಎಲ್ಲಿಯೂ ಕುಂದುಂಟಾಗದೆ ಇನ್ನೂ ಕಳೆಯೇರುವ ರೀತಿಯಲ್ಲಿ ಪಂಪ ಮಹಾಕವಿಯೂ ನಡಸಿಕೊಂಡು ಹೋಗಿದ್ದಾನೆ. ಆದರೂ ಏತಕ್ಕಾಗಿ ಕಡೆಯ ಆ ಒಂದು ಪದ್ಯದಲ್ಲಿ, ಎಂಟು ಜನ ಭಾರತವೀರರನ್ನು ಹೆಸರಿಸುವೆಡೆ, ಪಂಪ, ಕೃಷ್ಣನನ್ನು ಬಿಟ್ಟನೆಂಬುದೇ ವಿಮರ್ಶಕರ ಮನ ಸೆಳೆದಿರುವಂಥ ಸಂಗತಿ. ಕೃಷ್ಣನ ಹೆಸರನ್ನು ಹೇಳಿ ತನ್ನ ಕಥಾನಾಯಕನಾದ ಅರ್ಜುನನ ಹಿರಿಮೆಗೆ ಭಂಗತರಲು ಮನಸ್ಸೊಪ್ಪದೆ ಬಿಟ್ಟಿರಬಹುದು ಎನ್ನುವಂತಿಲ್ಲ. ಏಕೆಂದರೆ ಅಲ್ಲಿ ಅರ್ಜುನನ ಜೊತೆಗೆ ಇನ್ನೂ ಅನೇಕರನ್ನು ಹೆಸರಿಸಿದ್ದಾನೆ. ಕೇವಲ ಒಂದೆರಡು ಕಡೆಯಲ್ಲಿ ಕಾಣಿಸಿಕೊಳ್ಳುವ ಶಲ್ಯನ ಹೆಸರನ್ನು ಆ ಪದ್ಯಕ್ಕೆ ಸೇರಿಸಿದ ಕವಿಗೆ ಕೃಷ್ಣನನ್ನು ಸೇರಿಸುವುದೇನು ಕುಂದುಂಟುಮಾಡುತ್ತಿರಲಿಲ್ಲ. ಹೋಗಲಿ, ಭೀಷ್ಮ, ಕರ್ಣ, ದುರ್ಯೋಧನರ ಹೆಸರಿನಲ್ಲಿ ಶಾಸಿಸಿದ ಹಾಗೆ ಬೇರೆ ಪದ್ಯವನ್ನೇ ರಚಿಸಬಹುದಾಗಿತ್ತಲ್ಲ, ಎನ್ನುವಲ್ಲಿ ಅದರ ಆವಶ್ಯಕತೆಯಿಲ್ಲ. ಕವಿ ಹೀಗೆ ಪ್ರೌಢ್ಯ ಪದ್ಯವನ್ನು ಕೃಷ್ಣನ ಹೆಸರಿನಲ್ಲಿ ರಚಿಸಲಿಲ್ಲವಲ್ಲ ಎಂದಲ್ಲಿ, ಅದೇ ರೀತಿಯಲ್ಲಿ ಮಿಕ್ಕವರಿಗೂ ರಚಿಸಬೇಕಾಗಿತ್ತು ಎನ್ನಬೇಕಾಗುತ್ತದೆ. ಭಾರತ ವೀರರೆಲ್ಲರೂ ಶಸ್ತ್ರಸಂಪನ್ನರಾಗಿ ಯುದ್ಧ ಮಾಡುತ್ತಾರೆ. ಆ ರೀತಿಯಲ್ಲಿ ಹೋರಾಡಿ ಮಡಿದವರ ಹೆಸರಿನಲ್ಲಿ ಶಾಸನಪದ್ಯಗಳನ್ನು ರಚಿಸುತ್ತಿದ್ದುದು ಕವಿಕಾಲದ ಸಂಪ್ರದಾಯವಾಗಿರುವಂತೆ ಕಂಡುಬರುತ್ತದೆ. ಪಂಪ ಬದುಕಿ ಬಾಳಿದ್ದು ವೀರ ಯುಗದಲ್ಲಿ. ಭೀಷ್ಮ, ಕರ್ಣ, ದುರ್ಯೋಧನರಂತೆ ಕೃಷ್ಣ ಕಾದು ಮಡಿಯಲಿಲ್ಲ. ಆದ್ದರಿಂದ ಕೃಷ್ಣನಿಗೂ ಪ್ರತ್ಯೇಕವಾಗಿ ಶಾಸನ ಪದ್ಯದ ಆವಶ್ಯಕತೆ ಕಂಡುಬರುವುದಿಲ್ಲ. ಮೇಲಿನ ಈ ಸಂಗತಿಗಳಿಂದ ತಿಳಿದುಬರುವುದೇನೆಂದರೆ ಕೃಷ್ಣ ಆ ವ್ಯಕ್ತಿಗಳ ಸಾಲಿನಲ್ಲಿ ಸೇರತಕ್ಕವನಲ್ಲ ; ಅವನು ಪುರುಷೋತ್ತಮ, ಲೌಕಿಕ ವ್ಯಕ್ತಿಗಳಿಂದ ಅತೀತನಾದವನು ಎಂಬುದು. ಕಾವ್ಯವನ್ನು ಪಠನಮಾಡಿದವರ ಮನಸ್ಸಿನಲ್ಲಿ ಕೃಷ್ಣ ಆ ಒಂದು ಪದ್ಯದಲ್ಲಿ ಪಟ್ಟಿ ಹಾಕಿರುವ ಲೌಕಿಕ ವ್ಯಕ್ತಿಗಳೆಲ್ಲರಿಗೂ ಅಭಯ ನೀಡುವ ಅಂತಃಸ್ಫೂರ್ತಿ ವ್ಯಕ್ತಿಯಾಗಿಯೇ ನಿಂತಿರುವುದು ಕಂಡುಬರುತ್ತದೆ.

— ಬಿ. ಎ. ಶ್ರೀಕಂಠೇಗೌಡ

ಮೋಳಿಗೆಯ ಮಾರಯ್ಯ

(ಏಕಾಂಕ ನಾಟಕ)

[ತೆರೆ ಏಳುವುದು. ಮಾರಯ್ಯ ಕಟ್ಟಿಗೆ ಹೊರೆಯನ್ನು ಹೊತ್ತುಕೊಂಡು ಪ್ರವೇಶಿಸುವನು. ಅದನ್ನು ಮೂಲೆಯಲ್ಲಿ ಎಸೆಯುವನು. ಶಬ್ದವನ್ನು ಕೇಳಿ ಮಹಾದೇವಮ್ಮ ಹೊರಗೆ ಬರುವಳು.]

ಮಾರಯ್ಯ :—ಅಬ್ಬಾ ! ಏನು ಬಿಸಿಲೋ ಏನೋ !
ಕೆಂಡವನು ಹೊಯ್ದಂತೆ ಸುರಿಯುತಿದೆ.
(ಗಾಳಿ ಬೀಸಿಕೊಳ್ಳುವನು)

ಮಹಾದೇವಿ :—ತಾಳಿ ನೀರನ್ನಾದರೂ ತಂದು ಕೊಡುತ್ತೇನೆ ತಣ್ಣಗೆ ಮುಖವನ್ನು ತೊಳೆದುಕೊಳ್ಳಿ.

ಮಾರಯ್ಯ :—ಇರಲಿ ಬಿಡು ಮಹಾದೇವಿ.

(ಎನ್ನುತ್ತಿದ್ದರೂ ಮಹಾದೇವಮ್ಮ ಒಳಗೆ ಹೋಗುವಳು. ಮಾರಯ್ಯ ಮುಖದ ಬೆವರನ್ನು ಒರಸಿಕೊಳ್ಳುತ್ತಿರುವಷ್ಟರಲ್ಲಿ ಮಹಾದೇವಮ್ಮ ನೀರನ್ನು ತಂದು ಕೊಡುವಳು. ಮಾರಯ್ಯ ಪಕ್ಕಕ್ಕೆ ಹೋಗಿ ತೊಳೆದುಕೊಂಡು ಬರುವನು. ತಂಬಿಗೆಯನ್ನು ಆಕೆಯ ಕೈಗೆ ಕೊಡುವನು. ಮಹಾದೇವಮ್ಮ ಒಳಗೆ ಹೋಗಿ ತಂಬಿಗೆಯನ್ನು ಇಟ್ಟು ಬರುವಳು.)

ಮಹಾ :—ಈ ದಿನ ಇಷ್ಟೇಕೆ ಹೊತ್ತಾಯ್ತು? ಕಟ್ಟಿಗೆಯ ಹೊರೆಯನ್ನು ಹಾಗೆಯೇ ತಂದಿದ್ದೀರಿ. ಯಾರೂ ಕೊಳ್ಳಲಿಲ್ಲವೇ ?....

ಮಾರಯ್ಯ :—ಇಲ್ಲ ಮಹಾದೇವಿ,
ಈ ಕಲ್ಯಾಣ ಪಟ್ಟಣದ ಬೀದಿ ಬೀದಿಗಳಲ್ಲಿ,
ತಿರುಗಿದೆನು.........ಆದರೂ.........
ಏಕೊ ಏನೋ ಕಾಣೆ, ಇಂದು ಈ ಮೋಳಿಗೆಯ
ಕೊಳ್ಳಲಿಚ್ಛಿಸಲಿಲ್ಲ ಯಾರೊಬ್ಬರೂ....
ಜಂಗಮರ ದಾಸೋಹಕೆಂತು ಗೈಯ್ಯುವುದಿಂದು
ಎಂಬುದೇ ಯೋಚನೆಯು.

ಮಹಾ :—ಅದನು ಯೋಚಿಸಬೇಡಿ. ಪಡಿಪದಾರ್ಥಗಳೆಲ್ಲ ಸಿದ್ಧವಾಗಿಹವು. ಒಬ್ಬ ಜಂಗಮರೂ ಬಂದಿದ್ದರು. ಪ್ರಸಾದವೂ ಅರ್ಪಿತವಾಯ್ತು ಅವರಿಗೆ.

ಮಾರಯ್ಯ :—(ಸಂತೋಷದಿಂದ) ಜಂಗಮರು ಬಂದಿದ್ದರೇ ?
ಪ್ರಸಾದವರ್ಪಿತವಾಯ್ತೇ ?

ಮಹಾ :—ಹೌದು. ನೀವು ಬರುವವರೆಗೂ ಇರುವಂತೆ ಪ್ರಾರ್ಥಿಸಿದೆ. ಆತುರದ ಕಾರ್ಯವೆಂದು ಹೇಳಿದರು. ತಡೆಯಲಾರದೆ ಹೋದೆ....

ಮಾರಯ್ಯ :—ಇರಲಿ ಬಿಡು, ದಾಸೋಹದಿಂದ ಭಕ್ತ
ತೃಪ್ತನಾದರೆ ಸಾಕು, ಅದುವೆ ನಮಗೂ ತೃಪ್ತಿ.

[ಆ ವೇಳೆಗೆ ತೆರೆಯ ಒಳಗಿನಿಂದ "ಮಾರಯ್ಯನವರಿಗೆ ಶರಣು" ಎಂಬ ಧ್ವನಿ ಕೇಳಿಬರುವುದು. ಅದನ್ನು ಕೇಳಿ ಮಹಾದೇವಮ್ಮ ಒಳಗೆ ಹೋಗುವಳು. ಅಷ್ಟರಲ್ಲಿ ಶರಣ ಚಿಕ್ಕಯ್ಯ ಮತ್ತು ಒಬ್ಬ ಹೊಸಬ ಪ್ರವೇಶಿಸುವರು.]

ಚಿಕ್ಕಯ್ಯ :—ಶರಣಾರ್ಥಿ ಮಾರಯ್ಯನವರೇ !

ಮಾರಯ್ಯ :—ಶರಣು ಶರಣಾರ್ಥಿ ಚಿಕ್ಕಯ್ಯ.
(ಹೊಸಬರ ಕಡೆ ನೋಡುತ್ತಾ) ಇವರಾರು ?

ಚಿಕ್ಕಯ್ಯ :—ಇವರಾರೆಂದು ಕೇಳುತ್ತಿದ್ದೀರಾ ? ನೋಡಿ (ಅಷ್ಟರಲ್ಲಿ ಹೊಸಬ "ಪ್ರಭೂ ನನ್ನ ಗುರುತೂ ಮರೆತು ಹೋಯಿತೇ" ಎಂದು ನಮಸ್ಕರಿಸುವನು. ಮಾರಯ್ಯ ಆಶ್ಚರ್ಯದಿಂದ ಹಿಂದೆ ಸರಿಯುತ್ತಾ)

ಮಾರಯ್ಯ :—ಯಾರು ? ಕಾಶ್ಮೀರದ ಮಹಾಮಂತ್ರಿಗಳೇ ? ಇಲ್ಲಿ! ಈ ವೇಷದಲ್ಲಿ!

ಮಂತ್ರಿ :—ಹೌದು ಪ್ರಭೂ. ಕಾಶ್ಮೀರದ ಅರಸು ಮಹಾದೇವ ಭೂಪಾಲನ ನೆಚ್ಚಿನ ಸೇವಕನು ನಾನು. ಒಡೆಯನಿಗೆ ವಂದಿಸುತ್ತೇನೆ.
(ನಮಸ್ಕರಿಸುವನು)

ಮಾರಯ್ಯ :—(ಮುಂದೆ ಬಂದು ಮಂತ್ರಿಯನ್ನು ಮೇಲಕ್ಕೆತ್ತುತ್ತಾ)
ಏಳಿ....ಮಂತ್ರಿಗಳೇ....ಏಳಿ....
ಯಾವಾಗ ಬಂದಿರಿ ? ಆ ದೂರದ ನಾಡಿನಿಂದ
ಬಂದ ಕಾರಣವಾದರೂ ಏನು ?

ಮಂತ್ರಿ :—ನಮಗೆ ಇದು ದೂರದ ನಾಡಲ್ಲ ಪ್ರಭೂ. ನಮ್ಮ ಒಡೆಯನನ್ನು ಆಕರ್ಷಿಸಿದ ನಾಡು ಇದು. ತಾವು ಸಿಂಹಾಸನವನ್ನು ತ್ಯಜಿಸಿ ಇಲ್ಲಿಗೆ ಬಂದು ನೆಲಸಿದಾಗಲೇ ಇದು ನಮ್ಮೆಲ್ಲರ ನಾಡಾಗಿ ಪರಿಣಮಿಸಿತು.

ಮಾರಯ್ಯ :—ಹೌದು....ಈ ನಾಡು ಬಸವನುದಿಸಿದ ನಾಡು.
ಅಧ್ಯಾತ್ಮ ಸುಖ ಸಾಧನದ ಬೀಡು
ಈ ಕನ್ನಡದ ನಾಡು.

ಮಂತ್ರಿ :—ಈ ಬಸವನೇನು ಮಾಯೆಯನು ಮಾಡಿದನೊ ನಿಮಗೆ, ಅಂದು ಈ ಚಿಕ್ಕಯ್ಯನ ಗತಿಯೂ ಹಾಗೆಯೇ ಆಯಿತು. ಬಸವನ ವ್ಯಕ್ತಿತ್ವವನ್ನು ನೋಡಿಕೊಂಡು ಬರಲು ಕಳುಹಿಸಿದಿರಿ ಈ ಚಿಕ್ಕಯ್ಯನನ್ನು. ಆದರೆ ಆತ

ಮಾಂಡವ್ಯ ಪುರವನ್ನು ಬಿಟ್ಟವನು ಮತ್ತೆ ಹಿಂದಿರುಗಲೇ ಇಲ್ಲ. ಈ ವೇಷವನ್ನು ಧರಿಸಿದನು.

ಮಾರಯ್ಯ :—ವೇಷಮಾತ್ರವೇ ಅಲ್ಲ; ಆವೇಶದಿಂದಲೂ ಶರಣ ಈ ಚಿಕ್ಕಯ್ಯ. ಸಾಧನೆಯ ಮಾರ್ಗದಲ್ಲಿ ಬಹಳದೂರ ನಡೆದಿದ್ದಾನೆ ಈತ. ಬಸವೇಶ್ವರರ ಸಂಗವೇ ಅಂಥದು. ಎಲ್ಲವನ್ನೂ ಪರಿವರ್ತಿಸುವ ಮಾಂತ್ರಿಕ ಶಕ್ತಿ.

ಚಿಕ್ಕಯ್ಯ :—ಹೌದೌದು. ನಾನು ಮೊದಲು ನಿಮ್ಮ ಆಜ್ಞೆಯನ್ನು ಹೊತ್ತು, ಅವನ ಭಕ್ತಿಯನ್ನು ಪರೀಕ್ಷಿಸಲು ಬಂದಾಗ ಒಂದು ರೀತಿಯ ಉದಾಸೀನದ ಉಪೇಕ್ಷೆಯಿಂದಲೇ ಬಂದೆ. ಔಡಲ ಕಾಯಿಗಳನ್ನೇ ಲಿಂಗವೆಂದು ಕಟ್ಟಿಕೊಂಡು ಹೋಗಿದ್ದೆ. ಆದರೆ ಅವನನ್ನು ಕಂಡೊಡ ನೆಯೇ ಅಬ್ಬಾ! ಆ ಸಾತ್ವಿಕ ಮೂರ್ತಿಯ ದಿವ್ಯ ವ್ಯಕ್ತಿತ್ವದಲ್ಲಿ ಏನು ಶಕ್ತಿಯಿದೆಯೋ, ಆ ಔಡಲ ಕಾಯಿಗಳಲ್ಲಿಯೇ ದೈವತ್ವದ ಶಕ್ತಿ ಸಂಚಾರವಾದಂತಾಗಿ ಮೈರೋಮಾಂಚನಗೊಂಡಿತು.

ಮಾರಯ್ಯ :—ಕೇಳಿದಿರಾ ಮಂತ್ರಿಗಳೇ! ಅದೇ ಬಸವೇಶ್ವರನು ಮಾಡುವ ಮಾಯೆ. ಅದೊಂದು ಅಲೌಕಿಕ ಪವಾಡವೆಂದು ಸಂದೇಹಿಸಬೇಡಿ. ಅದು ತನ್ನ ಏಕ್ಯೈಕ ನಿಷ್ಠೆಯಿಂದ ಬೀರುವ ಅದ್ಭುತ ಪ್ರಭಾವ ಅಷ್ಟೆ. ಅದಕ್ಕೆ ಚಿಕ್ಕಣ್ಣನೂ ಒಳಗಾದ, ನಾನೂ ಒಳಗಾದೆ. ಅದರ ಮುಂದೆ ಆ ನನ್ನ ರಾಜ್ಯಪದವಿ, ಆ ಸಂಪತ್ತು, ತೃಣಕ್ಕಿಂತ ಕಡೆಯಾಗಿ ತೋರಿತು ಮಂತ್ರಿಗಳೇ.

ಮಂತ್ರಿ :—ಏನೋ ನನಗೆ ಒಂದೂ ಅರ್ಥವಾಗುವುದಿಲ್ಲ ಪ್ರಭೂ. ನೀವು ಅರಸೊತ್ತಿಗೆಯ ಮೇಲಿದ್ದಾಗಲೂ ನಿಮ್ಮ ಭಕ್ತಿಯಲ್ಲಿ ಏನು ಕೊರತೆಯಾಗಿತ್ತು. ಇಂದು ನೀವು ಈ ಕಟ್ಟಿಗೆಯನ್ನು ಮಾರಿ ಮಾಡುತ್ತಿರುವ ಈ ದಾಸೋಹಕ್ಕಿಂತ ನೂರು ಪಾಲು ಮಿಗಿಲಾಗಿರಲಿಲ್ಲವೇ ಅಂದಿನ ನಿಮ್ಮ ದಾಸೋಹ. ಏಕೈಕ ನಿಷ್ಠ, ಪರಮಶಿವ ಭಕ್ತ, ಭಾಳಲೋಚನ, ಜಂಗಮದಾಸೋಹ ಪ್ರಾಣಿ,—ಎಂಬ ಕೀರ್ತಿ ನಿಮ್ಮದಾಗಿರಲಿಲ್ಲವೇ.

ಮಾರಯ್ಯ :—ನಿಜ ಆ ಕೀರ್ತಿ ನನ್ನದಾಗಿತ್ತು. ಅದರಿಂದಲೇ ನಾನು ರಾಜ್ಯವನ್ನು ತ್ಯಜಿಸಬೇಕಾಯ್ತು ಮಂತ್ರಿಗಳೇ. ಅಂದಿನ ನನ್ನ ದಾಸೋಹ ಕೀರ್ತಿ ಕಾಮನೆಯಿಂದ ಪ್ರೇರಿತವಾದದ್ದು. ನಿಜ, ನನ್ನ ಅರಮನೆಯಲ್ಲಿ ಸಾವಿರಾರು ಜನರಿಗೆ ಆತಿಥ್ಯ ನಡೆಯುತ್ತಿತ್ತು. ಆದರೆ ನನಗೆ ಬಂದ ಫಲವೇನು? ಯಾರದೋ ಹಣ, ಯಾರಿಗೋ ಹಂಚಿದೆ. ಬಸವೇಶ್ವರನ ದಾಸೋಹದ ರೀತಿಯನ್ನು ಕೇಳಿ ನನ್ನ ಕಣ್ಣು

ತೆರೆಯಿತು. ದೇಹದಿಂದ ಬೆವರನ್ನು ಹರಿಸಿ ದುಡಿದು ತಂದ ನಿಸ್ವಾರ್ಥ ಕಾಯಕದಿಂದ ಬಂದುದೇ ಸತ್ಪಾತ್ರಕ್ಕೆ ಅರ್ಪಿತವೆಂಬುದನ್ನು ಬಸವಣ್ಣನಿಂದ ಕಂಡುಕೊಂಡೆ. ಇಂದಿನ ಈ ನನ್ನ ಕಾಯಕ ಕೀರ್ತಿಗಾಗಿ ಅಲ್ಲ, ಕೀರ್ತಿಯನ್ನು ದೂರವಿಡುವುದಕ್ಕಾಗಿ. "ನಾನು" ಎಂಬುದನ್ನು ಅಳಿಯುವುದಕ್ಕಾಗಿ.

ಮಂತ್ರಿ :—ಅದನ್ನು ನೀವು ಅಲ್ಲಿಯೇ ಇದ್ದು ಸಾಧಿಸುವುದಕ್ಕೆ ಆಗುತ್ತಿರಲಿಲ್ಲವೇ ಪ್ರಭು. ಅದಕ್ಕೆ ರಾಜ್ಯವನ್ನು ತ್ಯಜಿಸಬೇಕಾದ ಅಗತ್ಯವೇನಿತ್ತು ! ಹಿಂದೆ ರಾಜರ್ಷಿಗಳನ್ನು ನಮ್ಮ ನಾಡು ಕಂಡಿಲ್ಲವೇ? ಜನಕಮಹಾರಾಜ ಮೊದಲಾದವರು ರಾಜರಾಗಿದ್ದುಕೊಂಡೇ ಸಾಧನೆಯನ್ನು ಮಾಡ ಲಿಲ್ಲವೇ ? ಈಗ ನಾನು ಬಂದಿರುವುದಾದರೂ ಅದಕ್ಕಾಗಿಯೇ ಪ್ರಭು. ತಮ್ಮ ಪಾದ ಮೂಲದಲ್ಲಿ ಪ್ರಾರ್ಥಿಸುತ್ತೇನೆ. ತಮ್ಮಂತಹ ರಾಜರನ್ನು ಕಳೆದುಕೊಂಡು ಸವಾಲಕ್ಷನಾಡು ಪರದೇಶಿಯಂತಾಗಿದೆ. ತಾವು ಹಿಂದಿರುಗಿ ತಮ್ಮ ನಿಸ್ವಾರ್ಥಕಾಯಕವನ್ನು ರಾಜರಾಗಿದ್ದುಕೊಂಡೇ....

ಮಾರಯ್ಯ :—(ಮಧ್ಯದಲ್ಲಿಯೇ ತಡೆದು) ನಿಲ್ಲಿಸಿರಿ ಆ ಮಾತ.
ನಿಮ್ಮ ಪ್ರಭು ಇಲ್ಲಿಲ್ಲ. (ಗಂಭೀರವಾಗಿ)
ನಾನೀಗ ಮಹದೇವ ಭೂಪಾಲನೂ ಅಲ್ಲ.
ದಿನ ದಿನವು ಕಾಡಿನಲಿ ಕಟ್ಟಿಗೆಯ ಕಡಿದು
ಮೋಳಿಗೆಯ ಕಟ್ಟಿ ಮಾರುತಿಹ ಮಾರಯ್ಯ-
ನುದಿಸಿದನು ಮಹದೇವ ಭೂಪಾಲನಳಿದು.
' ರಾಜಋಷಿ ' ಎಂದಿರಿ, ಜನಕನನು ಹೇಳಿದಿರಿ,
ನಿಜ....ಆ ಮಾರ್ಗವೂ....ಇರಬಹುದು.
ಆದರಿದ ನೋಡಿರಿ....ಆ ಬುದ್ಧ ರಾಜ್ಯವನು
ಎಡಗಾಲಿನಲಿ ಒದೆದು, ಕೈಹಿಡಿದ ಸತಿಯನೂ
ಕೈಬಿಟ್ಟು ಓಡಿದನೇಕೆ ಅರ್ಧರಾತ್ರಿಯಲಿ ?
ಸರಿ....ತಪ್ಪುಗಳ ನಿರ್ಣಯವ ಕೊಡುವಿರಾ ?
ತರವಲ್ಲ. ಸಾಧನೆಗೆ ಮಾರ್ಗಗಳು ನೂರಾರು.
ಭೂಪಾಲ ಮಹಾದೇವಗಿಂತಲೂ, ಮೋಳಿಗೆಯ
ಮಾರಯ್ಯನೇ ಸಾಧನೆಗೆ ಹತ್ತಿರನು—ಎಂದು
ತೋರಿತು ನನಗೆ, ಇದು ನನ್ನ ಮತ ಅಷ್ಟೆ.

ಮಂತ್ರಿ :—ಹಾಗಾದರೆ ನಾನು ಬಂದ ಕಾರ್ಯ ವ್ಯರ್ಥವಾಯಿತೇ ಪ್ರಭೂ.

ಮಾರಯ್ಯ :—....ವ್ಯರ್ಥವೇಕಾಗುವುದು ?

ಕನ್ನಡದ ಈ ಭೂಮಿ ಪುಣ್ಯ ತೀರ್ಥಕ್ಷೇತ್ರ.
ಈ ನಾಡಿಗೈತಂದ ಯಾತ್ರಿಕರು ನೀವು.
ಇದರ ಸಂದೇಶವನು ಕೊಂಡೊಯ್ದು ಘೋಷಿಸಿರಿ,
ಆ ನಿಮ್ಮ ನಾಡಿನಲಿ ಕಾಶ್ಮೀರದಲ್ಲಿ.
ಆ ಮಾತು ಹಾಗಿರಲಿ (ಒಳಗೆ ನೋಡುತ್ತಾ) ಮಹಾದೇವಿ,
ಬಾ ಇಲ್ಲಿ, ನೋಡು ಬಾ ಬಂದಿರುವರಾರೆಂದು !

(ಮಹಾದೇವಿ ಬರುವಳು)

ಮಂತ್ರಿ :—ಮಹಾರಾಣಿಯವರಿಗೆ ನಮಸ್ಕಾರ. (ಭಕ್ತಿಯಿಂದ ಬಾಗುವನು)

ಮಹಾ :—ಮಂತ್ರಿಗಳೇ, ಹಳೆಯ ನಿದ್ದೆಯಿಂದ ನೀವಿನ್ನೂ ಎಚ್ಚತ್ತಿಲ್ಲವೆ! ಯಾರು ಮಹಾರಾಣಿ ?

ಮಂತ್ರಿ :—ಅಲ್ಲಲ್ಲ....ತಪ್ಪಿದೆನು....ರಾಜಮಾತೆಗೆ ವಂದಿಸುವೆನು.

ಮಹಾ :—ಹೌದು. ನನ್ನ ಮಗು ರಾಜನಾಗಿರುವವರೆಗೂ ನಾನು ರಾಜಮಾತೆಯೇ. ಲಿಂಗಾರತಿ ಕ್ಷೇಮವೇ ? ಧರ್ಮದಿಂದ ರಾಜ್ಯವನ್ನು ಪಾಲಿಸುತ್ತಿದ್ದಾನೆಯೇ ? ರಾಜ್ಯವೆಲ್ಲಾ ಕ್ಷೇಮವಷ್ಟೇ ?

ಮಂತ್ರಿ :—ಈ ತಂದೆ ತಾಯಿಗಳಿಗೆ ತಕ್ಕ ಪುತ್ರರು ನಮ್ಮ ಚಿಕ್ಕರಾಜರು. ಆದರೆ.... ಅವರಿಗೆ ತಮ್ಮನ್ನು ಸ್ಮರಿಸಿಕೊಂಡು ದುಃಖಿಸುವುದೊಂದೇ ಚಿಂತೆ. ಇಡೀ ರಾಜ್ಯವೇ ಆ ಚಿಂತೆಯಲ್ಲಿ ಮುಳುಗಿದೆ.

ಮಹಾ :—ಇನ್ನು ಆ ಚಿಂತೆಯನ್ನು ನೀವು ಬಿಡಬೇಕು. ನಿಮ್ಮ ರಾಜ ರಾಣಿಯರು ಹಳೆಯ ಜನ್ಮವನ್ನು ನೀಗಿ ಪುನರ್ಜಾತರಾಗಿದ್ದಾರೆ.

ಮಾರಯ್ಯ :—ಅದಿರಲಿ ಮಹಾದೇವಿ, ಬಂದ ಅತಿಥಿಗೆ ಬರಿಯ ಮಾತಿನ ಸತ್ಕಾರವೇ ಅಥವಾ........

ಮಂತ್ರಿ :—(ಮಧ್ಯದಲ್ಲಿಯೇ,) ಇಲ್ಲ....ಇಲ್ಲ....ನನ್ನದೆಲ್ಲಾ ಮುಗಿದಿದೆ ಪ್ರಭೂ. ಈ ಚಿಕ್ಕಯ್ಯ ಬಿಡಬೇಕಲ್ಲ. ಅದೃಷ್ಟವಶಾತ್ ನನಗೆ ಈತ ಸಿಕ್ಕಿದ. ಇಲ್ಲವಾದರೆ ಕಲ್ಯಾಣನಗರದಲ್ಲಿ ತಮ್ಮ ಈ ನಿವಾಸವನ್ನು ಹುಡುಕಲು ಕಷ್ಟವಾಗುತ್ತಿದ್ದಿತೋ ಏನೋ.

ಚಿಕ್ಕಯ್ಯ :—ಏನೂ ಇಲ್ಲ ಮಂತ್ರಿಗಳೇ. ಕಲ್ಯಾಣದಲ್ಲಿ ಯಾರನ್ನು ಕೇಳಿದರೂ ಇಲ್ಲಿಗೆ ಕರೆದು ತರುತ್ತಿದ್ದರು. ಮಾರಯ್ಯನವರ ಈ ಚಿಕ್ಕ ಗುಡಿಸಲು ಕಲ್ಯಾಣಕ್ಕೆಲ್ಲಾ ಬೆಳಕನ್ನೀಯುವ ಜ್ಯೋತಿಯಾಗಿದೆ. ನೀವಿನ್ನೂ ಅರಿಯಿರಿ ಮಂತ್ರಿಗಳೇ, ನಮ್ಮ ಕಾಶ್ಮೀರದ ಒಂದು ತುಂಡುರಾಜ್ಯಕ್ಕೆ ಅಧಿಪತಿಗಳಾಗಿದ್ದ ಮಹಾದೇವ ಭೂಪಾಲರು ಇಂದು ಆಧ್ಯಾತ್ಮ

ಚಕ್ರವರ್ತಿಗಳಾಗಿದ್ದಾರೆ. ಅವರ ಸಾಧನೆ ಮುಗಿಲು ಮುಟ್ಟಿದೆ. ಬಸವಣ್ಣನವರಂತೂ ತಲೆಯಮೇಲೆ ಹೊತ್ತು ಮೆರೆಸುತ್ತಾರೆ ಮಾರಯ್ಯನವರನ್ನು.

ಮಾರಯ್ಯ :—ನಿಲ್ಲಿಸು ಚಿಕ್ಕಯ್ಯ ಇದೇನಿದು ! ಈ ಪರಸ್ಪರ ಹೊಗಳಿಕೆಯ ಮಾತುಗಳು ಶರಣಮಾರ್ಗಕ್ಕೆ ಸಲ್ಲವು. ಅದಿರಲಿ....ಮಂತ್ರಿಗಳೇ ಈ ಚಿಕ್ಕಯ್ಯ ನಿಮಗೆಲ್ಲಿ ಸಿಕ್ಕಿದ?

ಚಿಕ್ಕಯ್ಯ :—ಆ ಕಥೆಯನ್ನು ನಾನೇ ಹೇಳುತ್ತೇನೆ ಕೇಳಿ. ಎಂದಿನಂತೆ ನಾನು ಅಣ್ಣನವರ ಮಹಾಮನೆಯ ಕರಣಿಕ ಶಾಲೆಯಲ್ಲಿ ನನ್ನ ಓಲೆಯ ವೃತ್ತಿಯನ್ನು ಕೈಕೊಂಡು ಕುಳಿತಿದ್ದೆ. ಅಕಸ್ಮಾತ್ ತಲೆಯೆತ್ತಿ ನೋಡಿದಾಗ ಮಹಾದ್ವಾರವನ್ನು ಪ್ರವೇಶಿಸುತ್ತಿದ್ದ ಇವರು ಕಣ್ಣಿಗೆ ಬಿದ್ದರು.

ಮಂತ್ರಿ :—ಬಸವೇಶ್ವರರ ಮಹಾಮನೆಯಲ್ಲಿಯೇ ನೀವು ಸಿಕ್ಕಬಹುದೆಂದು ಊಹಿಸಿ ಅಲ್ಲಿಗೇ ಹೋಗಿದ್ದೆ ಪ್ರಭೂ.

ಚಿಕ್ಕಣ್ಣ :—ತತ್‌ಕ್ಷಣವೇ ನನ್ನ ಜ್ಞಾಪಕಕ್ಕೆ ಬರಲಿಲ್ಲ ಇವರು ಯಾರೆಂಬುದು. ಆದರೂ ಪರಿಚಿತ ಮುಖವೆಂಬುದು ಸ್ಪಷ್ಟವಾಗಿತ್ತು. ಹಾಗಾದರೆ ಯಾರು ಎಂದು ಯೋಚಿಸುತ್ತಿರುವಷ್ಟರಲ್ಲಿ ಸಮೀಪಕ್ಕೆ ಬಂದಿದ್ದರು. ನಮ್ಮ ಮಂತ್ರಿಗಳೇ ಇರಬಹುದೇ ಎಂಬ ಸಂಶಯ ಬಂದಿದ್ದರೂ, ಇವರ ಬರವನ್ನು ಕನಸು ಮನಸಿನಲ್ಲಿಯೂ ನಿರೀಕ್ಷಿಸದೇ ಇದ್ದುದರಿಂದ ಯಾವುದನ್ನೂ ನಿಶ್ಚಯಿಸಲಾರದವನಾಗಿದ್ದೆ. ಅಷ್ಟರಲ್ಲಿ ಕರಣ ಶಾಲೆಯ ತೀರಾ ಸಮೀಪಕ್ಕೆ ಬಂದ ಅವರೇ ನನ್ನನ್ನು ಗುರುತಿಸಿ ನನ್ನ ಸಂಶಯ ವನ್ನು ಪರಿಹರಿಸಿದರು.

ಮಂತ್ರಿ :—ಈ ಶರಣವೇಷದಲ್ಲಿದ್ದ ಚಿಕ್ಕಯ್ಯನನ್ನು ಗುರುತಿಸುವುದು ನನಗೂ ಸ್ವಲ್ಪ ಕಷ್ಟವೇ ಆಯಿತು. ಆದರೆ ಚಿಕ್ಕಯ್ಯನಲ್ಲಿ ಈ ಮಾರ್ಪಾಡು ಆಗಿದೆಯೆಂಬುದನ್ನು ನಾನು ಮೊದಲೇ ತಿಳಿದಿದ್ದುದರಿಂದ ಗುರುತಿಸು ವುದು ಸಾಧ್ಯವಾಯಿತು. ಸರಿ....ಮುಂದೆ ನನ್ನ ಕೆಲಸವೆಲ್ಲಾ ಸುಲಭ ವಾಯಿತು. ಬಸವೇಶ್ವರರ ಮಹಾಮನೆಯಲ್ಲಿಯೇ ಆದರೋಪ ಚಾರಗಳೆಲ್ಲಾ ನಡೆದುವು.

ಚಿಕ್ಕಯ್ಯ :—ನಿಮ್ಮನ್ನು ಕಾಣಲು ಒಂದೇ ಸಮನೆ ಚಡಪಡಿಸತೊಡಗಿದರು ಮಂತ್ರಿಗಳು; ಕರೆದುಕೊಂಡು ಬಂದೆ.

ಮಾರಯ್ಯ :—ಅಣ್ಣನವರ ದರ್ಶನವಾಯಿತೆ !

ಚಿಕ್ಕಯ್ಯ :—ಇಲ್ಲ....ಅವರು ಆಗಲೇ ಅರಮನೆಯ ಓಲಗ ಶಾಲೆಗೆ ಹೋಗಿದ್ದರು.

ಮಾರಯ್ಯ :—ಸಂಜೆ ಅನುಭವಮಂಟಪದಲ್ಲಿ ಅವರ ದರ್ಶನವನ್ನು ಪಡೆಯಬಹುದು.

ಚಿಕ್ಕಯ್ಯ :—ನಾನೂ ಅದನ್ನೇ ಹೇಳಿದೆ, ಅಷ್ಟರಲ್ಲಿ ಕಲ್ಯಾಣ ಪಟ್ಟಣವನ್ನೆಲ್ಲಾ ಒಂದುಸಾರಿ ತೋರಿಸಿಕೊಂಡು ಬಂದುಬಿಡುತ್ತೇನೆ ಮಂತ್ರಿಗಳಿಗೆ.

ಮಾರಯ್ಯ :—ಆಗಲಿ, ಬಸವರಾಜನ ದರ್ಶನಕ್ಕೆ ಮೊದಲು ಅವನ ಮಹತ್ತರವಾದ ಕಾರ್ಯಗಳ ಪರಿಚಯವಾಗಲಿ. ಹೋಗಿ ಬನ್ನಿ. ಸಂಜೆ ಅನುಭವ ಮಂಟಪದಲ್ಲಿ ತಮ್ಮನ್ನು ಕಾಣುತ್ತೇನೆ ಮಂತ್ರಿಗಳೇ.

ಮಂತ್ರಿ :—ಆಗಲಿ ಮಹಾಪ್ರಭೂ. (ಚಿಕ್ಕಯ್ಯ, ಮಂತ್ರಿ ಹೋಗುವರು)

ಮಾರಯ್ಯ :—(ಸ್ವಲ್ಪಕಾಲ ಅವರನ್ನೇ ನೋಡುತ್ತ ಮೆಲ್ಲಗೆ ನಕ್ಕು)
ಮಹಾಪ್ರಭೂ........ಮಹಾಪ್ರಭೂ........
ಈ ಮಂತ್ರಿಯ ನಿಷ್ಠೆಯನು ನೋಡಿದೆಯಾ ಮಹಾದೇವಿ.

ಮಹಾ :—ಪಾಪ! ಆ ದೂರದೇಶದಿಂದ ಇಲ್ಲಿಯವರೆಗೂ ನಮ್ಮನ್ನು ಹುಡುಕಿಕೊಂಡು ಬಂದಿದ್ದಾರೆ. ಅದಕ್ಕೆ ತಕ್ಕಂತೆ ಸತ್ಕರಿಸಿರಿ. ಮತ್ತೊಮ್ಮೆ ಆ ರಾಜ್ಯ ನಮ್ಮ ಚಿಂತೆಯಿಂದ ಬಳಲದಂತೆ ಬೋಧಿಸಿ ಕಳುಹಿಸಿರಿ.

ಮಾರಯ್ಯ :—ಹೌದು, ಅದನ್ನೇ ಯೋಚಿಸುತ್ತಲಿದ್ದೇನೆ.
ಅನುಭವಮಂಟಪದ ಚರ್ಚೆ, ಈ ಸಂಜೆ,
ಇದಕಾಗಿಯೇ ಮೀಸಲಾಗುವುದು....
ಪ್ರಭುದೇವ, ಬಸವರೇ ಬಿತ್ತರಿಸಿ ಪೇಳಲಿ;
ಕನ್ನಡದ ಸಂದೇಶ, ಕಾಶ್ಮೀರಕೈದಲಿ.
ಬರುವೆಯಲ್ಲವೆ ಮಂಟಪಕೆ ನೀನಿಂದು?

ಮಹಾ :—ತಮ್ಮಾಜ್ಞೆ........ಇನ್ನು ಬನ್ನಿ ಸ್ವಾಮಿ; ಜಂಗಮರು ಆಗಮಿಸುವ ವೇಳೆ ಮುಗಿಯಿತು. ಪ್ರಸಾದವನ್ನು ಸ್ವೀಕರಿಸಿರಿ.

[ಎಂದು ಒಳಗೆ ಹೋಗುವಳು. ಮಾರಯ್ಯ ತನ್ನ ಮೇಲು ಹೊದಿಕೆಯನ್ನು ತೆಗೆದು ಒಂದು ಪಕ್ಕಕ್ಕೆ ಹಾಕಲು ಹೋಗುತ್ತಿರುವಷ್ಟರಲ್ಲಿ, ಅಲ್ಲಿದ್ದ ಮಣೆಯ ಪಕ್ಕದಲ್ಲಿ ಎರಡು ಸಣ್ಣ ಚೀಲಗಳನ್ನು ಗಮನಿಸುವನು. ಬಾಗಿ ಅವುಗಳನ್ನು ಪರೀಕ್ಷಿಸಿ ನೋಡುವನು. ಥಟಕ್ಕನೆ ಬೆಚ್ಚಿ ಹಿಂದೆ ಸರಿದು ಹೆದರಿದವನಂತೆ—]

ಮಾರಯ್ಯ :—ಮಹಾದೇವಿ, ಮಹಾದೇವೀSS
[ಉತ್ಕಂಠಿತನಾಗಿ ಕರೆಯುವನು. ಮಹಾದೇವಿ ಧ್ವನಿಯಲ್ಲಿನ ಕಾತರತೆಯನ್ನು ಗುರುತಿಸಿ ಬೇಗ ಹೊರಗೆ ಬರುವಳು]

ಮಹಾ :—ಏಕೆ, ಏಕಿಷ್ಟು ಆತುರಗೊಂಡು ಕರೆಯುತ್ತಿರುವಿರಿ?

(ಮಾರಯ್ಯ ದೂರ ಹೋಗಿ ಒಂದು ಪಕ್ಕಕ್ಕೆ ನಿಂತು ಚೀಲಗಳ ಕಡೆ ಕೈ ಮಾಡಿ)

ಮಾರಯ್ಯ :—ಏನದು ನೋಡು, ಯಾರು ತಂದರು ಅವುಗಳನ್ನು ?

ಮಹಾ :—(ನೋಡಿ, ಆಶ್ಚರ್ಯದಿಂದ) ಚೀಲಗಳು, ಎಲ್ಲಿಂದ ಬಂದುವಿವು? ಯಾರು ತಂದರು ಇವುಗಳನ್ನು ?

ಮಾರಯ್ಯ :—ಅದನ್ನೇ ನಾನು ಕೇಳುತ್ತಿರುವುದು.

(ಮಹಾದೇವಿ ಹತ್ತಿರ ಹೋಗಿ ಅವುಗಳನ್ನು ಕೈಗೆತ್ತಿಕೊಂಡು ನೋಡುವಳು. ಇನ್ನೂ ಆಶ್ಚರ್ಯದಿಂದ—)

ಮಹಾ :—ಏನಿದು, ಹೊನ್ನಿನ ಜಾಳಿಗೆಗಳು. (ಚೀಲದ ಬಾಯಿ ತೆರೆದು ನೋಡುತ್ತಾ) ಹೌದು ಎರಡು ಚೀಲಗಳ ತುಂಬ ಹೊನ್ನು ತುಂಬಿವೆ!

ಮಾರಯ್ಯ :—(ಅಸಹನೆಯಿಂದ) ಎಸೆ ಅವುಗಳನ್ನು ಕೆಳಕ್ಕೆ. ಅವುಗಳನ್ನು ಇಲ್ಲಿ ತಂದವರು ಯಾರು ?

ಮಹಾ :—ಅದೇ ಆಶ್ಚರ್ಯ (ಸ್ವಲ್ಪ ಯೋಚಿಸಿ, ಆ ಚೀಲಗಳನ್ನು ಕೆಳಗಿಡುತ್ತಾ) ಓ, ತಿಳಿಯಿತು, ಓರ್ವ ಜಂಗಮರು ಬಂದು ಪ್ರಸಾದವನ್ನು ಸ್ವೀಕರಿಸಿ ಹೋದರು ಎಂದು ಹೇಳಿದೆನಲ್ಲವೆ. ಅವರು ಇಲ್ಲಿ ಕುಳಿತು ಕ್ಷಣಕಾಲ ವಿಶ್ರಮಿಸಿಕೊಂಡರು. ಅವರೇ ಮರೆತು ಹೋಗಿರಬೇಕು.

(ಮಾರಯ್ಯ ಆಲೋಚನಾಮಗ್ನನಾಗಿ ಒಮ್ಮೆ ಇತ್ತಿಂದತ್ತ ನಡೆದು ಗಂಭೀರ ನಾಗಿ)

ಮಾರಯ್ಯ :—ಇಲ್ಲ....ಮರೆತು ಹೋಗಿರುವುದಲ್ಲ....
ತಿಳಿಯಿತು....ತಿಳಿಯಿತು. ಯಾರೆಂದು ತಿಳಿಯಿತು.
ಎರಡು ಜಾಳಿಗೆ ಹೊನ್ನುಗಳ ತಂದು ಇಲ್ಲಿಟ್ಟು
ಮರೆತು ಹೋಗುವ ಶ್ರೀಮಂತ ಜಂಗಮನು
ಯಾರೆಂದು ತಿಳಿಯಿತು.

ಮಹಾ :—(ಕುತೂಹಲದಿಂದ) ಯಾರವರು ?

ಮಾರಯ್ಯ :—ಇನ್ನಾರು, ಬಸವರಾಜನದೇ ಈ ಕಾರ್ಯ.

ಮಹಾ :—ಆಂ !!

ಮಾರಯ್ಯ :—ಹೌದು, ಭಕ್ತಿ ಭಂಡಾರಿ ಬಸವಣ್ಣನೇ
ಎಂದೆನಗೆ ತೋರುತಿದೆ ಬಂದಿದ್ದ ಆ ಭಕ್ತ.

ಮಹಾ :—(ಆಲೋಚಿಸುತ್ತಾ), ಹೌದು....ಹೌದು....ಈಗ ನನಗೆ ತೋರುತ್ತಿದೆ. ವೃದ್ಧ ವೇಷದಿಂದ ಬಂದ ಆ ಜಂಗಮನ ವರ್ತನೆಗೆ ಕಾರಣ. ಮುಖವನ್ನು

ತೋರಿಸಲೂ ಅಳುಕುತ್ತಿದ್ದ ಆತನ ಸಂಕೋಚ, ಮತ್ತು ಆತುರದ ನಡೆ-ಇವುಗಳ ಅರ್ಥ ಈಗ ಸ್ಪಷ್ಟವಾಗುತ್ತಿದೆ. ಬಂದವರು ಬಸವಣ್ಣನವರೇ ಸಂದೇಹವೇ ಇಲ್ಲ. ವಿಶ್ರಮಿಸಿಕೊಳ್ಳಲು ಅಲ್ಲಿ ಕುಳಿತುಕೊಳ್ಳುವ ನೆವದಿಂದ ನನಗೆ ಕಾಣದ ಹಾಗೆ ಅವುಗಳನ್ನು ಅಲ್ಲಿ ಇಟ್ಟು ಹೋಗಿದ್ದಾರೆಂದು ತೋರುತ್ತದೆ.

ಮಾರಯ್ಯ :—.........ತೋರುವುದೇನು ? ಆತನ ಭಕ್ತಿಯೇ ಅಂಥದು.
ಬಸವನೀ ಔದಾರ್ಯ ಅವನ ಭಕ್ತಿಯ ಹಿರಿಮೆ.
ಆದರದು ನಮ್ಮ ಮಾರ್ಗದಲಿ ಕಂಟಕವು.
ಬಡವ ನಾನೆಂದು ಈ ಸಂಪತ್ತನೀವನೇಂ
ಬಸವಣ್ಣ ?....ನಾಂ ಬಡವನಾದೊಡೇಂ,
ಎನ್ನೊಡೆಯ ನಿಃಕಳಂಕ ಮಲ್ಲಿಕಾರ್ಜುನಾ ! ,
ನೀಂ ಬಡವನೇನಯ್ಯ !....ಏಕೈಕ ನಿಷ್ಠೆಯಿಂ
ಕಾಯಕವ ನಡೆಸುವವನಂಗಳದಿ ಲಕ್ಷ್ಮಿ ತಾ,
ತಲೆಬಾಗಿ ನಿಂದಿರುವಳೆಂಬುದನು ಅರಿಯನೇಂ
ಬಸವೇಶ ?

ಮಹಾ :—ತಾವೆ ಬೋಧಿಸಿದ ಆ ಮಂತ್ರಮಂ, ತಾವೇಕೆ
ಮರೆತರೋ ಬಸವಣ್ಣನವರು....ಅಥವಾ....
ಇದು ನಮ್ಮ ಪರಿಕಿಸುವ ಪರಿಯೋ ?

ಮಾರಯ್ಯ :—ಪರಿಕಿಸಲಿ,....ಪರಿಕಿಸಲಿ....
ಕಾಯಕದ ಅಂಬಲಿಯೆ ಪರಮಾನ್ನವೆಂಬುದನು
ಇಲ್ಲಿ ಈ ಗುಡಿಸಿಲಲಿ ಕಂಡರಿದ ಭಕ್ತಗಣ,
ಉತ್ತರವ ಹೇಳುವುದು ಅದಕೆ. ಋತಶುದ್ಧ—
ಕಾಯಕವೆ ಸಾಧಕನ ಮಿಗಿಲಾದ ಸಂಪತ್ತು.
ಕಾಯಕದ ಈ ನನ್ನ ಕಟ್ಟಿಗೆಯ ತುಂಡುಗಳು
ಇವೆ ನಮಗೆ ಕನಕ ದಂಡಗಳು.
ಈ ಹೊನ್ನು ಮಣ್ಣಿಗೆಣೆ.
ಕಿತ್ತೆಸೆ ಆ ಮುಳ್ಳುಗಳನತ್ತಕಡೆ, ಮಹಾದೇವೀ.

(ಆ ವೇಳೆಗೆ ಚಂದಯ್ಯ, ಅಪ್ಪಣ್ಣ ಪ್ರವೇಶಿಸುವರು)

ಚಂದಯ್ಯ :—ಏಕಿಷ್ಟು ಆವೇಶ ಮಾರಯ್ಯನವರೇ ?

ಮಾರಯ್ಯ :—(ಎಚ್ಚತ್ತವನಂತೆ ನೋಡುತ್ತಾ) ಯಾರು ? ಚಂದಯ್ಯ !
ಓ ! ಅಪ್ಪಣ್ಣನೂ ಕೂಡಾ....

ಬಸವಣ್ಣನರಮನೆಯ ದಾಸೋಹ ಕಾರ್ಯನಿರ್ವಾಹಕರು
ಈ ವೇಳೆಯಲ್ಲಿ ಇಲ್ಲಿಗೆ ಬರಲು ಕಾರಣ ?
(ಈ ವೇಳೆಗೆ ಮಹಾದೇವಿ ಮೆಲ್ಲಗೆ ಒಳಗೆ ಸರಿಯುವಳು)

ಅಪ್ಪಣ್ಣ :—ಇನ್ನೇನೂ ಇಲ್ಲ, ಬಸವಣ್ಣ ಈಗ ತಾನೇ ಮಹಾಮನೆಗೆ ಹಿಂದಿರುಗಿದರು. ತಮ್ಮನ್ನು ಹುಡುಕಿಕೊಂಡು ಯಾರೋ ಬಂದಿದ್ದುದನ್ನೂ, ಚಿಕ್ಕಣ್ಣ ಅವರನ್ನು ಇಲ್ಲಿಗೆ ಕರೆದು ತಂದುದನ್ನೂ ತಿಳಿದು, ನೋಡಿಕೊಂಡು ಬರುವಂತೆ ನಮ್ಮನ್ನು ಕಳುಹಿಸಿದರು.

ಮಾರಯ್ಯ :—ಓಹೋ ! ಬಸವೇಶ್ವರ....ಮಹಾಮನೆಗೆ....
ಈಗ ಹಿಂದಿರುಗಿದನೋ ! ವೃದ್ಧ ಜಂಗಮ ವೇಷ–
ಧಾರಿಯಾಗಿದ್ದನಲ್ಲವೇ ?....ಬಸವಣ್ಣ....
ವೇಷವನು ಧರಿಸಲೂ ಬಲ್ಲನೆಂಬುದ ನಾನು
ಅರಿತಿರಲಿಲ್ಲ....ಇಂದು ತಿಳಿಯಿತದು.

ಅಪ್ಪಣ್ಣ :—ಇದೇನು ಮಾರಯ್ಯನವರೇ....ಬಸವೇಶ್ವರ, ವೃದ್ಧ ಜಂಗಮವೇಷ, ಏನಿದು ಅರ್ಥವೇ ಆಗುತ್ತಿಲ್ಲವಲ್ಲ.

ಮಾರಯ್ಯ :—ಅದೇ ಬಸವನ ಲೀಲೆಯ ರಹಸ್ಯ.
ಅತ್ತ ನೋಡಿ ಏನವು? (ಜಾಳಿಗೆಗಳನ್ನು ತೋರಿಸುವನು) ಚಂದಯ್ಯ ಅವುಗಳನ್ನು ತಾ ಇಲ್ಲಿ. (ಚಂದಯ್ಯ ಹೋಗಿ ತರುವನು) ನೋಡ ಒಳಗೇನಿದೆ ? (ನೋಡುವನು ಚಂದಯ್ಯ)

ಚಂದಯ್ಯ :—ಹೊನ್ನು ! ಎರಡು ಜಾಳಿಗೆ ತುಂಬ ಹೊನ್ನು.

ಅಪ್ಪಣ್ಣ :—ಇದೇನು ಮಾರಯ್ಯನವರೇ ?

ಮಾರಯ್ಯ :—ಇದೇ ? ಇದೇ ಬಸವನ ಪ್ರಭಾವ.

ಅಪ್ಪಣ್ಣ :—ಅಂದರೆ ?

ಮಾರಯ್ಯ :—ಅಂದರೆ....ಕಾಯಕವ ನೆರವೇರಿಸಲು ನಾನು
ನಡೆದ ವೇಳೆಯಲಿ, ಈ ಬಸವಣ್ಣ....
ವೃದ್ಧ ಜಂಗಮನ ರೂಪದಿಂ ಬಂದು ಕರುಣಿಸುವ
ನೆವದಿಂದ ಹೂಡಿರುವ ಕಪಟವ್ಯಾಪಾರವಿದು.
(ಚಂದಯ್ಯ ಅವುಗಳನ್ನು ಮಣೆಯ ಮೇಲೆ ಇಡುವನು)

ಅಪ್ಪಣ್ಣ :—ಆಹಾ ! ಧನ್ಯ ಬಸವೇಶಾ, ಧನ್ಯ.
ನಿನ್ನ ಭಕ್ತಿಯ ಮಹಿಮೆ ಅದ್ಭುತ !
ಕರುಣ ಸಾಗರನು ನೀನು.

ಮಾರಯ್ಯ :—ಹೌದು ಅವನ ಕರುಣೆಯ ಸಾಗರದ ಸುಳಿಯಲ್ಲಿ
ಸಿಕ್ಕು ಮುಳುಗುತಿಹ ಬಡಪಾಯಿಗಳು ನಾವು !
ಅಲ್ಲವೇ ಅಪ್ಪಣ್ಣ ನೀನು ಹೇಳುವುದು ?

ಅಪ್ಪಣ್ಣ :—ಇಂತಹ ನಿಷ್ಠುರದ ಮಾತೇಕೆ ಮಾರಯ್ಯನವರೇ ? ಭಕ್ತಿಭಂಡಾರಿ ಬಸವಣ್ಣ ಇದರಿಂದ ನೊಂದುಕೊಳ್ಳುವನು.

ಮಾರಯ್ಯ :—ನಿಷ್ಠುರದ ನುಡಿಯಲ್ಲ, ಅಪ್ಪಣ್ಣ....
ಬಸವನ ಭಕ್ತಿ ಧನ್ಯವಾಯ್ತು ನಿಜ....
ಅವನು ಕರುಣಾಸಾಗರನು ಹೌದು.
ಆದರಾ....ಕರುಣೆಯೇ ನಮ್ಮನಿರಿದರೆ
ಆ ನೋವನೆಂತು ಸೈರಿಸಬಹುದು ?

ಅಪ್ಪಣ್ಣ :—ಇದರಲ್ಲಿ ಇರಿಯುವುದು ಏನಿದೆ ? ಬಸವಣ್ಣನವರನ್ನು ತಪ್ಪಾಗಿ ತಿಳಿಯಬೇಡಿ. ನಿಮ್ಮ ದಾಸೋಹಕ್ಕೆ ಮನದಂದು ಹಾಗೆ ಮಾಡಿರಬಹುದು.

ಮಾರಯ್ಯ :—ನಾನು ಬಡವನೆಂದು ಮರುಗಿ ಅಲ್ಲವೆ ?
ಈ ತುಂಬು ಜಾಳಿಗೆಯ ಹೊನ್ನುಗಳ ಸಂಪತ್ತೇ
ಸಾಧನೆಗೆ ಮೂಲವೆಂದು ಬಗೆದಿರ್ದೊಡೆ
ಅದಕೆನಗೆ ಕೊರತೆ ಇರಲಿಲ್ಲ ಅಪ್ಪಣ್ಣ.
ಒಂದು ರಾಜ್ಯದ ಒಡೆತನವೇ ನನ್ನದಾಗಿತ್ತು.
ಈಗಲೂ ಕಾದಿಹುದು ನಾ ಮನಸು ಮಾಡಿದರೆ.

ಚಂದಯ್ಯ :—ನಿಜ ಮಾರಯ್ಯನವರೇ, ನಿಮ್ಮ ತ್ಯಾಗದ ಮಹಿಮೆಯನ್ನು ಬಸವರಸರು ಅರಿಯರೆಂದಿರುವಿರಾ ?

ಮಾರಯ್ಯ :—ಅರಿತರೂ ಹೀಗೆ ಮಾಡುವರಲ್ಲವೆ ?

ಚಂದಯ್ಯ :—ಏನೋ ನಿಮ್ಮ ಕಾಯಕದ ನಿಷ್ಠೆಯನು ಕಂಡು ಮೆಚ್ಚಿ ಕೊಟ್ಟಿರಬಹುದು, ಅದಕಾಗಿ ಇಷ್ಟೊಂದು, ಕೋಪವೇ ಮಾರಯ್ಯನವರೇ.

ಮಾರಯ್ಯ :—ಚಂದಯ್ಯ, ನೀನು ಈ ಮಾತನ್ನು ಹೇಳುವೆಯಾ ?
ಅಂದು........ಅಲ್ಲಮಪ್ರಭುದೇವ ವಿವರಿಸಿದ
ಕಾಯಕದ ವಿವರಣೆಯ ಕೇಳಿ....
“ ಕಾರೆಯ ಸೊಪ್ಪಾದರೂ ಕಾಯಕದಿಂದ ಬಂದುದೇ
ಲಿಂಗಕ್ಕೆ ಅರ್ಪಿತ ”—ಎಂದು
ಹಾಡಿದವನು ನೀನಲ್ಲವೇ....ಆ ಮಾತು
ಅಂದಿಗೇ ಮುಗಿಯಿತೇ....ಅಥವಾ....

ಮೆಚ್ಚಿ ಮನೆಕರಗಿ ಕೊಡುವ ಭಿಕ್ಷೆಯನು
ಸ್ವೀಕರಿಸುವುದೆ ನನ್ನ ಕಾಯಕವೆಂದು
ಭಾವಿಸಿದೆಯೋ ?

ಚಂದಯ್ಯ :—ಕ್ಷಮಿಸಬೇಕು ಮಾರಯ್ಯನವರೇ....
ಕಾಯಕದ ನಿಷ್ಠೆಯೇ ಮೈವೆತ್ತ ಮೂರ್ತಿ ನೀವು.
ನಿಮ್ಮೆದುರಿನಲಿ ನಮ್ಮ ವಾದವೇ ?....ಆದರೂ....
ಈ ಕಾಣಿಕೆಯ ನೀವು ಸ್ವೀಕರಿಸಬೇಕು.
ಬಸವಣ್ಣನವರನ್ನು ಕ್ಷಮಿಸಬೇಕೆಂದು
ಬೇಡುವೆನು ನಾನು.

ಮಾರಯ್ಯ :—ಅಂತಹ ಮಾತೇಕೆ ಚಂದಯ್ಯ....
ಆ ಮಹಾನುಭಾವನನ್ನು ಕ್ಷಮಿಸುವೊಡೆ ನಾನಾರು
ಆದರೂ ಇದ ನಾನು ಸ್ವೀಕರಿಸಲಾರೆ.
ಕ್ಷಮಿಸಿರಿ....ತಪ್ಪಾಗಿ ತಿಳಿಯದಿರಿ....ಇದರ
ಹಿಂದಿರುವ ಅರ್ಥವನು ನೀವರಿಯಬಲ್ಲಿರಿ.
ಕ್ರಿಯೆ ಶುದ್ಧವಾದರೆ ಭಾವಶುದ್ಧ,
ಭಾವ ಶುದ್ಧವಾದರೆ ಆತ್ಮ ಶುದ್ಧ,
ಆತ್ಮ ಶುದ್ಧವಾದರೆ ಅರಿವು ಕರಿಗೊಂಡುನಿಂದ
ನಿಜದ ನಿಲವದುವೆ ಸಾಧ್ಯ ; ಅದರಿಂದ
ಕ್ರಿಯಾ ಶುದ್ಧಿಯೇ ಎಲ್ಲ ಸಾಧನೆಯ ಮೂಲ.
ಅದಕಾಗಿಯೇ ಈ ನಿಷ್ಠೆ, ಈ ನಿಯಮ,
ವ್ಯರ್ಥ ಅಭಿಮಾನ ದಂಭ ದರ್ಪದಿನಲ್ತು.

ಚಂದಯ್ಯ :—ನಿಜ ಮಾರಯ್ಯನವರೇ....ಕೇಳಿದೆಯ ಅಪ್ಪಣ್ಣಾ.
ಕೈದುವಿಡಿದವರೆಲ್ಲ ಇರಿಯ ಬಲ್ಲರೆ ?
ಸಾಧನೆಯ ಮಾಡಿದವರೆಲ್ಲರೂ ಕಾದಾಡ ಬಲ್ಲರೇ ?
ಸಾಧನೆಯ ಮಾಡಿದರೆ ಮಾರಯ್ಯನವರಂತೆ
ಮಾರಾರಿಯೊಡಗೂಡಿ ನಿಜದ ನಿಲವಿನ ಸಹಜ
ಸಂಪತ್ತನಳವಡಿಸಿಕೊಳಬೇಕು.

ಮಾರಯ್ಯ :—ನಿಲ್ಲಿಸು ಚಂದಯ್ಯ....ಇದೇಕೆ
ಈ ಹೊಗಳಿಕೆಯ ವ್ಯರ್ಥವ್ಯಾಮೋಹ ನಿನಗೆ ?
ಅಪ್ಪಣ್ಣಾ........ಚಂದಯ್ಯ........
ನನಗಾಗಿ ನೀವೊಂದು ಕೆಲಸವನು ಮಾಡುವಿರಾ ?

ಅಪ್ಪಣ್ಣ :—ಏನದು ಮಾರಯ್ಯನವರೇ ?

ಮಾರಯ್ಯ :—ಈ ಹೊನ್ನ ಜಾಳಿಗೆಗಳನ್ನು ಕೊಂಡೊಯ್ದು ಬಸವರಾಜನಿಗೆ ಹಿಂದಿರುಗಿಸುವಿರಾ ?

ಅಪ್ಪಣ್ಣ :—ಹಾಗೆ ಮಾಡಬೇಡಿ ಮಾರಯ್ಯನವರೇ ನೀವದನ್ನು ತೆಗೆದುಕೊಳ್ಳಿ. ಭಕ್ತರಿಗೆ ದಾನಮಾಡಿ, ದಾಸೋಹಕ್ಕೆ ವಿನಿಯೋಗಿಸಿ. ಇದನ್ನು ಹಾಗೆಯೇ ತೆಗೆದುಕೊಂಡು ಹೋದರೆ ಬಸವರಾಜ ನೊಂದುಕೊಳ್ಳ ಬಹುದು.

ಮಾರಯ್ಯ :—ಬಸವರಾಜ ನೊಂದುಕೊಳ್ಳುವನೇ....
ಆತನಿತ್ತಿರುವ ಈ ಭಿಕ್ಷೆಯಿಂದೆನ್ನ ಮನ
ನೊಂದಿರುವ ಪರಿಯ ನೀವರಿಯುವಿರಾ !
ಭಕ್ತರಿಗೆ ದಾನ ಮಾಡೆಂದಿರಾ ? ದಾಸೋಹವೆಂದಿರಾ ?
ಇದನು ದಾನ ಮಾಡುವ ಹಕ್ಕು ನನಗಿಲ್ಲ.
ಯಾರದೋ ಹೊನ್ನು ಇದು, ಯಾರಿಗೊ ಹಂಚಿದರೆ
ಅದು ದಾನವಾಗುವುದೇ ದಾಸೋಹವಾಗುವುದೇ !
ಸತ್ಯ ಶುದ್ಧಾತ್ಮ ಸಂಕಲ್ಪದಿಂ ದುಡಿದುಡಿದು
ತಂದ ದುಗ್ಗಾಣಿಯೇ ಹೊನ್ನಿಗಿಂ ಮಿಗಿಲು.........
ಏಕೈಕ ನಿಷ್ಠೆಯಿಂ ಕೈಕೊಂಡ ಕಾಯಕದಿ
ದೇಹವನು ತೇದು ತಂದಂಬಲಿಯೆ ರಾಜಾನ್ನ.
ನಿಜವಾದ ಸಂಪತ್ತು ಜಡವಸ್ತುಗಳಲಿಲ್ಲ
ಮಾಡುತಿಹ ನೀಡುತಿಹ ಮನವನವಲಂಬಿಸಿದೆ.
ಬಸವನೊಡವೆ ಇದು, ಬಸವನಿಗೆ ಸೇರಲಿ.
ಇಲ್ಲದೊಡೆ ಅದೋ (ನಿರ್ಧಾರದಿಂದ) ಆ ಬೀದಿಯ
ಕಸದ ಗುಡ್ಡೆಯ ಮೇಲೆ ಬೀಳುವುವು........
(ಮತ್ತೆ ಶಾಂತನಾಗಿ) ಚಂದಯ್ಯ....ನನಗಾಗಿಯಾದರೂ....
ಇವುಗಳನು ಕೊಂಡೊಯ್ದು ಬಸವನಿಗೆ ಕೊಡಲಾರೆಯಾ ?

ಚಂದಯ್ಯ :—ಆಗಲಿ ಮಾರಯ್ಯನವರೇ.

ಮಾರಯ್ಯ :—ಹಾಗಾದರೆ ಅವುಗಳನ್ನು ತೆಗೆದುಕೋ
(ಚಂದಯ್ಯ ಚೀಲಗಳನ್ನು ತೆಗೆದುಕೊಳ್ಳುವನು)

ಚಂದಯ್ಯ :—ಹಾಗಾದರೆ ಬರೋಣವೆ.

ಅಪ್ಪಣ್ಣ :—ಬಂದ ಕೆಲಸವನ್ನೇ ಮರೆತೆವಲ್ಲ.

ಚಂದಯ್ಯ :—ಹೌದು....ಯಾರು ಮಾರಯ್ಯನವರೇ ನಿಮ್ಮನ್ನು ಹುಡುಕಿಕೊಂಡು ಬಂದದ್ದು ?

ಮಾರಯ್ಯ :—ಓ! ಅದಕಾಗಿ ಬಂದಿದ್ದಿರಲ್ಲವೇ ನೀವು?
"ಈ ಸಂಜೆ ಅನುಭಾವಮಂಟಪದ ನೆರಳಿನಲಿ
ಎಲ್ಲವೂ ವೇದ್ಯವಾಗುವುದು"—ಎಂದು ನಿವೇದಿಸಿರಿ
ಬಸವರಾಜನಿಗೆ

ಅಪ್ಪಣ್ಣ :—ಹಾಗೇ ಆಗಲಿ.

(ಹೋಗುವರು)

[ಮಾರಯ್ಯ ಆಲೋಚನಾಮಗ್ನನಾಗಿ ಅತ್ತಿಂದಿತ್ತ ತಿರುಗಾಡುವನು. ಮಹಾದೇವಿ ಹೊರಗೆ ಬರುವಳು.]

ಮಾರಯ್ಯ :—ನೋಡಿದೆಯ ಮಹಾದೇವಿ! ಬಸವರಾಜನಿಗು
ಕನಿಕರವಹುದು ನಮ್ಮ ಬಡತನವ ಕಂಡು.

ಮಹಾ :—ಹೋಗಲಿ ಬಿಡಿ. ಈಗ ಅವುಗಳನ್ನು ಹಿಂದಕ್ಕೆ ಕಳುಹಿಸಿ ಬಿಟ್ಟಿರಲ್ಲ ಇನ್ನೇಕೆ ಆ ಯೋಚನೆ.

ಮಾರಯ್ಯ :—ಅದು ಸರಿ....ಆದರೆ....ಈ ನಮ್ಮ
ಕಾಯಕದ ನಿಷ್ಠೆಯಲಿ, ಬಸವರಸ, ಬಡತನದ
ಸಂಕಟವ ಕಾಣುವುದೇ. ಅನುಕಂಪೆದೋರುವುದೇ.
ಭೋಗ ಜೀವನವ ಮುರಿದೊಗೆದು ಅಪ್ಪಿರುವ
ತ್ಯಾಗವಿದು ಎಂಬುದನು ಆತನೂ ಮರೆಯುವುದೇ.

ಮಹಾ :—ಬಸವಣ್ಣನವರು ಅದನ್ನು ಮರೆಯಬಾರದಾಗಿತ್ತು. ಆದರೂ....ಈ ಅನುಕಂಪೆ ನಮ್ಮ ಸಾಧನೆಯ ಮಾರ್ಗದಲ್ಲಿ ಒಂದು ಎಚ್ಚರಿಕೆಯ ನುಡಿಯಾಗಿ ಪರಿಣಮಿಸಿತಲ್ಲವೆ?

ಮಾರಯ್ಯ :—ಇರಬಹುದು....ಆದರೂ....
ಎಲ್ಲಿಯವರೆಗೆ ಈ ಎಚ್ಚರಿಕೆಯ ನುಡಿ?
ಸಾಯುವವರೆಗೂ ಸಾಧನೆಯ ಮಾಡಿದರೆ
ಕಾದುವುದು ಎಂದು? ಜಯಿಸುವುದು ಎಂದು?
ಈ ಬಂಧನದಿ ಬಿಡುಗಡೆಯ ಪಡೆಯುವುದು ಎಂದು?
(ಮೇಲೆ ನೋಡುತ್ತಾ) ನಿಃಕಳಂಕ ಮಲ್ಲಿಕಾರ್ಜುನ;
ಸಕಲ ರೂಪವನುಳಿದು ನಿಃಕಲ ಪರತತ್ವ
ರೂಪಾಗಿ ಮೈದೋರು ನೀನೆನಗೆ. ನಿರ್ಮಾಯ
ನಿಶ್ಚಿಂತ ನಿರ್ಲೇಪ ನಿತ್ಯ ಸದ್ರೂಪಮಂ ತೋರು.
ಭಕ್ತರನು ಪರಿಕಿಸುವೆನೆಂಬುದನು ಬಿಟ್ಟು,

ಸರ್ವರಾಗ ವಿರಾಗನಾಗಿ,
ಸರ್ವಗುಣ ಸಂಪನ್ನನಾಗಿ,
ಜ್ಞಾನಸಿಂಧು ಸಂಪೂರ್ಣನಾಗಿ,
ನಿನ್ನರಿವಿನ ಗುಡಿಯ ಬಾಗಿಲ ತೆರೆದೊಮ್ಮೆ ತೋರಾ.

[ಮಾರಯ್ಯನ ಭಾವನಾವೇಗವನ್ನು ಕಂಡು ಅಚ್ಚರಿಗೊಂಡ ಮಹಾದೇವಿ ಮುಂದೆ ಬರುತ್ತಾ]

ಮಹಾ :—ಇದೇನಿದು ? ಏತಕೀ ಆವೇಗ
ಏನಿದೀ ಬೇಡಿಕೆ ?

ಮಾರಯ್ಯ :—ಹೌದು ಮಹಾದೇವೀ,
ನನ್ನ ಮನವೇಕೋ ಬೇಸರಿಸಿ ಹೋಗಿಹುದು,
ಅಖಿಳ ಸುಖ ಭೋಗಗಳ ತ್ಯಜಿಸಿ ಬಂದುದಕೆ
ಪಡೆದುದಾದರು ಏನು ? ಕಟ್ಟಿಗೆಯ ಹೊರುವ
ಈ ಕಾಯಕದ ಕೃತ್ಯ ಇನ್ನೆಷ್ಟು ದಿನ ?....
ಅಲ್ಲಿಗೆ....ಇಲ್ಲಿಗೆ....ಎಂದೆಳೆವ ಹಂಬಲವ
ಬಿಸುಟು, ಆ ಮಲ್ಲಿಕಾರ್ಜುನನಲ್ಲಿ, ಆ ಪರಮ
ಪರಶಿವನಲ್ಲಿ, ಕೂಟಸ್ಥನಾಗುವೆನು ಎಂದು ?

ಮಹಾ :—ಇಂದೇಕೆ ನಿಮಗೆ ಈ ಮರವೆ ?
ಶಿವನೊಳಗೆ ಕೂಟಸ್ಥನಾದಹೆನೆಂಬ ಈ
ಹಲುಬಾಟವೇಕೆ ? ಇಂದು ನೀಂ ಕೂಟಸ್ಥ—
ನಾಗುವೊಡೆ ಮುನ್ನ ನೀನೇನಾಗಿ ಬಳಲಿದ್ದೆ ?
ಇಂದು ನೀಂ ಸಮರಸವ ಬಯಸುವೊಡೆ
ಮುನ್ನ ನೀನಾರೆಂದು ಬಗೆದಿದ್ದೆ ?
ಕೈ ಹಿಡಿದ ಸತಿಯೆಂದು....,ಮೇಣ್....
ಸಾಧನೆಯ ಸಹಯಾತ್ರಿಯೆಂದು ನಾ ಪೇಳುವೆನು
ಹೊರಗೆ ಕೂಡಿಹೆನೆಂಬುವದು ನಿಮ್ಮ ಅರಿವಿಂಗೆ ಹಾನಿ.
ಸಕಲ ದೇಶ ಕೋಶ ಭಂಡಾರಗಳನುಳಿದೆ—
ನೆಂಬಾ ತ್ಯಾಗವನು ಮತ್ತೆ ಮತ್ತೇಕೆ ನೆನೆಯುವಿರಿ ?

ಮಾರಯ್ಯ :—....ಏಕೆಂಬೆಯೇನು ?....
ಆ ಪರಮ ಸುಖ ದೊರೆಯದಿರೆ....ಈ ಎಲ್ಲ
ತ್ಯಾಗಕ್ಕೆ ಬೆಲೆಯೇನು !—ಎಂದದನು ನೆನೆಯುವೆನು.

ಮಹಾ :—ಇಲ್ಲಿಯೇ ತಪ್ಪುವಿರಿ....
“ ನಾನದನು ಬಿಟ್ಟಿಹೆನು–ನೀನಿದನು ಕೊಡು ಎನಗೆ ”
ಎನ್ನುವೊಡೆ ಭಕ್ತಿಯೇಂ ಕೈ ಕೂಲಿಯೇ ?
ಕೊಳು ಕೊಡೆಯ ವ್ಯವಹಾರವೇ ? ಭೋಗ ಜೀವನದಂತೆ,
‘ ಎಲ್ಲ ಸುಖಗಳನುಳಿದ ವೈರಾಗ್ಯ ಮೂರ್ತಿಯೇ
ನಾನೆಂ ’ಬ ಮಮಕಾರವೂ ಒಂದು ಮಾಯೆಯೇ....
ಭೋಗ ಮುಖದಂತೆ ತ್ಯಾಗ ಮುಖವೂ ಮಾಯೆ....
ನೂರು ಹೆಡೆಗಳ ಸರ್ಪ ಈ ಮಾಯೆ. ಇದ ಮೆಟ್ಟಿ
ಮೇಲೇರಬಲ್ಲೊಡೆ ನೀವೆಂದ ಪರಮಸುಖ
ನಿಮ್ಮೆದೆಯಿಂದಲೇ ಚಿಮ್ಮಿ ಹೊಮ್ಮುವುದು.
ನೀವೆ ಶಿವನಲ್ಲದೊಡೆ, ಶಿವನೆಲ್ಲಿಹನು ಬೇರೆ ?

ಮಾರಯ್ಯ :—ಇರಬಹುದು....ಮಹಾದೇವಿ....
ನಾನೆ ಶಿವನಿರಬಹುದು....ಆದರೂ ಇಂದೇಕೊ
ಎನ್ನಲಿಹ ಶಿವತತ್ವ ತಲ್ಲಣಂಗೊಂಡಿಹುದು.
ಅದಕೆ ಕಾರಣವಪ್ಪ ಈ ದೇಹ ಬಂಧನವ
ಕಿತ್ತೆಸೆದು, ನಿರಂಗ ನಿಶ್ಚಿಂತ ನಿಜರೂಪ—
ವನು ಪಡೆಯಲಾಸಿಪುದು....

ಮಹಾ :—ಕೈಯ್ಯಲ್ಲಿ ಜ್ಯೋತಿಯನು ಹಿಡಿದು....
ಕತ್ತಲೆ.... ಕತ್ತಲೆ....ಎನಲೇಕೆ ?
ಪರುಷರಸ ಕೈಲಿದ್ದು ಕೂಲಿ ಮಾಡಲು ಬೇಕೆ ?
ಬಚ್ಚಬಯಲ ಬೆಳಗನೊಳಕೊಂಡ
ಸ್ವಯಂ ಜ್ಯೋತಿ ಸ್ವರೂಪ ನೀನಾಗಿ....
ಮತ್ತೆ ದೀಪವನರಸ ಬೇಕೆ ?
ಕರಸ್ಥಲದಲಿಪ್ಪ ಮಾಣಿಕ್ಯವನು ಮರೆತು
ಒಡೆದ ಗಾಜನು ಹುಡುಕುತಲಿವಂತಾಯ್ತು.
ಅಂಗ–ನಿರಂಗದ ನಿಲವ ತಿಳಿದು ನೋಡುವೊಡೆ
ಅಂಗವಡಗುವುದಕ್ಕೆ ಬೇರೆ ದಂದುಗ ಬೇಕೆ ?
ನೀ ನಿಂದಲ್ಲಿಯೇ ನಿಜ ಕೂಟ,
ಅಂತರಂಗದ ಅರಿವೇ ನಿರಂಗ ;
ಇದೇ ಲಿಂಗಾಂಗ ಸಾಮರಸ್ಯ.

ಮಾರಯ್ಯ :—ನಿಜ ಮಹಾದೇವಿ, ಆದರೆ ...
ನನ್ನ ಈ ಎಲ್ಲ ತ್ಯಾಗ, ಈ ನಿಲವ-
ನೇಕೆನಗೆ ತಂದು ಕೊಡಲಿಲ್ಲ ?

ಮಹಾ :—ಇದು ಕೈಕೂಲಿಯಂದದಲಿ ಬೇರೆ ಬರಬಲ್ಲುದೇ !
ಅಂಗಡಿಯ ವ್ಯಾಪಾರ ವಸ್ತುವೇ ಮುಕ್ತಿ ?
ಈ ಒಡಲಳಿದೊಡೇನಹುದು ?
ಸ್ತುತಿ ನಿಂದೆಗಳ ಒಡಲಳಿಯಬೇಕು.
ನಾನೆಂಬ ನೀನೆಂಬ ಭಿನ್ನ ಭಾವನೆಯೆಂಬ
ಒಡಲಳಿಯಬೇಕು.
ಅಳಿದೆನೆಂಬುದು ಅಲ್ಲಿ ಉಳಿಯದಿರಬೇಕು.
ಆಗ ಈ ದೇಹವಿದ್ದರೂ ಇಲ್ಲದಾಗುವುದು.
" ಹಾವಿನ ಬಾಯ ಹಲ್ಲಕಿತ್ತು ಹಾವನಾಡಿಸುವಂತೆ "
ಆ ಲೀಲೆ, ; ಅದೆ ಈ ಜೀವನದ ಲೀಲೆ.
ಕರ್ಪುರದ ಗಿರಿಯನುರಿಕೊಂಡಂತೆ
ಬಯಲಿನಲಿ ಬಯಲು ಬೆರೆದಂತೆ,
ಆಡಬಾರದ, ನೋಡಬಾರದ, ಕೇಳಬಾರದ
ನಿಲವು ಆ ಮುಕ್ತಿ.
ಕ್ಷಮಿಸಿರಿ....ನಿಮ್ಮ ವಚನಗಳು ಇವು
ನಿಮ್ಮಡಿಗೇ ಒಪ್ಪಿಸುತ್ತಿಹೆನು.
ಶಕ್ತಿಯ ಮಾತುಗಳೆಂದು ಧಿಕ್ಕರಿಸಬೇಡಿ.

ಮಾರಯ್ಯ :—(ಶಾಂತ ಗಂಭೀರ ಸ್ವರದಿಂದ) ಇಲ್ಲ ಮಹಾದೇವಿ....
ಧಿಕ್ಕರಿಸಿ ನುಡಿವ ಮಾತುಗಳಲ್ಲವಿವು....
ಹೌದು....ಈ ಒಡಲಳಿದೊಡೇನಹುದು
ಸ್ತುತಿ ನಿಂದೆಗಳ ಒಡಲಳಿಯಬೇಕು.
ನಾನೆಂಬ ನೀನೆಂಬ ಭಿನ್ನ ಭಾವನೆಯೆಂಬ
ಒಡಲಳಿಯಬೇಕು. ಹೌದು....
ಅಳಿದೆನೆಂಬುದೂ ಅಲ್ಲಿ ಉಳಿಯದಿರಬೇಕು.
ಎನ್ನಂತರಂಗವನು ಮುಸುಕಿರ್ದ ತೆರೆಯೊಂದು
ಸರಿದು ಹೋದಂತಾಯ್ತು ಈ ನಿನ್ನ ಮಾತುಗಳ
ಪ್ರಭೆಯಿಂದ....

ಮಹಾ :—(ವಿನಯದಿಂದ ತಲೆಬಾಗಿ)....ಅಂತೆನ್ನದಿರಿ
ಕಾಯವಿದ್ದಂತೆ ತಲೆ ನಡೆದುದುಂಟೇ ?
ಬಾಯಿದ್ದಂತೆ ನಾಸಿಕ ಉಂಡುದುಂಟೇ ?
ಕಣ್ಣಿದ್ದಂತೆ ಕರ್ಣ ನೋಡಿದುದು ಉಂಟೇ ?

ನಿಮ್ಮ ಸೇವೆಯ ಗೈವ ತೊತ್ತಿನ ಭಾವವೇ
ನಾನಾಗಿ ನಿಂತವಳು ಅಷ್ಟೆ.

ಮಾರಯ್ಯ :—ಅಷ್ಟೇ ಅಲ್ಲ ಮಹಾದೇವಿ ; ನೀನೆನ್ನ–
ನುದ್ಧರಿಪ ಮೋಕ್ಷದ ಮೂರ್ತಿಯೂ ಹೌದು.
ತಲೆಯಿಲ್ಲದೆ ಕಾಲು ನಡೆಯಬಲ್ಲುದೆ ಹೇಳು.
ಕುಕ್ಷಿಯಿಲ್ಲದೆ ಬಾಯಿ ಉಣಬಲ್ಲುದೇ.
ಆತ್ಮನಿಲ್ಲದೆಯೆ ಚಲಿಸುವುದೆ ಈ ಜಡದೇಹ?
ನಿನ್ನ ಭಕ್ತಿಯ ಬೆಳೆಯೇ ಎನಗೆ ಸತ್ಯದ ಹಾದಿ.

ಮಹಾ :—(ತಲೆಬಾಗಿ ನಮಸ್ಕರಿಸಿ) ನಿಮ್ಮ ಭಕ್ತಿ ಸೂತ್ರದಿಂದ
ಎನ್ನ ಸ್ತ್ರೀ ಜಾತಿ ನಿಮ್ಮ ಶ್ರೀ ಪಾದದಲ್ಲಿ
ಅಡಗಿತ್ತು. ಎನಗೆ ಭಿನ್ನದ ಮಾತೆಂಬುದೇ ಇಲ್ಲ.
ಎನ್ನಯ್ಯ ಪ್ರಿಯ ನಿಃಕಳಂಕ ಮಲ್ಲಿಕಾರ್ಜುನ
ನೆಂಬವರು ನೀವೇ....

ಮಾರಯ್ಯ :—' ಸತ್ವಗೆಟ್ಟಲ್ಲಿ ಕಾಷ್ಠವನೂರಿ ನಡೆಯ ಬೇಕು. '
ನನ್ನ ಸಾಧನೆಯೆಲ್ಲ ಮುಗ್ಗುರಿಸಿ ಬೀಳುತಿರೆ
ಊರೆಗೋಲಾಗಿ ನೀ ನಿಂತವಳು.
ನಿಶ್ಚಯವ ನುಡಿದೆನ್ನ ನೆಚ್ಚರಿಸಿದವಳು.
ಎನ್ನ ಭಕ್ತಿಗೆ ನೀನೆ ಶಕ್ತಿ,
ಎನ್ನ ಸತ್ಯಕ್ಕೆ ನೀನೆ ಸತಿ,
ಎನ್ನ ಸುಖದುಃಖವೇ ನಿನ್ನ ಸುಖದುಃಖ
ಈ ನಮ್ಮ ದಾಂಪತ್ಯ ಜೀವನದ ದಾರಿಯಲಿ
ಭಿನ್ನ ಭಾವನೆಯಿಲ್ಲ, ಅನ್ಯವಿಲ್ಲ.
ಈ ಪ್ರೇಮ ಈ ಲೋಕಕೇ ಅಲ್ಲ,
ಲೋಕಲೋಕ ವಿಹಾರ ಸಹಯಾತ್ರಿ.

[ಈ ವೇಳೆಗೆ ಬಸವೇಶ್ವರ ಪ್ರವೇಶಿಸುವನು. ಅವನ ಹಿಂದಿನಿಂದ ಅಪ್ಪಣ್ಣ ಚಂದಯ್ಯರೂ ಬರುವರು. ಚಂದಯ್ಯ ಹೊನ್ನಿನ ಜಾಳಿಗೆಗಳನ್ನು ಹಿಡಿದೇ ಇರುವನು.]

ಬಸವ :—ಧನ್ಯ ಮಾರಯ್ಯ, ಧನ್ಯ ತಾಯಿ ಮಹಾದೇವಿ.
ಈ ನಿಮ್ಮ ದಾಂಪತ್ಯ, ಮುಂದೆ,....
ಯುಗ ಯುಗಗಳಿಗು ಆದರ್ಶವಾಗಿರಲಿ.
(ಮಾರಯ್ಯ ಮಹಾದೇವಿ ಬಸವಣ್ಣನನ್ನು ಕಂಡು ಆಶ್ಚರ್ಯದಿಂದ
ತಿರುಗಿ ನೋಡುವರು.)

ಮಾರಯ್ಯ :—ಯಾರು ! ಬಸವಣ್ಣನವರೇನು ?
ಹಿರಿಯ ರಾಜ್ಯದ ಮುಖ್ಯ ಮಂತ್ರಿ, ದಂಡಾಧೀಶ,
ಬಸವರಸನವರೇನು ? ಮತ್ತೆಷ್ಟು ಹೊನ್ನುಗಳ
ತಂದಿಹಿರಿ ? ನಾವು ಬಡವರು ಬಸವ....
ಹೊನ್ನ ಜಾಳಿಗೆಗಳನು ನೋಡಿದುದೇ ಇಲ್ಲ....
ನಿನ್ನ ಕರುಣೆಯಿಂದವುಗಳನು ನೋಡಿದೆವು ಇಂದು.

ಬಸವ :—(ಮಾರಯ್ಯನ ಕೈ ಹಿಡಿದು ಬೇಡಿಕೆಯ ಧ್ವನಿಯಿಂದ)
ಈ ಕಟಕಿಯಿಂದೆನ್ನನಿರಿಯದಿರಿ, ಮಾರಯ್ಯನವರೇ.

ಮಾರಯ್ಯ :—ನಾವು ಬಡವರೆಂದಲ್ಲವೇ ನಿನ್ನ ಅನುಕಂಪೆ ?
ನಿನ್ನ ದಯೆಯಿಂದ ಎಮಗೆ ಬಡತನವಿಲ್ಲ.
ಆದರಾ ನಿನ್ನ ದಯೆ....ಈ ಹೊನ್ನಿನ ರೂಪವನು
ತಳೆದು ಬರಬೇಕೆ ಬಸವೇಶ- ?
ಹೊನ್ನಿಗಾಗಿಯೆ ನಾನು ಈ ಕಟ್ಟಿಗೆಯ
ಕಾಯಕವ ಕೈಕೊಂಡೆನೇನು ?

ಬಸವ :—ಕ್ಷಮಿಸಬೇಕು....ಮಾರಯ್ಯನವರೇ....
ನಿಮ್ಮಕಾಯಕದ ನಿಷ್ಠೆಯನು ನಾನರಿಯೆನೇ ?
ಎನ್ನ ಮರವೆಯವಗುಣವನ್ನು ನಿಮ್ಮ
ಔದಾರ್ಯದಿಂ ತಿದ್ದಿ ಕಾಪಿಡಿರಿ....
ಅನುತಾಪದಿಂ ಬೆಂದ ಹೃದಯವನು ಸಂತೈಸಿರಿ.
ಅದಕಾಗಿಯೇ ನಾನಿತ್ತಕಡೆ ಬರುತಿರಲು
ದಾರಿಯಲಿ ಅಪ್ಪಣ್ಣ ಚಂದಯ್ಯ ಸಿಕ್ಕಿದರು.
ವಿಷಯವನು ತಿಳಿದು ದುಗುಡವಿಮ್ಮಡಿಯಾಯ್ತು.
ಅದನು ಪರಿಹರಿಸಿ ಪೊರೆಯಿರೀ ಅಜ್ಞನಂ
ಬೇಡುವೆನು....

ಮಾರಯ್ಯ :—....ಶಿವ !....ಶಿವ ! ....ಬಸವೇಶ
ನಿನ್ನಿಂದ ಈ ನುಡಿಯೇ....ನೀ ನಮ್ಮೆಲ್ಲರೀಶ.
“ ಕಾಯಕವೆ ಕೈಲಾಸ ”ವೆಂದು ಸಾರಿದ ಮಹಿಮ.
ಅದ ನಿತ್ಯ ಜೀವನದಿ ಸಾಧಿಸಿದ ಕರ್ಮಯೋಗಿ,
ಎಲ್ಲ ಯೋಗಗಳನೊಳಗೊಂಡ ಭಕ್ತಿ ಭಂಡಾರಿ.

ಚಂದಯ್ಯ :—ಅದರಿಂದಲಾದರೂ ಕ್ಷಮೆದೋರಲಾರಿರಾ
ಬಸವಣ್ಣನವರಿಗೆ ?

ಅಪ್ಪಣ್ಣ :—ಅಂತಹವರ ಮೇಲೂ ನಿಮ್ಮ ಕೋಪವೇ
ಮಾರಯ್ಯನವರೇ.

ಮಾರಯ್ಯ :—ಬಸವಣ್ಣನಂತಪ್ಪ ಮಹಿಮನಾಗಿರ್ದುದೇ
ನನ್ನ ಈ ಕೋಪಕ್ಕೆ ಕಾರಣವು ಅಪ್ಪಣ್ಣ,
ಅರಿತವರು ಮರೆತಂತೆ ನಟಿಸಿದರೆ
ಅರಿವು ಬದುಕುವುದುಂಟೇ ?
ಬಯಲು ಬತ್ತಲೆಯಾದೊಡೆ ಹೊದಿಸುವವರಿನ್ನಾರು ?
ಏರಿಯೇ ನೀರು ಕುಡಿದೊಡೆ ಬಿಡಿಸುವವರಿನ್ನಾರು !
ಮಹಾಮೇರುವೇ ನಡೆಯ ತೊಡಗಿದರೆ
ಅದಕಿಂಬುಗೊಡುವವರಾರು ?
ಅರಿದವರು ಮರೆವೊಡೆ ಅರಿಕೆ ಹೇಳುವವರಾರು ?
"ಒಲೆ ಹತ್ತಿ ಉರಿದೊಡೆ ನಿಲ್ಲಬಹುದಲ್ಲದೇ
ಧರೆ ಹತ್ತಿ ಉರಿದೊಡೆ ನಿಲಬಹುದೆ ಅಯ್ಯ"
ಹೇಳಿಲ್ಲವೇ ಬಸವಣ್ಣನೇ ಈ ಮಾತ ?
ಅದನು ತಾನೆ ಮರೆಯುವುದೇ ?
ತಾನೆ ತಪ್ಪುವುದೇ ?

ಬಸವ :—ಇನ್ನು ತಪ್ಪಿದೊಡೆನಗೆ ತಲೆದಂಡ,
ಶಿವರೂಪಿ ಮೋಳಿಗೆಯ ಮಾರಿತಂದೆ.
ಆದಿಶಕ್ತಿಯ ಮೂರ್ತಿ ಮಹಾದೇವಿ ತಾಯಿ
ದಾಂಪತ್ಯ ಜೀವನದ ಸಾಧನೆಯ
ಮೇರುಗಿರಿಗಳು ನೀವು.
ಶರಣ ಮಾರ್ಗದ ಮಹಾ ಸಾಧನೆಯ
ಸಂಕೇತ ಮೂರ್ತಿಗಳು ನೀವು.
ಧನದಲ್ಲಿ ಶುಚಿ, ಪ್ರಾಣದಲಿ ನಿರ್ಭಯ,
ಇಂತು ಇನ್ನಾರಿಗಳವಡುವುದಯ್ಯ !
ಸಾಮಾನ್ಯ ಚೇತನಗಳೂಹೆಗೂ ಮಿಗಿಲಾದ
ಈ ತ್ಯಾಗ, ಈ ನಿಷ್ಠೆ, ಈ ನಿಲವು...
ಇವುಗಳನು ಕಂಡಾನು ಬದುಕಿದೆನು.

(ಎಂದು ಮಾರಯ್ಯನಿಗೆ ನಮಸ್ಕರಿಸಲು ಹೋಗುವನು. ಮಾರಯ್ಯ ಅವನನ್ನು ಮಧ್ಯದಲ್ಲಿಯೇ ತಡೆಹಿಡಿದು)

ಮಾರಯ್ಯ :—ಏನಿದೇನಿದು ಬಸವೇಶ ? ಇಂತೆಸಗಬಹುದೇ ?
ಇಂತಪ್ಪ ಭಕ್ತಿವಾರಿಧಿಯ ಪುಣ್ಯ ಜಲದಿಂದ
ಬದುಕಿದವ ನಾನು....ನೀನೆನಗೆ ವಂದಿಪುದೇ ?

ಅಪ್ಪಣ್ಣ :—ಈ ಪುಣ್ಯದರ್ಶನದಿಂದ ಬದುಕಿದೆವು ನಾವು.

ಚಂದಯ್ಯ :—ನಾವು ಮಾತ್ರವೆ ಅಲ್ಲ.

ಒಂದಲ್ಲ ಒಂದು ದಿನ ಇದರರ್ಥವನು ಕಂಡು
ಲೋಕವೇ ಬದುಕುವುದು.
ಈ ಪುಣ್ಯ ಮಂಗಳ ಘಟನೆಯನು ಕಂಡು
ತಲೆ ಬಾಗು ಅಪ್ಪಣ್ಣ.

(ಇಬ್ಬರೂ ತಲೆ ಬಾಗುವರು)

—ತೆರೆ—

ಮಂಗಳಂ

—ಹೆಚ್. ತಿಪ್ಪೇರುದ್ರಸ್ವಾಮಿ

ಸೃಷ್ಟಿಶಕ್ತಿ

ಸ್ವತಂತ್ರವಾದ ರಚನೆಗೆ ಸಾಮಾನ್ಯವಾಗಿ ಕೆಲವು ಗುಣಶೀಲಗಳು ಅನುಕೂಲವಾಗಬಲ್ಲುವು. ಅವು ಯಾವುವೆಂದರೆ, ತಮ್ಮ ತಮ್ಮ ಸಂಶೋಧನಾ ಕ್ಷೇತ್ರದಲ್ಲಿ ಆಳವಾದ ಆಸಕ್ತಿ ಮತ್ತು ಸರಿಯಾದ ಪರಿಹಾರವನ್ನು ಕಾಣುವ ಅಪೇಕ್ಷೆ. ಕಷ್ಟಪಟ್ಟು ಶ್ರಮಿಸುವುದಕ್ಕೆ ಸಿದ್ಧನಾಗಿರಬೇಕೇ ವಿನಾ ಕಾಲವನ್ನು ಗಣಿಸಬಾರದು. ಎಲ್ಲ ಅಂಶಗಳನ್ನೂ ಪರಿಶೀಲಿಸುವಲ್ಲಿ ತಾಳ್ಮೆ, ಭರವಸೆ ಮತ್ತು ಎಚ್ಚರಿಕೆಗಳು ಸಹಾಯಕವಾಗುತ್ತವೆ. ಹಾಸ್ಯ ಪ್ರವೃತ್ತಿಯನ್ನೂ ಜಾಣ್ಮೆಯಿಂದ ವರ್ತಿಸುವುದನ್ನೂ ಬೆಳೆಸಿಕೊಳ್ಳಬೇಕು. ಪ್ರತಿಯೊಬ್ಬರೂ ತಮ್ಮ ತಮ್ಮ ಕೆಲಸಕ್ಕೆ ಯಾವ ರೀತಿಯಾದ ದೇಹಸ್ಥಿತಿ ಅಥವಾ ಮನೋಧರ್ಮವು ಅಗತ್ಯವೆಂಬುದನ್ನು ಕಂಡುಕೊಂಡು, ಅದಕ್ಕನುಗುಣವಾಗಿ ಚಿಂತನಾಪರರಾಗಬೇಕು. ಆಲೋಚನಾಶಾಲಿಯು, ತನ್ನ ಸಿದ್ಧಾಂತಕ್ಕಾಗಲಿ, ಸಂಪ್ರದಾಯಕ್ಕಾಗಲಿ ವಿರುದ್ಧವಾದ ಹೊಸ ವಿಷಯಗಳನ್ನು ಕಂಡಾಗ ಅವುಗಳನ್ನು ಸ್ವೀಕರಿಸಲು ಸಿದ್ಧನಾಗಿರಬೇಕು. ಕುಶಲತೆಗಾಗಲಿ, ವಿಜ್ಞಾನಕ್ಕಾಗಲಿ, ಸಾಮಾಜಿಕ ನಂಬಿಕೆಗಳಿಗಾಗಲಿ ಅತಿಯಾಗಿ ಕಟ್ಟುಬೀಳುವುದರಿಂದ ಮನಸ್ಸಿನ ಸೃಷ್ಟಿಶಕ್ತಿಗೆ ಅಡ್ಡಿಯಾಗುತ್ತದೆ.

—ಕ್ಯಾಥರೀನ್ ಪ್ಯಾಟ್ರಿಕ್

ಊರ್ವಶಿ

(ಮುಂದುವರಿದುದು)

ನೃತ್ಯದಲಿ ಆ ಚೆಲುವೆ ತನ್ನೆದೆಯ ಕನಸನ್ನು
ಹಾವಭಾವಗಳಿಂದ ತೋರಿದ್ದಳು
ಕಲ್ಪನೆಯ ಬೆನ್ನೇರಿ ಚಿಮ್ಮಿದ್ದ ಮನವನ್ನು
ಪಾರ್ಥನೆಡೆ ಆ ಕನ್ನೆ ಕಳುಹಿದ್ದಳು.

ತನ್ನೆದೆಯ ಬಯಕೆಯನು ತೋರಿ ಅಂಗಾಂಗದಲಿ
ಊರ್ವಶಿಯು ಪ್ರೇಮಿಯನು ಕಾಡಿದ್ದಳು
ಪ್ರಿಯತಮನ ನೆನಹಿನಲಿ ಹರ್ಷ ಸಂತೋಷದಲಿ
ಆ ಚೆಲುವೆ ಸಂತೃಪ್ತೆಯಾಗಿದ್ದಳು.

ನವಬಂಧ ನವಛಂದ ನಿತ್ಯನೂತನ ಭಾವ
ಕಲ್ಪನೆಯು ಚಿಮ್ಮಿ ಬರೆ ಪ್ರತಿಭೆಯೊಡನೆ
ಲಾಸ್ಯವಿನ್ಯಾಸದಲಿ ಭಂಗಿ ಭಣಿತಗಳಲ್ಲಿ
ನವಸ್ಫೂರ್ತಿಯುಕ್ಕಿ ಬರೆ ಹಿಗ್ಗಿನೊಡನೆ.

ಆ ದಿವ್ಯನರ್ತನದ ಸೌಂದರ್ಯ ದೃಶ್ಯದಲಿ
ಸಭೆಯೆಲ್ಲ ತಲ್ಲೀನವಾಗುತಿರಲು
ಗಾನ ಮಾಧುರ್ಯದಲಿ ದಿವ್ಯರಸ ಲಹರಿಯಲಿ
ಆನಂದ ಪರವಶತೆ ಪಡೆಯುತಿರಲು.

ತಂಬೂರಿ ಶ್ರುತಿಯೊಡನೆ ಶಾರೀರ ಗತಿಯೊಡನೆ
ನಾದದತರಂಗಿಣಿಯು ಹರಿಯುತಿತ್ತು
ಅರ್ಜುನನ ಹೃದಯದಲಿ ಎದ್ದು ಅಲೆ ಅಲೆಯಾಗಿ
ಮನ್ಮಥನ ಚಾಪದೊಲು ಬೆಳಗುತಿತ್ತು.

ಇಂದಿನೀ ಉತ್ಸವದ ಸ್ವಚ್ಛಂದ ನರ್ತನವು
ಹೊಗಳಿಕೆಯ ಎಲ್ಲೆಯನು ಮೀರಿದ್ದಿತು
ಇಷ್ಟ ಸಂತುಷ್ಟಿಯಲಿ ಮುಳುಗಿತ್ತು ಸಭೆಯೆಲ್ಲ
ಬಣ್ಣನೆಯ ಸೀಮೆಯನು ದಾಟಿದ್ದಿತು.

ವಿರಹ ವೇತೆ ದೈನ್ಯತೆಯ ಬೇಡಿಕೆಯ ಎದೆತಳದ
ನೋವು ನೈರಾಶ್ಯಗಳ ಬೆಂಕಿಯನ್ನು
ಕುಸುರಾಗಿ ಬಿಡಿಸಿಟ್ಟು ವಿವಿಧ ಭಾವಗಳನ್ನು
ತೋರಿದಳು ಊರ್ವಶಿಯು ಜಾಣ್ಮೆಯನ್ನು.

ನಾಟ್ಯದೇವತೆಯೊಲಿದು ನಟಿಸಿದಂದಲಿರಲು
ಸಭೆಯೆಲ್ಲ ವಿಸ್ಮಯದಿ ನೋಡುತಿರಲು
ನರ್ತಕಿಯು ನರ್ತನದಿ ತನ್ಮಯತೆ ಪಡೆದಿರಲು
ಸಭಿಕರೆದೆ ಮನವೆಲ್ಲ ಕರಗುತಿರಲು.

ಆ ರಸ ಸ್ರೋತದಲಿ ಸಾನಂದ ಸಲಿಲದಲಿ
ಮಿಂದು ಬಂದಳು ಚೆಲುವೆ ಶುಭ್ರಳಾಗಿ
ಆ ದಿವ್ಯ ದೃಶ್ಯದಲಿ ಭಾವಪರಿವೇಷದಲಿ
ಮೂಡಿ ಬಂದಳು ಕನ್ನೆ ಕಾವ್ಯವಾಗಿ.

ವಾದ್ಯಗಳು ನುಡಿದಿರಲು ನೃತ್ಯಮುಕ್ತಾಯವನು
ವೈಣಿಕೆಯು ಮಂಗಳವ ಹಾಡುತಿರಲು
ತನ್ನ ಸೇವೆಯ ಮುಗಿಸಿ ಮಂಗಳಾಂಗಿಯು ತಾನು
ಜೀವನದಿ ಶುಭವನ್ನು ಕೋರುತಿರಲು.

ಅಂತ್ಯದಲಿ ಊರ್ವಶಿಯು ಸಭೆಗೆಲ್ಲ ನಮಿಸುತ್ತ
ಅರ್ಜುನಗೆ ಭಕ್ತಿಯಲಿ ವಂದಿಸಿದಳು
ಅವನ ಸುಂದರಮೊಗದಿ ನಗೆಯಮಲ್ಲಿಗೆಯರಳೆ
ಕೃತಕೃತ್ಯಳಾದಂತೆ ಭಾವಿಸಿದಳು.

ನೃತ್ಯಮೆಚ್ಚಾಗಿತ್ತು ಸಭೆಯು ಕೊಂಡಾಡಿತ್ತು
ಬಂದವರು ಎಲ್ಲರೂ ಹೊಗಳಿದ್ದರು
ಸುರರಾಜ ಧನರಾಜ ದೇವವಿದ್ಯಾಧರರು
ಯಕ್ಷ ಮುನಿಗಣವೆಲ್ಲ ಹರ್ಷಿಸಿದರು.

ಸಭೆಯ ಹರ್ಷೋದ್ಗಾರವೆಲ್ಲೆಲ್ಲು ತುಂಬಿರಲು
ತೆರಳಿದಳು ಸಖಿಯೊಡನೆ ಆ ಚೆಲುವೆಯು
ತನ್ನ ಅಂತಃಪುರಕೆ ನಡೆತಂದಳಾಮುಗುದೆ
ನೂರು ಭರವಸೆಯೊಡನೆ ಚೆಂಗಲವೆಯು.

ಆ ದಿವ್ಯನರ್ತನದಿ ತನ್ನನೇ ಮರೆತಿದ್ದ
ಪಾರ್ಥನಿಗೆ ಉಡುಗೊರೆಯ ಮನ್ನಣೆಯನು
ಇತ್ತು ಗೌರವಿಸಿದನು ಶಚಿನಾಥ ದೇವೇಂದ್ರನು
ರತ್ನಹಾರಗಳನ್ನು ಭೂಷಣವನು.

ಆ ದೇವಸಭೆಯಲ್ಲಿ ಸಂದ ಈ ಗೌರವಕೆ
ಆನಂದವಶನಾಗಿ ಶಿರಬಾಗುತ
ವಂದಿಸಿದನೆಲ್ಲರನು ಅತ್ಯಂತ ವಿನಯದಲಿ
ದೀರ್ಘ ಬಾಹುಗಳನ್ನು ಜೋಡಿಸುತ್ತ.

ಋಷಿಗಳಾಶೀರ್ವಾದ ಮುಗಿಲಮುಟ್ಟುತ್ತಿರಲು
ಭೇರಿಶಂಖಧ್ವನಿಯು ಮೊಳಗುತಿರಲು
ವಂದಿ ಮಾಗಧರೆಲ್ಲ ಸ್ತುತಿಪಾಠಗೈದಿರಲು
ಮಂಗಳಾಂಗಿಯರೆಲ್ಲ ಹಾಡುತಿರಲು.

ಹರಿಕಾರ ಮುಂಬರಿದು ದಾರಿಯನು ತೋರಿರಲು
ಪುಷ್ಪಗಳ ಮಳೆಯಲ್ಲಿ ಸ್ವಸ್ಥಾನಕೆ
ತೆರಳಿದನು ಪಿತನೊಡನೆ ತನ್ನ ಪ್ರಾಸಾದಕ್ಕೆ
ವಶನಾಗಿ ಆನಂದದುನ್ಮಾದಕೆ.

ಹರ್ಷ ಸಂತೋಷಗಳ ಸವಿಯ ಸಂತರ್ಪಣೆಯ
ಉಂಡು ಎದೆಮನವೆಲ್ಲ ತಣಿಯುತಿರಲು
ನೃತ್ಯ ಸಂಗೀತಗಳ ದಿವ್ಯದೃಶ್ಯಗಳಲ್ಲಿ
ಕರಣ ಸರ್ವಸ್ವವೂ ತೃಪ್ತಿಪಡಲು

ಮಾನಸನ್ಮಾನಗಳ ಸ್ವೀಕರಿಸಿ ತೆರಳಿದರು
ಸಭಿಕರೆಲ್ಲರು ತಮ್ಮ ಸ್ವಸ್ಥಾನಕೆ
ಯಕ್ಷಗಂಧರ್ವಾದಿ ದೇವದೇವೋತ್ತಮರು
ಮರಳಿದರು ತಂತಮ್ಮ ಆವಾಸಕೆ.

೮

ಸಂತೋಷದಲೆಯೊಡನೆ ತೇಲುತ್ತ ಮುಳುಗುತ್ತ
ಐತಂದಳೂರ್ವಶಿಯು ನಲಿದು ನಲಿದು
ಎದೆಯ ಬಟ್ಟಲಿನಿಂದ ಹರ್ಷವನು ಹೀರುತ್ತ
ಸಂಭ್ರಮದಿ ಚಿಮ್ಮುತ್ತ ಚಿಗಿದು ಚಿಗಿದು.

ಸುರವಿಜಯನಾನಗೆಯು ವರವಾಯ್ತು ಊರ್ವಶಿಗೆ
ಮೂಲೋಕದರಸುತನ ದೊರಕಿದಂತೆ
ಕಾರಿರುಳಮರೆಯಲ್ಲಿ ಚಂದ್ರಮನು ನಕ್ಕಂತೆ
ತಂಪಿಂದ ಇಳೆಯಲ್ಲ ತೊಯ್ಯುವಂತೆ.

ಆ ಮುಗುಳುನಗೆಯಲ್ಲಿ ಮಲ್ಲಿಗೆಯ ಹೂವರಳಿ
ನರುಗಂಪು ಸುತ್ತಲೂ ಘಮಿಸುತಿತ್ತು
ಸಪ್ತಲೋಕದ ಸಿರಿಯು ರಾಜ್ಯಸಂಪದವಿತ್ತು
ಸಕಲವೈಭವವನ್ನು ಸೂಸುತಿತ್ತು.

ತನ್ನ ಅಂತಃಪುರದಿ ಮೆಲುಮೆಲನೆ ಕುಕಿಲುತ್ತ
ಉತ್ಸಾಹದಲಿ ಚೆಲುವೆ ವಿಹರಿಸಿರಲು
ಹೊನ್ನ ಹರಿವಾಣಗಳ ಉಡುಗೊರೆಗಳನು ತಂದು
ಚೇಟಿಯರು ಊರ್ವಶಿಗೆ ತೋರುತಿರಲು

ವಜ್ರವೈಡೂರ್ಯಗಳ ನವರತ್ನ ಮಾಲೆಗಳು
ಪದಕಗಳು ಕಣ್ಣುಗಳ ಕೋರೈಸಿರೆ
ರೇಷ್ಮೆ ಕಿಂಕಾಪುಗಳ ಬಹುಮೂಲ್ಯವಸ್ತುಗಳು
ಪಟ್ಟೆದುಗುಲಗಳನ್ನು ಸಭೆಯಿತ್ತಿರೆ.

ಸೊಗಯಿಸಿರೆ ಆ ನಡುವೆ ಹೊಳೆವಹರಿವಾಣದಲಿ
ಅರ್ಜುನನು ಕಳುಹಿದ್ದ ಉಡುಗೊರೆಗಳು
ವಂಶಾನುಗತವಾಗಿ ಅವಗೆ ಬಂದಿದ್ದಂಥ
ಸ್ವರ್ಣಕಂಠಾಭರಣ ಕಂಕಣಗಳು.

ಹಾರವನು ಕಂಡೊಡನೆ ಮೈನವಿರು ಮುಳ್ಳಾಯ್ತು
ಮೊಗದಲ್ಲಿ ಕೆಂಪು ತಾ ಹೊರಳಿ ಬಂತು
ಭಾವದುದ್ವೇಗದಲಿ ತನುವೆಲ್ಲ ಕಂಪಿಸಿತು
ಮನವೆದ್ದು ಯುಗದಾಚೆ ಹಾರಾಡಿತು.

ಹಿಂದೆ ಶ್ರೀ ಪೌರವನು ಧರಿಸಿದ್ದ ಹಾರವೇ
ಇಂದು ತನ್ನೆದುರಿನಲಿ ಕಾಣುತಿತ್ತು
ನವರತ್ನ ಪದಕದಲಿ ಪ್ರಿಯತಮನ ಶ್ರೀ ಮೂರ್ತಿ
ತನ್ನನೇ ಕರೆವಂತೆ ತೋರುತಿತ್ತು

ಆನಂದ ಬಾಷ್ಪದಲಿ ಕಣ್ಣು ಮಂಜಾಗಿತ್ತು
ಭರವಸೆಯ ತಂದಿತ್ತು ನವಹಾರವು
ಸಂತೋಷ ಸಂಭ್ರಮದಿ ಮೈಯೆಲ್ಲ ಮಿನುಗಿತ್ತು
ತುಂಬಿ ತುಳುಕುತಲಿತ್ತು ಉತ್ಸಾಹವು.

ಮೆಚ್ಚುಗೆಯ ಬಹುಮಾನ ಪ್ರೇಮದುಡುಗೊರೆಯಾಯ್ತು
ಬಲದಿನರುಣೋದಯವ ತರುತಲಿತ್ತು
ಅವನು ವಿಕ್ರಮನೆಂದು ಹೃದಯ ಹಾರೈಸಿತ್ತು
ಮಧುರ ಚಿತ್ರಗಳನ್ನು ರಚಿಸುತಿತ್ತು.

ತಮ್ಮಿರ್ವ್ವರಾ ಬಾಳ ಸಂಕೇತವಿಹಾರ
ಪ್ರೇಮದೌತ್ಯವ ವಹಿಸೆ ಬಂದಿರುವುದು
ಯುಗ ಯುಗಾಂತರದಿಂದ ಒಲವು ನಲವುಗಳಲ್ಲಿ
ಎರಡು ಜೀವಗಳನ್ನು ಬೆಸೆದಿರುವುದು.

ಎದೆಕಂಡ ಕನಸನ್ನು ಚೆಲುವಾದ ಚಿತ್ರವನು
ಬಣ್ಣಿಸಿದಳೂರ್ವಶಿಯು ಚತುರತೆಯಲಿ
ಮನದ ಭಿತ್ತಿಯ ಮೇಲೆ ಕಲ್ಪನೆಯ ಕುಂಚದಲಿ
ದೃಶ್ಯವನು ಬಿಡಿಸಿದಳು ಕುಶಲತೆಯಲಿ

ಹೃದಯ ಸಾಮ್ರಾಜ್ಯಕ್ಕೆ ಫಲ್ಗುಣನೆ ಪ್ರಭುವಾಗಿ
ಊರ್ವಶಿಯೆ ಸಾಮ್ರಾಜ್ಞಿಯಾಗಿರುತಿರೆ
ಭಾವಲೋಕ ವಿಹಾರಿ ಸ್ವರ್ಲೋಕಸಂಚಾರಿ
ಹರ್ಷ ಪುಲಕಿತಳಾಗಿ ಮೈಮರೆತಿರೆ.

ಸೌಂದರ್ಯ ಲೋಕದಲಿ ಸಂಚರಿಸಿ ಊರ್ವಶಿಯು
ಅಮೃತಶಿಲೆಯರಮನೆಯ ಕಟ್ಟಿದ್ದಳು
ಚಂದ್ರಮನ ಕರೆ ತಂದು ತಿಂಗಳನು ಸುರಿಯೆಂದು
ಸ್ವಪ್ನ ಸೌಧದಲವಳು ನಿಲಿಸಿದ್ದಳು.

ಅಮೃತ ಪ್ರಾಸಾದಕ್ಕೆ ಸಪ್ತವರ್ಣದದ್ವಾರ
ನವರತ್ನ ತೋರಣವು ತೊಂಗುತ್ತಿರೆ
ಆ ಕನಸಿನರಮನೆಗೆ ಸ್ವರ್ಣಸ್ತೂಪಗಳಿಟ್ಟು
ರಾಗಸೃಷ್ಟಿಗೆ ತಾನೆ ರಾಗಿಸುತಿರೆ

ಯಾವಾಗಲೂ ಹರ್ಷ ಸಂತಸದ ಮಧುಮಾಸ
ಚಿಂತೆಯಂಕೆಯು ಅಲ್ಲಿ ಇಲ್ಲದಿರಲು
ಹಾವ ಭಾವ ಸುಹಾಸ ನೃತ್ಯ ಗಾನ ವಿಲಾಸ
ಜೀವನದೆಲ್ಲೆಲ್ಲು ತುಳುಕುತಿರಲು.

ಮಧುವಸಂತನು ರಾಣಿ ವಾಸಂತಿಯೊಡಗೂಡಿ
ಕಲ್ಯಾಣಮಂಟಪಕೆ ಐತಂದಿರೆ
ಕಾಮದೇವನು ತನ್ನ ರತಿದೇವಿಯೊಡಗೂಡಿ
ಪ್ರೇಮದೌತ್ಯವ ವಹಿಸಿ ತಾ ಬಂದಿರೆ.

ಅಲ್ಲಿ ಹರ್ಷೋತ್ಸವವು ನಿತ್ಯ ಪ್ರೇಮೋತ್ಸವವು
ಸಂಭ್ರಮಾನ್ವಿತಮಾಗಿ ಸಾಗುತ್ತಿರೆ
ಮಧುಮಹೋತ್ಸವದಲ್ಲಿ ಚಂದ್ರಿಕಾರಾತ್ರಿಯಲಿ
ಲಕ್ಷ ದೀಪೋತ್ಸವವು ನಡೆಯುತ್ತಿರೆ.

ಪ್ರೇಮಸಂಗೀತವನು ಹಾಡುತಿಹ ಪಿಕವಿರಲು
ನವಮಿಲನವಧುವಾಗಿ ಊರ್ವಶಿಯಿರೆ
ನೃತ್ಯಕ್ಕೆ ನವಿಲಿರಲು ಶುಭನುಡಿಯೆ ಶುಕವಿರಲು
ಒಲಿದು ಬಂದಿಹ ವರನು ಬಾಗಿಲಲಿರೆ.

ತೆರೆದಿದೆಯ ಪೀಠಕ್ಕೆ ಪ್ರಿಯನನಾಹ್ವಾನಿಸಲು
ಸುಂದರಿಯು ಸಂಭ್ರಮಿಸಿ ಸಜ್ಜಾದಳು
ಮಧುರಜೀವನವನ್ನು ನೆನೆದು ಪುಲಕಿತಳಾಗಿ
ಪ್ರೇಮಪೂಜೆಗೆ ಚೆಲುವೆ ಅಣಿಯಾದಳು.

ಅಂತರಂಗದಲಿದ್ದ ಮಧುರಭಾವಗಳೆಲ್ಲ
ಹೃದಯದಾಕಾಶದಲಿ ವಿಹರಿಸಿರಲು
ಮುಗಿಲಲ್ಲಿ ಮೂಡಿದ್ದ ಕೋಟಿತಾರಾಗಣವು
ಅರಳಿದೆದೆಯೊಳಗೆಲ್ಲ ತುಂಬುತಿರಲು

ಎಲ್ಲೆಲ್ಲಿಯೂ ಪ್ರೇಮ ಸಂತೋಷ ಸಂಮೋದ
ಆನಂದವೇ ತಾನು ಮೈಯುಬ್ಬಿರೆ
ನೆಲ ನೀರು ಬಾನ್ಬಯಲು ದಿಗ್‌ದಿಗಂತದಲೆಲ್ಲ
ಪ್ರೇಮವೇ ಊರ್ವಶಿಗೆ ಕಾಣುತ್ತಿರೆ.

ನೂತನೋತ್ಸಾಹದಲಿ ಸಂತಸದ ಭರದಲ್ಲಿ
ಚೇತನದ ಸಂಚಾರವಾಗಿರುತಿರೆ
ರಾಗ ರಂಗೇರಿರಲು ಅನುರಾಗ ಮೂಡಿರಲು
ಸವ್ಯಸಾಚಿಗೆ ಮನವು ಹಂಬಲಿಸಿರೆ.

ಮಲ್ಲೆ ಮಾಲತಿ ಜಾಜಿ ಕೇದಗೆಯ ಸಂಪಗೆಯ
ಪುಷ್ಪಹಾರಗಳನ್ನು ಪೋಣಿಸಿರಲು
ಘಮಘಮಿಪ ಜವ್ವಾಜಿ ಗಂಧಪರಿಮಳದಿಂದ
ಸರ್ವಸಿದ್ಧತೆಯನ್ನು ನಡೆಸಿದ್ದಳು

೬

ತನ್ನೆಡೆಗೆ ಬರುತಲಿಹ ಇನಿಯನನು ಕಂಡೊಡನೆ
ಸಂಜೆವೆಣ್ಣಿನ ಕದಪು ಕೆಂಪೇರಿತು
ಆ ಚಿರಪ್ರೇಮಿಗಳ ದಿವ್ಯಮಿಲನದ ಗೀತ
ಬಾನ್ಬುವಿಯೊಳೆಲ್ಲೆಲ್ಲು ಕೇಳಿಬಂತು.

ತರುಗಳಲಿ ಪಕ್ಷಿಗಳು ಶೋಭಾನೆ ಹಾಡಿರಲು
ಜಗವೆಲ್ಲ ಮಂಗಳವ ಕೋರುತಿರಲು
ಗಗನದಲಿ ಬೆಳ್ಳಿ ತಾ ಸೊಡರುಗಳ ಹಚ್ಚಿಸಲು
ಮಧುರ ಮಿಲನಕೆ ಸ್ವಸ್ತಿ ಹೇಳುತಿರಲು.

ಸಂಜೆವಧು ದಿನಕರನ ದಿವ್ಯಮಿಲನವಕಂಡು
ಊರ್ವಶಿಯ ಎದೆಯಾಸೆ ಮೊಳೆತೇಳಲು
ಇನಿಯನಾರೋಗಣೆಗೆ ಸಂಭ್ರಮದ ಸ್ವಾಗತಕೆ
ಸರ್ವಸಿದ್ಧತೆಗಾಗಿ ಸಡಗರಿಸಲು.

ಹೆಣ್ಣಾಗಿ ಆ ಚಲುವೆ ನಾಕದಪ್ಸರೆಯಾಗಿ
ಜೀವನವನೆಂತೆಂತೊ ಕಳೆದಿದ್ದಳು
ಇಂದ್ರನಿಷ್ಠೆಗೆ ಬಾಗಿ ಅಣತಿಗೆ ತಲೆದೂಗಿ
ತನ್ನ ಬಾಳನ್ನಾಕೆ ನೂಕಿದ್ದಳು.

ನೂರು ಕಡಿವಾಣಗಳ ಜೀವನದ ಕಹಿಯುಂಡು
ನೋವಿನಲಿ ಆ ಕನ್ಯೆ ನವೆದಿದ್ದಳು
ಸ್ವಾತಂತ್ರ್ಯವಿಲ್ಲದಿಹ ಸ್ವರ್ಗ ಜೀವನದಲ್ಲಿ
ಹೂವಿನಂದದ ಹೆಣ್ಣು ಬಾಡಿದ್ದಳು.

ಸ್ವರ್ಣ ಪಂಜರದಿಂದ ಬಿಡುಗಡೆಯ ಬಯಸುತ್ತ
ಊರ್ವಶಿಯು ದುಃಖದಲಿ ತವಿಸಿದ್ದಳು
ಯುಗಯುಗಾಂತರದಿಂದ ನಿರ್ಬಂಧ ಜೀವನವ
ಆ ಚೆಲುವೆ ಗಿಳಿಯಂತೆ ನಡೆಸಿದ್ದಳು.

ಅಂದು ಮುಂಜಾವದಲಿ ಕಂಡಿದ್ದ ಕನಸಿನಲಿ
ವಿಕ್ರಮನ ದರ್ಶನದಿ ಮನಮುಳುಗಿರೆ
ಅಂದು ಆ ಸಭೆಯಲ್ಲಿ ಮಂಡಿಸಿದ ಅರ್ಜುನನೆ
ಚಕ್ರಿ ವಿಕ್ರಮನೆಂದು ಅರಿವಾಗಿರೆ.

ಮೇಘ ಹನಿಹನಿಯಾಗಿ ಧರೆಗಿಳಿದು ತೊರೆಯಾಗಿ
ಸಾಗರಕೆ ಸೇರುತಿರೆ ಪ್ರೇಮ ಭಿಕ್ಷು
ತನ್ನ ಪಾಡನ್ನರಿತು ಎಚ್ಚರಾಯಿತು ಮನಸು
ತೆರೆಯುತಿರಲಾಗಲೇ ಹೃದಯ ಚಕ್ಷು.

ಮಧುರ ಭಾವಗಳೆಲ್ಲ ಮನದಿ ಸಂಗಮವಾಗಿ
ಪ್ರೇಮವಾಹಿನಿಯಾಗಿ ಹರಿಯುತಿರಲು
ಹೃದಯ ಪಂಜರದಲ್ಲಿ ಹುದುಗಿದ್ದ ಕನಸುಗಳು
ಸ್ವರ್ಣ ಪ್ರತಿಮೆಗಳಾಗಿ ಕಳೆಯೇರಲು.

“ ಪ್ರಿಯೆಯಾಗು ಇನಿಯನಿಗೆ ನಲ್ಲೆ ಪ್ರೇಯಸಿಯಾಗು ”
ಹೆಣ್ಣಿನೆದೆ ಹಂಬಲವು ಬೇಡುತಿತ್ತು
“ ವಿಕ್ರಮಗೆ ಪ್ರಿಯೆಯಾಗು ವೀರನಿಗೆ ಸತಿಯಾಗು ”
ಜೀವನದ ಹಿರಿಯಾಸೆ ಪ್ರಾರ್ಥಿಸಿತ್ತು.

೧೦

ದೇವನಂದನವನದಿ ದಿವ್ಯ ಚಂದ್ರೋದಯವು
ಸುತ್ತಲೂ ಚೆಲ್ಲಿರಲು ಬೆಳುದಿಂಗಳು
ಮಧುಮಾಸದುತ್ಸವಕೆ ಸಿದ್ಧತೆಯ ಗೈಯ್ಯುತ್ತ
ಅತ್ತಿತ್ತ ನಲಿದಿರಲು ಉಡುಗಣಗಳು.

ಮಂದಮಾರುತನಲೆದು ಚೆಲ್ಲಾಟವಾಡುತ್ತ
ಹೂ ಎಲೆಗಳೊಡನೆಲ್ಲ ನಲಿಯುತಿರಲು
ವೃಕ್ಷಗಳ ನೆರಳಿನಲಿ ಹೂವುಗಳ ಚೆಲ್ಲಿರಲು
ನೆಳಲ ಮಧ್ಯದಿ ಬೆಳಗೆ ಬೆಳುದಿಂಗಳು.

ಸಂಜೆಮಲ್ಲಿಗೆ ಮರಳಿ ಪರಿಮಳವ ಬೀರಿತ್ತು
ಎಳೆಗಾಳಿ ಸುಳಿಸುಳಿದು ತೀಡುತಿತ್ತು
ಮುಗಿಲ ತಾರಾಗಣವು ಮುಗಳುನಗೆ ಸೂಸಿತ್ತು
ಕಿಲಕಿಲನೆ ನಕ್ಕಂತೆ ಕಾಣುತಿತ್ತು.

ನಿಶೆಯ ಜೋಗುಳದಲ್ಲಿ ಜಗವೆಲ್ಲ ಮಲಗಿತ್ತು
ದಿವ್ಯ ಪಲ್ಲಂಕದಲಿ ಪವಡಿಸಿತ್ತು
ಪ್ರಕೃತಿದೇವಿಯ ಪೂತ ವಾತ್ಸಲ್ಯದಲಿ ಲೋಕ
ತಾಯ ತೋಳ್ತೊಟ್ಟಿಲಲಿ ನಿದ್ರಿಸಿತ್ತು.

ಊರ್ವಶಿಯ ಎದೆಯಲ್ಲಿ ಭುಗಿಲೆದ್ದ ವಿರಹದುರಿ
ತನುವೆಲ್ಲ ಆವರಿಸಿ ಕನಲುತ್ತಿರೆ
ಅರ್ಜುನನ ಹೃದಯಕ್ಕೆ ಹಾರಿದ್ದ ಕಿಡಿಯೊಂದು
ಅವನ ಸರ್ವಸ್ವವನು ಸುಟ್ಟುರಿಸಿರೆ.

ನೋವುಗಳ ಕಾವೇರಿ ವಿಸ್ಮೃತಿಯು ಕವಿದಿರಲು
ಸುತ್ತಲೂ ದಳ್ಳುರಿಯೆ ಕಾಣುತಿತ್ತು
ಆ ವೀರನೆದೆಯಲ್ಲಿ ಚಿಂತೆಚಿತೆಯುರಿದಿರಲು
ಹೆಪ್ಪುಹೆಪ್ಪಾಗಿ ಹೊಗೆ ಏಳುತಿತ್ತು.

ಹೃದಯಸಾಗರದಲ್ಲಿ ಎದ್ದಿತ್ತು ಬಿರುಗಾಳಿ
ಮನದಲ್ಲಿ ನಡೆದಿತ್ತು ಕೋಲಾಹಲ
ತನುವೆಲ್ಲ ಕುಗ್ಗಿತ್ತು ಯೋಚನೆಯ ಭಾರದಲಿ
ನಾಲಿಗೆಯು ಸವಿದಿತ್ತು ಹಾಲಾಹಲ.

ಆ ಸಂಜೆ ನಟಿಸಿದ್ದ ಊರ್ವಶಿಯ ರೂಪವೇ
ಕಂಡೆಡೆಯಲೆಲ್ಲೆಲ್ಲು ಸುಳಿಯುತಿತ್ತು
ಹಾವ ಭಾವಗಳೊಡನೆ ಅವಳ ನೃತ್ಯ ವಿಲಾಸ
ಗಾಳಿಯಲೆಯೊಲು ಸುತ್ತ ಅಲೆಯುತಿತ್ತು.

ಮೆಲ್ನುಡಿಯ ದನಿಮಿಂಚು ಎದೆಯನ್ನು ಪುಲುಕಿಸಿತು
ಪ್ರೇಮದಾಲಾಪವನು ಗೈಯುತಿತ್ತು
ಆ ಕಣ್ಣ ಇನಿನೋಟ ಮನವನ್ನು ಮಾಟಿತ್ತು
ಸುಮಶರನ ಬಾಣದೊಲು ನಾಟುತಿತ್ತು.

ನೃತ್ಯ ಮಂಟಪದಲ್ಲಿ ಆ ಚೆಲುವೆ ನಲಿದಾಗ
ಹೃದಯದಲಿ ಉತ್ಸಾಹ ತುಳುಕಾಡಿತು
ಕೋಗಿಲೆಯ ದನಿಯಲ್ಲಿ ಚೆಂಗಲವೆಯುಲಿದಾಗ
ತನುವೆಲ್ಲ ಪುಳಕದಲಿ ಮುಳುಗಾಡಿತು.

ವಿರಹಿಣಿಯ ಎದೆಯೊಲವು ತನ್ನೆದೆಗೆ ಅರಿವಾಯ್ತು
ತನ್ನ ಮನ ಹರ್ಷದಲಿ ತೇಲಾಡಿತು
ರಾಗಿಣಿಯ ಅಳಲಕರೆ ಹೃದಯವನು ಕಲಕಿತ್ತು
ಬಾಳೆಲ್ಲ ಉತ್ಸವದಿ ಓಲಾಡಿತು.

ನೃತ್ಯ ಮುಕ್ತಾಯದಲಿ ಆ ಚೆಲುವೆ ನಮಿಸಿರಲು
ಮನದಲೇನೋ ಆಯ್ತು ಬಹುಸಡಗರ
ತನುವೆಲ್ಲ ಕಂಪಿಸುತ ವಿವಶತೆಯ ಪಡೆದಿರಲು
ಎದೆಯಲ್ಲಿ ಸ್ಪಂದಿಸಿತು ಒಲವಿಂಚರ.

ಆ ನೋಟವಿನಿದಾಯ್ತು ಆ ಬೇಟವಿನಿದಾಯ್ತು
ಇನಿದಾಯ್ತು ಊರ್ವಶಿಯ ಲಾವಣ್ಯವು
ಅವಳದನಿ ಇನಿದಾಯ್ತು ಮೃದುವಾಣಿ ಇನಿದಾಯ್ತು
ಇನಿದಾಯ್ತು ಅವಳ ಯುವಸೌಂದರ್ಯವು.

ನೃತ್ಯ ಮಂಟಪದಿಂದ ಆ ಚೆಲುವೆ ತೆರಳುತಿರೆ
ತನ್ನ ಮನವಾಗಿತ್ತು ಬಲುಶೂನ್ಯವು
ತಾರೆಗಳ ನಡುವಿಂದ ಹೊರಟಂತೆ ಚಂದ್ರಮನು
ಎದೆಯಾಯ್ತು ಬೆಳಕಿಲ್ಲದಾಕಾಶವು.

ಊರ್ವಶಿಯ ಸೌಂದರ್ಯ ನಿಸ್ಸೀಮ ಲಾವಣ್ಯ
ಫಲ್ಗುಣನ ಮನವನ್ನು ಮುತ್ತುತಿರಲು
ಆ ಚೆಲುವೆ ಮಿಡಿದಿದ್ದ ಮೌನ ವೀಣಾಗಾನ
ಮೂಕ ಗೀತಕೆ ಎದೆಯು ಮಾರು ಹೋಗಲು.

ಭಾವಸಾಮ್ರಾಜ್ಯದಲಿ ಆ ಚೆಲುವೆ ವಿಹರಿಸಿರೆ
ವಿಘ್ನವಾವುದು ಅಲ್ಲಿ ತೋರದಿತ್ತು
ಆ ವೀರನೆದೆಯಲ್ಲಿ ಮುಳ್ಳೊಂದು ಹೊಕ್ಕಿತ್ತು
ನೋವು ಬೇನೆಗಳಿಂದ ನರಳಿಸಿತ್ತು.

"ತಾಯಲ್ತೆ ಈ ಹೆಣ್ಣು ? ಈ ಚೆಲುವೆ ಸುಂದರಿಯು
ಪೌರವನ ಮನದನ್ನೆ ರಾಣಿಯಲ್ತೆ ?
ತಾಯೊಡನೆ ಕೂಡುವರೆ ? ಅಯ್ಯೊ ಚಿಂತೆಯೆ, ಅಳಲೆ !
ನನಗಿವಳು ಪೂಜಾರ್ಹ ದೇವಿಯಲ್ತೆ ?

ಯಾವ ಮೋಹಕಶಕ್ತಿ ಸೆಳೆಯುತಿಹುದೀ ತೆರದಿ ?
ಯಾವ ವಿದ್ಯುದ್ವೇಗವೆಳೆಯುತಿಹುದು ?
ಯಾವ ಜನ್ಮದ ಚಿಂತೆ ಮನವ ಕೊರೆಯುತ್ತಿಹುದು ?
ಏತಕೀ ಪರಿ ಬಾಳ್ವೆ ನವೆಯುತಿಹುದು ?"

ನೋವು ಚಿಂತೆಗೆಳೆದೆಯ ಕಿತ್ತು ತಿನ್ನುತಲಿರಲು
ದುಃಖದಲಿ ನಿದ್ರೆಯೇ ಬಾರದಿರಲು
ಶೂನ್ಯವನು ದಿಟ್ಟಿಸುತ ಮಲಗಿದರ್ಜುನನೆದ್ದು
ಅತ್ತಿತ್ತ ಶತಪಥವ ತಿರುಗುತಿರಲು.

ವಿಶ್ರಾಂತಿ ಇಲ್ಲದೆಯೆ ತನುವೆಲ್ಲ ಸೊರಗಿತ್ತು
ಮನವ್ಯನಾವುದೊ ಭಯವು ಕಾಡುತಿತ್ತು
ತುಂಬಿದುದ್ವೇಗದಲಿ ಕೋಗಿಲೆಯು ಹಾಡಿತ್ತು
ಮಧುರಮಿಲನದ ನೆನಪ ಮಾಡುತಿತ್ತು.

"ಪೌರವನ ಪ್ರೇಮಲತೆ ಚಂದ್ರವಂಶಕೆ ಜನನಿ
ತಾಯಿ ಕುಂತಿಯವೊಲೆನಗೆ ಶ್ರೀಮಂತೆಯು
ಪಾಂಡುಪುತ್ರರಿಗವಳು ವರದಾತೆಯಾಗಿಹಳು
ನಮಗೆಲ್ಲ ಪೂಜಾರ್ಹ ಶ್ರೀದೇವಿಯು

ಆ ಮೈಯ್ಯ ಬಳುಕಾಟ ಮಿಂಚೆಸೆವ ಕಣ್ನೋಟ
ಮುಗುಳುನಗೆಯೊಲಿವಾಟ ಅವಳ ಬೇಟ
ತಾಯಲ್ತು ! ತಾಯಲ್ತು ! ಒಲಿದುಬಂದಿಹ ಒಲುಮೆ
ಚೆಲುವೆ ಅಪ್ಸರೆ ಅವಳ ಪ್ರೇಮದಾಟ"............

ದ್ವಂದ್ವ ಸಮರದಲೆದೆಯು ಚೂರುಚೂರಾಗಿತ್ತು
ಶಾಂತಹೃದಯದಿ ಜ್ವಾಲೆ ಜ್ವಲಿಸಿದ್ದಿತು
ನೋವಿನುದ್ವೇಗದಲಿ ತಿದಿಯೊತ್ತಿದಂದದಲಿ
ಬಿಸಿಯುಸಿರು ಸುಡುಸುಡುತ ಸೂಸುತಿತ್ತು.

ಊರ್ವಶಿಯ ರೂಪಿನಲಿ ಅರ್ಜುನನ ಮನನಟ್ಟು
ಅಲ್ಲೋಲಕಲ್ಲೋಲವೆದ್ದಿದ್ದಿತು
ಭೋರ್ಗರೆವ ಕಡಲಿನಲಿ ಅಲೆಗಳೇರಿಳಿತದಲಿ
ನಾವೆ ಬಿರುಗಾಳಿಯಲಿ ಸಿಲುಕಿದ್ದಿತು.

"ಅಗ್ನಿ ಪರ್ವತದಂತೆ ಸಿಡಿಯಲಾರದೆ ಮಿದುಳು ?"
ಒಳದನಿಯು ಅರಚಿತ್ತು ನೋವನುಂಡು.
"ಚಿಂತೆ ಚಿತೆಯುರಿಯಲ್ಲಿ ಸುಡಲಾರದೇ ಬಾಳು
ಈ ಸ್ವರ್ಗವೆನಗಾಯ್ತು ಮರುಳುಕಾಡು".

ದೇವೇಂದ್ರನಗರಿಯಲಿ ನರಕದರ್ಶನವಾಯ್ತು
ಮನಸಿನಲಿ ನಡೆದಿತ್ತು ಘೋರಸಮರ
ಅರ್ಜುನನ ಹೃದಯವನು ಚಿಂತೆ ಕಡೆಯುತಲಿತ್ತು
ಉಕ್ಕುಕ್ಕಿ ಬರುತಿತ್ತು ದುಃಖಪೂರ.

"ಸುರಧೇನು ಕಲ್ಪತರು ಇಂದ್ರನೈರಾವತವು
ಸ್ವರ್ಗಲೋಕದ ಚೆಲುವು ಹರ್ಷವೆಲ್ಲ
ತೃಪ್ತಿಸಂತೋಷಗಳ ಸೌಖ್ಯಸಾಗರವಿಂದು
ಎದೆಮನಕೆ ಶಾಂತಿಯನು ತಾರದಲ್ಲ" !

ಮೃದುತಲ್ಪ ಮುಳ್ಳಾಯ್ತು ಅರಮನೆಯೆ ಸೆರೆಯಾಯ್ತು
ಅಮೃತವೇ ವಿಷವಾಯ್ತು ಅರ್ಜುನನಿಗೆ
ಬೆಳಕು ಕತ್ತಲೆಯಾಯ್ತು ಗುರಿಯು ದುರ್ಗಮವಾಯ್ತು
ಬಾಳು ದುಸ್ಸಹವಾಯ್ತು ಸುರವಿಜಯಗೆ.

ಬೇಡ ಹರಹಿದ ಬಲೆಗೆ ಬಿದ್ದಿರುವ ಸಿಂಹದೊಲು
ವಿಧಿನೇದ ಜಾಲದಲಿ ಸಿಲುಕಿದ್ದನು
ಚಂದ್ರವಂಶದ ವೀರ ಧೀರನಿಂದ್ರಕುಮಾರ
ದಾರಿ ಮುಂಗಾಣದಿರೆ ತೊಳಲಿದ್ದನು.

ತನ್ನ ನೆಳಲನೆಕಂಡು ಬೆದರುವಾ ಪಶುವಿನೊಲು
ಭಯದಿಂದ ಬೆಚ್ಚಿದನು ಇಂದ್ರಸೂನು
ಹೃದಯಸಾಗರದಲ್ಲಿ ಎದ್ದ ಬಿರುಗಾಳಿಯಲಿ
ಅಲೆಯಲ್ಲಿ ತೇಲಿದನು ಪಾಂಡುಸುತನು.

ಕಾಳ್ಕಿಚ್ಚಿನಲಿ ಸಿಕ್ಕಿ ಚೀರಿಡುವ ಸಿಂಹದೊಲು
ಬೇಗೆಯಲಿ ನರಳಿದನು ಆ ವೀರನು
ಬಾಳ ಮರುಭೂಮಿಯಲಿ ಸುಡುತಿರುವ ಧಗೆಯಲ್ಲಿ
ಸುಯ್ದು ಬಳಲಿದನವನು ಆ ಧೀರನು.

ಇಂತು ಚಿಂತಾಗ್ನಿಯಲಿ ಬೆಂದಿದ್ದ ಜೀವಕ್ಕೆ
ಮುಂದಮಾರುತ ತಂಪನೆರೆದು ಬಂತು
ಶುಭ್ರ ನೀಲಾಕಾಶ ತಿಂಗಳನು ಚಿಮುಕಿಸಲು
ಶಾಂತಿಯಿಂದೆದೆ ಏಕೊ ತುಂಬಿ ಬಂತು.

ಬೆಳಕಿನಾ ಕುಡಿಯೊಂದು ದೂರದಲಿ ಕುಣಿದಿತ್ತು
ಆಶ್ಚರ್ಯದಲಿ ನೋಡೆ ಅವನ ಚಕ್ಷು
ಕತ್ತಲಲಿ ಅಡಗಿದ್ದ ದಿವ್ಯಪಥದರಿವಾಯ್ತು
ಬಾಳ ಮರುಭೂಮಿಯಲೆ ಓಯಸಿಸ್ಸು !

ಪೂರ್ಣಸಂತುಷ್ಟಿಯಲಿ ಹೋರಾಟವಿಳಿದಿತ್ತು
ಸರ್ಪದೊಲು ಬಿರುಗಾಳಿ ಪವಡಿಸಿತ್ತು
ಧರ್ಮಸಮರದಲೆದೆಯ ತಮವೆಲ್ಲ ಸೋತಿತ್ತು
ದಿವ್ಯದರ್ಶನದಿಂದ ಪೂತವಾಯ್ತು.

ದ್ವಂದ್ವದಲಿ ಮನಸಿಲುಕಿ ನೋವು ಸುಟ್ಟುರಿಸಿರಲು
ದುಃಖದಲಿ ತೊಯ್ದಿರಲು ನೇತ್ರಂಗಳು
ಅರ್ಜುನನ ಹೃದಯದಲಿ ನಡೆದು ಮಂಥನವು
ಮಾತೃಭಾವದ ಅಮೃತ ಉಕ್ಕಿ ಬರಲು.

ಕಾಳಕತ್ತಲೆಯಲ್ಲಿ ದಾರಿಕಾಣದೆ ಇದ್ದ
ಪಾಂಥನಿಗೆ ಗುರಿತಾನು ಕಂಡಿದ್ದಿತು
ಮಾತೃಪ್ರೇಮದ ದಿವ್ಯ ಜೋಗುಳದ ಜೊಂಪಿನಲಿ
ದಿವ್ಯಶಾಂತಿಯಲೆದೆಯು ತುಂಬಿದ್ದಿತು.

೧೧

ಮಧುರ ಮಿಲನಕ್ಕೆಂದು ಊರ್ವಶಿಯು ಅಣಿಯಾಗಿ
ಚೆಲುವು ಮೈಯಿಗೆ ಸೊಬಗ ಮೆರುಗಿತ್ತಳು
ಕನ್ನೆ ಕಾಮಿನಿಯಾಗಿ ಚೆನ್ನೆ ರಾಗಿಣಿಯಾಗಿ
ಪ್ರೇಮದರ್ಶನಕೆಂದು ಸಜ್ಜಾದಳು.

ತುಂಬು ಬೆಳುದಿಂಗಳಲಿ ಮಿಂದುಬಂದವಳಂತೆ
ಶುಭ್ರಜ್ಯೋತ್ಸ್ನೆಯಲವಳು ಮೆರೆದಿದ್ದಳು
ತೊಟ್ಟ ಕಂಚುಕವೆದೆಯ ಚೆಲುವನಿಮ್ಮಡಿಸಿರಲು
ಶ್ವೇತಚೀನಾಂಬರವ ಧರಿಸಿದ್ದಳು.

ಬೈತಲೆಯೊಳಿಳಿತಂದ ಹೊಳೆವ ರತ್ನದ ಬೊಟ್ಟು
ನಾಸಿಕದ ಎಡಬಲದಿ ವಜ್ರ ನತ್ತು
ಕಿವಿಯಲ್ಲಿ ಜೋಮಾಲೆ ಕೊರಳಲ್ಲಿ ಪೂಮಾಲೆ
ರತ್ನ ಕಂಕಣ ಕರದಿ ರಂಜಿಸಿತ್ತು.

ಹಣೆಯಲ್ಲಿ ಸಿಂಧೂರ ಕದಪಿನಲಿ ಮಕರಿಕೆಯು
ಮಲ್ಲಿಗೆಯು ಮುಡಿಯಲ್ಲಿ ಮೆರೆಯುತಿರಲು
ಮೈಯಲ್ಲಿ ಪೂಸಿದ್ದ ಶ್ರೀಗಂಧಪರಿಮಳವು
ಪದಕ ವಕ್ಷಸ್ಥಳದಿ ಶೋಭಿಸಿರಲು.

ಭಾವಲೋಕವಿಹಾರಿ ಪೂರ್ಣಚಂದ್ರಚಕೋರಿ
ಕಲ್ಪನೆಯ ಬೆನ್ನೇರಿ ಹೊರಡುತಿರಲು
ನೂರು ಆಸೆಯ ಬಯಕೆ ಬೆಂಬಲಕೆ ಕಾದಿರಲು
ಮಧುರ ಮಿಲನಕ್ಕೆಂದು ಸಾಗಿದ್ದಳು.

ಕೋಟಿ ಕನಸಿನ ರಾಣಿ ಪ್ರೇಮ ವೀಣಾಪಾಣಿ
ನಲ್ಲನಂತಃಪುರಕೆ ಹೊರವಂಟಳು
ಇಂದ್ರಲೋಕದ ಕನ್ನೆ ಪೌರವನ ಮನದನ್ನೆ
ಪ್ರಥಮಮಿಲನಕ್ಕೆಂದು ನಡೆತಂದಳು !

ಅವಳು ನಡೆವೆಡೆಯಲ್ಲಿ ಹಸಿರು ಹಾಸಿಗೆಯಿತ್ತು
ಕಂಪಸೂಸುವ ಪುಷ್ಪರಾಜಿಯಿತ್ತು
ಆಲದಲಿ ಶುಕತತಿಯ ಶುಭಗಾನ ನಡೆದಿತ್ತು
ಸಪ್ತರ್ಷಿಮಂಡಲದ ಹರಕೆಯಿತ್ತು.

ಮಧುಮಾಸದುತ್ಸವದ ನಾಂದಿಯನು ಹಾಡುತ್ತ
ಕೋಗಿಲೆಯು ಸ್ವಾಗತವ ಬಯಸುತಿತ್ತು
ಚಂದನವು ತಲೆದೂಗಿ ನರುಗಂಪ ಬೀರುತ್ತ
ವಿರಹಿಗಳಿಗಾಹ್ವಾನವೀಯುತಿತ್ತು.

ಕ್ಷೀರಸಾಗರದಲ್ಲಿ ತೇಲಿ ಬಹ ಹಂಸದೊಲು
ಮೆಲುಮೆಲನೆ ಊರ್ವಶಿಯು ನಡೆದುಬರಲು
ಮೃದುಗಾತ್ರೆ, ಸುಪವಿತ್ರೆ, ಶುಭನೇತ್ರೆ, ಸುಚರಿತ್ರೆ
ತನ್ನ ಭಾಗ್ಯವ ನೆನೆದು ಹರ್ಷಿಸಿದಳು.

ಚೆಲುವು ಮುಂದಲೆಯಿಂದ ಇಳಿತಂದ ಮುಂಗುರುಳು
ಕಂಗಳನು ಮುದ್ದಿಡಲು ಯತ್ನಿಸಿರಲು
ಮಂದಮಲಯಾನಿಲವು ಬಂದು ಅಲೆಅಲೆಯಾಗಿ
ಸೀರೆ ನೆರಿಯನು ತಾನು ಚಿಮ್ಮಿಸಿರಲು.

ಮಧುರಮಿಲನದ ರಾತ್ರಿ ಮೌನವಾಗಿರೆ ಧಾತ್ರಿ
ಸಂತಸದೊಳಾ ಚೆನ್ನೆ ಸೊಕ್ಕಿದ್ದಳು
ಪಾರ್ಥಮಿಲನವ ನೆನೆದು ಕೆನ್ನೆ ಕೆಂಪೇರಿರಲು
ಪುಲಕದಲಿ ಆ ಕನ್ನೆ ಅರಳಿದ್ದಳು.

ಮೇಲೆ ವಿದ್ಯುನ್ಮಾಲೆ ನವಕಾಂತಿಯಲಿ ತೇಲಿ
ನೂರ್ಬು ಸಾಸಿರ ವರ್ಣ ದೀಪಮಾಲೆ
ರಾಜಹಂಸಗಳಂತೆ ಮರಿಮೇಘಗಳು ತೇಲೆ
ತೋರಿತ್ತು ತೂಗಿದೊಲು ಪುಷ್ಪಮಾಲೆ.

ಎದೆಗೆ ಎದೆ ಬೆಸೆವಂಥ ವಿರಹಿಗಳ ಮಧುಮಾಸ
ಮೇಲೆ ನೀಲಾಕಾಶ ಚಂದ್ರಹಾಸ
ಭಾವಜೀವಿಗಳೆದೆಯ ದಿವ್ಯಸುಂದರಮಾಸ
ಕಾಮ ರತಿದೇವಿಯರ ಮಂದಹಾಸ.

ಪ್ರಭುವಸಂತನ ಕರೆಗೆ ಓಗೊಟ್ಟು ಜಗವೆಲ್ಲ
ಪ್ರೇಮದಾಲಾಪವನು ಗೈಯುತಿತ್ತು
ಮರ, ಬಳ್ಳಿ, ಗ್ರಹ, ತಾರೆ ಬಾನ್ಬುವಿಯೊಳೆಲ್ಲೆಲ್ಲು
ಆನಂದದುನ್ಮಾದ ಕಾಣುತಿತ್ತು.

ಮಂದಮಲಯಾನಿಲನ ಸೌಗಂಧಿಯಾಮಿಲನ
ಇರುಳು ದೇವಿಯ ಮಿಲನ ದಿನಪನೊಡನೆ
ಪೂರ್ಣಿಮಾ ಚಂದ್ರಮನ ಕುಮುದಿನಿಯ ವರಮಿಲನ
ಬೆಳುದಿಂಗಳಾಮಿಲನ ರಾತ್ರಿಯೊಡನೆ.

ಪ್ರಭುವಸಂತನಜೊತೆಗೆ ವಾಸಂತಿಯಾ ಮಿಲನ
ಪ್ರಕೃತಿದೇವಿಯ ಮಿಲನ ಪುರುಷನೊಡನೆ
ಭಾವಜೀವದ ಮಿಲನ ಕಾಮಪ್ರೇಮದ ಮಿಲನ
ವೇಣುಗಾನದ ಮಿಲನ ನಾದದೊಡನೆ.

ನೋವು ನಲವಿನ ಮಿಲನ ಸುಖದುಃಖದಾ ಮಿಲನ
ಸಾಗರೋಪಮವಾಯ್ತು ಸ್ವರ್ಗಮಿಲನ
ನವ್ಯಭವ್ಯದ ಮಿಲನ ಲಲಿತನೂತನ ಮಿಲನ
ನವಸೃಷ್ಟಿಗಾಹ್ವಾನವಿತ್ತಮಿಲಿನ.

ಸ್ಪಷ್ಟದೊಳಗಸ್ಪಷ್ಟ ವ್ಯಕ್ತದೊಡನವ್ಯಕ್ತ
ನಿಶ್ಶಬ್ದದಾಮಿಲನ ಶಬ್ದದೊಡನೆ
ದೃಶ್ಯದೊಳಗದೃಶ್ಯ ಭೂವ್ಯೋಮದಾ ಮಿಲನ
ಅಂಧತೆಯ ಚಿರಮಿಲನ ಬೆಳಕಿನೊಡನೆ.

ರಾಗಭೋಗದಮಿಲನ ತ್ಯಾಗಯೋಗದಮಿಲನ
ಅಪರಿಪೂರ್ಣದಮಿಲನ ಪೂರ್ಣದೊಡನೆ
ಅಂತರಂಗದ ಮಿಲನ ಬಾಹ್ಯಪರಿವೇಶದಲಿ
ಹೃದಯರಂಗದ ಮಿಲನ ಮನಸಿನೊಡನೆ.

ನಡೆನುಡಿಗಳಾಮಿಲನ ಕನಸುಮನಸಿನಮಿಲನ
ಸಕಲಜೀವದಮಿಲನ ದೇವನೊಡನೆ.
ಹುಟ್ಟುಸಾವಿನಮಿಲನ ಆದಿ ಅಂತ್ಯದ ಮಿಲನ
ಪೂರ್ವಪಶ್ಚಿಮಮಿಲನ ಕಡಲಿನೊಡನೆ.

ದಿವ್ಯಭಾವಗಳಲೆಯು ಹೃದಯಸರಸಿಯಲೆದ್ದು
ಅಲ್ಲೋಲಕಲ್ಲೋಲ ಗೈಯುತಿರಲು
ಹರ್ಷಬಂಧುರೆಯಾಗಿ ಪ್ರೇಮಕಾತರೆಯಾಗಿ
ಮಧುರಮಿಲನಕೆ ಚಲುವೆ ಐತಂದಳು.

ಪ್ರಕೃತಿಮಾತೆಯ ದಿವ್ಯವಾತ್ಸಲ್ಯದಲಿ ಮಿಂದ
ಊರ್ವಶಿಗೆ ಜಗವೆಲ್ಲ ಚೆಲುವಾಯಿತು
ಒಲವುನಲವುಗಳೆದೆಯ ಒಳಹೊರಗು ತುಂಬಿರಲು
ಭದ್ರಶುಭಮಂಗಳಕೆ ಹಾರೈಸಿತು.

೧೨

ಊರ್ವಶಿಯು ಐತರುವ ವರ್ತಮಾವನರುಹೆ
ಕೋಗಿಲೆಯ ಮಧುಗಾನ ಕೇಳುತಿತ್ತು
ಮಧುಮಾಸದುತ್ಸಾಹ ಸಂತೋಷ ಸಂಭ್ರಮದಿ
ಶುಕತತಿಯು ಋತುಗಾನ ಗೈಯುತಿತ್ತು.

ಹೆಜ್ಜೆಗಳ ಮೆಲುನಡೆಗೆ ಗೆಜ್ಜೆಗಳು ಘಲಿರೆನಲು
ಇನಿದನಿಯು ಹೃದಯದಲಿ ಪಡಿನುಡಿಯಲು
ಮನವು ಕೋಲಾಹಲದಿ ಭಯಭ್ರಾಂತವಾಗಿರಲು
ಪಾರ್ಥಮಂದಿರದತ್ತ ಐತಂದಳು.

ಅನತಿ ದೂರದಲಿದ್ದ ಪ್ರಾಸಾದವನು ಕಂಡು
ಬಯಕೆ ಭಾವಗಳೆದ್ದು ಪುಟಿದಾಡಲು
ಮೂರುಕನಸುಗಳಿಂದ ಹೃದಯ ತಾತುಂಬಿಬರೆ
ಉತ್ಸಾಹ ಮೈಯ್ಯಲ್ಲಿ ತುಳುಕಾಡಲು.

ಶ್ವೇತಶಿಲೆಯರಮನೆಯು ಬೆಳುದಿಂಗಳಲಿ ಮಿಂದು
ಗಿರಿಹಿಮಾಲಯದಂತೆ ಗೋಚರಿಸಿತು
ಜ್ಯೋತ್ಸ್ನಾಭಿಷೇಕದಲಿ ಸ್ವರ್ಣಗೋಪುರ ತಾನು
ಮಿನುಮಿನುಗಿ ಹೊಳೆಹೊಳೆದು ಕಂಗೊಳಿಸಿತು.

ಆನಂದದಲೆಯಲ್ಲಿ ತೇಲುತ್ತ ಮುಳುಗುತ್ತ
ಐತಂದಳೂರ್ವಶಿಯು ಪ್ರಾಸಾದಕೆ
ಎದೆಯ ಬಟ್ಟಲಿನಲ್ಲಿ ಹರ್ಷವನು ಹೀರುತ್ತ
ನೆರಿಯನ್ನು ಚಿಮ್ಮುತ್ತ ಪ್ರಿಯನ ಗೃಹಕೆ.

ನವಭಾವ ತುಂಬಿಬರೆ ಎದೆಯುಬ್ಬಿ ಕಂಪಿಸಿರೆ
ಪ್ರೇಮದರ್ಶನಕಾಗಿ ಬಂದಳವಳು
ಉತ್ಸಾಹ ಹೊಮ್ಮಿ ಬರೆ ಭರವಸೆಯು ಉಕ್ಕಿಬರೆ
ನಿತ್ಯ ನವ್ಯೋತ್ಸವಕೆ ನಡೆತಂದಳು.

ಬಾಗಿಲಿನ ಬಳಿ ಬಂದು ನಿಂತಳರೆಚಣವಲ್ಲಿ
ನಾಚುಗೆಗೆ ಕದಪುಗಳು ಕೆಂಪೇರಿರೆ
ಶುಭನಿರೀಕ್ಷಣೆಯಲ್ಲಿ ಕಣ್ಣುಗಳು ತುಂಬಿಬರೆ
ಹೃನ್ಮನವು ತನುವೆಲ್ಲ ಕಂಪಿಸುತಿರೆ.

ಪ್ರೇಮಪೂರ್ಣಾವೇಶ ಮಂದಾನಿಲ ಸ್ಪರ್ಶ
ಬಾಗಿಲಿನ ತೆರೆಯನ್ನು ಪುಲಕಿಸಿರಲು.
ಬಲಗಾಲ ಮುಂದಿಟ್ಟು ಬಂದಳೂರ್ವಶಿಯಲ್ಲಿ
ತನುವೆಲ್ಲ ಪುಲಕದಲಿ ತೊಯ್ಯುತಿರಲು.

ರೇಸಿಮೆಯ ತೆರೆಸರಿಸಿ ನಿಂತಳಾಸುಂದರಿಯು
ಕುಶಲ ಶಿಲ್ಪಿಯು ಕಡೆದ ಶಿಲ್ಪದಂತೆ
ವಿಶ್ವಕರ್ಮನ ಭವ್ಯ ಸ್ವರ್ಣ ವಿಗ್ರಹದಂತೆ
ಸೌಂದರ್ಯವೇ ಕರಗಿ ಮೂಡಿದಂತೆ.

ಪುಷ್ಪ ಸೌರಭವನ್ನು ತಂದ ಮಲಯಾನಿಲವು
ಅತುಲವಿಸ್ಮಯದಿಂದ ಚಲಿಸದಿತ್ತು
ತೆರೆದ ವಾತಾಯನದಿ ಬಂದ ತಿಂಗಳ ಬೆಳಕು
ಅಚ್ಚರಿಯೊಳೆಲ್ಲವನು ನೋಡುತಿತ್ತು.

ಬುವಿ ಕಾನು ಬಾನ್ಬಯಲು ಗಿರಿ ತೊರೆಯು ತರುರಾಜಿ
ಭೋಕ ಲೋಕಗಳೆಲ್ಲ ನೋಡುತಿರಲು
ಮಧುಚಂದ್ರ ರತಿ ಕಾಮ ಕೋಟಿಗ್ರಹ ತಾರೆಗಳು
ಮೂಕ ಭಾವದಲೆಲ್ಲ ವೀಕ್ಷಿಸಿರಲು.

ಮಿಂಚಿನೊಲು ಮೂಡಿದ್ದ ದಿವ್ಯರೂಪವ ಕಂಡು
ಆಶ್ಚರ್ಯದಲಿ ಪಾರ್ಥ ಮರವಟ್ಟನು
ಅಂತರಂಗದೊಳಿದ್ದ ಮಾತೃಭಾವವು ಪುಟಿದು
ಮೈತಳೆದು ನಿಂತಂತೆ ಭಾವಿಸಿದನು.

ರತ್ನರಜತ ದ್ವಾರದಲಿ ನಿಂತ ಸ್ತ್ರೀಮೂರ್ತಿ
ವಿಶ್ವಮಾತೆಯ ತೆರದಿ ಗೋಚರಿಸಲು
ಆದಿಶಕ್ತಿಯೆ ಬಂದು ಮೈದೋರಿದಂತಾಗಿ
ಪಾರ್ಥನೆದೆಮನಕೆಲ್ಲ ಕಾಣುತಿರಲು.

ಸೃಷ್ಟಿ ಸ್ಥಿತಿ ಲಯ ಶಕ್ತಿ ಮೂಡಿ ಮೂರ್ತಿಯು ಘನಿಸಿ
ಮಾತೃ ರೂಪದಲೆದುರು ಗೋಚರಿಸಿತು
ರವಿ ಚಂದ್ರ ಗ್ರಹ ತಾರೆ ಬುವಿ ಕಾನು ಬಾನ್ಬಯಲು
ಲೋಕಲೋಕಗಳಲ್ಲಿ ಲಯವಾಯಿತು.

ಮಾತೃಭಾವವು ಎದ್ದು ಅವನ ಹೃದಯವ ಗೆದ್ದು
ಆಕಾಶದೆತ್ತರಕೆ ಬೆಳೆದು ನಿಂತು
ದಿಕ್ತಟಕೆ ವ್ಯಾಪಿಸಿತು ಜಗವೆಲ್ಲ ತುಂಬಿತ್ತು
ವಿಶ್ವರೂಪವ ತಾಳಿ ಕಂಗೊಳಿಸಿತು.

ದಿವ್ಯಸಂದರ್ಶನದಿ ಆತ್ಮವಿವಶತೆಹೊಂದಿ
ಬಾಷ್ಪಲೋಚನನಾದನಾಪಾರ್ಥನು
ಮಾತೃದರ್ಶನದಿಂದ ಎದೆತುಂಬಿ ಮನತುಂಬಿ
ಸಾಷ್ಟಾಂಗವೆರಗಿದನು ಸುರವಿಜಯನು.

ಮೌನದಲಿ ತಲೆವಾಗಿ ಭಕ್ತಿಯಲಿ ಕೈಮುಗಿದು
ಫಲ್ಗುಣನು ಕೇಳಿದನು ಊರ್ವಶಿಯನು
"ಏನು ಬಂದಿರಿ ತಾಯೆ ಸೇವೆಯನು ಕೃಪೆಮಾಡಿ
ಕುವರನೆಡೆಗೈತಂದ ಕಾರ್ಯವೇನು ?"

ತನುಮರೆತು ಮನಮರೆತು ತನ್ನ ತಾನೇಮರೆತು
ಮಾತೃಪದಕೆರಗಿದನು ಇಂದ್ರ ಸೂನು
ಭಕ್ತಿಯಾವೇಶದಲಿ ವಿನಯ ಸೌಜನ್ಯದಲಿ
ಧನ್ಯತೆಯ ಪಡೆದಿದ್ದನಾಧೀರನು.

೧೩

ವಿವಶವಾಯಿತು ಮನವು ಉಡುಗಿತ್ತು ಚೇತನವು
ತನುವು ನೆಲಕುರುಳಿತ್ತು ಕದಳಿಯಂತೆ !
ಕಣ್ಣುಮಂಜಾಗಿತ್ತು ಕವಿದಿರಲು ವಿಸ್ಮೃತಿಯು
ಜಗವೆಲ್ಲ ಕಂಡಿತ್ತು ಶೂನ್ಯದಂತೆ.

ಸಿಡಿಲಿನಾಘಾತಕ್ಕೆ ದಿವ್ಯಸುಂದರಶಿಲ್ಪಿ
ಸ್ವರ್ಣಸ್ತೂಪಗಳೆಲ್ಲ ಬೀಳುವವೊಲು
ಬವಳಿಬಂದಂತಾಗಿ ಸುತ್ತಕತ್ತಲುಕವಿದು
ಆ ಚೆಲುವೆ ಮೈತಪ್ಪಿ ಕುಸಿದಿದ್ದಳು.

ಭ್ರಮೆಯತೆರೆಯುರುಳಿತ್ತು ಸತ್ಯಗೋಚರಿಸಿತ್ತು
ಮನದಕಲ್ಪನೆಯೆಲ್ಲ ಚೂರಾಯಿತು.
ಆಸೆಬಯಕೆಗಳೆಲ್ಲ ಗಾಳಿಗೋಪುರವಾಯ್ತು
ಜೀವನದಕನಸೆಲ್ಲ ಕಮರಿಹೋಯ್ತು.

ಮೇಘಮಾಲೆಯು ಬಂದು ಚಂದ್ರಮನ ಮುಚ್ಚಿತ್ತು
ಕೋಗಿಲೆಯ ಸಂಗೀತ ನಿಂತುಹೋಯ್ತು
ಹಬ್ಬಿತ್ತು ಕಾರಿರುಳು ಮೌನವಾವರಿಸಿತ್ತು
ಪ್ರಕೃತಿದೇವಿಯಮನವು ಮೂಕವಾಯ್ತು.

ಇವ ಪುರೂರವನಲ್ಲ, ಇವ ಪುರೂರವನಲ್ಲ
ಇವನು ಪಾರ್ಥನು ಎಂದು ಲೋಕವೆಲ್ಲ
ನಿನ್ನ ಪ್ರಿಯನಿವನಲ್ಲ ವೀರವಿಕ್ರಮನಲ್ಲ
ಅವನ ವಂಶಜನಿವನು ಎಂದು ಎಲ್ಲ;

ತರು ರಾಜಿ ಗ್ರಹ ತಾರೆ ಬುವಿ ಕಾನು ಆಕಾಶ
ಮೃಗಪಕ್ಷಿ ಎಲ್ಲಿವೂ ಹೇಳಿದಂತೆ
ಎಲ್ಲವೂ ಭ್ರಮೆಯೆಂದು ಭಾಸವಾಯಿತು ಮನಕೆ
ನೈರಾಶ್ಯದಲಿ ತನ್ನ ತಳ್ಳಿದಂತೆ.

ಆ ಚಲುವೆಯೆದೆಯಲ್ಲಿ ಮೂಡಿದ್ದ ಕಲ್ಪನೆಯೆ
ಅವಳ ಸರ್ವಸ್ವವನು ನುಂಗಿನಿಂತು
ವಿಕಟನಗೆಯನು ನಕ್ಕು ಅಟ್ಟಹಾಸವಗೈದು
ಅವಳ ಮಿದುವೆದೆಯನ್ನು ಸುಟ್ಟುರಿಸಿತು

ಹೃದಯಾರವಿಂದವನು ತುಳಿದಿತ್ತು ಮದಗಜವು
ಬಾಳಲತೆಯನು ಕಿತ್ತು ದೂರ ಎಸೆದು
ನೋವು ನೈರಾಶ್ಯದಲಿ ದುಃಖ ದೌರ್ಭಾಗ್ಯದಲಿ
ಅವಳ ಸರ್ವಸ್ವವನು ಸಿಲುಕಿಸಿತ್ತು.

ಬಿದ್ದ ಊರ್ವಶಿ ಎದ್ದು ತೆರಳಿದಳು ಕತ್ತಲಲಿ
ದೂರದೂರಕೆ ಎಲ್ಲೊ ಕಾಣದೆಡೆಗೆ
ಎದೆಶೂನ್ಯ ಮನಶೂನ್ಯ ಸರ್ವವೂ ಚಿರಶೂನ್ಯ
ಜೀವನವೆ ಸಾಗಿರಲು ಶೂನ್ಯದೆಡೆಗೆ.

ತರುರಾಜಿ ಗ್ರಹ ತಾರೆ ಬುವಿ ಕಾನು ಆಕಾಶ
ಲೋಕವೇ ವೀಕ್ಷಿಸಿತು ದುಃಖಿಯನ್ನು
ಪ್ರಕೃತಿದೇವಿಯು ತಾನು ಮರುಗಿ ನಿಟ್ಟುಸುರಿಟ್ಟು
ದುಃಖದಲಿ ನೋಡಿದಳು ಊರ್ವಶಿಯನು.

ಊರ್ವಶಿಯ ಮನಒಡೆದು ಹೃದಯ ಬರಿದಾಗಿತ್ತು
ಶೂನ್ಯವೇ ಎಲ್ಲೆಲ್ಲು ಆವರಿಸಿತು
ಅರ್ಜುನನ ಎದೆಮನವು ಬಾಳ್ತುಂಬಿ ತುಳುಕಿತ್ತು
ಮಾತೃಭಾವವು ಗೆದ್ದು ತುಂಬಿ ಬಂತು.

—ಎಲ್. ಎನ್. ಶಾಸ್ತ್ರಿ
(ಜಾನಕೀತನಯ)

ಕುದಿ

ಯಾವ ಗಾಳಿಯ ಹೊಡೆತವೋ ಇದು
ಮೊರೆಯುತಿರುವುದು ವಿಹ್ವಲ
ಯಾವ ದಂಡಿನ ದಾಳಿಯೋ ಇದು
ಮೇರೆ ಮೀರಿದೆ ತಳಮಳ

ನನಗೆ ನಾನೇ ಹಗೆಯ ಬಗೆದೊಲು
ಮನವು ಕಿಡಿ ಕಿಡಿಯಾಗಿದೆ
ಲೋಕ ಲೋಕವೆ ಮಸಣವಾದೊಲು
ಬದುಕು ಬರಿ ಬಯಲಾಗಿದೆ

ಎದೆಯಲೆದ್ದಿದೆ ಗೊಂದಲ
ಸದ್ದು ಕೇಳದ ಗದ್ದಲ!

ಆಸೆ ಭರವಸೆ ಕುಸಿಯುತಿರುವುವು
ಕೋಟೆ ಕಟ್ಟಿದೆ ಬೇಸರ
ನೆಚ್ಚು ಮೆಚ್ಚುಗಳುರುಳುತಿರುವುವು
ಜೀವಕಿಲ್ಲವು ಆಸರ

ಭಗ್ನ ಚಿತ್ತದ ಹುತ್ತದಡಿಯಲಿ
ವಿರಸ ಫಣಿ ಹೆಡೆಯೆತ್ತಿದೆ
ಛಿದ್ರ ಹೃದಯದ ಯಜ್ಞದುರಿಯಲಿ
ಬಾಳು ಬೇಳುವೆಯಾಗಿದೆ

ನಿತ್ಯ ತುಮುಲದ ವಿಪ್ಲವ
ಕೋಪ ತಾಪದ ತಾಂಡವ!

—ಜಿ. ವರದರಾಜರಾವ್

ಅಕ್ಷಯ ವಸ್ತ್ರ*

ಕುಮಾರವ್ಯಾಸಭಾರತದ 'ಸಭಾಪರ್ವ'ದಲ್ಲಿ ಒಂದು ಅತ್ಯಂತ ಜನಪ್ರಿಯವಾದ ಪ್ರಸಂಗ :

ಶಕುನಿ ತಂತ್ರದ ಜೂಜಿನಲ್ಲಿ ಎಲ್ಲವನ್ನೂ ಸೋತು ತಲೆ ತಗ್ಗಿಸಿ ಕುಳಿತ ಪಾಂಡವರ ಎದುರಿಗೆ, ದುಶ್ಶಾಸನನು ದ್ರೌಪದಿಯನ್ನು ಎಳೆದು ತಂದು ನಿಲ್ಲಿಸಿದ್ದಾನೆ; ದುಶ್ಶಾಸನನ ಹಸ್ತಗ್ರಹಣದಿಂದ ಅವಳ ಜಡೆಮುಡಿ ಬಿಚ್ಚಿಹೋಗಿದೆ. ಪಾಂಡವರ ಪಟ್ಟದ ರಾಣಿಗೆ ಹೀಗಾಗಬಹುದೆ ? ರಾಜಸೂಯದಲ್ಲಿ ಮಂತ್ರ ಜಲಾಭಿಷಿಕ್ತವಾದ ಅವಳ ಶ್ರೀಮುಡಿಗೆ ಈ ಪಾಡು ಪ್ರಾಪ್ತವಾಗಬಹುದೆ?—ಎನ್ನುತ್ತಿದ್ದಾರೆ ಸಭಾಸದರು. ತನ್ನನ್ನು ಹೀಗೆ ತುಂಬಿದ ಸಭೆಗೆ ಎಳೆದು ತರಿಸಿದ್ದು ನ್ಯಾಯವಲ್ಲವೆಂದು ಅಬಲೆಯಾದ ದ್ರೌಪದಿ ಎತ್ತಿದ ಆಕ್ಷೇಪಣೆಗೆ, 'ಯಥಾರ್ಥ ಭಾಷಣ ಭೀತ ಚೇತಸ'ರಿಂದ ತುಂಬಿದ ಸಭೆಯಲ್ಲಿ ಯಾರೂ ಉತ್ತರ ಕೊಡಲಿಲ್ಲ. ಕೌರವರ ಕಡೆಯವನೇ ಆದ ವಿಕರ್ಣನೊಬ್ಬನು ದ್ರೌಪದಿಯ ಪರವಾಗಿ ಆಡಿದ ಮಾತಾಗಲಿ, ದ್ರೌಪದಿಯ ಈ ದುರವಸ್ಥೆಗೆ ಕಾರಣನಾದ ಧರ್ಮರಾಯನ ತೋಳುಗಳನ್ನು ಸುಡುತ್ತೇನೆಂದು ಹಾರಾಡಿ, ಅರ್ಜುನನ ಪ್ರಯತ್ನದಿಂದ ಉಪಶಮನಗೊಂಡ ಭೀಮಸೇನನ ಕೋಪಾಗ್ನಿಯ ಪರಿಣಾಮವಾಗಲಿ, ಕೌರವನ ಮನಸ್ಸನ್ನು ಬದಲಾಯಿಸಲಿಲ್ಲ. ಕೂಡಲೇ ಕೌರವನು ಅಪ್ಪಣೆ ಮಾಡುತ್ತಾನೆ: "ಜೂಜಿನಲ್ಲಿ ಸೋತು ನಮಗೆ ದಾಸರಾಗಿರುವ ಈ ಪಾಂಡವರಿಗೆ ಹಾರ ಕಿರೀಟ ಪದಕಾದಿಗಳಿನ್ನೇಕೆ? ಹಾಗೆಯೇ 'ನಾರಿಗೀ ವಸ್ತ್ರಾಭರಣ ಶೃಂಗಾರವೇಕಿನ್ನು, ತೆಗೆ'—ಎಂದು. ಕೌರವನ ಕಣ್ಸನ್ನೆಗೆ ಕಾಯುತ್ತಿದ್ದ 'ಹೊಗೆ ಮೊಗದ ಕಿಡಿಗಣ್ಣ ಕೆಮ್ಮೀಸೆಗಳ ಗುಜುರಿನ ಜುಂಜುಕೇಶದ' ವಿಗಡ ದುಶ್ಶಾಸನ ಎದ್ದನು, 'ಬಂದು ಹಿಡಿದನು ದ್ರೌಪದಿಯ ಸೆರಗ'!

ದ್ರೌಪದಿ ಕೇಳಿದ ಧರ್ಮಾಧರ್ಮವನ್ನು ಕುರಿತ ಪ್ರಶ್ನೆಗೆ ಕೌರವನು ದುಶ್ಶಾಸನನ ಮೂಲಕ ಕೊಟ್ಟ ಉತ್ತರ ಇದು ! ಶೋಕದ ಮಬ್ಬಿನಲ್ಲಿ ಮುಳುಗಿದ ವಿದುರ ಭೀಷ್ಮ ದ್ರೋಣಾದಿಗಳು ಮಮ್ಮಲ ಮರುಗಿದರು ; ಪಾಂಡವರು ತಲೆ ತಗ್ಗಿಸಿ ಮೂಕರಾದರು. ದೀನವಾದ ಕಣ್ಣುಗಳಿಂದ ತುಂಬಿದ ಸಭೆಯನ್ನು ನೋಡಿ ದ್ರೌಪದಿ 'ಸೆರಗ ಬಿಡಿಸಿರೆ ತಂದೆಗಳಿರ' ಎಂದು ಹಲುಬಿದಳು. ಎಲ್ಲರ ನಿಸ್ಸಹಾಯಕ ಮನೋಭಾವವನ್ನು ಕಂಡಳು. ಅವಳಿಗೆ ಅರಿವಾಯಿತು 'ಪತಿಗಳಿನ್ನನು ಮಾರಿ ಧರ್ಮಸ್ಥಿತಿಯ ಕೊಂಡರು ; ಭೀಷ್ಮ ಮೊದಲಾದತಿರಥರು ಪರಹಿತವ ಬಿಸುಟರು ವ್ಯರ್ಥ ಭೀತಿಯಲಿ'—ಎಂಬ ಸತ್ಯ. ಆಗ ಅವಳ ಕರೆ ಸಹಜವಾಗಿಯೆ ಅನಾಥ ರಕ್ಷಕನಾದ ಶ್ರೀ ಕೃಷ್ಣನ ದ್ವಾರಕೆಯತ್ತ ಹೊನಲಿಟ್ಟಿತು. ಭಕ್ತ ಪರಾಧೀನನಾದ

* ಮಾನಸ ಗಂಗೋತ್ರಿಯ ಕನ್ನಡ ಸಂಶೋಧನ ಶಾಖೆಯ ಕೃಪೆಯಿಂದ

ಕೃಷ್ಣಪರಮಾತ್ಮನನ್ನು ಬಗೆ ಬಗೆಯಾಗಿ ಸ್ತುತಿಸಿ ಬೇಡಿಕೊಂಡಳು. ಅತ್ತ ದ್ವಾರಾವತಿಯಲ್ಲಿ ಕೃಷ್ಣನು ರುಕ್ಮಿಣಿ ಸತ್ಯಭಾಮೆಯರೊಂದಿಗೆ ಲೆತ್ತವನ್ನಾಡುತಿದ್ದನು ; ಆದರೆ ಆತ ಹಾಗೆ ಆಟದಲ್ಲಿ ಮಗ್ನವಾದರೂ ' ಭಕುತರಿಗೆ ತನ್ನನು ತೆತ್ತು ಬದುಕುವೆನೆಂಬ ಪರಮ ವ್ರತದ ನಿಷ್ಠೆಯನು ಚಿತ್ತದಲಿ ನೆಲೆಗೊಳಿಸಿ ' ಜಾಗ್ರತನಾಗಿದ್ದಾನೆ. ಇತ್ತ ಪರಾಭವದಲ್ಲಿ ಪಾಡಳಿದ ದ್ರೌಪದಿಯ ಕರೆ ಅತ್ತ ಕೃಷ್ಣನ ಎದೆಯನ್ನು ಮುಟ್ಟಿತು; ತಟ್ಟಿತು. ಮುರವೈರಿ ಸತಿಯ ಹುಯ್ಯಲನ್ನು ಕೇಳಿದ. ಪಾಂಡುಪುತ್ರರ ಬಾಳುವೆ ಹೀಗಾಯಿತೇ ಎಂದು ಒಂದು ಕ್ಷಣ ಮರುಗಿದ. ಕೂಡಲೇ "ಉಟ್ಟಾಸೀರೆ ಸೆಳೆಯಲು ಬಳಿಕ ಅಕ್ಷಯ ಸೀರೆಯಾಗಲಿಯೆಂದ ಗದುಗಿನ ವೀರನಾರಯಣ." ಕೃಷ್ಣನ ಕೃಪೆಯಿಂದ ದ್ರೌಪದಿಯ ಸೀರೆ ಅಕ್ಷಯವಾಯಿತು ; ದುಶ್ಶಾಸನ ಎಳೆದು ಎಳೆದು ಹಾಕಿದಷ್ಟೂ ಸೀರೆಯ ರಾಶಿ ಮುಗಿಲೆತ್ತರವಾಯಿತು. ದುಶ್ಶಾಸನನು ಸೋತು ಸೊರಗಿದನು. ಆಗ ಸಭಾಸದರೆಲ್ಲ ಆಶ್ಚರ್ಯದಿಂದ ಜಯ ಜಯಕಾರ ಮಾಡಿದರು. ದ್ರೌಪದಿ ನಿಜವಾಗಿಯೂ ಮಹಾಸತಿ ಎಂದರು. "ಆ ಮುಕುಂದನ ದಿವ್ಯನಾಮ ಪ್ರೇಮ ರಸಕಿದು ಸಿದ್ಧಿ"—ಎಂಬ ಸಿದ್ಧಾಂತವನ್ನು ಅಂಗೀಕರಿಸಿದರು. ಹಲವರಿಗೆ ಬೆರಗು, ಹಲವರಿಗೆ ಸ್ವೇದ, ಹಲವರಿಗೆ ಬಾಷ್ಪ, ಹಲವರಿಗೆ ಪುಲಕ, ಹಲವರಿಗೆ ದುಗುಡ, ಹೀಗೆ ಆಸ್ಥಾನ ಸಂಭ್ರಮಾಶ್ಚರ್ಯ ಭಾವಗಳಿಂದ ತರಂಗಿತವಾಯಿತು.

ಪಂಡಿತರಾಗಲಿ, ಪಾಮರರಾಗಲಿ ಈ ಒಂದು ಪ್ರಸಂಗವನ್ನು ಓದಿದಾಗ, ಅಥವಾ ಗಮಕಿಗಳಿಂದ ಕೇಳಿದಾಗ ಅಲ್ಲಿನ ತೀವ್ರವಾದ ವೇದನೆಯ ಪ್ರಭಾವದಿಂದ ತಪ್ಪಿಸಿಕೊಳ್ಳಲಾಗುವುದಿಲ್ಲ. ಕುರುರಾಜನ ಸಭಾಸದರಂತೆ ಬಹುಶಃ ನಾವೂ ಯಾವ ಮೋಡಿಯಿಂದಲೋ ಏನೊ ಸ್ತಬ್ಧರಾಗಿ ಆ ಪ್ರಸಂಗವನ್ನು ವೀಕ್ಷಿಸುತ್ತೇವೆ. ದ್ರೌಪದಿಯ ದಾರುಣ ದುಃಖದಲ್ಲಿ ಮರುಗುತ್ತೇವೆ; ಅವಳ ಶೋಕಪೂರ್ಣವಾದ ಕೃಷ್ಣಸ್ತುತಿಯಲ್ಲಿ ಪಾಲುಗೊಳ್ಳುತ್ತೇವೆ ; ಕೃಷ್ಣನ ಕೃಪೆಯಿಂದ ಸೀರೆ ಅಕ್ಷಯವಾದ ಪವಾಡವನ್ನು ಕಂಡು ಬೆರಗಾಗುತ್ತೇವೆ; "ಆ ಮುಕುಂದನ ದಿವ್ಯನಾಮ ಪ್ರೇಮರಸಕಿದು ಸಿದ್ಧಿ"—ಎಂದ ಹಲವು ವೇದಾಂತಿಭಕ್ತರೊಂದಿಗೆ ಅರಿವಿಲ್ಲದೆ ದನಿಗೂಡಿಸುತ್ತೇವೆ; ದ್ರೌಪದಿಯ ಮಾನಸಂರಕ್ಷಣೆಯಿಂದ ಮಹಾವಿಪತ್ತೊಂದನ್ನು ದಾಟಿದ ಸಮಾಧಾನದಿಂದ ಹರ್ಷಿತರಾಗುತ್ತೇವೆ ; ಕೃಷ್ಣನ ಕೃಪೆಯ ಬಗೆಗೆ ಕೃತಜ್ಞರಾಗುತ್ತೇವೆ. ಉತ್ತಮ ಸಹೃದಯರಲ್ಲಿ ಇಂತೆಲ್ಲಾ ಭಾವನೆಗಳನ್ನು ತೀವ್ರವಾಗಿ ಪ್ರಚೋದಿಸುವ ಸಾಮರ್ಥ್ಯ ಈ ಪ್ರಸಂಗಕ್ಕೆ ಇರುವುದರಿಂದಲೇ, ಈ ಪ್ರಸಂಗ ಕುಮಾರವ್ಯಾಸ ಭಾರತದಲ್ಲಿ ಅತ್ಯಂತ ಜನಪ್ರಿಯವಾಗಿದೆ—ಎಂದುದು.

ನಾರಣಪ್ಪನ ಕವಿ ಮನೋಧರ್ಮ ಹಾಗೂ ಕಾವ್ಯೋದ್ದೇಶದ ಮೇಲೂ ಈ ಪ್ರಸಂಗ ಸಾಕಷ್ಟು ಬೆಳಕನ್ನು ಬೀರುತ್ತದೆ. ನಾರಣಪ್ಪ ಭಕ್ತಕವಿ. ಕೃಷ್ಣ ಅವನ ಪಾಲಿಗೆ ಗದುಗಿನ ವೀರನಾರಾಯಣನಲ್ಲದೆ ಬೇರೆ ಅಲ್ಲ. ಕೃಷ್ಣನ ಮಹಿಮೆ, ಹಾಗೂ ಅಪಾರ ಕರುಣೆ ಇವುಗಳನ್ನು ಚಿತ್ರಿಸಲು ಕವಿಗೆ ಇದೊಂದು ಅಪೂರ್ವವಾದ

ಅವಕಾಶವನ್ನೊದಗಿಸುವ ಪ್ರಸಂಗ. ಈ ಪ್ರಸಂಗದಲ್ಲಿ ಬಹುಮುಖ್ಯವಾದ ಎರಡು ಅಂಶಗಳನ್ನು ನಾವು ಗುರುತಿಸಬಹುದು : ಒಂದು, ಭಗವಂತನಾದ ಕೃಷ್ಣನ ಅಪಾರ ಭಕ್ತವತ್ಸಲತೆ; ಎರಡನೆಯದು, ಭಕ್ತಳಾದ ದ್ರೌಪದಿಯ ಅನನ್ಯ ಶ್ರದ್ಧೆಯ ಪ್ರಾರ್ಥನೆ. ಕೃಷ್ಣ, ತಾನು ಏನು ಕೆಲಸಮಾಡುತ್ತಿರಲಿ ಆತನ ಚಿತ್ತದ ಒಂದು ಭಾಗ ಸದಾ ಭಕ್ತರ ಕಡೆಗೆ ತನ್ನ ಅಭಯ ಹಸ್ತವನ್ನು ಚಾಚಿಯೇ ಇರುತ್ತದೆ. ಆದ್ದರಿಂದಲೇ ಕವಿ ಕೃಷ್ಣನು ಲೆತ್ತವಾಡುವಾಗಲೂ "ಭಕುತರಿಗೆ ತನ್ನನು ತೆತ್ತು ಬದುಕುವೆನೆಂಬ ಪರಮ ವ್ರತದ ನಿಷ್ಠೆಯನು ಚಿತ್ತದಲಿ ನೆಲೆಗೊಳಿಸಿ" ಆಟಕ್ಕೆ ಕುಳಿತಿದ್ದನೆಂದು ಹೇಳುತ್ತಾನೆ. ಅಷ್ಟೇ ಅಲ್ಲ "ಆಳಿನೊಂದಪಮಾನ ಆಳ್ದಂಗೆ"— ಎಂಬ ಜವಾಬ್ದಾರಿಯನ್ನು ಆತ ಬಲ್ಲ. ಹೀಗಾಗಿ ಭಗವಂತ ಬದುಕಿರುವುದು ಭಕ್ತರಿಗಾಗಿ; ಭಕ್ತರಿಂದ. ಇಂತಹ ಭಗವಂತನನ್ನು ತಟ್ಟಿತು ದ್ರೌಪದಿಯ ಕರುಳ ಕರೆ. ಆ ಕರೆಯೇ ಸೊಗಸಾದ ಭಕ್ತಿಪೂರ್ಣವಾದ ಭಾವಗೀತೆಯಾಗಿ ಪ್ರವಹಿಸಿದೆ. ಹಾಗೆ ನೋಡಿದರೆ ಕವಿಯ ಹೃದಯದ ಕರೆಯೇ ದ್ರೌಪದಿಯ ಪಾತ್ರವನ್ನು ನಿಮಿತ್ತವನ್ನಾಗಿಸಿಕೊಂಡು ವೀರನಾರಾಯಣನ ಅಡಿಗಳೆಡೆಗೆ ಹರಿದಂತೆ ತೋರುತ್ತದೆ. ಇಂಥ ಒಂದು ಪ್ರಾರ್ಥನೆಯ ಬಲದಿಂದ ಅಂದು ತುಂಬಿದ ಸಭೆಯಲ್ಲಿ ದ್ರೌಪದಿಯ ವಸ್ತ್ರ ಅಕ್ಷಯವಾಯಿತು; ಲೋಕಾತಿಶಯವಾದ ಪವಾಡವೊಂದು ನಡೆಯಿತು. ಭಕ್ತರ ಶ್ರದ್ಧಾಪೂರ್ಣವಾದ ಪ್ರಾರ್ಥನೆಗೆ ಭಗವಂತನು ಓಗೊಡದೆ ಇರುವುದಿಲ್ಲ ಎಂಬ ನಿತ್ಯ ಸತ್ಯಕ್ಕೆ ಈ ಒಂದು ಪ್ರಸಂಗ ಪ್ರತಿಮೆಯಾಯಿತು.

ಈ ಪ್ರಸಂಗ ಇಷ್ಟೊಂದು ಕರುಣಾಪೂರ್ಣವೂ, ಸ್ವಾರಸ್ಯವೂ, ಪವಾಡಮಯವೂ ಆಗಿರುವುದರಿಂದಲೇ ಇದೊಂದು ಜನಪ್ರಿಯವಾದ ಪ್ರಸಂಗ ಎಂದುದು. ಆದುದರಿಂದಲೇ ಈ ವಸ್ತುವನ್ನಾಶ್ರಯಿಸಿ ಜನಸಾಮಾನ್ಯರಲ್ಲಿ, ಕತೆಗಳೂ, ಹಾಡುಗಳೂ, ಕೀರ್ತನೆಗಳೂ, ನಾಟಕಗಳೂ ಹುಟ್ಟಿಕೊಂಡು ಈ ಪ್ರಸಂಗದ ಸ್ವಾರಸ್ಯವನ್ನು ಸಾರಿವೆ.

ಈ ಪ್ರಸಂಗ ತನಗೆ ತಾನೇ ಸ್ವಾರಸ್ಯವಾಗಿದ್ದರೂ, ಹೃದಯಾಕರ್ಷಕವಾಗಿದ್ದರೂ, ಜನಪ್ರಿಯವಾಗಿದ್ದರೂ, ಮಹಾಭಾರತದ ಒಟ್ಟು ಕಟ್ಟಡದಲ್ಲಿ ಇಂಥ ಒಂದು ಪ್ರಸಂಗದ ಔಚಿತ್ಯವೇನು ಎಂದು ಹೊರಟ ವಿಮರ್ಶಕಮತಿ ಹಲವಾರು ಕಾರಣಗಳಿಂದ ತತ್ತರಿಸುತ್ತದೆ. ದ್ರೌಪದಿ ಪಂಚಪಾಂಡವರ ಮಡದಿ. ಮಹಾವೀರರಾದ ಪತಿಗಳೈವರ ಮುಂದೆ ವಸ್ತ್ರಾಪಹರಣದಂತಹ ನಾಚಿಕೆಗೇಡಿನ ಪ್ರಸಂಗ ನಡೆಯುತ್ತಿರುವಾಗ ಅವರು ಕೈ ಕಟ್ಟಿಕ್ಕೊಂಡು ಸುಮ್ಮನೆ ಕುಳಿತಿದ್ದರೆ? ದ್ರೌಪದಿ ತುಂಬಿದ ಸಭೆಗೆ ಬಂದು, ತೊತ್ತೆಂದು ಸಂಬೋಧಿಸಲ್ಪಟ್ಟಾಗ "ಸಹದೇವ, ಬೆಂಕಿಯನ್ನು ತಾರೊ. ದ್ರೌಪದಿಯನ್ನು ಸೋತ ಧರ್ಮರಾಯನ ಕೈಗಳನ್ನು ಸುಡುತ್ತೇನೆ"—ಎಂದು ಹಾರಾಡಿದ ಭೀಮನೂ ಈಗ ತಣ್ಣಗಾದನೆ? ಭೀಷ್ಮ ದ್ರೋಣರಂಥ ಹಿರಿಯರು ತಮ್ಮ ಮೊಮ್ಮಕ್ಕಳ ಸತಿಗೆ ಆದ ಅವಮಾನವನ್ನು

ನೋಡಿಯೂ ಸಭೆಯಲ್ಲಿ ಸುಮ್ಮನೆ ಕುಳಿತರೆ? ಒಂದು ವೇಳೆ ಇಂತಹ ಒಂದು ಅವಮಾನಕರವಾದ ಘಟನೆ ನಡೆದಿದ್ದ ಪಕ್ಷದಲ್ಲಿ, ಅದು ಮಹಾಭಾರತ ಯುಗದ ಸಭ್ಯತೆಗೆ, ಸಂಸ್ಕೃತಿಗೆ ಕಳಂಕಪ್ರಾಯವಾಗುವುದಿಲ್ಲವೆ? ಈ ಎಲ್ಲ ಪ್ರಶ್ನೆಗಳಿಗೆ, ಕಡೆಗೆ ಕೃಷ್ಣನ ಕೃಪೆಯಿಂದ ವಸ್ತ್ರ ಅಕ್ಷಯವಾಗಿ ಮಾನ ಸಂರಕ್ಷಣೆಯಾಯಿತಲ್ಲ, ಮತ್ತೇತಕ್ಕೆ ಚರ್ಚೆ—ಎಂದು ಸುಲಭವಾಗಿ ನುಸುಳಬಹುದಾದರೂ ; ಮಹಾಭಾರತ ದಲ್ಲಿ ಬಿಡಿಸಲಾಗದ ಎಷ್ಟೋ ಸಮಸ್ಯೆಗಳಿವೆ, ಎಲ್ಲದಕ್ಕೂ ಔಚಿತ್ಯವನ್ನು ಹುಡುಕಿ ಸಮಾಧಾನವನ್ನು ತಂದುಕೊಳ್ಳುವ ಪ್ರಯತ್ನ ಸುಲಭವಲ್ಲ ಎಂದರೂ; ಮಹಾಭಾರತ ಒಂದು ಮಹಾರಣ್ಯವಿದ್ದ ಹಾಗೆ, ಪುರೋದ್ಯಾನದ ಸೌಂದರ್ಯ ಶೋಭೆಯಲ್ಲಿ ಅರಸುವ ಔಚಿತ್ಯವನ್ನು ಮಹಾರಣ್ಯಕ್ಕೆ ಅನ್ವಯಿಸಿ ನೋಡುವುದು ಸಲ್ಲದು ಎಂದು ಹಲವರು ಗದರಿಕೊಂಡರೂ, ಪ್ರಕೃತ ಪ್ರಸಂಗದಲ್ಲಿ ಒಂದು ಪ್ರಶ್ನೆ ಮಾತ್ರ ನಿರುತ್ತರವಾಗಿಯೇ ನಿಲ್ಲುವಂತೆ ತೋರುತ್ತದೆ: ನಿಜ, ಕೃಷ್ಣನ ಕೃಪೆಯಿಂದಲೇನೋ ದ್ರೌಪದಿಯ ಮಾನ ಉಳಿಯಿತು ; ಆದರೆ ಇಡೀ ಸಭೆಗೆ ಸಭೆಯೇ ಇಂಥ ಒಂದು ಅವಮಾನಕರವಾದ ಪ್ರಸಂಗದಲ್ಲಿ ಬಾಯಿಮುಚ್ಚಿ ಕುಳಿತಿರುವುದನ್ನೂ, ಪಾಂಡವರೂ, ಭೀಷ್ಮ ದ್ರೋಣಾದಿಗಳೂ ಸುಮ್ಮನಿರುವುದನ್ನೂ ನೋಡಿದರೆ, ಎಲ್ಲರೂ ದ್ರೌಪದಿಯ ಮಾನ ಸಂರಕ್ಷಣೆಯ ಕೀರ್ತಿಯನ್ನು ಆ ಶ್ರೀಕೃಷ್ಣನಿಗೆ ಕೊಡಲೇಬೇಕೆಂದು ಕಾದು ಕುಳಿತಂತೆ ತೋರುವುದಿಲ್ಲವೆ? ಶ್ರೀಕೃಷ್ಣನ ಮಹಿಮಾವಿಶೇಷದ ಪ್ರದರ್ಶನಕ್ಕೆಂದೇ ಎಲ್ಲರೂ ಪೂರ್ವಭಾವಿಯಾಗಿ ಸಿದ್ಧರಾಗಿ ಬಂದಂತೆಯೂ, ಕೃಷ್ಣನ ಮಹಿಮಾ ಪ್ರಕಾಶನಕ್ಕೆ ತಮ್ಮದೇಕೆ ಅಡ್ಡಿ ಎಂದು ಕುಳಿತ ಹಾಗೆಯೂ, ದ್ರೌಪದಿಯ ಮಾನ ಸಂರಕ್ಷಣೆಯಾಗುತ್ತಲೇ ಸಭಿಕರೆಲ್ಲಾ ಆಶ್ಚರ್ಯದಿಂದ ಆ ಮುಕುಂದನ ಲೀಲೆಯನ್ನು ಕಂಡು, ಅದನ್ನು ಹೊಗಳಿ, ನುತಿಸಿದ ಹಾಗೆಯೂ ಕಂಡು ಬರುವುದಿಲ್ಲವೆ?

ವಿದ್ವಾಂಸರು, ಈ ಒಂದು ಪ್ರಸಂಗ ಮೂಲಭಾರತದಲ್ಲಿ ಪ್ರಕ್ಷಿಪ್ತ ಎನ್ನುತ್ತಾರೆ. ಹಲವರು ಇಡೀ ಪ್ರಸಂಗವೇ ಪ್ರಕ್ಷಿಪ್ತ ಎಂತಲೂ, ಮತ್ತೆ ಹಲವರು ಅದರಲ್ಲಿ ಬರುವ ಕೃಷ್ಣನ ಕೃಪೆಯ ಪವಾಡ ಮಾತ್ರ ಪ್ರಕ್ಷಿಪ್ತವೆಂತಲೂ, ಯಾರೋ ಈಚಿನ ಕೃಷ್ಣ ಭಕ್ತರು, ಕೃಷ್ಣನ ಮಹಿಮಾಪ್ರದರ್ಶನಕ್ಕಾಗಿ ತಂದು ಸೇರಿಸಿರಬೇಕೆಂತಲೂ ಅಭಿಪ್ರಾಯಪಡುತ್ತಾರೆ. ನಾರಣಪ್ಪನ ಭಾರತದಲ್ಲಿ ಮಡುಗೊಂಡ ಈ ಪ್ರಸಂಗದ ಮೂಲವನ್ನರಿಯಬೇಕಾದರೆ, ನಾವು 'ವ್ಯಾಸ ಮುನೀಂದ್ರ ರುಂದ್ರ ವಚನಾಮೃತ ವಾರ್ಧಿ'ಗೇ ಪ್ರವಾಸ ಹೋಗಬೇಕಾಗುತ್ತದೆ.

●

೨

ಮಹಾಭಾರತದಲ್ಲಿ ಸಭಾಪರ್ವ ಬಹು ಮುಖ್ಯವಾದುದು. ವಾಸ್ತವವಾಗಿ ಸಭಾಪರ್ವದ ಘಟನೆಗಳೇ ಒಂದು ರೀತಿಯಲ್ಲಿ 'ಮಹಾಭಾರತಕ್ಕಾದಿಯಾಯ್ತು' ಎನ್ನಬಹುದು. ಪಾಂಡವರು ಮಾಡಿದ ರಾಜಸೂಯ ಯಾಗ ಕೌರವನ ಅಸೂ

ಯಾಗ್ನಿಯನ್ನು ಕೆರಳಿಸಿದ್ದು ಇಲ್ಲಿ; ಪಾಂಡವರ ಬಲ, ಸಂಪತ್ತು ಕೌರವನನ್ನು ದಿಗ್‌ಭ್ರಮೆಗೊಳಿಸಿ ಅವನಲ್ಲಿ ಈ ಸಂಪತ್ತನ್ನು ಕವರುವ ಗೃಧ್ರ ಬುದ್ಧಿಯನ್ನು ವೃದ್ಧಿಗೊಳಿಸಿದ್ದು ಇಲ್ಲಿ; ಕೃತಕ ಸಭಾಲೋಕನ ಕಾಲದಲ್ಲಿ, ಅಭಿಮಾನಧನನಾದ ಈ ಧೃತರಾಷ್ಟ್ರ ಪುತ್ರನ ದುರವಸ್ಥೆಯನ್ನು ಕಂಡು ಪಾಂಚಾಲಿ ನಕ್ಕು ಹಾಸ್ಯ ಮಾಡಿ, ಮುಂದಿನ ವಸ್ತ್ರಾಪಹರಣದಂತಹ ಪ್ರಸಂಗದ ಕಿಚ್ಚನ್ನು ಕೌರವನಲ್ಲಿ ಹತ್ತಿಸಿದ್ದು ಇಲ್ಲಿ; ರಾಜಸೂಯ ಮಖಧೂಮದಿಂದ ಕಂದಿ ಕುಂದಿದ ಕೌರವ, ಶಕುನಿ ತಂತ್ರದ ನೆರವಿನಿಂದ ಪಾಂಡವರನ್ನು ಬರಮಾಡಿಕೊಂಡು ಜೂಜಾಡಿ ಸೋಲಿಸಿದ್ದು ಇಲ್ಲಿ; ಕಡೆಗೆ ದ್ರೌಪದಿಯ ಶ್ರೀ ಮುಡಿಯನ್ನು, ಉಟ್ಟ ಬಟ್ಟೆಯನ್ನು ಸೆಳೆದು ಅವಮಾನ ಮಾಡಿಸಿ, ತನ್ನ ವಿನಾಶದ ಶಾಸನವನ್ನು ಭೀಮಾರ್ಜುನರ ಕೋಪಾಗ್ನಿಲಿಪಿಯಲ್ಲಿ ಬರೆಯಿಸಿದ್ದು ಇಲ್ಲಿ; ಪಾಂಡವರ ವನವಾಸ ಕ್ಲೇಶದ ಹೆಬ್ಬಾಗಿಲು ತೆರೆದದ್ದು ಇಲ್ಲಿ; ಒಟ್ಟಿನಲ್ಲಿ ಮುಂದಿನ ಕುರುಕ್ಷೇತ್ರದ ರಣರಂಗದ ನಕ್ಷೆಯನ್ನು ಸಿದ್ಧಗೊಳಿಸಿದ್ದು ಸಭಾಪರ್ವದಲ್ಲಿಯೇ. ಈ ಕಾರಣಗಳಿಂದಾಗಿ ಮಹಾಭಾರತದಲ್ಲಿ ಸಭಾಪರ್ವ ಅತ್ಯಂತ ಮುಖ್ಯವಾದುದು.

ದ್ಯೂತ ಪ್ರಸಂಗದಲ್ಲಿ, ದ್ಯೂತದ ಪರಿಣಾಮವಾಗಿ ದ್ರೌಪದಿಯ ವಿಷಯದಲ್ಲಿ ನಡೆದ ಎರಡು ಅನ್ಯಾಯಗಳು ಅತ್ಯಂತ ಗಮನಾರ್ಹವಾದುವು. ಮೊದಲನೆಯದು ಅವಳ ಕೇಶಾಪಕರ್ಷಣ; ಎರಡನೆಯದು, ಅವಳ ವಸ್ತ್ರಾಪಹರಣ. ಪಾಂಡವರೇನೋ ಜೂಜಾಡಿ ಸೋತರು. ಆದರೆ ಅವರು ಸೋತ ಸೋಲಿನ ದುಷ್ಪರಿಣಾಮ ತಕ್ಷಣವೇ ದ್ರೌಪದಿಯ ಮೇಲೆರಗಿತು. ಹಾಗೆ ಅವಳೊಬ್ಬಳ ಪಾಲಿಗೆ ಈ ದೌರ್ಭಾಗ್ಯ ಒದಗಿದ್ದರ ಕಾರಣ ರಾಜಸೂಯಯಾಗದ ಸಂದರ್ಭದಲ್ಲೇ ಸೂಚಿತವಾಗಿದೆ. ಕೃತಕ ಸಭಾ ಲೋಕನ ಕಾಲದಲ್ಲಿ ಜಾರಿಬಿದ್ದ ದುರ್ಯೋಧನನನ್ನು ದ್ರೌಪದಿ ಕಂಡು ಸಖೀ ಜನರೊಂದಿಗೆ ಸೇರಿಕೊಂಡು ನಕ್ಕದ್ದೇ ಇದಕ್ಕೆ ಮೂಲವಾಯಿತು. ರಾಜಸೂಯದಿಂದ ಹಿಂದಿರುಗಿದ ಕೌರವ, ತನ್ನ ತಂದೆಯ ಎದುರಿಗೆ ತನಗಾದ ಪರಾಭವಗಳನ್ನು ಹೇಳಿಕೊಳ್ಳುತ್ತಾ—

ತತ್ರ ಮಾಂ ಪ್ರಾಹಸತ್ಕೃಷ್ಣಃ ಪಾರ್ಥೇನ ಸಹ ಸಸ್ವನಮ್
ದ್ರೌಪದೀ ಚ ಸಹ ಸ್ತ್ರೀಭಿರ್ ವ್ಯಥಯಂತೀ ಮನೋಮಮ
ಕ್ಲಿನ್ನ ವಸ್ತ್ರಸ್ಯ ಚ ಜಲೇ ಕಿಂಕರಾ ರಾಜ ಚೋದಿತಾಃ
ದದುರ್ವಾಸಾಂಸಿ ಮೇಽನ್ಯಾನಿ ತಚ್ಚ ದುಃಖತರಂ ಮಮ.[೧]

೨-೪೬-೩೦, ೩೧.

"ಅಲ್ಲಿ ಪಾರ್ಥನೊಂದಿಗೆ ಕೃಷ್ಣನು ಗಟ್ಟಿಯಾಗಿ ನಕ್ಕನು; ದ್ರೌಪದಿಯು ಕೂಡ

---

೧ ಇಲ್ಲಿ ನಾವು ಪುಣೆಯ ಭಂಡಾರ್ಕರ್ ಪ್ರಾಚ್ಯ ಸಂಶೋಧನ ಸಂಸ್ಥೆಯಿಂದ ಶೋಧಿತ ವಾಗಿ ಸಿದ್ಧವಾಗಿರುವ ಮಹಾಭಾರತವನ್ನೇ ಅಧಿಕೃತವೆಂದು ಒಪ್ಪಿಕೊಂಡು, ಅಲ್ಲಿಂದಲೇ ಶ್ಲೋಕಗಳನ್ನು ಉದ್ಧರಿಸಿದ್ದೇವೆ.

ಸಖೀಜನರೊಂದಿಗೆ ನಕ್ಕಳು. ಅದು ನನ್ನ ಮನಸ್ಸಿನಲ್ಲಿ ವ್ಯಥೆಯನ್ನುಂಟುಮಾಡಿದೆ. ಬಟ್ಟೆ ಒದ್ದೆಯಾಗಿ ನೀರಿನಲ್ಲಿ ನಿಂತ ನನಗೆ, ರಾಜಚೋದಿತರಾದ ಕಿಂಕರರು ಬೇರೆ ಬಟ್ಟೆಗಳನ್ನು ತಂದುಕೊಟ್ಟರಲ್ಲ; ಅದು ನನಗೆ ಎಲ್ಲದಕ್ಕಿಂತ ದುಃಖತರವಾದ ಅವಮಾನ"—ಎನ್ನುತ್ತಾನೆ.[೧] ತನ್ನ ದುರವಸ್ಥೆಯನ್ನು ನೋಡಿ ಕೃಷ್ಣ ಪಾರ್ಥರು ನಕ್ಕದ್ದಕ್ಕಿಂತಲೂ, ಸಖೀಜನರೊಂದಿಗೆ ದ್ರೌಪದಿ ಕೂಡ ನಕ್ಕದ್ದು ಆತನ ಮನಸ್ಸನ್ನು ಕೊರೆದಿರಬೇಕು. ಗಂಡಿಗೆ ಗಂಡಿನಿಂದ ಆದ ಅವಮಾನಕ್ಕಿಂತ, ಹೆಣ್ಣಿನಿಂದ ಆದ ಅವಮಾನ ಹೆಚ್ಚು ಆಘಾತಕಾರಕವೆಂದು ತೋರುತ್ತದೆ. ಅದರಲ್ಲೂ ಅಭಿಮಾನಧನನಾದ ಸುಯೋಧನನನ್ನು ಕೇಳಬೇಕೆ? ಇದರ ಜೊತೆಗೆ ಪಾಂಡವರು ತಮ್ಮ ಕಿಂಕರರ ಮೂಲಕ ಇವನಿಗೆ ಬೇರೆಯ ವಸ್ತ್ರಗಳನ್ನು ಕೊಡಿಸಿದ್ದು ಇನ್ನೂ ದುಃಖತರವಾಗಿ ಪರಿಣಮಿಸಿ ಪ್ರತೀಕಾರ ಭೀಷಣ ಬುದ್ಧಿ ಈ ಪನ್ನಗ ಪತಾಕನ ಮನದಲ್ಲಿ ಹೆಡೆಯತ್ತಿರಬಹುದು.[೨] ಈ ಕಾರಣದಿಂದಲೇ ಇರಬೇಕು ಮುಂದೆ ದ್ಯೂತದಲ್ಲಿ ಪಾಂಡವರು ಸೋತ ಒಡನೆಯೇ ಕೌರವನ ಮನಸ್ಸು ನೇರವಾಗಿ ದ್ರೌಪದಿಯ ಪರಾಭವದ ಕಡೆಗೆ ಪ್ರಬಲವಾಗಿ ಮುಂದುವರಿದಿದೆ. ಹಿಂದೆ ದ್ರೌಪದಿ ನಕ್ಕ ನಗೆ ಇನ್ನೂ ಕೌರವನ ಮನಸ್ಸಿನಲ್ಲಿ ಅನುರಣಿತವಾಗುತ್ತಿತ್ತೆಂದು ತೋರುತ್ತದೆ. ಆದುದರಿಂದಲೇ, ದ್ರೌಪದಿಯನ್ನು ಶಕುನಿಯ ಸೂಚನೆಯ ಮೇರೆಗೆ ಧರ್ಮರಾಯನು ಪಣವಾಗಿ ಒಡ್ಡಿ ಸೋತ ಮರುಕ್ಷಣವೇ ದುರ್ಯೋಧನನು ದ್ರೌಪದಿಯನ್ನು ಕರೆದು ತರಲು ವಿದುರನಿಗೆ ಆಜ್ಞಾಪಿಸುತ್ತಾನೆ.[೩] ಪಾಪ, ದ್ರೌಪದಿಗೆ ತಾನು ಹಾಗೆ ನಕ್ಕ ನಗೆ, ಹೀಗೆ ಮುಂದೆ ಪರಾಭವದ ಧಗೆಯಾಗಿ ತನ್ನನ್ನೇ ಸುತ್ತುವುದೆಂಬ ಕಲ್ಪನೆ ಕೂಡ ಇರಲಿಲ್ಲ. ಆ ಒಂದು ನಗೆಯ ನಂತರ ದ್ರೌಪದಿಗೆ ಒದಗಿದ್ದು ಪರಾಭವ–ಕ್ಲೇಶಗಳ

---

೧. ನಾರಣಪ್ಪನಲ್ಲಿ: ಅಂದು ದ್ರೌಪದಿ ಸಹಿತ ನಾರೀವೃಂದ ಕೈಗಳ ಹೊಯ್ದುಮಿಗೆ ಗೊಳ್ಳೆಂದು ನಕ್ಕುದು, ನೊಂದು ತಲೆವಾಗಿದೆನು ಲಜ್ಜೆಯಲಿ'—[ಸಭಾ. ೧೨–೩೭].
ಪಂಪನಲ್ಲಿ ಇದು ಇಲ್ಲ; ನಾರಣಪ್ಪನದು ಮೂಲದ ಅನುವಾದವೇ ಆಗಿದೆ.

೨. ಮೂಲಭಾರತದಲ್ಲಿ ಈ ಭಾವಸೂಚಿತವಾಗಿದೆ. ಆದರೆ ನಾರಣಪ್ಪನಂತೂ
ಪಾಂಚಾಲನಂದನೆಯ ನೂಕಿ ಮುಂದಲೆವಿಡಿದು
ತೊತ್ತಿರೊಳಾಕೆಯನು ಕುಳ್ಳಿರಿಸಿದಂದು,
ವಿಶೋಕನಹೆನಾದಿವಸದಲಿ ಕೃತಕೃತ್ಯ ತಾನೆಂದ '—ಸಭಾ. ೧೨–೬೬.

ಎಂದು ವಾಚ್ಯವಾಗಿಯೇ ದುರ್ಯೋಧನನ ಮತವನ್ನು ಹೇಳಿದ್ದಾನೆ.

೩. ಏಹಿ ಕ್ಷತ್ತಃ ದ್ರೌಪದೀಮಾನಯಸ್ವ
ಪ್ರಿಯಾಂ ಭಾರ್ಯಾಂ ಸಂಮತಾಂ ಪಾಂಡವಾನಾಂ
ಸಮ್ಮಾರ್ಜತಾಂ ವೇಶ್ಮ ಪರೈತು ಶೀಘ್ರಂ
ಆನಂದೋನಃ ಸಹ ದಾಸೀಭಿರಸ್ತು ೨–೫೯–೧.

ಬಾ ವಿದುರ, ಪಾಂಡವರ ಪ್ರಿಯಪತ್ನಿ ಎನಿಸಿಕೊಂಡಿರುವ ದ್ರೌಪದಿಯನ್ನು ಕರೆದುಕೊಂಡು ಬಾ. ದಾಸಿಯರ ಮಧ್ಯದಲ್ಲಿದ್ದುಕೊಂಡು ಕಸ ಗುಡಿಸಲಿ; ಅವಳು ಬೇಗ ಬರಲಿ. ನಮ್ಮ ಮನಸ್ಸನ್ನು

ಪರಂಪರೆ. ಬಹುಶಃ ಅನಂತರ ದ್ರೌಪದಿ ಹಿಗ್ಗಿನಿಂದ ನಕ್ಕದ್ದನ್ನು ನಾವು ಕಾಣೆವು. ಕಡೆಗೆ ಭೀಮ ಕೌರವನನ್ನು ತೊಡೆಯೊಡೆದು ಕೆಡಹಿದನಂತರ, ಆ ರಣರಂಗದ ರಕ್ತ ಚ್ಛಾಯೆಯಲ್ಲಿ ದ್ರೌಪದಿ ಹಸನ್ಮುಖಿಯಾಗಿ ಮುಗುಳುನಗೆ ನಕ್ಕಿರಬಹುದಾದರೂ, ಆ ರೌದ್ರಾವರಣದಲ್ಲಿ ನಮಗೆ ಯಾರ ನಗೆಯೂ ಕಾಣದು. ದ್ರೌಪದಿಯ ಅಟ್ಟಹಾಸ ಹಾಗೂ ಮಂದಹಾಸಗಳ ನಡುವೆ ಎಷ್ಟೊಂದು ಬನ್ನಗಳು, ಪರಾಭವಗಳು, ವನವಾಸಕ್ಲೇಶದ ಮ್ಲಾನ ದಿನಗಳು, ರಣರಂಗದ ರಥಚಕ್ರಧ್ವನಿಚೀತ್ಕಾರಗಳು, ರಕ್ತದ ಮಡುಗಳು! ಆ ಎರಡು ನಗೆಗಳ ನಡುವೆ ಉಸಿರು ಕಟ್ಟಿಸುವ ಧಗೆಯೇ ತುಂಬಿಹೋಗಿದೆ!

ದ್ರೌಪದಿಗೊದಗಿದ ಪರಾಭವಗಳು ಎರಡು. ಮೊದಲನೆಯದು ಕೇಶಾಪ ಕರ್ಷಣ; ಎರಡನೆಯದು ವಸ್ತ್ರಾಪಹರಣ. ಮೊದಲನೆಯದಂತೂ ಬಹು ದೊಡ್ಡ ಅಪರಾಧ. ಯಾವ ರಾಜಸೂಯ ಯಾಗದಲ್ಲಿ ಅವಭೃಥ ಜಲದಿಂದ ಮಂತ್ರ ಪೂರ್ವಕವಾಗಿ ಸ್ನಾತವಾಗಿತ್ತೋ ಆ ಪಾಂಡವರ ಪಟ್ಟದ ರಾಣಿಯ ಜಡೆಮುಡಿ ಯನ್ನು ದುಶ್ಶಾಸನನು ಎಳೆದು ಬಿಚ್ಚಿದ್ದು ದೊಡ್ಡ ಅವಮಾನ.[೧] ಮುಖ್ಯವಾಗಿ ಈ ಒಂದು ಪರಾಭವವೇ ಕವಿಗಳ ಕಣ್ಣನ್ನು ವಿಶೇಷವಾಗಿ ಸೆಳೆದಿರುವುದು: ಕನ್ನಡದ ಆದಿಕವಿ ಪಂಪನಿಗಂತೂ ಸಮಸ್ತಮಹಾಭಾರತವೇ ದ್ರೌಪದಿಯ ಕೇಶಪಾಶ ಪ್ರಪಂಚದಲ್ಲಿ ಅಡಗಿದ್ಧಂತೆ ತೋರುತ್ತದೆ. ದುಶ್ಶಾಸನನನ್ನು ಕೊಂದನಂತರ ಭೀಮ, ಹದಿಮೂರು ವರ್ಷಗಳ ಕಾಲ ಬಿಚ್ಚಿದ ಆ ಜಡೆಮುಡಿಯನ್ನು ಶತ್ರುರಕ್ತದಿಂದ ಮಿಸಿಸಿ ಕಟ್ಟುತ್ತಾ—

ಇದಱಿನೊಳ್ ಶ್ವೇತಾತಪತ್ರಸ್ಥಗಿತ ದಶದಿಶಾಮಂಡಲಂ ರಾಜಚಕ್ರಂ
ಪುದಿದಟ್ಟಾಡಿತ್ತು, ಅಡಂಗಿತ್ತಿದಱೊಳೆ ಕುರುರಾಜಾನ್ವಯಂ, ಮತ್ತಮಾಪ-
ಕ್ಕಿದಱಿಂದಂ ನೋಡಗುರ್ವುರ್ವಿದುದಿದುವೆ ಮಹಾಭಾರತಕ್ಕಾದಿಯಾಯ್ತು; ಅ-
ಬ್ಜದಳಾಕ್ಷೀ ಪೇಟಿ ಸಾಮಾನ್ಯಮೆ ಬಗೆಯೆ ಭವತ್ಕೇಶಪಾಶಪ್ರಪಂಚಂ
[ಪಂ. ಭಾ. ೧೨-೧೫೭]

ದಾಸಿಯರೊಂದಿಗೆ ಆನಂದಪಡಿಸಲಿ—ಎನ್ನುತ್ತಾನೆ ದುರ್ಯೋಧನ. ಈ ವಿಷಯ ಪಂಪನಲ್ಲಿ ಇಲ್ಲ; ನಾರಣಪ್ಪನಲ್ಲಾದರೋ ಕೌರವ ವಿದುರನನ್ನು ಕುರಿತು:

ವಿದುರ ಬಾ ನಮ್ಮಾಕೆಯಾ ದ್ರೌಪದಿಯ ಕರೆ. ಬೆಸಗೊಂಬ
ತೊತ್ತಿರ ಸದನದಿಚ್ಛೆಯೊ, ರಾಣಿವಾಸದ ಮನೆಯಪೇಕ್ಷಿತವೊ?— [೧೪-೩೬]

ಎನ್ನುತ್ತಾನೆ. 'ಪ್ರಿಯಾಂ ಭಾರ್ಯಾಂ ಸಂಮತಾಂ ಪಾಂಡವಾನಾಂ'—ಎನ್ನುವ ಅರಿವು ಮೂಲ ಭಾರತದ ದುರ್ಯೋಧನನಿಗಿದ್ದರೆ, ನಾರಾಣಪ್ಪನ ದುರ್ಯೋಧನ ಆಗಲೇ, "ನಮ್ಮಾಕೆ ಆ ದ್ರೌಪದಿ"—ಎನ್ನುವಷ್ಟು ಮುಂದುವರಿದಿದ್ದಾನೆ!

೧. ಯೇ ರಾಜಸೂಯಾವಭೃಥೇ ಜಲೇನ
ಮಹಾಕ್ರತೌ ಮಂತ್ರಪೂತೇನ ಸಿಕ್ತಾಃ
ತೇ ಪಾಂಡವಾನಾಂ ಪರಿಭೂಯ ವೀರ್ಯಂ
ಬಲಾತ್ಪ್ರಮೃಷ್ಟಾ ಧೃತರಾಷ್ಟ್ರಜೇನ [೨-೬೦-೨೩]

ಎಂದು ಆ 'ಕೇಶಪಾಶಪ್ರಪಂಚ'ದ ಮಹತ್ವವನ್ನು ಘೋಷಿಸುತ್ತಾನೆ.೧ ರನ್ನನ ಕಣ್ಣಿಗಂತೂ ದ್ರೌಪದಿಯ ಆ ಬಿಡುಮುಡಿ "ಕಾಳಾಹಿ"ಯಂತೆ, "ಕುರುಕುಲ ಜೀವಾಕರ್ಷಣ ಪರಿಣತ ಕಾಳಹಸ್ತ"ದಂತೆ, "ಪರಾಭವಜ್ವಲನಧೂಮಕೃಷ್ಣ," ದಂತೆ ಕಾಣಿಸುತ್ತದೆ. ಕಡೆಗೆ ಭೀಮ ತನ್ನ ಪ್ರತಿಜ್ಞೆಯನ್ನು ಪೂರೈಸಿದ ಮೇಲೆ ದ್ರೌಪದಿಯ ಜಡೆಮುಡಿಯನ್ನು ಕಟ್ಟುತ್ತಾನೆ. ದುಶ್ಶಾಸನ ಬಂದು ದ್ರೌಪದಿಯ ಜಡೆಮುಡಿಯನ್ನೆಳೆದ ಪ್ರಸಂಗವನ್ನು ಕುಮಾರವ್ಯಾಸ ಅದ್ಭುತವಾಗಿ ವರ್ಣಿಸಿದ್ದಾನೆ.೨ ಸಂಸ್ಕೃತ ಕವಿ ಭಾರವಿಯಲ್ಲೂ ದ್ರೌಪದಿಗಾದ ಅವಮಾನದಲ್ಲಿ ಪ್ರಧಾನವಾದುದು ಕೇಶಾಪಕರ್ಷಣೆಯೇ ಎಂಬ ಮಾತಿದೆ.೩ ಭಟ್ಟ ನಾರಾಯಣನ [ಕ್ರಿ. ಶ. ೮. ನೆ. ಶ.] ಗಮನವೂ "ವೇಣೀ ಸಂಹಾರ'ದ ಕಡೆಗೇ. ಹೀಗಾಗಿ ದ್ರೌಪದಿಗೆ ಒದಗಿದ ಪರಾಭವಗಳಲ್ಲಿ ಮೊದಲನೆಯದಾದ ಈ ಕೇಶಾಪಕರ್ಷಣೆ ಸಂಸ್ಕೃತದ ಹಾಗೂ ಕನ್ನಡದ ಕವಿಗಳ ಗಮನವನ್ನು ವಿಶೇಷವಾಗಿ ಸೆಳೆದಂತೆ ತೋರುತ್ತದೆ. ಆದರೆ ಅವಳಿಗೊದಗಿದ ಪರಾಭವಗಳಲ್ಲಿ ಎರಡನೆಯದಾದ ವಸ್ತ್ರಾಪಹರಣದ ಪ್ರಸಂಗ, ಅನುಕ್ರಮದಲ್ಲಿ ದ್ವಿತೀಯವಾದಂತೆ, ಆ ವಿಷಯವನ್ನೆತ್ತಿಕೊಂಡ ಕವಿಗಳ ನಿರೂಪಣೆಯಲ್ಲೂ ಬಹುಮಟ್ಟಿಗೆ ದ್ವಿತೀಯವಾಗಿಯೇ ನಿಂತಿದೆ. ಇದರ ಮೇಲೆ ವಸ್ತ್ರಾಪಹರಣದ ಪ್ರಸಂಗ ಸಂದಿಗ್ಧವೂ ಕ್ಲೇಶಕಾರವೂ ಆದಂತೆ ತೋರುವುದರಿಂದಲೋ ಏನೋ, ಆ ಪ್ರಸಂಗವಷ್ಟನ್ನೆ ಕೇಂದ್ರವಾಗಿರಿಸಿಕೊಂಡಾಗಲಿ, ಆ ಪ್ರಸಂಗಕ್ಕೆ ಅತಿಶಯವಾದ ಮಹತ್ವವನ್ನು ಕೊಟ್ಟಾಗಲೀ, ನಾರಣಪ್ಪನಿಗಿಂತ ಹಿಂದಿನ ದೊಡ್ಡ ಕವಿಗಳಾರೂ ನಿರೂಪಿಸಿದಂತೆ ತೋರುವುದಿಲ್ಲ. ಹೀಗಾಗಿ ಆ ಪ್ರಸಂಗ ಬಹುಮಟ್ಟಿಗೆ ಸಾಮಾನ್ಯ ಜನರಂಜಕವಾದ ಭೂಮಿಕೆಯಲ್ಲೇ ಪ್ರಚಲಿತವಾಯಿತು. ಈ ಎರಡು ಪ್ರಸಂಗಗಳಲ್ಲಿ, ಮೊದಲನೆಯದು ದುಶ್ಶಾಸನನ ಸಾವಿಗೆ ಕಾರಣವಾಯಿತೆಂದು

---

೧. ಇಲ್ಲಿ 'ಪ್ರಪಂಚ' ಎನ್ನುವ ಮಾತು ಗಮನಾರ್ಹ. ರನ್ನನು, ಭೀಮ ದುರ್ಯೋಧನರ ಗದಾಯುದ್ಧ ಸಂದರ್ಭದಲ್ಲಿ ಭೀಮನ ಮಾತಿನಲ್ಲಿ "ಇದು ಪಾಂಚಾಲೀ ಪ್ರಪಂಚಕ್ಕೆ" [೮-೨೨] ಎಂದು ಹೇಳಿಸುವಾಗ, ಪಂಪನಿಂದಲೇ ಪ್ರೇರಿತನಾಗಿದ್ದರೂ, ಪಂಪನ ಪ್ರಯೋಗದ ಮುಂದೆ ಇದು ತೀರಾ ಸಪ್ಪೆಯಾಗಿದೆ.

೨. ಆ ಮಹೀಶಕ್ರತುವರದೊಳುದ್ದಾಮ ಮುನಿಜನ ರಚಿತ ಮಂತ್ರ-
ಸ್ತೋಮ ಪುಷ್ಕಲ ಪೂತ ಪುಣ್ಯ ಜಲಾಭಿಷೇಚನದ
ಶ್ರೀಮುಡಿಗೆ ಕೈಯಿಕ್ಕಿದನು.................. [೧೪-೬೬]

ಈ ಪದ್ಯ ಹಿಂದೆ ಉದ್ಧರಿಸಿರುವ "ಯೇ ರಾಜಸೂಯಾವ ಭೃತೇಜಲೇನ| ಮಹಾಕ್ರತೌ ಮಂತ್ರಪೂತೇನ ಸಿಕ್ತಾಃ"—ಎಂಬ ಮೂಲಭಾರತದ ಪದ್ಯದ ಸತ್ಯಾನುವಾದವಾಗಿದೆ.

೩. ದುಃಶ್ಶಾಸನಾಮರ್ಷರಜೋವಿಕೀರ್ಣೈ-
ರೇಭಿರ್ವಿನಾಥೈರಿವ ಭಾಗ್ಯನಾಥೈಃ
ಕೇಶೈಃ ಕದರ್ಥೀಕೃತವೀರ್ಯಸಾರಃ
ಕಚ್ಚಿತ್ಸ ಏವಾಸಿ ಧನಂಜಯಸ್ತ್ವಮ್: [ಕಿರಾತಾರ್ಜುನೀಯ, ೩-೪೭]

ಖಚಿತವಾಗಿ ಹೇಳುವಂತೆ, ಎಗಡನೆಯದು ದುರ್ಯೋಧನನ ಸಾವಿಗೆ ಕಾರಣವಾಯಿತೆಂದು ಹೇಳಲು ಬಾರದು. ದುರ್ಯೋಧನನ ಸಾವಿಗೆ, ವಸ್ತ್ರಾಪಹರಣ ಕಾರಣವಾಯಿತೆಂದು ಹೇಳುವುದಕ್ಕಿಂತ, ಆತ ಪಾಂಚಾಲಿಗೆ ತನ್ನ ತೊಡೆಯನ್ನು ತೋರಿಸಿದ್ದೇ ಕಾರಣವಾಯಿತೆನ್ನುವುದು ಭಾರತದಲ್ಲಿ ಸ್ಪಷ್ಟವಾಗಿದೆ. ಹೀಗೆ ದುಶ್ಯಾಸನ–ಕೌರವ ಇವರಿಬ್ಬರ ಸಾವಿಗೆ, ವಸ್ತ್ರಾಪಹರಣ ಪ್ರಸಂಗದ ಅತ್ತ ಕಡೆ ಇರುವ ಕೇಶಾಪಕರ್ಷಣ ಪ್ರಸಂಗವನ್ನೂ ಇತ್ತ ಕಡೆ ಇರುವ ದುರ್ಯೋಧನ ತನ್ನ ತೊಡೆಯನ್ನು ತೋರಿಸಿದ ಪ್ರಸಂಗವನ್ನೂ, ಪ್ರಧಾನವಾಗಿ ಎಣಿಸುವಷ್ಟು, ವಸ್ತ್ರಾಪಹರಣ ಪ್ರಸಂಗವನ್ನೇ ಬಹು ಮುಖ್ಯವಾದ, ಮಿಗಿಲಾದ ಅಪಮಾನವೆಂದೆಣಿಸಿ ಅದಕ್ಕೆ ಪ್ರತೀಕಾರವನ್ನು ಎತ್ತಿ ಹೇಳಿ ಪಾಂಡವರಾರೂ ಮಾಡಿದಂತೆ ಕಾಣೆವು. ಇದರ ಜೊತೆಗೆ ಮಹಾಭಾರತದಲ್ಲಿ "ದ್ರೌಪದಿ ತನಗಾದ ಕಷ್ಟವನ್ನು ಬಹುಸಲ ಹೇಳಿಕೊಂಡಿದ್ದಾಳೆ. ಆದರೆ ಬಹುಕಡೆ ತನ್ನ ವಸ್ತ್ರವನ್ನು ದುಶ್ಯಾಸನನು ಸೆಳೆದನು ಎಂಬ ವಿಷಯ ಸೂಚಿತವಾಗುವುದಿಲ್ಲ."೧ ಅಷ್ಟೇ ಏಕೆ ಮೂಲಭಾರತದಲ್ಲೇ, ದ್ರೌಪದಿಯ ವಸ್ತ್ರಾಪಹರಣ ಪ್ರಸಂಗ ನಡೆದು, ಹೇಗೋ ಪವಾಡದಿಂದ ಅವಳ ಮಾನ ಉಳಿದ ಮರುಕ್ಷಣದಲ್ಲೇ, 'ದ್ರೌಪದಿಗೆ ಹೀಗೆ ವಸ್ತ್ರಾಪಹಾರವಾಯಿತು, ಸದ್ಯ ಹೇಗೋ ಮಾನ ಉಳಿಯಿತು'—ಎಂಬರ್ಥದ ಯಾವ ಒಂದು ಮಾತೂ ಯಾರಿಂದಲೂ ಹೊರಡುವುದಿಲ್ಲ! ಹೀಗಾಗಿ ಈ ಪ್ರಸಂಗವೇ "ಮೊತ್ತದಲ್ಲಿ, ದುಶ್ಯಾಸನನು ಈ ಸಂದರ್ಭದಲ್ಲಿ ದ್ರೌಪದಿಯನ್ನು ಎಳೆದು ತಂದು ಅವಳ ವಸ್ತ್ರವನ್ನು ಸೆಳೆದುಹಾಕಿ ಅನ್ಯಾಯ ಮಾಡಿದನೆಂಬ ಭಾಗ ಆಮೇಲಿನ ಕಥೆ ಸೇರಿಸಿದ ಭಾಗವೆಂದು ತೋರುತ್ತದೆ"೨—ಎನ್ನುವ ಶಂಕೆಯನ್ನು ಹುಟ್ಟಿಸುತ್ತದೆ.

ಈ ಪ್ರಸಂಗ ಪ್ರಕ್ಷಿಪ್ತವಿರಬಹುದೆ ಎಂಬ ಒಂದು ಶಂಕೆ ನಿರಾಧಾರವಾದುದಲ್ಲವಾದರೂ, ಈ ಪ್ರಸಂಗ ಸಂಪೂರ್ಣವಾಗಿ ಪ್ರಕ್ಷಿಪ್ತವೆಂದು ತಳ್ಳಿಬಿಡಲು ಸಾಕಷ್ಟು ಆಧಾರವಿಲ್ಲ. ವಸ್ತ್ರಾಪಹರಣದಂಥ ಪ್ರಸಂಗ ಕೌರವನ ಆಸ್ಥಾನದಲ್ಲಿ ನಡೆಯಲು ಸಾಧ್ಯವಿರಲಿಲ್ಲವೆಂದೂ, ಅದರಿಂದ ನಡೆದಿರಲಾರದು ಎಂಬ ಕಾರಣದಿಂದಾಗಲಿ, ಅದು ಕವಿಗಳಲ್ಲಿ ಗೌಣವಾಗಿ, ಪ್ರಾಸಂಗಿಕವಾಗಿ ಬಂದಿದೆ ಎಂಬ ಕಾರಣದಿಂದಲಾಗಲಿ, ಅದು ಮಹಾಭಾರತದಲ್ಲಿ ಬಹುಕಡೆ ಸೂಚಿತವಾಗುವುದಿಲ್ಲವೆಂಬ ಕಾರಣದಿಂದಲಾಗಲಿ, ಆ ಪ್ರಸಂಗ ಪ್ರಕ್ಷಿಪ್ತವೆಂದು ಯಾರೂ ಭಾವಿಸಲಾರರು. ಆದರೆ ಸಮಸ್ತ ಮಹಾಭಾರತವನ್ನು ಪುನಃ ಪರಿಶೀಲಿಸಿ, ಪಾಠಾಂತರಗಳನ್ನು ಶೋಧಿಸಿ ಅಧಿಕೃತವೆಂದು ಒಪ್ಪಿಕೊಂಡು ಪ್ರಕಟಿಸಿರುವ ಪುಣೆಯ ಭಂಡಾರ್ಕರ್ ಸಂಸ್ಥೆಯವರೆ, ಈ ವಸ್ತ್ರಾಪಹರಣದ ಪ್ರಸಂಗ ಮೂಲಪಾಠದ್ದೇ ಇರಬೇಕೆಂದು ಒಪ್ಪಿಕೊಂಡಿದ್ದಾರೆ. ಇದರ ಜೊತೆಗೆ ವ್ಯಾಸಭಾರತವನ್ನು ಆಧಾರವನ್ನಾಗಿರಿಸಿಕೊಂಡು, ಕೃತಿಗಳನ್ನು

೧. ಭಾರತ ತೀರ್ಥ: ಮಾಸ್ತಿ ವೆಂಕಟೇಶ ಅಯ್ಯಂಗಾರ್, ಪು. ೧೭೩.
೨. ಅಲ್ಲೇ :..............ಪುಟ, ೧೮೪.

ರಚಿಸಿರುವ ಸಂಸ್ಕೃತ ಹಾಗೂ ಕನ್ನಡ ಕವಿಗಳೆಲ್ಲರೂ ಏಕಪ್ರಕಾರವಾಗಿ ಈ ವಸ್ತ್ರಾಪಹರಣ ಪ್ರಸಂಗವನ್ನು ಹೆಸರಿಸಿರುವುದೂ, ಇದು ಪ್ರಕ್ಷಿಪ್ತವಲ್ಲವೆಂಬ ಸತ್ಯವನ್ನು ಸಾರಿಹೇಳುವಂತೆ ತೋರುತ್ತದೆ. ಆದರೆ ವಸ್ತ್ರಾಪಹರಣದಲ್ಲಿ, ಪ್ರಕ್ಷಿಪ್ತವೆಂದು ಹೇಳಲಾಗಿರುವ ಅಂಶ, ಶ್ರೀಕೃಷ್ಣನಿಂದ ದ್ರೌಪದಿಯ ಸೀರೆ ಅಕ್ಷಯವಾದ ಪ್ರಸಂಗ—ಎನ್ನುವ ವಿಚಾರದಲ್ಲಿ ಯಾವ ಸಂದೇಹಕ್ಕೂ ಆಸ್ಪದವಿಲ್ಲವೆನ್ನುವುದೇ ಇಲ್ಲಿ ಕಂಡುಬರುವ ಸ್ವಾರಸ್ಯವಾದ ಸಂಗತಿ.[೧] ದ್ರೌಪದಿಯ ವಸ್ತ್ರಾಪಹರಣದ ವಿಷಯ ವ್ಯಾಸಭಾರತವನ್ನು ಅನುಸರಿಸಿರುವ ಸಂಸ್ಕೃತ ಮತ್ತು ಕನ್ನಡ ಕವಿಗಳಲ್ಲಿ ಏಕಪ್ರಕಾರವಾಗಿ ಕಂಡುಬರುವಷ್ಟರಮಟ್ಟಿಗೆ, ಕೃಷ್ಣನಿಂದ ಅವಳ ವಸ್ತ್ರ ಅಕ್ಷಯವಾಯಿತೆಂಬ ವಿಚಾರ ಕಂಡುಬರುವುದಿಲ್ಲ. ಅತ್ಯಂತ ಪ್ರಾಚೀನ ನಾಟಕಕಾರನೆಂದು ಹೇಳಲಾದ ಭಾಸಕವಿಯ ‘ದೂತವಾಕ್ಯ’ದಲ್ಲಿ[೨] ಕೃಷ್ಣನು ಪಾಂಡವರ ಪರವಾಗಿ ರಾಯಭಾರಿಯಾಗಿ ಬಂದು ಬಾಗಿಲಲ್ಲಿರುವ ಸುದ್ದಿಯನ್ನು ಕೇಳಿ, ದುರ್ಯೋಧನನು ಕೃಷ್ಣನ ಬಗೆಗೆ ತನ್ನ ಅವಜ್ಞೆ ಹಾಗೂ ಔದ್ಧತ್ಯವನ್ನು ಪ್ರದರ್ಶಿಸಲೆಂದು, ಬಾದರಾಯಣನೆಂಬ ಕಂಚುಕಿಯನ್ನು ಕುರಿತು “ಬಾದರಾಯಣ ದ್ರೌಪದಿಯ ಕೇಶಾಂಬರಾಕರ್ಷಣವನ್ನು ಚಿತ್ರಿಸಿರುವ ಆ ಚಿತ್ರವನ್ನು ತೆಗೆದುಕೊಂಡು ಬಾ, ಅದರಲ್ಲಿ ದೃಷ್ಟಿಯನ್ನು ನೆಟ್ಟು ಕೇಶವನು ಬಂದಾಗ ಎದ್ದು ನಿಲ್ಲುವುದಿಲ್ಲ”[೩]—ಎನ್ನುತ್ತಾನೆ. ತದನಂತರ ಆ ಚಿತ್ರಪಟವನ್ನು ತನ್ನ ಮುಂದೆ ತರಿಸಿ ಹರಹಿಕೊಂಡು, ಆ ಚಿತ್ರವನ್ನು ಮೆಚ್ಚುವ ನೆಪದಲ್ಲಿ ಹಿಂದೆ ಪಾಂಚಾಲಿಗಾದ ಪರಾಭವವನ್ನು ನೆನೆದು ಹರ್ಷಪಡುತ್ತಾನೆ. ಈ ಸಂದರ್ಭದಲ್ಲಿ ಭಾಸನು, ಹಿಂದೆ ದ್ರೌಪದಿಗಾದ ಪರಾಭವದ ಪ್ರಸಂಗದ ಒಂದು ಸಮಗ್ರ ಚಿತ್ರವನ್ನೇ ದುರ್ಯೋಧನನ ಮುಂದಿರುವ ಚಿತ್ರಪಟದ ಮೂಲಕ ನೀಡಿದ್ದಾನೆ: ದುಶ್ಯಾಸನನು ಹಿಡಿದೆಳೆಯಲು ದ್ರೌಪದಿ ರಾಹುಗ್ರಸ್ತವಾದ ಚಂದ್ರಲೇಖೆಯಂತಿದ್ದಾಳೆ; ಭೀಮನು ಕೋಪದಿಂದ ಕೆರಳಿ ಸಭಾಮಂಟಪದ ಕಂಬವನ್ನು ಕಣ್ಣಲ್ಲೇ ತೂಗಿನೋಡುತ್ತಿದ್ದಾನೆ. ಅರ್ಜುನನು ರೋಷಾವೇಶದಿಂದ ಗಾಂಡೀವಕ್ಕೆ

---

೧. ದುಃಖಾರ್ತರಾದ ಭಕ್ತರ ಮೊರೆಯನ್ನು ಕೇಳಿ ಕೃಷ್ಣನು ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಕೃಪೆಮಾಡಿದನೆಂದು ಹೇಳುವ ಕೆಲವೇ ಕೆಲವು ಪ್ರಸಂಗಗಳಿವೆ ಮಹಾಭಾರತದಲ್ಲಿ. ಅವುಗಳಲ್ಲಿ ಅರಣ್ಯಪರ್ವದ ದೂರ್ವಾಸಾತಿಥ್ಯದ ಮತ್ತು ಸಭಾಪರ್ವದ ಅಕ್ಷಯವಸ್ತ್ರದ ಪ್ರಸಂಗ ಗಮನಾರ್ಹವಾದುವು. ಆದರೆ ಇವೆರಡೂ ನಿಸ್ಸಂದೇಹವಾಗಿ ಪ್ರಕ್ಷೇಪಗಳು ಎನ್ನುತ್ತಾರೆ ಸುಕ್ತಂಕರ್ ಅವರು: Aranyaparva, Part II. Introduction, Page XIII.

೨. ಭಾಸಕವಿಯ ಕಾಲದ ವಿಚಾರಲ್ಲಿ ಹಾಗೂ ಆತ ಬರೆದ ನಾಟಕಗಳ ವಿಚಾರದಲ್ಲಿ ಇಂದಿಗೂ ನಿರ್ದಿಷ್ಟನೆಲೆಯನ್ನು ವಿದ್ವಾಂಸರು ತಲುಪಿಲ್ಲವಾದ ಕಾರಣ, ಇಲ್ಲಿ ಉಲ್ಲೇಖಿಸಿರುವ ಈ ಭಾಗವನ್ನು ಒಂದು ಬಗೆಯ ಶಂಕೆಯಿಂದಲೇ ಇರಿಸಿಕೊಳ್ಳಲಾಗಿದೆ.

೩. ಭಾಸನಾಟಕ ಚಕ್ರ. —Edt. C. R. Devadhar, p. 444.

ಹೆದೆಯನ್ನೇರಿಸುತ್ತಿದ್ದಾನೆ; ನಕುಲ ಸಹದೇವರಿಬ್ಬರೂ ಶಸ್ತ್ರವನ್ನು ತುಡುಕಿದ್ದಾರೆ; ಯುಧಿಷ್ಠಿರನು ಅವರೆಲ್ಲರ ಸಮೀಪಕ್ಕೆ ಹೋಗಿ ಸಮಾಧಾನಗೊಳಿಸುತ್ತಿದಾನೆ; ಶಕುನಿ ದ್ರೌಪದಿಯ ಪಾಡನ್ನು ನೋಡಿ ಗಹಗಹಿಸುತ್ತಿದಾನೆ; ಆಚಾರ್ಯರೂ ಭೀಷ್ಮರೂ ಲಜ್ಜೆಯಿಂದ ಮುಖಕ್ಕೆ ಮುಸುಕು ಹಾಕಿಕೊಂಡು ಕುಳಿತಿದ್ದಾರೆ. ಈ ಎಲ್ಲ ಚಿತ್ರದ ಭಾವವೂ ಸ್ಪಷ್ಟವಾಗುವಂತೆ ಬರೆದ ಚಿತ್ರಪಟವನ್ನು ನೋಡಿ ಕೌರವನಿಗೆ ಸಂತೋಷವಾಯಿತಂತೆ. ಅಂತೂ ಕೌರವನಿಗೆ ಇದು ಬಹು ಹೆಮ್ಮೆಯ ಹಾಗೂ ಸಂತೋಷಪಟ್ಟುಕೊಳ್ಳಬಹುದಾದ ಪ್ರಸಂಗವಾಗಿತ್ತು ಎನ್ನುವುದನ್ನು ಭಾಸಕವಿ ಈ ವರ್ಣನೆಯಿಂದ ಸೂಚಿಸಿದ್ದಾನೆ. ಇಲ್ಲಿ, ಕೌರವನ ಮಾತಿನಲ್ಲಿ, ಹಿಂದೆ ದ್ರೌಪದಿಗೆ ಅವಮಾನವಾದ ವಿಷಯ ಮಾತ್ರ ಸೂಚಿತವಾಗಿದೆಯೇ ಹೊರತು, ದ್ರೌಪದಿ ಆ ಅವಮಾನದಿಂದ ಪಾರಾದಳೇ, ಪಾರಾಗಿದ್ದರೆ ಯಾವ ರೀತಿಯಲ್ಲಿ—ಎಂಬ ಪ್ರಶ್ನೆಗಳಿಗೆ ಯಾವ ಉತ್ತರವೂ ಇಲ್ಲ. ಭಾರವಿಯಲ್ಲೂ, ದ್ರೌಪದಿಗೆ ಆದದ್ದು ಕೇಶಾಪಕರ್ಷಣೆ ಎನ್ನುವ ವಿಷಯವೂ, ಆ ಸಂದರ್ಭದಲ್ಲಿ ಅವಳನ್ನು ಕಾದದ್ದು ಕೇವಲ ಅವಳ ಭಾಗ್ಯವೇ ಎನ್ನುವ ಮಾತೂ ಸೂಚಿತವಾಗಿದ್ದರೂ, ಅಲ್ಲಿ ಭಾಗ್ಯ ಎಂಬ ಮಾತಿಗೆ, ಅವಳ 'ಅದೃಷ್ಟ' ಎಂದು ಮಾತ್ರ ಅರ್ಥವಾಗುತ್ತದೆ.[೧] ಭಟ್ಟನಾರಾಯಣನ 'ವೇಣೀಸಂಹಾರ'ದಲ್ಲಿ ದ್ರೌಪದಿಗಾದ ಪರಾಭವಗಳಲ್ಲಿ, ಕೇಶಾಪಕರ್ಷಣ ಹಾಗೂ ವಸ್ತ್ರಾಪಹರಣ—ಎರಡೂ ನಾಲ್ಕೈದು ಕಡೆ ಸೂಚಿತವಾಗಿದ್ದರೂ,[೨] ಅವಳ ಮಾನಸಂರಕ್ಷಣೆಯಾದದ್ದು ಹೇಗೆ? ಅಲ್ಲಿ ಕೃಷ್ಣನ ಕೃಪೆಯೇನಾದರೂ ಒದಗಿ ಬಂದಿತೆ ಎಂಬ ಪ್ರಶ್ನೆಗೆ ಉತ್ತರವೇ ದೊರೆಯುವುದಿಲ್ಲ. ಮುಂದೆ ಕನ್ನಡ ಕವಿಯಾದ ಪಂಪನಿಂದ ಈ ವಿಷಯದ ಮೇಲೆ ಇನ್ನೂ ಸ್ವಾರಸ್ಯವಾದ ಬೆಳಕು ಬಿದ್ದಿದೆ.

---

೧. ದುಃಶ್ಶಾಸನಾಮರ್ಷರಜೋವಿಕೀರ್ಣೈ-
ರೇಭಿರ್ವಿನಾಥೈರಿವ ಭಾಗ್ಯನಾಥೈಃ
ಕೇಶೈಃ ಕದರ್ಥೀಕೃತವೀರ್ಯಸಾರಃ
ಕಚ್ಚಿತ್ಸ ಏವಾಸಿ ಧನಂಜಯಸ್ತ್ವಮ್
[ಕಿರಾತಾರ್ಜುನೀಯ, ೩-೪೭].

ಖಳ ದುಶ್ಶಾಸನನೆಳೆಯಲು ಕೆದರಿದ
ಕಾವವರಿಲ್ಲದೆ ವಿಧಿ ಕಾಯ್ದ
ಕೇಶವೆ ಜರೆದಾ ಕಲಿತನದಾರ್ಪಿನ
ಆಂದಿನ ಪಾರ್ಥನೆ ನೀನಿಂದು !
ಡಾ॥ ಕೃಷ್ಣಮೂರ್ತಿಗಳ ಅನುವಾದ
೩-೪೭.

೨. ವೇಣೀಸಂಹಾರ ನಾಟಕಂ: ಅನು: ಜಯರಾಯಾಚಾರ್ಯ.
೧-೧೦ "ಬಳಿಕಂ ಪಾಂಡುಕುಮಾರರ ಲಲನೆಯ ಪರಿಧಾನಚಿಕುರತತಿಗಳ ಸೆಳೆದಾ ಮಲಿನಾತ್ಮ ಧಾರ್ತರಾಷ್ಟ್ರ |...."
೧-೨೫: "ತೀವಿ ದುರೋದರಾರಣಿಯೊಳಿತ್ತೊ ಕಚಾಂಬರಾಕರ್ಷಣಂಗಳಿಂದಾವುದು"....
೨-೨೩ "ವಸ್ತ್ರಮುಂ ಕಚಮುಮಂ ಆಂದು ದುಶ್ಶಾಸನಂ ಪಾಣಿಯಿಂ ಸೆಳೆಯಲ್"
೩-ಗದ್ಯ: ದ್ರೌಪದೀ ಕೇಶಾಂಬರಗಳನ್ನು ಸೆಳೆದ ಪರಮ ಪಾತಕಿಯು.
೪-೫೦: "ಎಮ್ಮರಸಿಯ ವಸನ ಕಚಗ್ರಹವಗೆಯ್ದ ಪಾತಕಿ . . ."
೫-೨೮: ಕ್ರತುಜಾ ಕಚಾಂಬರ ಹರೋತ್ಥಿತ ವಾತಂ"

'ಹಿತಮಿತ ಮೃದುವಚನ' ನಾದ ಪಂಪ ಈ ಪ್ರಸಂಗವನ್ನು ಕೆಲವೇ ಮಾತುಗಳಲ್ಲಿ ಕೆತ್ತಿದ್ದಾನೆ: ದುರ್ಯೋಧನ ಅಜಾತಶತ್ರುವಿನ ಸರ್ವಸ್ವವನ್ನೂ ಗೆದ್ದು, ಗೆದ್ದ ಸಂಪತ್ತೆಲ್ಲಾ ಬಂದಿತು, ದ್ರೌಪದಿ ಒಬ್ಬಳು ಬರಲಿಲ್ಲ ಎಂದು, ಧರ್ಮರಾಯನ ಪ್ರಾಮಾಣಿಕತೆಯಲ್ಲಿ ನಂಬಿಕೆಯಿಟ್ಟು, "ತನಗೆ ಲಯಮಿಲ್ಲದುದನಱಿದು ಮೇಗಿಲ್ಲದ ಗೊಡ್ಡಾಟಮಾಡಲ್ ಬಗೆದು ಕರ್ಣನ ಲೆಂಕಂ ಪ್ರಾತಿಕಾಮಿಯೆಂಬನುಮಂ ತನ್ನ ತಮ್ಮಂ ದುಶ್ಶಾಸನನುಮಂ ಪೇಟ್ಟೊಡೆ, ಅವಂದಿರ್ ಆಗಳೆ ಬೀಡಿಂಗೆ ವರಿದು ರಜಸ್ವಲೆಯಾಗಿರ್ದೆಂ ಮುಟ್ಟಲಾಗದೆನೆಯುಂ ಒತ್ತಂಬದಿಂದೊಳಗಂ ಪೊಕ್ಕು ಪಾಂಚಾಳಿಯಂ ಕಣ್ಗಿಡೆ ಜಡಿದು ಮುಡಿಯಂ ಪಿಡಿದು ತನ್ಮಧ್ಯದಿಂ ಸುಯೋಧನನ ಸಭಾ ಮಧ್ಯಕ್ಕೆ ತಂದು—

> ಮನದೊಳ್ ನೊಂದಮರಾಪಗಾಸುತ ಕೃಪದ್ರೋಣಾದಿಗಳ್ ಬೇಡವೇ-
> ಡೆನೆಯುಂ ಮಾಣದೆ ತೊಟ್ಟಿತ್ತೊಟ್ಟುವೆಸಕೆಯ್ ಪೋಪೋಗುನೀನೆಂದು ಬ-
> ಯ್ದೆನಿತಾನುಂ ತೆಱದಿಂದಮುಟ್ಟುದುವರಂ ಕೆಯ್ದಂದು ದುಶ್ಶಾಸನಂ
> ತನಗಂ ಮೆಲ್ಲನೆ ಮೃತ್ಯುಸಾರೆ ತೆಗೆದಂ ಧಮ್ಮಿಲ್ಲಮಂ ಕೃಷ್ಣೆಯಾ [೭–೫]
> ವ॥ ಅಂತು ಕೃಷ್ಣೆಯ ಕೃಷ್ಣ ಕಬರೀ ಭಾರಮಂ ಮೇಗಿಲ್ಲದೆ ಪಿಡಿದು ತೆಗೆದು
> ಕೃಷ್ಣೋರಗನಂ ಪಿಡಿದ ಬೆಳ್ವಾಳಂತುಮ್ಮನೆ ಬೆವರುತ್ತಮಿರ್ದ
> ದುಶ್ಶಾಸನನುಮಂ . . . "

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದದ್ದು ದುರ್ಯೋಧನನ ವರ್ತನೆ. ಅಂದು ಅವನಿಗೆ ಆದದ್ದು "ಮೇಗಿಲ್ಲದ ಗೊಡ್ಡಾಟ"ವಾಡುವ ಚಪಲ. ಅವನ ಈ ಚಾಪಲ್ಯವನ್ನು ಕಾರ್ಯರೂಪಕ್ಕೆ ತಂದವನು ತಮ್ಮನಾದ ದುಶ್ಶಾಸನ. ಪಂಪನ ಗಮನ ಇಲ್ಲಿ ಪ್ರಧಾನವಾಗಿ ಕೇಶಾಪಕರ್ಷಣೆಯ ಕಡೆಗೇ. ಆದರೂ ವಸ್ತ್ರಾಪಹರಣ ಪ್ರಸಂಗದ ಕಡೆಗೂ ಅವನ ಗಮನ ಹೋಗದೆ ಇಲ್ಲ.

ಕನ್ನಡ ಭಾರತ ಪರಂಪರೆಗೆ ಎರಡು ಆಕರಗಳಿರುವಂತೆ ತೋರುತ್ತದೆ: ಒಂದು, ಜಿನಸೇನರ ಹರಿವಂಶವನ್ನು ಆಕರವನ್ನಾಗಿರಿಸಿಕೊಂಡು ಮಹಾಭಾರತದ ಕತೆಯನ್ನು ನಾನಾ ಛಂದೋ ರೂಪಗಳಲ್ಲಿ ಬರೆದ ಜೈನ ಕವಿಗಳ ಕಥಾರೀತಿ; ಮತ್ತೊಂದು ಮೂಲಭಾರತವನ್ನೇ ಆಕರವನ್ನಾಗಿರಿಸಿಕೊಂಡು, ತಮಗೆ ತೋರಿದಂತೆ ಉಚಿತವಾದ ಬದಲಾವಣೆಗಳೊಂದಿಗೆ ವ್ಯಾಸರಿಗೆ ಗೌರವ ತಂದ ಪಂಪ-ಕುಮಾರವ್ಯಾಸರ ಕಥಾ ರೀತಿ. ಜಿನಭಾರತ ಪರಂಪರೆಯಲ್ಲಂತೂ ಈ ಕೇಶಾಪಕರ್ಷಣೆಯಾಗಲಿ, ವಸ್ತ್ರಾಪ ಹರಣವಾಗಲಿ ಚಿತ್ರಿತವಾಗಿಲ್ಲ. ಆದರೆ ಮತದಲ್ಲಿ ಜೈನನಾದರೂ 'ವ್ಯಾಸ ಮುನೀಂದ್ರ ರುಂದ್ರ ವಚನಾಮೃತ ವಾರ್ಧಿ'ಯಲ್ಲಿ ಈಜಲು ಹೊರಟ ಪಂಪನ ಪ್ರತಿಭೆಯಿಂದ ನಿರ್ಮಿತವಾದ ಭಾರತದಲ್ಲಿ ಈ ಎರಡು ವಿಷಯಗಳೂ ಬಂದಿವೆ. ಸಾವಿರ ವರ್ಷದ ಹಿಂದೆಯೇ ವ್ಯಾಸಭಾರತವನ್ನು ತನ್ನೆದುರಿಗೆ ಇರಿಸಿಕೊಂಡು, ಆ ಕತೆಯನ್ನು 'ಮೆಯ್ಗಿಡಲೀಯದೆ' ತನ್ನ 'ವಿಕ್ರಮಾರ್ಜುನ ವಿಜಯ'ದ ರೀತಿಗೆ

ಉಚಿತವಾದ ಬದಲಾವಣೆಗಳನ್ನು ಮಾಡಿಕೊಂಡನಾದರೂ, ಈ ವಸ್ತ್ರಾಪಹರಣ ಪ್ರಸಂಗವನ್ನು ಹಾಗೆಯೇ ಕೈಬಿಡುವುದು ಆತನಿಗೆ ಕಷ್ಟವಾಗೇನೂ ಇರಲಿಲ್ಲ. ಆದರೆ ಪಂಪ ವ್ಯಾಸಮುನಿಗಳ ಭಾರತವನ್ನು ಬಹು ಶ್ರದ್ಧೆಯಿಂದ ಅನುಸರಿಸಿದ್ದಾನೆ. ಆದುದ ರಿಂದಲೇ ಏನೊ ಸುಲಭವಾಗಿ ಕೈಬಿಡಬಹುದಾದಂತಹ ವಸ್ತ್ರಾಪಹರಣದ ಪ್ರಸಂಗ ವನ್ನು ಅವನು ಒಂದೇ ಮಾತಿನಲ್ಲಿ ಉಳಿಸಿಕೊಂಡಿರುವುದು ತುಂಬಾ ಅರ್ಥಪೂರ್ಣ ವಾಗಿದೆ. ಆದರೆ ಆ ಪ್ರಸಂಗವನ್ನು ಬಿಡದಿದ್ದರೂ, ಒಂದೇ ಮಾತಿನಲ್ಲಿ ಸಂಗ್ರಹಿಸಿ ದ್ದರೂ, ಒಂದೇ ಮಾತಿನಲ್ಲೇ ಅದನ್ನು ಸಾಕಷ್ಟು ಬದಲಾಯಿಸಿಯೂ ಇದ್ದಾನೆ! ದುಶ್ಶಾಸನ ದ್ರೌಪದಿಯನ್ನು ಎಳೆದು ತಂದು, ತೊತ್ತೆಂದು ಕರೆದು ಹೇಗೋ "ಉಟ್ಟುದುವರಂ ಕೈದಂದು," ತದನಂತರ ಅವಳ ಮುಡಿಯನ್ನೆಳೆದು "ಕೃಷ್ಣೋರ ಗನಂ ಪಿಡಿದ ಬೆಳ್ಳಾಳಂತು" ಬೆವರುತ್ತ ನಿಂತನು ಎಂದು ಪಂಪ ಬರೆಯುತ್ತಾನೆ. ಇಲ್ಲಿ, ದ್ರೌಪದಿಯ ವಸ್ತ್ರಾಪಹರಣವಾಯಿತೆ, ಇಲ್ಲವೆ? ಆಗಿದ್ದಿದ್ದರೆ ಆ ಸಂದರ್ಭದಲ್ಲಿ ದ್ರೌಪದಿಯ ಗತಿಯೇನಾಯಿತು? ಸೀರೆ ಅಕ್ಷಯವಾಯಿತೆ? ಅಕ್ಷಯವಾಗಿದ್ದರೆ ಅದಕ್ಕೆ ಏನು ಕಾರಣವಿರಬಹುದು? ಈ ಎಲ್ಲ ಸಮಸ್ಯೆಗಳನ್ನು ಪಂಪ ಒಂದೇ ಮಾತಿನಲ್ಲಿ ನಿವಾರಿಸಿದ್ದಾನೆ. ಪಂಪನ ದುಶ್ಶಾಸನ "ಉಟ್ಟುದುವರಂ ಕೈದಂದ" ನೆಂದರೆ ವಸ್ತ್ರಾಪಹರಣವಾಯಿತೆಂದಲ್ಲ; ವಸ್ತ್ರಾಪಹರಣದ ಇಚ್ಛೆ, ಪ್ರಯತ್ನ ಎರಡೂ ಇತ್ತೆಂದು ಸ್ಪಷ್ಟವಾಗಿ ತೋರುತ್ತದೆ. ಅದು ಸಫಲವಾಯಿತೋ, ವಿಫಲವಾಯಿತೋ, ಅದು ಅಪ್ರಕೃತ; ಅಂಥ ಒಂದು ಪ್ರಯತ್ನ ನಡೆದದ್ದಂತೂ ಸತ್ಯ—ಎನ್ನುವ ವಿಷಯ ಇಲ್ಲಿ ಸ್ಪಷ್ಟವಾಗಿದೆ. ಕವಿ ಪಂಪನು ಅನುಸರಿಸಿದಂಥ ಭಾರತದ ಪ್ರತಿಯಲ್ಲಿ ವಸ್ತ್ರಾ ಪಹರಣ ಪ್ರಸಂಗವಿರದಿದ್ದ ಪಕ್ಷದಲ್ಲಿ ಪಂಪನ ದುಶ್ಶಾಸನ ಇಷ್ಟು ದೂರ "ಉಟ್ಟು ದುವರಂ" ಕೈ ತರುತ್ತಲೇ ಇರಲಿಲ್ಲ! ಹಾಗಾದರೆ ಏಕೆ ಪಂಪ ವಸ್ತ್ರಾಪಹರಣವಾಯಿ ತೆಂದು ಹೇಳದೆ "ಉಟ್ಟುದುವರಂ ಕೈದಂದು", ಕೂಡಲೇ, ದುಶ್ಶಾಸನನ ಕೈಯನ್ನು ಅವಳ ಮುಡಿಯ ಕಡೆಗೆ ಒಯ್ದ? ದುಶ್ಶಾಸನ ದ್ರೌಪದಿ ಉಟ್ಟುದ್ದರ ತನಕ ತುಂಬಿದ ಸಭೆಯಲ್ಲಿ ಕೈಯನ್ನು ತಂದದ್ದೇ ಹೆಣ್ಣಿನ ವಿಚಾರದಲ್ಲಿ ಸಾಕಷ್ಟು ಅಪಮಾನಕರವಾದ ಸಂಗತಿ ಎಂದು ಪಂಪನ ಸುಸಂಸ್ಕೃತ ಮನಸ್ಸಿಗೆ ಅನ್ನಿಸಿ ಮೂಲದ ವಸ್ತ್ರಾಪಹರಣ ಪ್ರಸಂಗವನ್ನು ಅಷ್ಟಕ್ಕೇ ಕೈಬಿಡುವಂತೆ ಮಾಡಿರಬಹುದು. ಇದಕ್ಕಿಂತಲೂ ಮಿಗಿಲಾಗಿ, ಪಂಪನಿಗೆ ಮೂಲಭಾರತದಿಂದ ಈ ಪ್ರಸಂಗವನ್ನು ಸಂಗ್ರಹಿಸಿ ಬರೆಯುವ ಹೊತ್ತಿನಲ್ಲಿ, 'ವಿಕ್ರಮಾರ್ಜುನ ವಿಜಯ'ದ ಈ ದ್ರೌಪದಿ, 'ಉಭಯಕಾಲ ದೇಶ ಪರಿತ್ಯಾಗ' ವುಳ್ಳ ರಸ ದೃಷ್ಟಿಗೆ ಗೋಚರಿಸುವ ಆ ಮೂಲಭಾರತದ ದ್ರೌಪದಿ ಅಲ್ಲ,* ಇವಳು ವಿಕ್ರಮಾರ್ಜುನ ವಿಜಯದ ಕಥಾನಾಯಕನಾದ ಅರ್ಜುನನೊಂದಿಗೆ ಅಭಿನ್ನನಾಗಿ ರುವ ಅರಿಕೇಸರಿಯ ಧರ್ಮಪತ್ನಿ—ಎಂಬ ಅರಿವು ತಟಕ್ಕನೆ ಸ್ಫುರಿಸಿರಬೇಕು! ಆದುದರಿಂದಲೇ ಪಂಪನ ದುಶ್ಶಾಸನ "ಉಟ್ಟುದುವರಂ" ತಂದ ತನ್ನ ಕೈಯನ್ನು ಹಾಗೆಯೆ ಹಿಂತೆಗೆದುಕೊಳ್ಳಬೇಕಾಯಿತೆಂದು ತೋರುತ್ತದೆ. ಒಟ್ಟಿನಲ್ಲಿ ಪಂಪನು

ಅನುಸರಿಸಿದಂಥ ವ್ಯಾಸಭಾರತದ ಪ್ರತಿಗಳಲ್ಲಿ ವಸ್ತ್ರಾಪಹರಣದ ಪ್ರಸಂಗ ಇದ್ದಿತೆಂದು ಸ್ಪಷ್ಟವಾಗಿ ಗೋಚರಿಸುತ್ತದೆ.

ಪಂಪನ ಸಮೀಪ ಹಾಗೂ ಸಮಕಾಲೀನನಾದ ರನ್ನನ 'ಸಾಹಸ ಭೀಮ ವಿಜಯ'ವೂ ಪಂಪನನ್ನೇ ಬಹುಮಟ್ಟಿಗೆ ಸಮರ್ಥಿಸುತ್ತದೆ. ರನ್ನನ ಕಾವ್ಯ ಮಹಾ ಭಾರತವನ್ನು ಸಿಂಹಾವಲೋಕನ ಕ್ರಮದಲ್ಲಿ ನಿರೂಪಿಸುವ ನವೀನ ರೀತಿ. ಮಹಾ ಭಾರತದ ಕಟ್ಟ ಕಡೆಯ ಘಟ್ಟದ ತುದಿಯಲ್ಲಿ ನಿಂತು ಹಿಂದಿನ ಘಟನೆಗಳನ್ನು ನೆನೆಯುವ ರೀತಿ. ಈ ನೆನಕೆಯಲ್ಲಿ ಪಾಂಡವರ ಬದುಕಿನಲ್ಲಿ ಕೌರವನಿಂದ ಒದಗಿದ ಪರಾಭವದ, ಅನ್ಯಾಯದ ಪ್ರಸಂಗಗಳೇ ಎದ್ದು ಬರುತ್ತವೆ. ಕಥಾನಾಯಕನಾದ ಭೀಮನ ಗಮನ ಪ್ರಧಾನವಾಗಿ ಕೌರವನ ಊರುಭಂಗ-ಕಿರೀಟ ಭಂಗದ ಕಡೆಗೆ; ಅನಂತರ ಅದರ ಪರ್ಯವಸಾನವಾದ ವೇಣೀ ಸಂಹಾರದ ಕಡೆಗೆ. ಇಡೀ ಕಾವ್ಯದ ತುಂಬ ದ್ರೌಪದಿಯ 'ಪರಾಭವಜ್ವಲನಧೂಮಕೃಷ್ಣ' ವಾದ ಆ ಜಡೆಮುಡಿಯೇ ಭೀಮನ ಕೋಪ ವನ್ನು ಕೆರಳಿಸುತ್ತಾ ಹರಹಿಕೊಂಡಿದೆ. ಕಾವ್ಯಾರಂಭದಲ್ಲಿಯೇ, ಹಿಂದೆ ದ್ರೌಪದಿಗೆ ಅವಮಾನವಾದ ಸಂದರ್ಭದಲ್ಲಿ—

ಪರವಶದೊಳಿರ್ದರೋ ಮೇ–
ಣ್ಪರಾರ್ಜಿತ ಪ್ರಾಣರಾದರೋ ದ್ರೌಪದಿಯಂ
ಪರಿಭವಿಸುವಲ್ಲಿ ನೋಡು
ತ್ತಿರಲಕ್ಕುಮೆ ಪವನ ಸೂನುಗಂ ಪಾರ್ಥಂಗಂ

[ಗದಾಯುದ್ಧಂ, ೧–೬೫]

ಎಂದು ಭೀಮನು ತನ್ನನ್ನು ತಾನೇ ಹಳಿದುಕೊಳ್ಳುತ್ತಾನೆ. ಹಿಂದೆ ವಾಸ್ತವವಾಗಿ ಆದದ್ದು ಕೇಶಗ್ರಹಣ ಹಾಗೂ ವಸ್ತ್ರಾಪಹರಣ. ಆಗ ಆ ಅವಮಾನವನ್ನು ಕಂಡೂ ತಾವು ಏಕೆ ನಿಸ್ಸಹಾಯಕರಾಗಿ ಕುಳಿತಿದ್ದೆವೋ ಎಂದು ಭೀಮನಿಗೆ ಜಿಗುಪ್ಸಾ ಪೂರ್ಣವಾದ ವಿಸ್ಮಯ. ಆದರೆ ಆ ಸಂದರ್ಭದಲ್ಲಿ ಕೃಷ್ಣನ ಮಹಿಮೆಯಿಂದ ದ್ರೌಪದಿಯ ಮಾನ ಉಳಿಯಿತೆಂಬ ಮಾತು ರನ್ನನ ಕಾವ್ಯದಲ್ಲಿ ಎಲ್ಲೂ ಬರುವುದಿಲ್ಲ. ಒಂದೆಡೆ ವಸ್ತ್ರಾಪಹರಣ ಪ್ರಸಂಗದ ಚಿತ್ರ ಸಂಜಯನ ಮಾತಿನಲ್ಲಿ ಸ್ಪಷ್ಟವಾಗಿ ಮೂಡಿದೆ:

ಅತಿಲಜ್ಜಾನ್ವಿತನ್ ಆ ನದೀಜನ್, ಅಧಿಕ ಕ್ರೋಧಾವಹಂ ದ್ರೋಣನ್,
ಉದ್ಧತ ಕೌರವ್ಯ ಕೃತಾಟ್ಟಹಾಸಮ್ ಅಸುಹೃದ್ ವೀರಾವತಾರಮ್,
ಪೃಥಾಸುತರ್ ಆರೋಪಿತ ಚಾಪರ್, ಉದ್ಧತರುಮ್ ಆ ಗಾಂಡೀವಿಯುಂ
ಭೀಮನುಂ ಪತಿಗಳ್ ನೋಟ್ಟಿನಮಾಯ್ತು ನಿನ್ನನುಜನಿಂ
ಕೃಷ್ಣಾಂಬರಾಕರ್ಷಣಂ. [೩–೨೩]

ಹಿಂದೆ ನಡೆದ ವಸ್ತ್ರಾಪಹರಣ ಪ್ರಸಂಗವನ್ನು ಸಂಜಯನ ಸಾಕ್ಷ್ಯ ಇಲ್ಲಿ ಸಚಿತ್ರ ವಾಗಿ ಬಣ್ಣಿಸಿದೆ. ಪಂಪನ ಸಮೀಪ ಕಾಲದವನಾದ ರನ್ನ ಪಂಪನಂತೆ 'ಉಟ್ಟುದುವರಂ

ಕೈದಂದು' ಬಿಡಲಿಲ್ಲ. 'ಕೃಷ್ಣಾಂಬರಾಕರ್ಷಣ'ವೇ ಆಯಿತೆಂದು ಹೇಳಿದ್ದಾನೆ. ಪಂಪನಂತೆ ರನ್ನನೂ ತನ್ನ ಕತಿಯನ್ನು, 'ಸಮಸ್ತ ಭಾರತ'ವನ್ನಾಗಿಸಿ, ತನ್ನ ಆಶ್ರಯದಾತನಾದ ತೈಲಪನನ್ನು ಭೀಮನಲ್ಲಿ ಅಭಿನ್ನಗೊಳಿಸಿ ಬರೆದಿದ್ದರೂ, ವಸ್ತ್ರಾಪಹರಣ ಪ್ರಸಂಗವನ್ನು ನೇರವಾಗಿ ಹೇಳಬೇಕಾದ ಪಂಪನಿಗೆ ಬಂದ ಧರ್ಮಸಂಕಟ, ಆ ಕತೆಯನ್ನು ಹಿಂದೆ ನಡೆದದ್ದೆಂಬಂತೆ ಹೇಳುವ ಸುರಕ್ಷಿತ ರೀತಿಯನ್ನು ಕೈಕೊಂಡ ರನ್ನನಿಗೆ ಅಷ್ಟಾಗಿ ಬಂದಂತೆ ತೋರುವುದಿಲ್ಲ. ಪಂಪನಲ್ಲಾದರೋ ಭೀಷ್ಮದ್ರೋಣಾದಿಗಳು ಮನದಲ್ಲಿ ನೊಂದು ಬೇಡ ಬೇಡ ಎಂದರು ; ಆದರೆ ರನ್ನನಲ್ಲಾದರೋ ಭೀಷ್ಮರು ಅತಿ ಲಜ್ಜಿತರಾದರು ; ದ್ರೋಣರು ಅಧಿಕ ಕ್ರೋಧಾನ್ವಿತರಾದರು. ಉದ್ಧತರಾದ ಕೌರವರು ಅಟ್ಟಹಾಸ ಮಾಡಿದರು. ಪೃಥಾಸುತರು ಆರೋಪಿತ ಚಾಪರಾದರು. ಉದ್ಧತರಾದ ಕೌರವರೂ ಭೀಮಾರ್ಜುನರೂ ನೋಡ ನೋಡುತ್ತಲೇ ದುಶ್ಯಾಸನನಿಂದ ಆಯಿತು 'ಕೃಷ್ಣಾಂಬರಾಕರ್ಷಣ'. ಇಲ್ಲಿ ಪ್ರಧಾನವಾಗಿ ಸಂಪೂರ್ಣ ಗಮನವೆಲ್ಲಾ ವಸ್ತ್ರಾಪಹರಣ ಪ್ರಸಂಗಕ್ಕೇ. ಅಷ್ಟೇ ಅಲ್ಲ ಆ ಸಂದರ್ಭದಲ್ಲಿ ಸಭೆಯಲ್ಲಾದ ಕ್ರಿಯೆ ಪ್ರತಿಕ್ರಿಯೆಗಳ ಚಿತ್ರವೂ ವಿಶಿಷ್ಟವಾಗಿಯೇ ತೋರುತ್ತದೆ.[೧] ಇಡೀ ಸಭೆಗೆ ಸಭೆಯೇ ಪ್ರಕ್ಷೋಭವಾದಾಗ, ಪಾಂಡವರ ಪ್ರತಿಭಟನೆಯ ಎದುರಿಗೇ ದುಶ್ಯಾಸನನಿಂದ ವಸ್ತ್ರಾಪಹರಣವಾದದ್ದನ್ನು ನೋಡಿದರೆ ಕೌರವನ ಔದ್ಧತ್ಯ ಎಷ್ಟು ಮಿಗಿಲಾಗಿತ್ತೆಂಬುದು ವ್ಯಕ್ತವಾಗುತ್ತದೆ. ಸಂಜಯನ ಈ ಬಣ್ಣನೆಗೆ, 'ಗದಾಯುದ್ಧ' ಕಾವ್ಯದಲ್ಲಿಯೇ ದುರ್ಯೋಧನನು ಉತ್ತರವೀಯುತ್ತಾ "ವನಿತೆಯ ಕೇಶಮಂ ಸಭೆಯೊಳೆನ್ನನುಜಂ ತೆಗೆವಲ್ಲಿ ಗಂಡನಾಗನೆ" [೩–೨೯] ಎಂದು ಹೇಳಿ, ಸಂಜಯನು ನಿರೂಪಿಸಿದ ವಸ್ತ್ರಾಪಹರಣದ ಬಗೆಗೆ ಏನನ್ನೂ ಹೇಳದೆ, ಕೇಶಾಪಕರ್ಷಣದ ಕಡೆಗೇ ನಮ್ಮ ಗಮನವನ್ನು ಸೆಳೆಯುತ್ತಾನೆ. ಮುಂದೆ ವೈಶಂಪಾಯನ ಸರೋವರ ತೀರದಲ್ಲಿ, ಕೌರವನ ಹಿಮ್ಮೆಟ್ಟಿದ ಹೆಜ್ಜೆಗಳನ್ನು ವರ್ಣಿಸುತ್ತಾ ಕವಿ ರನ್ನನೇ ಕೌರವನ ದುರ್ನಯಗಳನ್ನು ಒಂದೊಂದಾಗಿ ನೆನೆಯುತ್ತಾ "ತುಱುವಂ ಕಳಿಸುವ, ಕೃಷ್ಣೆಯ ನಿಱಿಯಂ ಪಿಡಿದುರ್ಚುವೇಟ್ಟಿ, ಕೊಳನಂ ಪಿಂದುಂ ಪೆಱಗಾಗಿ ಪುಗುವ ದುರ್ನಯ ಮಱಪವೆ ಕೌರವನ ರಾಜ್ಯದಾಯುವ ಕೇಡಂ" [೬–೧೪] ಎಂದು ವ್ಯಾಖ್ಯಾನ ಮಾಡುತ್ತಾನೆ. ಕೌರವ—ಭೀಮರ ಗದಾಯುದ್ಧ ಸಂದರ್ಭದಲ್ಲಿ, ಭೀಮನು ಕೌರವನನ್ನು ಮೂದಲಿಸುತ್ತಾ "ಕೃಷ್ಣಾಂಬರಕೇಶಾಕೃಷ್ಟಿಯಂ ಮಾಡಿಸಿದ ಮದಮದೆಲ್ಲಿತ್ತೊ ?" [೭–೧೯] ಎನ್ನುತ್ತಾನೆ. ಕಡೆಗೆ ತನ್ನ ಗದಾಘಾತದಿಂದ ತೊಡೆಯುಡಿದು ನೆಲಕ್ಕೆ ಬಿದ್ದ ಕೌರವನನ್ನು, ಪಾಂಚಾಲಿಗೆ ತೋರಿಸುತ್ತಾ,

---

೧ ರನ್ನನು ಕೊಡುವ ಈ ಕ್ರಿಯೆ-ಪ್ರತಿಕ್ರಿಯೆಗಳ ಚಿತ್ರಣ ಮೂಲಭಾರತ ಹಾಗೂ ಪಂಪನಿಂದ ಭಿನ್ನವಾಗಿದ್ದರೂ ವಾಸ್ತವವಾಗಿ ಭಾಸನ 'ದೂತವಾಕ್ಯ'ದಲ್ಲಿ ಬರುವ ಈ ಪ್ರಸಂಗದ ವರ್ಣನೆಯನ್ನೇ ಈತ ಸಂಪೂರ್ಣವಾಗಿ ಅನುಸರಿಸಿ, ಅನುಕರಿಸಿರುವಂತಿದೆ. ಮೇಲಾಗಿ ರನ್ನನ ಮನೋಧರ್ಮಕ್ಕೆ ಈ ಬಗೆಯ ನಿರೂಪಣೆಯೇ ಒಗ್ಗತಕ್ಕದ್ದು.

ಭೀಮನು—"ನಿಜ ಕಬರೀ ನೀವಿಬಂಧಂಗಳಂ ದೋರ್ವಲದಿಂದಂ ತಮ್ಮನಿಂದಂ ತೆಗೆಯಿಸಿ ನಡೆನೋಡಿದ" [೭–೫೯] ಆ ದ್ರೋಹನ ಇರವನ್ನು ನೋಡು ಎನ್ನುತ್ತಾನೆ. ಈ ಎಲ್ಲ ಪರಿಶೀಲನೆಯಿಂದ, ರನ್ನನ ಕಾವ್ಯದಲ್ಲಿ 'ವಸ್ತ್ರಾಪಹರಣ' ನಡೆಯಿತೆಂಬ ಬಗೆಗೆ ಸಾಕಷ್ಟು ಸಾಕ್ಷ್ಯವಿದೆ; ಆದರೆ ಎಲ್ಲಿಯೂ ವಸ್ತ್ರ ಅಕ್ಷಯವಾದ ಸಂಗತಿಯಾಗಲಿ, ಕೃಷ್ಣನ ಕೃಪೆಯ ವಿಷಯವಾಗಲಿ ಇಲ್ಲ.

ಪಂಪ–ರನ್ನರ ನಂತರ, ಹನ್ನೊಂದನೆ ಶತಮಾನದಲ್ಲಿ ಸೋದರ ಭಾಷೆಯಾದ ತೆಲುಗಿನಲ್ಲಿ ರಚಿತವಾದ ನನ್ನಯ್ಯನ 'ಆಂಧ್ರ ಮಹಾಭಾರತ'ದಲ್ಲಿ ಈ ಪ್ರಸಂಗವನ್ನು ಕುರಿತು ಸ್ವಾರಸ್ಯವಾದ ಸಂಗತಿಗಳು ನಿರೂಪಿತವಾಗಿವೆ.[೧] ನನ್ನಯ್ಯನಲ್ಲಿ ಬರುವ ಈ ಪ್ರಸಂಗವನ್ನು ಹೀಗೆ ಸಂಗ್ರಹಿಸಬಹುದು: ದ್ರೌಪದಿಯನ್ನು ಧರ್ಮರಾಯ ಸೋತಕೂಡಲೇ ಕೌರವ ದ್ರೌಪದಿಯನ್ನು ಕರೆತರಲು ಪ್ರಾತಿಕಾಮಿಯನ್ನು ಕಳುಹಿಸುತ್ತಾನೆ. ಆತ ಅಲ್ಲಿ ಹೋದಾಗ ದ್ರೌಪದಿ 'ಧರ್ಮರಾಯ ತನ್ನನ್ನು ಮೊದಲು ಸೋತನಂತರ, ಮಡದಿಯಾದ ತನ್ನನ್ನು ಸೋತರೆ ಅದು ಧರ್ಮ ಸಮ್ಮತವೆ?'—ಎಂಬ ಪ್ರಶ್ನೆಯನ್ನು ಸಭೆಗೆ ಹೇಳಿ ಕಳುಹಿಸುತ್ತಾಳೆ. ಪ್ರಾತಿಕಾಮಿ ದ್ರೌಪದಿಯ ಪ್ರಶ್ನೆಯನ್ನು ತಂದು ಧರ್ಮರಾಯನಿಗೆ ಹೇಳಲಾಗಿ, ಆತ ಪ್ರತಿವಚನವೀಯದೆ ಸುಮ್ಮನಾಗುತ್ತಾನೆ. ಆಗ ದುರ್ಯೋಧನ ಪ್ರಾತಿಕಾಮಿಗೆ ಹೇಳುತ್ತಾನೆ—'ಸುಂದರಿ ದ್ರೌಪದಿ ಆ ಪ್ರಶ್ನೆಯನ್ನು ಇಲ್ಲಿಗೇ ಬಂದು ಕೇಳಿ ತಿಳಿದುಕೊಳ್ಳಲಿ' ಎಂದು. ಆಗ ದ್ರೌಪದಿ ಏಕವಸ್ತ್ರೆಯೂ, ಅಧೋನೀವಿಯೂ ಆಗಿ ಸಭೆಗೆ ಬಂದಳು. ಬಂದು ಕುರುವೃದ್ಧನಾದ ಧೃತರಾಷ್ಟ್ರನ ಸಮೀಪದಲ್ಲಿ ದುಃಖಿತೆಯಾಗಿ ನಿಂತಳು. ಪಾಂಡವರು ಇದನ್ನು ಕಂಡು ಲಜ್ಜಿತರಾಗಿ ತಲೆ ತಗ್ಗಿಸಿದರು; ದುರ್ಯೋಧನನಿಗೆ ಹರ್ಷವಾಯಿತು. ಆಗ ಕೌರವ ದುಶ್ಯಾಸನನನ್ನು ಕರೆದು 'ಪ್ರಾತಿಕಾಮಿ ವೃಕೋದರನಿಗೆ ಹೆದರುತ್ತಾನೆ, ನೀನು ದ್ರೌಪದಿಯನ್ನು [ಸಭಾಮಧ್ಯಕ್ಕೆ?] ಕರೆದುತಾ' ಎನ್ನುತ್ತಾನೆ. ಆಗ ದ್ರೌಪದಿ ಭಯದಿಂದ ಗಾಂಧಾರಿಯ ಕಡೆ ಹೋಗಲು ಯತ್ನಿಸುತ್ತಾಳೆ. ಆದರೆ ಹಾಗೆ ಮಾಡಲು ಅವಳಿಗೆ ಅವಕಾಶ ಕೊಡದೆ ದುಶ್ಯಾಸನನು ಬಂದು 'ಇನ್ನೆಲ್ಲಿ ಹೋಗಬಲ್ಲೆ ಬಾ' ಎಂದು ಎಳೆಯತೊಡಗಲು, ಆಕೆ ಹೇಳಿದಳು "ನಾನು ಏಕವಸ್ತ್ರೆ; ರಜಸ್ವಲೆ; ಸಭಾಮಧ್ಯಕ್ಕೆ ಹೇಗೆ ಬರಲಿ?"—ಎಂದು. ಆಗ ಅವನು "ನೀನು ಏಕವಸ್ತ್ರೆಯಾದರೇನು, ವಿಗತವಸ್ತ್ರೆಯಾದರೆ ತಾನೇ ಏನು"—ಎನ್ನುತ್ತಾ ಬಲಾತ್ಕಾರವಾಗಿ, ಆ ರಾಜಸೂಯದಲ್ಲಿ ಮಂತ್ರ ಜಲಾಭಿಷೇಚನದಿಂದ ಪವಿತ್ರವಾದ ಮುಡಿಯನ್ನು ಹಿಡಿದೆಳೆದು ಸಭಾ

---

೧ ನನ್ನಯ್ಯನ ಮೇಲೆ ಕನ್ನಡ ಕವಿ ಪಂಪನ ಶೈಲಿಯ ಪ್ರಭಾವವಿದೆ ಎಂದೂ, ನನ್ನಯ್ಯನ ಭಾರತ ಮೂಲಭಾರತದ ಪ್ರಾಚೀನಪಾಠವನ್ನು ಚೆನ್ನಾಗಿ ಪ್ರತಿನಿಧಿಸುತ್ತದೆ ಎಂದೂ ವಿದ್ವಾಂಸರ ಅಭಿಪ್ರಾಯ.

ಮಧ್ಯಕ್ಕೆ ತಂದು ನಿಲ್ಲಿಸಿದನು. ವಾತಾಹತವಾದ ಪತಾಕೆಯಂತೆ ವಿಕೀರ್ಣ ಕೇಶಿಯೂ ವಿವರ್ಣವದನೆಯೂ ಆಗಿ, ದುಷ್ಟ ಭೂಯಿಷ್ಟವಾದ ಆ ಸಭೆಗೆ ಬಂದು ಕೋಪಲಜ್ಜಾಪರವಶಳಾಗಿ, ಸಭಾಸದರನ್ನು ಉದ್ದೇಶಿಸಿ ಈ ಸಮಸ್ಯೆಯನ್ನು ವಿಚಾರಮಾಡಿ ಎಂದು ಕೇಳಿಕೊಳ್ಳುತ್ತಾಳೆ. ಹಾಗೆಯೇ ಇದು ಉಚಿತವಲ್ಲ ಎಂದು ಈ ಕುರು ಮುಖ್ಯರು ನೋಡುತ್ತಿದ್ದಂತೆಯೇ ದುರ್ಮದನಾಗಿ ದುಶ್ಯಾಸನನು ನನ್ನನ್ನು ಹೀಗೆ ಅವಮಾನ ಮಾಡುವುದು ಸರ್ವಧರ್ಮವನ್ನೂ ತಿಳಿದ ಈ ಭಾರತ ವೀರರ ವಂಶಕ್ಕೆ ಅತಿ ನಿಂದ್ಯವಾಯಿತು ಎನ್ನುತ್ತಾ ಭಾಮಿನಿ ಭೀತಿಯಿಂದ ಕೃಷ್ಣನನ್ನು ಸ್ಮರಿಸಿದಳು.೧ ಹೀಗೆ ಜಗತ್ರಯ ವಿಜಯ ಭುಜವೀರ್ಯವುಳ್ಳ ನಾಥರಿದ್ದೂ ಅನಾಥಳಂತೆ ಆ ಪಾಂಚಾಲರಾಜಪುತ್ರಿ ಭಯಾರ್ತಳಾಗಿ, ಆರ್ತಜನ ಶರಣ್ಯನಾದ, ಜಗನ್ನಾಥ ಜನಾರ್ದನನನ್ನು ಸ್ಮರಿಸುತ್ತಾ ಇರಲು....,೨ ಭೀಮಸೇನನು ಕ್ರೋಧೋದ್ದೀಪ್ತನಾಗಿ, ಅಣ್ಣನ ಬಾಹುಗಳನ್ನು ಸುಡುವೆನೆಂದು ಆರ್ಭಟಿಸಿದಾಗ ಅರ್ಜುನ ಅವನನ್ನು ಸಂತೈಸುತ್ತಾನೆ. ಆಗ ದ್ರೌಪದಿಯ ಪರವಾಗಿ ವಿಕರ್ಣನು ವಾದಿಸುತ್ತಾನೆ; ಅದಕ್ಕೆ ಉತ್ತರ ರೂಪವಾಗಿ ಕರ್ಣನು, "ಒಬ್ಬ ಗಂಡನಿಗೆ ಒಬ್ಬಳು ಪತ್ನಿ ಇರಬೇಕಾದದ್ದು ದೈವವಿಹಿತವಾದದ್ದು, ಆದರೆ ಈಕೆಗೆ ಅನೇಕ ಭರ್ತೃಗಳಿರುವುದರಿಂದ, ಈಕೆ ಬಂಧಕಿ; ಆದುದರಿಂದ ಈಕೆಯನ್ನು ವಿಗತವಸ್ತ್ರಳನ್ನಾಗಿ ಮಾಡಿ ಕರೆತಂದರೂ ಧರ್ಮ ವಿರೋಧವಾಗುವುದಿಲ್ಲ"—ಎನ್ನುತ್ತಾನೆ....ಆಗ ಕೌರವ ಮತ್ತೆ ದುಃಶ್ಯಾಸನನಿಗೆ ಈ ಪಾಂಡವರ ಮತ್ತು ದ್ರೌಪದಿಯ ವಸ್ತ್ರಗಳನ್ನು ಅಪಹರಿಸು೩ ಎನ್ನಲು, ಆತ ಬಂದು ಇದು ಮಾಡಬಾರದು ಎಂದು ಮನದಲ್ಲಿ ವಿಚಾರಿಸದೆ ಸದ್ವರ್ತನಾದ ಆ ದುಶ್ಯಾಸನನು ನೇರವಾಗಿ ದ್ರೌಪದಿ ಕಟ್ಟಿದ ವಸ್ತ್ರವನ್ನು ಸಭೆಯಲ್ಲಿ ಆಶಂಕೆಯಿಲ್ಲದೆ ಸೆಳೆಯಲಾಗಿ, ಅವನು ಸೆಳೆದಂತೆ ಅವಳ ಜಘನ ಮಂಡಲವನ್ನು ದಾಟದೆ, ನಿರಂತರವಾಗಿ ಅದೇ ಬಗೆಯ ವಸ್ತ್ರಗಳು ಕಾಣಿಸಿಕೊಳ್ಳಲು ಸಭ್ಯರೆಲ್ಲರೂ ಹರ್ಷಿತರಾದರು;

---

೧ ಇದಿ ಉಚಿತಂಬುಗಾದನಕ ಯಿಕ್ಕುರುಮುಖ್ಯುಲು ಸೂಚುಚುಂಡ ದು
ರ್ಮದುಡೈ ವೀಡು ನನ್ನುನವಮಾನಿತ ಜೇಸೆಡಿ ಸರ್ವಧರ್ಮಸಂ-
ವಿದುಲನನುನ್ನಯೀ ಭರತವೀರುಲ ವಂಶಮುನೇಡಧರ್ಮಸಂ-
ಪದನತಿನಿಂದ್ಯಮಯ್ಯೆನನಿ ಭಾಮಿನಿ ಕೃಷ್ಣದಲಂಚೆ ಭೀತಯ್ಯೆ

[ಸಭಾಪರ್ವ, II—೨೧೯]

೨ ....ಅನಾಥಯುಂಬೋಲೆ ಪಾಂಚಾಲ ರಾಜಪುತ್ರಿ ಭಯಾರ್ತಯ್ಯೆ
ಆರ್ತಜನ ಶರಣ್ಯುಂಡೈನ ಜಗನ್ನಾಥು ಜನಾರ್ದನುಂ ದಲಂಚುಚು.

[ಅಲ್ಲೇ, ೨೨೦.]

೩ ಯಿಪ್ಪಾಂಡವುಲಯು ದ್ರೌಪದಿಯು ವಸ್ತ್ರಂಬುಲಪಹರಿಂಪು...

[ಅಲ್ಲೇ, ೨೨೯]

ಶ್ರೀಮದಾಂಧ್ರಭಾರತಮು, ವಾವಿಳ್ಳ ರಾಮಸ್ವಾಮಿಶಾಸ್ತ್ರಿಲು,
ಪುಟ, ೩೧೬—೩೧೭.

ದುಶ್ಯಾಸನನು ಹಾಗೆ ಸೆಳೆದುಹಾಕಿದ ವಸ್ತ್ರ ಪರ್ವತೋಪಮವಾಗಲು ಆತ ಲಜ್ಜೆಯಿಂದ ಶಕ್ತಿಗುಂದಿ ಸುಮ್ಮನಾದನು.೧

ಇದು ನನ್ನಯ್ಯನ ಭಾರತದಲ್ಲಿ ಚಿತ್ರಿತವಾಗಿರುವ ವಸ್ತ್ರಾಪಹರಣದ ಪ್ರಸಂಗ. ಈ ಪ್ರಸಂಗದ ಮುಕ್ಕಾಲು ಮೂರುಪಾಲು ಮಾತೆಲ್ಲಾ ಮೂಲ ಭಾರತದ್ದೇ—'ಭಾಮಿನಿ ಕೃಷ್ಣನನ್ನು ಸ್ಮರಿಸಿದಳು'—ಎಂಬ ಮಾತು ಹೊರತು. ಅದರಲ್ಲೂ ದ್ರೌಪದಿ ಸಭೆಗೆ ಬಂದುದು ತನ್ನ ಪ್ರಶ್ನೆಗೆ ಉತ್ತರವನ್ನು ಪಡೆಯಲೆಂದು? ವಸ್ತ್ರಾಪಹರಣಕ್ಕಲ್ಲ. ಆದರೆ ಯಾವಾಗ ದುಶ್ಯಾಸನ "ನೀನು ಏಕವಸ್ತ್ರೆಯಾದರೇನು, ವಿಗತವಸ್ತ್ರೆಯಾದರೇನು"—ಎಂಬ ಮಾತನ್ನಾಡಿದನೋ, ಮತ್ತು, ಕರ್ಣನೂ ಸಹ "ಇವಳು ಬಂಧಕಿ, ಇವಳನ್ನು ವಿವಸ್ತ್ರಳನ್ನಾಗಿ ಮಾಡಿ ಕರೆತಂದರೂ ಅಧರ್ಮವಲ್ಲ"-ಎಂದನೋ, ಆ ಮಾತುಗಳು ಕೌರವ ಮನದ ಕುಬುದ್ಧಿಯನ್ನು ಸಾಕಷ್ಟು ಪ್ರಚೋದಿಸಿರಬೇಕು. ತನ್ನ ಇಬ್ಬರು ಪ್ರಿಯ ವ್ಯಕ್ತಿಗಳ ಮನದಿಂದ ಬಂದ ಈ ಒಂದು ಸೂಚನೆ, ಬರಬರುತ್ತಾ ಆಶಯವೂ ಆಗಿ, ಕೌರವನ ಉದ್ಧತ ತೀರ್ಮಾನವಾಗಿ ಪರಿಣಮಿಸಿ, ದುಶ್ಯಾಸನನ ಮೂಲಕ ಕಾರ್ಯೋನ್ಮುಖವಾದ ರೀತಿ ಚೆನ್ನಾಗಿ ವ್ಯಕ್ತವಾಗಿದೆ ಇಲ್ಲಿ. ಆದರೆ ಈ ಪ್ರಸಂಗಕ್ಕೆ ಭಾಸನಿಂದ ಹಿಡಿದು ಪಂಪ ರನ್ನರ ಕಾಲದವರೆಗೂ ಸೇರದ ಒಂದು ಮಾತು ಇಲ್ಲಿ ಆಗಲೇ ಪ್ರವೇಶ ಮಾಡಿದೆ. ಪಂಪ ರನ್ನರು ಕೈಬಿಟ್ಟ ಪವಾಡ, ಹಾಗೂ ಕೃಷ್ಣನ ನೆರಳು ಇಲ್ಲಿ ಆಗಲೇ ಕಾಣಿಸಿಕೊಳ್ಳತೊಡಗಿದೆ. ದ್ರೌಪದಿಯ ವಸ್ತ್ರವೇನೋ ಅಕ್ಷಯವಾಯಿತು, ನಿಜ. ಆದರೆ ಕವಿ ದ್ರೌಪದಿ ದುಶ್ಯಾಸನನಿಂದ ಎಳೆಯಲ್ಪಟ್ಟು ಸಭೆಗೆ ಬಂದು ತನ್ನ ಅವಸ್ಥೆಯನ್ನು ಕಂಡುಕೊಂಡು ಭೀತಿಯಿಂದ ಕೃಷ್ಣನನ್ನು, ಆರ್ತಜನ ಶರಣ್ಯನಾದ ಜಗನ್ನಾಥ ಜನಾರ್ದನನನ್ನು ಸ್ಮರಿಸಿದಳು ಎಂದು ಹೇಳಿ, ಅನಂತರ ಸಭೆಯಲ್ಲಿ ಹಲ ಕೆಲವು ಘಟನೆಗಳಾಗಿ ದುಶ್ಯಾಸನನು ದ್ರೌಪದಿಯ ವಸ್ತ್ರವನ್ನು ಸೆಳೆದಾಗ ಸೀರೆ ಅಕ್ಷಯವಾಗಿ ಪರ್ವತೋಪಮವಾಯಿತು—ಎಂದು ವರ್ಣಿಸಿದ್ದಾನೆ. ವಾಸ್ತವವಾಗಿ ಇಲ್ಲಿ, "ಭಾಮಿನಿ ಭೀತಿಯಿಂದ ಕೃಷ್ಣನನ್ನು ಸ್ಮರಿಸಿದಳು" ಎನ್ನುವುದೂ, "ಸೀರೆ ಅಕ್ಷಯವಾಗಿ ಪರ್ವತೋಪಮವಾಯಿತು" ಎನ್ನುವುದೂ—ಎರಡೂ ಬೇರೆ ಬೇರೆಯೇ. ಆದರೆ ಆಕೆ ಕೃಷ್ಣನನ್ನು ಸ್ಮರಿಸಿದ್ದರಿಂದ ಅವಳ ಸೀರೆ ಆತನ ಕೃಪೆಯಿಂದ ಅಕ್ಷಯವಾಯಿತೆಂದು ಸಿದ್ಧಾಂತ ಮಾಡಲು ಇಲ್ಲಿ ಆಧಾರವೇ ಇಲ್ಲ. ಭಾಮಿನಿ ಭೀತಿಯಿಂದ ಕೃಷ್ಣನನ್ನು ಸ್ಮರಿಸಿರಬಹುದು; ಕಷ್ಟಕಾಲದಲ್ಲಿ ಹಿತವರನ್ನಾಗಲೀ, ದೇವರನ್ನಾಗಲೀ ಯಾರಾದರೂ ಸ್ಮರಿಸುವುದು ಸಹಜವೇ. ಹಾಗೆ ದ್ರೌಪದಿ ಕೃಷ್ಣನನ್ನು ಸ್ಮರಿಸಿದಳು; ಅಷ್ಟೆ. ಆದರೆ ಸೀರೆ ಅಕ್ಷಯವಾದದ್ದಕ್ಕೆ ದ್ರೌಪದಿಯ ಶೀಲವೇ ಕಾರಣವೋ, ಕೃಷ್ಣನಾಮ ಸ್ಮರಣೆ

---

೧. ಶ್ರೀಮದಾಂಧ್ರ ಮಹಾಭಾರತಮು, ಸಭಾಪರ್ವಮು, II, ಪ. ೨೪೧-೨೪೨

(ಪು. ೩೦೭)

ಕಾರಣವೋ ಸ್ಪಷ್ಟವಾಗುವುದಿಲ್ಲ. ವಸ್ತ್ರ ಅಕ್ಷಯವಾಯಿತೆಂದದ್ದು ಮೂಲ ಭಾರತದ ಪ್ರಸಾದ; ಕೃಷ್ಣನಾಮಸ್ಮರಣೆ ಬಂದುದು ಇತ್ತೀಚಿನ ಪ್ರಭಾವ. ಕವಿಯೇನೋ ನೇರವಾಗಿ ಕೃಷ್ಣನ ಕೃಪೆಯಿಂದ ವಸ್ತ್ರ ಅಕ್ಷಯವಾಯಿತೆಂದು ಹೇಳದಿದ್ದರೂ, ಈ ಪ್ರಸಂಗದ ಈ ಕಡೆ ಕೃಷ್ಣನ ಹೆಸರೂ, ಆ ಕಡೆ ಅಕ್ಷಯವಾದ ಪವಾಡವೂ ಸೇತುವೆಯಿಲ್ಲದ ಪ್ರವಾಹದ ಎರಡು ದಡಗಳಂತೆ ಬೇರೆಯಾಗಿಯೇ ನಿಂತಿವೆ. ಹಾಗೆ ಈ ಎರಡು ದಡಗಳಿಗೂ ಶ್ರೀಕೃಷ್ಣನ ಕೃಪೆಯ ಸೇತುವೆಯನ್ನು ಕಟ್ಟಲು ಮುಂದಿನ ಕವಿಗಳಿಗೆ ಸಾಕಷ್ಟು ಸಿದ್ಧತೆ, ಸೂಚನೆ ಅಲ್ಲಿದೆ!

ಈ ಎರಡು ಪ್ರಸಂಗಗಳನ್ನೂ ಸೇರಿಸಿ ಕೃಷ್ಣನ ಕೃಪೆಯ ಸೇತುವೆಯನ್ನು ಕಟ್ಟಿದವರು ಮುಂದಿನವರು. ವಸ್ತ್ರಾಪಹರಣ ಪ್ರಸಂಗದಲ್ಲಿ, ದ್ರೌಪದಿಯ ಸೀರೆ ಅಕ್ಷಯವಾಯಿತೆಂದು ಮಹಾಭಾರತ ಹೇಳುತ್ತದೆ. ಹೀಗಾಗಿ ಸೀರೆ ಅಕ್ಷಯವಾದ ಕೀರ್ತಿ ಯಾರಿಗೆ ಸಲ್ಲಬೇಕೆಂಬ ಬಗೆಗೆ "ಜನತಾಂತರ್ದೃಷ್ಟಿ" ಯಲ್ಲಿ ಸಾಕಷ್ಟು ಚರ್ಚೆಯಾಗಿರಬೇಕು. ಮಹಾಭಾರತದಿಂದ ವಸ್ತುವನ್ನಾರಿಸಿಕೊಂಡು ಕೃತಿ ರಚನೆ ಮಾಡಿದ ಭಾಸ, ಭಟ್ಟನಾರಾಯಣ, ಇವರಾಗಲಿ, ಕನ್ನಡ ಕವಿಗಳಾದ ಪಂಪ ರನ್ನರಾಗಲಿ, ತಮ್ಮ ತಮ್ಮ ಕೃತಿಗಳಲ್ಲಿ ವಸ್ತ್ರಾಪಹರಣದ ವಿಷಯವನ್ನು ನಿರೂಪಿಸಿದರೂ, 'ಅಕ್ಷಯವಸ್ತ್ರ' ದಂಥ ಪವಾಡದ ತಂಟೆಗೇ ಹೋಗದೆ ಕೈ ತೊಳೆದುಕೊಂಡು ಶ್ರೀಮನ್ ಮೌನವ್ನಾಗಿಯೇ ನಿಂತರು.[೧] ಆದರೆ ನನ್ನಯ್ಯನ ಕಾಲಕ್ಕಾಗಲೇ, ಈ

---

೧. ಕೃಷ್ಣನಿಲ್ಲದ .ಕೇವಲ ಅಕ್ಷಯವಸ್ತ್ರದ ಪ್ರಸಂಗ ಮೂಲಪಾಠದ್ದೆ ಎಂದು ಸಿದ್ಧವಾಗಿದ್ದರೂ, ಈ ಕವಿಗಳೆಲ್ಲರೂ ಏಕಪ್ರಕಾರವಾಗಿ ಕೇವಲ ವಸ್ತ್ರಾಪಹರಣದ ವಿಷಯವನ್ನು ಪ್ರಸ್ತಾಪಿಸಿ, ವಸ್ತ್ರ ಅಕ್ಷಯವಾದ ಸಂಗತಿಯ ಬಗೆಗೆ ಮೌನ ತಾಳಿರುವುದು ಸೋಜಿಗವನ್ನುಂಟು ಮಾಡುತ್ತದೆ. ಪಂಪ–ರನ್ನರ ನಂತರ, ಬಹುಶಃ ನನ್ನಯ್ಯನ ಸಮಕಾಲೀನನಾದ, ಕ್ಷೇಮೇಂದ್ರನ (ಸು. ಕ್ರಿ. ಶ. ೧೦೫೦) ಸಂಸ್ಕೃತ 'ಭಾರತ ಮಂಜರಿ'ಯಲ್ಲಿ, ವಸ್ತ್ರಾಪಹರಣ ಪ್ರಸಂಗ ಅಕ್ಷಯ ವಸ್ತ್ರದ ಘಟನೆಯೊಂದಿಗೆ ವರ್ಣಿತವಾಗಿರುವುದು ಗಮನಾರ್ಹವಾಗಿದೆ. ಕ್ಷೇಮೇಂದ್ರನ ಭಾರತ ಮಂಜರಿ, ವ್ಯಾಸ ಮಹಾಭಾರತದ ಕಾಶ್ಮೀರಿ ಪಾಠವನ್ನು ಪ್ರತಿನಿಧಿಸುತ್ತದೆ. ಕ್ಷೇಮೇಂದ್ರನಲ್ಲಿ ಈ ಪ್ರಸಂಗದ ವರ್ಣನೆ ಹೀಗಿದೆ:

> ಕೇಶಪಾಶಂ ವಿಕೃಷ್ಯಾಸ್ಯಾ ವಾಸೋ ಜಗ್ರಾಹ ಕೌರವಃ |
> ಯಥಾ ಯಥಾ ಜಹಾರಾಶು ಸ ತಸ್ಯಾ ರುಚಿರಾಂಬರಂ ||
> ತಥಾ ತಥಾ ನವನವಂ ಪ್ರಾದುರಾಸೀತ್ತತಸ್ತನೌ |
> ತತೋ ನಿವೃತ್ತೇ ಶನಕೈಃ ಶ್ರಾಂತೇ ದುರ್ಯೋಧನಾನುಜೇ ||

ಕೌರವನು (ದುಶ್ಯಾಸನನು) ದ್ರೌಪದಿಯ ಕೇಶಪಾಶವನ್ನೆಳೆದು ವಸ್ತ್ರವನ್ನು ಸೆಳೆದನು; ಹೇಗೆ ಹೇಗೆ ವೇಗವಾಗಿ ಅತ ಆಕೆಯ ರುಚಿರಾಂಬರವನ್ನು ಸೆಳೆದನೋ, ಹಾಗೆ ಹಾಗೆಯೇ ಆಕೆಯ ತನುವಿನಲ್ಲಿ ವಸ್ತ್ರ ಹೊಸ ಹೊಸದಾಗಿ ಕಾಣಿಸಿಕೊಂಡಿತು. ಬಳಿಕ ಮೆಲ್ಲಮೆಲ್ಲನೆ ದುಶ್ಯಾಸನನು ಶ್ರಾಂತನಾಗಿ ನಿವೃತ್ತಿ ಹೊಂದಲು . . . . ಭೂಮಿಪಾಲರಿಂದ ಧಿಕ್ ಶಬ್ದವು ಕೇಳಲ್ಪಟ್ಟಿತು.

ಭಾರತಮಂಜರೀ, ಸಭಾಪರ್ವ, ದ್ಯೂತಂ, ಪು. ೧೪೫–೪೬, ಪ. ೪೧೧–೪೧೨.

ಕೀರ್ತಿಗೆ ಕೃಷ್ಣನೇ ಏಕೆ ಕಾರಣವಿರಬಾರದು ಎಂಬ ಶಂಕೆ ಮೂಡಿ, ಕೃಷ್ಣನ ಹೆಸರು, ತಾನು ಈ ಪ್ರಸಂಗಕ್ಕೆ ಅಂಟಿಕೊಳ್ಳುವುದೇ ಬೇಡವೇ ಎಂಬ ಸಂಶಯದ ತೂಗುಯ್ಯಾಲೆಯಲ್ಲಿ ಕೊಂಚ ದೂರದಲ್ಲೇ ನಿಂತು ಆಲೋಚಿಸುವಂತೆ ತೋರುತ್ತದೆ! ಆದುದರಿಂದಲೇ "ಭಾಮಿನಿ ಭೀತಿಯಿಂದ ಕೃಷ್ಣನನ್ನು ಸ್ಮರಿಸಿದಳು'—ಎಂಬ ಮಾತೂ, 'ಅವಳ ವಸ್ತ್ರ ಅಕ್ಷಯವಾಯಿತು' ಎಂಬ ಮಾತೂ ಕೊಂಚ ದೂರದಲ್ಲೇ ನಿಂತುಕೊಂಡಿರುವುದು. ಆದರೆ ಇದೇ ಆಂಧ್ರ ಭಾರತದ ಕೆಲವು ಪ್ರತಿಗಳಲ್ಲಿ ಆಗಲೇ, ಈ ವಸ್ತ್ರಾಪಹರಣ ಪ್ರಸಂಗದ ಆರಂಭದಲ್ಲೇ, ದುಶ್ಶಾಸನ ದ್ರೌಪದಿಯ ಸೀರೆಗೆ ಕೈ ಹಾಕಲು ಮನದಂದನೆಂಬ ವರ್ಣನೆಯ ನಂತರವೇ, ದ್ರೌಪದಿ 'ಈ ನಿರ್ದಯನಿಗೆ ನಾನಿನ್ನೇನು ತಾನೆ ಮಾಡಲಿ, ಎನ್ನುತ್ತಾ, 'ಕೃಷ್ಣ ದಯಾನಿಧಿ, ಗೋವಿಂದ ನನ್ನನ್ನು ಕಾಪಾಡು'—ಎಂದು ಕೇಳಿಕೊಂಡಳೆಂಬ ಮಾತು ದೊರೆಯುತ್ತದೆ.೧ ಈ ಭಾಗ ಪ್ರಕ್ಷಿಪ್ತವೆಂದು ಸಂಪಾದಕರು ಅಡಿ ಟಿಪ್ಪಣಿಯಲ್ಲಿ ಅಚ್ಚು ಹಾಕಿದ್ದಾರೆ. ಇದನ್ನು ನೋಡಿದರೆ, ಆಂಧ್ರ ಭಾರತದಲ್ಲಿಯೇ, ಕೊಂಚ ಹಿಂದೆ ಇರುವ ಕೃಷ್ಣನ ಸ್ಮರಣೆಯನ್ನು, ವಸ್ತ್ರಾಪಹರಣ ಪ್ರಸಂಗಕ್ಕೇ ಎಳೆದು ತಂದು ಗಂಟು ಹಾಕುವ ಪ್ರಯತ್ನ ಈಚೆಗೆ ನಡೆದಂತೆ ತೋರುತ್ತದೆ. ಆದರೆ ಹದಿನಾಲ್ಕನೆಯ ಶತಮಾನದ ವಿಲ್ಲಿ ಪುತ್ತೂರ್ ಅವರ ತಮಿಳು ಭಾರತದಲ್ಲಿ ಆಗಲೇ ಕೃಷ್ಣನ ಕೃಪೆ ಯಾವ ಸಂಕೋಚವೂ ಇಲ್ಲದೆ ತನ್ನ ವರದ ಹಸ್ತದಿಂದ ದ್ರೌಪದಿಗೆ ಅಕ್ಷಯವಸ್ತ್ರ ಪ್ರದಾನದಲ್ಲಿ ತೊಡಗಿದೆ. "ದ್ರೌಪದಿ ಭಗವಂತನನ್ನು ಸ್ತೋತ್ರ ಮಾಡಿದಳು. ಮೇಘಶ್ಯಾಮನು ದ್ರೌಪದಿಯ ಮನದಲ್ಲೇ ಕಾಣಿಸಿಕೊಂಡು, ಇತರರಿಗೆ ಅದೃಶ್ಯನಾಗಿ, ಕರುಣೆಮಾಡಿದನು. ವಸ್ತ್ರ ಅಕ್ಷಯವಾಯಿತು. ಪುಷ್ಪವೃಷ್ಟಿಯೂ ಆಯಿತು"೨ — ಎಂದೇ ಕವಿ ಕೃಷ್ಣನ ಮಹಿಮೆ

ಸಂಪಾದಕರು: ಮಹಾಮಹೋಪಾಧ್ಯಾಯ ಪಂಡಿತ ಶಿವದತ್ತ ಮತ್ತು ಕಾಶೀನಾಥ ಪಾಂಡುರಂಗ ಪರಬ್.

೧. ಕೊನ್ನಿ ಪ್ರತುಲೋನುನ್ನ ಯಧಿಕ ಪದ್ಯಮು:

"ಏನಿಂಕನೇಮಿಸೇಯುದು, ನೀ ನಿರ್ದಯುವಂತಕನುಚು ಹೃದಯಮುದರಸವ್ಮಾನಿನಿ ವಣಕುಚು ಕೃಷ್ಣ ದಯಾನಿಧಿ, ಗೋವಿಂದ ಕಾವುಮನು ಚುನ್ನಂರ್ತ"

೨೩೦ ನೆಯ ಪದ್ಯದ ತರುವಾಯ.

ಶ್ರೀಮದಾಂಧ್ರ ಮಹಾಭಾರತಮು: (ಪು. ೩೧೭, ಅಡಿಟಿಪ್ಪಣಿ.)

೨. "...ಮರು ಮಲರ್ ಮೆನ್ ಕುಟಿನ್ ಮಾನಿನ್ ಮನನಡುಂಗಾವಗ್ಗೆ ಮನತ್ತೇ ವಂದು ತೋನ್ರಿ | ಕರಿಯ ಮುಗಿಲ್ ಅನಯಾನುಂ ಪಿಟಿರ್ ಎವರ್ಕ್ಕುಂ ತೆರಿಯಾಮಲ್ ಕೆರುಣೈ ಸೆಯಿದಾನ್."— ವಿಲ್ಲಿ ಪುತ್ತೂರ್ ಅವರ್ಗ್ಗಳ್ ಭಾರತಂ: ಸಭಾಪರ್ವ, ಪ. ೨೪೮

Edited by V. M. Gopalakrishnamacharya.

ಶ್ರೀ ವಿಲ್ಲಿಪುತ್ತೂರ್ ಅವರ ಕಾಲ ಸುಮಾರು ೧೪೩೦ ಎಂದು ಪಂಡಿತರ ಮತ; ನಾರಣಪ್ಪನ ಕಾಲವೂ ಸುಮಾರು ೧೪೦೦ ಎಂದು ಅಂಗೀಕೃತವಾಗಿದೆ. ಹೆಚ್ಚು ಕಡಮೆ ಈ ಎರಡು ಭಾರತಗಳ ರಚನೆಯ ಕಾಲವೂ ಸಮಕಾಲೀನವಿರಬಹುದೆಂಬ ಊಹೆಗೆ ಅವಕಾಶವಿದೆ. ಕಾಲದಲ್ಲಿ ಒಂದು

ಯನ್ನು ವರ್ಣಿಸಿದ್ದಾನೆ. ಸರಿ ಮುಂದೆ ನಾರಣಪ್ಪನ ಮಹಾ ಭಾರತದಲ್ಲಿ ಶ್ರೀಕೃಷ್ಣ ದ್ವಾರಕೆಯಿಂದ, ಕುಳಿತಲ್ಲಿಂದಲೇ 'ಅಕ್ಷಯ ವಸ್ತ್ರ' ವನ್ನು ಕರುಣಿಸಿದ ಬಣ್ಣನೆ ದೊರೆಯುತ್ತದೆ. ಅಂತೂ ನನ್ನಯ್ಯನ ಕಾಲದಿಂದ ಈಚೆಗೆ, ಕೃಷ್ಣನ ಕೃಪೆಯ ವಿಷಯ ಸೇರಿಕೊಂಡು, ನಾನಾ ರೂಪಗಳನ್ನು ತಾಳಿ, ಮೂಲ ಭಾರತದ ಪ್ರತಿಗಳೆಡೆಗೆ ತನ್ನ ಯಾತ್ರೆಯನ್ನು ಕೈಕೊಂಡಂತೆ ತೋರುತ್ತದೆ. ಹೀಗಾಗಿ ಮಹಾಭಾರತದ ದ್ರೌಪದೀ ವಸ್ತ್ರಾಪಹರಣದ ಪ್ರಸಂಗ ಅವತಾರ ಪುರುಷನಾದ ಶ್ರೀ ಕೃಷ್ಣನ ಲೀಲೆಯ ಒಂದು ವಿನ್ಯಾಸವಾಗಿ, ಭಕ್ತಮನೋರಂಜಕವಾಗಿ ಪರಿಣಮಿಸಿತು.

(ಸಶೇಷ)

—ಜಿ. ಎಸ್. ಶಿವರುದ್ರಪ್ಪ

ವೇಳೆ ವ್ಯತ್ಯಾಸವಿದ್ದರೂ ಕವಿ ಮನೋಧರ್ಮ ಮಾತ್ರ ಒಂದೇ ಎಂಬಂತಿದೆ—ಕೃಷ್ಣ ಭಕ್ತಿಯ ವಿಚಾರದಲ್ಲಿ. ನಾರಣಪ್ಪ ಶ್ರೀ ಕೃಷ್ಣನ ಮಹಿಮೆಯ ಪ್ರಕಾಶನಕ್ಕೆಂದೇ ಕಾವ್ಯವನ್ನು ಬರೆದಂತೆ ತೋರಿದರೆ, ಶ್ರೀ ವಿಲ್ಲಿಪುತ್ತೂರ್ ಅವರೂ "ಮಾಧವನ ಚರಿತ್ರೆ ಮಧ್ಯೆ ಮಧ್ಯೆ ಬರುತ್ತದೆ ಎನ್ನುವ ಆಸೆಯಿಂದ ನಾನು ಇದನ್ನು ಬರೆಯಲು ಮೊದಲು ಮಾಡಿದೆನು"—ಎನ್ನುತ್ತಾರೆ. ದ್ರೌಪದೀ ವಸ್ತ್ರಾಪಹರಣ ಪ್ರಸಂಗವಂತೂ ಅಲ್ಪಸ್ವಲ್ಪ ವ್ಯತ್ಯಾಸಗಳ ಹೊರತು ಬಲು ಮಟ್ಟಿಗೆ ನಾರಣಪ್ಪನ ಭಾರತದಲ್ಲಿಯಂತೆಯೇ ಬರುತ್ತದೆ.

ನನ್ನ ಗಡಿಯಾರವನು ತಿದ್ದಲೊಲ್ಲೆ !

ಅಂದು ತುಂಬಿದ ಬಸ್ಸಿನಲಿ ಯಾರೊ ಕೇಳಿದರು :
 ‘ ನಿಮ್ಮ ಗಡಿಯಾರದಲಿ ಗಂಟೆಯೆಷ್ಟು ? ’
ನೋಡಿದೆನು : ಏಳು-ಮೂವತ್ತರಲಿ ಮುಳ್ಳಿತ್ತು ;
 ಅವರ ಗಡಿಯಾರದಲಿ ಗಂಟೆ ಎಂಟು !

ಪಕ್ಕದಲಿ ಕುಳಿತವರು ತಮ್ಮ ಕೈ ನೋಡಿದರು :
 ಏಳು ಮುಕ್ಕಾಲೆಂದಿತವರ ವಾಚು.
ನನ್ನ ಕೈಗಡಿಯಾರ ಎಲ್ಲಕ್ಕಿಂತಲು ಹಿಂದೆ !
 ನನಗಿವರ ನಡುವೆ ಇದು ಎಂಥ ಪೇಚು !

‘ ನಿಮ್ಮ ವಾಚಿನ ಮುಳ್ಳ ತಿದ್ದಿಕೊಳ್ಳಿರಿ ’ ಎಂದು
 ಸಲಹೆಗಳು ಉದುರಿದುವು ಸುತ್ತಮುತ್ತ.
‘ ತಿದ್ದಿಕೊಳ್ಳಲೆ ಬೇಕೆ ? ತಿದ್ದೋಣ ’—ನಾನೆಂದೆ ;
 ಆದರೇತಕೊ ತಡೆಯಿತೆನ್ನ ಚಿತ್ತ . . . .

ಕಡೆಗೆ ಉತ್ತರಕೊಟ್ಟೆ :
ನನ್ನ ಕೈಗಡಿಯಾರ ಬಾನುಲಿಯ ಕಾಲಕನುಸಾರ ;
ಅದ ನಾನು ಚೆನ್ನಾಗಿ ಬಲ್ಲೆ.
ತಪ್ಪಿರಲಿ ಸರಿಯಿರಲಿ—ನನ್ನ ಗಡಿಯಾರವನು ತಿದ್ದಲೊಲ್ಲೆ !

—ಸಿ. ಪಿ. ಕೆ.

ಸಂಪಾದಕೀಯ

ದಿವಂಗತ ಬೆಳ್ಳಾವೆ ನರಹರಿಶಾಸ್ತ್ರಿಗಳು

ಪ್ರಾಚೀನ ಸಂಪ್ರದಾಯಕ್ಕನುಸಾರವಾಗಿ ಅನೇಕ ಕನ್ನಡ ನಾಟಕಗಳನ್ನು ರಚಿಸಿ, ಕನ್ನಡ ರಂಗಭೂಮಿಯ ಅಭಿವೃದ್ಧಿಗಾಗಿ ಹಲವಾರು ವರ್ಷಗಳ ಕಾಲ ಸಂತತವಾಗಿ ಶ್ರಮಿಸಿದ ಶ್ರೀಮಾನ್ ಬೆಳ್ಳಾವೆ ನರಹರಿಶಾಸ್ತ್ರಿಗಳು ೨೧-೬-೧೯೬೧ ರಂದು ದೈವಾಧೀನರಾದರೆಂದು ತಿಳಿಸಲು ತುಂಬ ವ್ಯಸನವಾಗುತ್ತದೆ. ಕನ್ನಡ ಸಾಹಿತ್ಯವು ಹೊಸ ಹೊಸದಾದ ಪ್ರಕಾರಗಳಲ್ಲಿ ಮುಂದುವರಿಯುತ್ತಿರುವ ಈ ಕಾಲ ದಲ್ಲಿ, ಹಿಂದಿನ ಚಂಪೂಕವಿಗಳು, ಸಂಸ್ಕೃತ ನಾಟಕಕಾರರು ಮೊದಲಾದವರ ಮೇಲು ಪಂಕ್ತಿಯನ್ನೇ ಅಳವಡಿಸಿಕೊಂಡು ಕೃತಿರಚನೆ ಮಾಡುವ ಕೆಚ್ಚು, ವಿದ್ವತ್ತುಗಳು ಕಂಡುಬರುವುದು ಬಹಳ ವಿರಳವೆನ್ನಬೇಕು. ಇಂಥವರಲ್ಲಿ ಒಬ್ಬರಾಗಿದ್ದ ಶ್ರೀಮಾನ್ ಬೆಳ್ಳಾವೆ ನರಹರಿಶಾಸ್ತ್ರಿಗಳು ಕನ್ನಡ ನಾಟಕಗಳನ್ನು ರಚಿಸುವುದರಲ್ಲಿ ಸಿದ್ಧಹಸ್ತ ರಾಗಿದ್ದರು. ಸುಪ್ರಸಿದ್ಧ ಕನ್ನಡ ನಾಟಕ ಸಂಸ್ಥೆಯಾದ "ಗುಬ್ಬಿ ಕಂಪೆನಿ" ಯವರಿಗೆ ಶ್ರೀಯುತರು ಅನೇಕ ನಾಟಕಗಳನ್ನು ಬರೆದುಕೊಟ್ಟಿರುತ್ತಾರೆ. ಶ್ರೀಕೃಷ್ಣ ಗಾರುಡಿ, ಸದಾರಮೆ, ಮೊದಲಾದ ನಾಟಕಗಳು ಕನ್ನಡಿಗರ ಆದರಕ್ಕೆ ಪಾತ್ರ ವಾಗಿವೆ. ಕನ್ನಡಚಲನ ಚಿತ್ರಗಳು ಪ್ರಾರಂಭವಾದ ಕಾಲದಲ್ಲಿ "ಸತೀಸುಲೋಚನ" ಎಂಬ ಪೌರಾಣಿಕ ಚಿತ್ರಕ್ಕೆ ಕಥೆಯನ್ನು ಸಿದ್ಧಪಡಿಸಿಕೊಟ್ಟವರು ಶ್ರೀಮಾನ್ ಶಾಸ್ತ್ರಿಗಳು. ಅನಂತರ ಪುರಂದರದಾಸರು, ಕೃಷ್ಣ ಸುದಾಮ, ಹೇಮರಡ್ಡಿ ಮಲ್ಲಮ್ಮ ಮೊದಲಾದ ಚಲನಚಿತ್ರಗಳ ನಿರ್ಮಾಣಕ್ಕೆ ನೆರವಾಗಿದ್ದರು. ಶ್ರೀಮಾನ್ ಶಾಸ್ತ್ರಿ ಗಳವರ ಬರೆವಣಿಗೆಯಲ್ಲಿ ಹಳೆಯ ಕಾಲದ ಒಂದು ಬಿಗಿಯಿತ್ತು. ಅವರ ಕಂದ ಪದ್ಯಗಳು ಮತ್ತು ವೃತ್ತಗಳಲ್ಲಿ ಚಂಪೂ ಲೇಖಕರ ಪ್ರೌಢಿಮೆಯನ್ನು ಇಂದಿಗೂ ಕಾಣಬಹುದು. ಇವರ ಈ ನಿರರ್ಗಳವಾದ ಕವಿತಾ ಸರಣಿಯನ್ನು ಮೆಚ್ಚಿ ಕೋಲಾರದ ನಾಗರಿಕರು ಶ್ರೀಯುತರಿಗೆ "ಕರ್ನಾಟಕ ಕವಿಕೇಸರಿ" ಎಂಬ ಬಿರುದನ್ನು ಕೊಟ್ಟರೆಂದು ತಿಳಿದುಬರುತ್ತದೆ. ಇದಲ್ಲದೆ, ಶ್ರೀಮಾನ್ ಶಾಸ್ತ್ರಿಗಳವರು ಆಳಿದ ಮಹಾಸ್ವಾಮಿಯವರಾದ ಶ್ರೀಮನ್ ನಾಲ್ವಡಿ ಕೃಷ್ಣರಾಜ ಒಡೆಯರವರ ಕೃಪಾಕಟಾಕ್ಷಕ್ಕೂ ಪಾತ್ರರಾಗಿ, ಆಸ್ಥಾನ ವಿದ್ವಾಂಸರಾಗುವ ಸುಯೋಗವನ್ನೂ ಗಳಿಸಿಕೊಂಡಿದ್ದರು. ಕೇವಲ ಹೈಸ್ಕೂಲ್ ವಿದ್ಯಾಭ್ಯಾಸವನ್ನು ಮಾಡಿದ್ದ ಶ್ರೀಯುತರು ಸ್ವಪ್ರಯತ್ನದಿಂದ ಅಪಾರವಾದ ವಿದ್ವತ್ತನ್ನು ಸಂಪಾದಿಸಿ, ಸಂಸ್ಕೃತ, ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ಪರಿಣಿತರಾಗಿದ್ದರು. ಇಂಗ್ಲಿಷಿನ ವ್ಯಾಸಂಗದಲ್ಲಿಯೂ ಹಿಂದೆ ಬಿದ್ದವರಲ್ಲ. ವಿಕ್ಟರ್ ಹ್ಯೂಗೋವಿನ ಸುಪ್ರಸಿದ್ಧ ಕೃತಿಯಾದ "ಲೇ ಮಿಸರಬಲ್ಸ್" ಎಂಬುದನ್ನು ಕನ್ನಡದಲ್ಲಿ ಸಂಕ್ಷಿಪ್ತವಾಗಿ ಬರೆಯಲು ಪ್ರಯತ್ನಿ ಸಿರುತ್ತಾರೆ.

ಶ್ರೀಯುತರು ಸಂಗೀತ, ಸಾಹಿತ್ಯ ಮತ್ತು ಚಿತ್ರಕಲೆಗಳಲ್ಲಿ ಆಸಕ್ತರಾಗಿದ್ದುದಲ್ಲದೆ, ಸುಮಾರು ೩೮ ವರ್ಷಗಳ ಕಾಲ ಉಪಾಧ್ಯಾಯರಾಗಿದ್ದು ಅನೇಕ ವಿದ್ಯಾರ್ಥಿಗಳ ವಿಶ್ವಾಸಕ್ಕೂ ಪಾತ್ರರಾಗಿದ್ದರು. ಬೆಂಗಳೂರಿನ ಬಸವನಗುಡಿ ಮಾಧ್ಯಮಿಕ ಶಾಲೆಯಲ್ಲಿ ಬಹಳ ಕಾಲ ಮುಖ್ಯೋಪಾಧ್ಯಾಯರಾಗಿದ್ದರು. ಕೆಲಸ ಮಾಡುವುದರಲ್ಲಿ ಒಳ್ಳೆಯ ದಕ್ಷರೆನ್ನಿಸಿದ್ದರು. ಅವರ ಠೀವಿ, ಗತ್ತು ಮತ್ತು ಗಾಂಭೀರ್ಯಗಳನ್ನು ಕಂಡವರು ಎಂದಿಗೂ ಅವರನ್ನು ಮರೆಯುವಂತಿಲ್ಲ. ತರಗತಿಗಳಲ್ಲಿ ಶಿಸ್ತು ಮೀರಿದವರಿಗೆ ನಿರ್ದಾಕ್ಷಿಣ್ಯವಾಗಿ ಗ್ರಹಚಾರ ಬಿಡಿಸುತ್ತಿದ್ದರೆಂದರೆ ಅವರ ಕೋಪವನ್ನು ಯಾರಾದರೂ ಊಹಿಸಿಕೊಳ್ಳಬಹುದು. (ಸ್ವಂತ ಖರ್ಚಿನಲ್ಲಿಯೇ ಬೆತ್ತದ ಕೋಲೊಂದನ್ನು ಕೊಂಡಿಟ್ಟಿರುತ್ತಿದ್ದರು!) ಆದರೆ, ಪಾಠ ಹೇಳಲು ಮೊದಲು ಮಾಡಿದರೆಂದರೆ ವಿಷಯಮಗ್ನರಾಗುತ್ತಿದ್ದರು. ಒಮ್ಮೊಮ್ಮೆ ಇಂಗ್ಲಿಷ್ ಪಾಠವನ್ನು ಕಲಿಸುತ್ತಿದ್ದರು. ಪದ್ಯವನ್ನು ಕಲಿಸುವುದರಲ್ಲಿ ಶ್ರೀಯುತರು ಎತ್ತಿದ ಕೈ. ಇಂಗ್ಲಿಷ್ ಕವಿತೆಗಳನ್ನೂ ಸಹ ಲಯಬದ್ಧವಾಗಿ ಓದಿ, ಅದೇ ರೀತಿ ಬಾಯಿಪಾಠವನ್ನು ಒಪ್ಪಿಸುವಂತೆ ವಿದ್ಯಾರ್ಥಿಗಳನ್ನು ನಿರ್ಬಂಧಿಸುತ್ತಿದ್ದರು. ಅಧ್ಯಾಪಕನಾದವನಿಗೆ ಅಗತ್ಯವೆನ್ನಿಸುವ ಶಿಸ್ತು, ಶ್ರದ್ಧೆಗಳು ಶ್ರೀಯುತರಲ್ಲಿ ಧಾರಾಳವಾಗಿದ್ದುವು. ವಿದ್ಯಾರ್ಥಿಗಳಾಗಲಿ, ಇತರ ಅಧ್ಯಾಪಕರಾಗಲಿ ಅವರ ಸಮ್ಮುಖದಲ್ಲಿ ಸೋಮಾರಿಗಳಾಗಿರಲು ಸಾಧ್ಯವೇ ಇಲ್ಲ. ಹೀಗೆ ತಮ್ಮ ವೃತ್ತಿ ಕ್ಷೇತ್ರದಲ್ಲಿಯೂ ಶ್ರೀಮಾನ್ ಬೆಳ್ಳಾವೆ ನರಹರಿಶಾಸ್ತ್ರಿಗಳು ಅಚ್ಚಳಿಯದ ಒಂದು ವ್ಯಕ್ತಿತ್ವವನ್ನು ಬೆಳೆಸಿಕೊಂಡು ಬಂದಂಥವರಾಗಿದ್ದರು. ಇಂಥ ವಿದನ್ಮಣಿಗಳೂ ಸಾಹಿತಿಗಳೂ, ನಿಷ್ಣಾತರಾದ ಶಿಕ್ಷಕರೂ ಆಗಿದ್ದ ಶ್ರೀಮಾನ್ ಬೆಳ್ಳಾವೆ ನರಹರಿಶಾಸ್ತ್ರಿಗಳು ಸುಮಾರು ೭೯ ವರ್ಷಗಳ ಕಾಲ ಬದುಕಿ, ಬಾಳಿ, ಈಗ ನಮ್ಮೆಲ್ಲರನ್ನೂ ಅಗಲಿರುವುದು ದುಃಖಕರವಾದದ್ದೇ ಸರಿ. ಆದರೆ, ಅವರ ಕಲಾಭಿಮಾನವನ್ನು ಮೆಚ್ಚಿ, ಉತ್ತೇಜನವಿತ್ತ ಗುಬ್ಬಿ ಶ್ರೀ ಚನ್ನಬಸವೇಶ್ವರ ಮತ್ತು ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಲಿಗಳ ವ್ಯವಸ್ಥಾಪಕರು ಶ್ರೀಯುತರ ಹೆಸರಿನಲ್ಲಿ ಒಂದು ಸ್ಮಾರಕವನ್ನು ಏರ್ಪಡಿಸಲು ಮುಂದೆ ಬಂದಿರುವ ಸುದ್ದಿಯು ತುಂಬ ಸ್ವಾಗತಾರ್ಹವಾಗಿದೆ. ಈ ಕಾರ್ಯದಲ್ಲಿ ಅವರಿಂದ ನಾಲ್ಕು ಅಕ್ಷರ ಕಲಿತು ಈಗ ನಾನಾ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವ ನೂರಾರು ಶಿಷ್ಯರೂ ಸಹ ತಮ್ಮ ಗುರುಕಾಣಿಕೆಯನ್ನು ನೀಡಿ ನೆರವಾಗುವರೆಂದು ನಾವು ನಂಬಿದ್ದೇವೆ. ಶ್ರೀಯುತರ ಆತ್ಮಕ್ಕೆ ಭಗವಂತನು ಶಾಂತಿಯನ್ನೂ, ಅವರ ಬಂಧುಬಳಗದವರಿಗೆ ವಿಯೋಗದ ದುಃಖವನ್ನು ಸಹಿಸುವ ಧೈರ್ಯ ಸಮಾಧಾನಗಳನ್ನೂ ದಯಪಾಲಿಸಲೆಂದು ಹಾರೈಸುತ್ತೇವೆ.

ಪ್ರಬುದ್ಧ ಕರ್ಣಾಟಕ

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಪತ್ರಿಕೆ

'ಪ್ರಬುದ್ಧ ಕರ್ಣಾಟಕ'ವು ಚೈತ್ರ, ಆಷಾಢ, ಆಶ್ವಯುಜ, ಪುಷ್ಯಮಾಸಗಳಲ್ಲಿ ಆಯಾ ತಿಂಗಳ ಹುಣ್ಣಿಮೆಯ ಹೊತ್ತಿಗೆ ವರ್ಷಕ್ಕೆ ನಾಲ್ಕು ಸಲ ಹೊರಡುತ್ತದೆ.

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ):	ರೂ. ನ.ಪೈ.
ಸಾಮಾನ್ಯ ಚಂದಾದಾರರಿಗೆ	೩.೫೦
ವಾಚನಾಲಯ ಮುಂತಾದ ಸಂಸ್ಥೆಗಳಿಗೆ	೪.೫೦
ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಮಾತ್ರ	೨.೫೦

ಸಂಚಿಕೆಗಳನ್ನು ರಿಜಿಸ್ಟರ್ ಮೂಲಕ ತರಿಸಿಕೊಳ್ಳಬೇಕೆನ್ನುವವರು ಚಂದಾಹಣದ ಜೊತೆಗೆ ರೂ. ೨.೦೦ ಕಳುಹಿಸಬೇಕು.

ಚಂದಾಹಣವನ್ನು ಅದರ ವಿಚಾರವಾಗಿ ಪತ್ರಗಳನ್ನೂ ಡೈರೆಕ್ಟರ್, 'ಪ್ರಸಾರಾಂಗ,' ಮೈಸೂರು ವಿಶ್ವವಿದ್ಯಾನಿಲಯ, ಆಕಾಶವಾಣಿ ಕಟ್ಟಡ, ವಿ. ವಿ. ಮೊಹಲ್ಲ, ಮೈಸೂರು–೨, ಎಂಬ ವಿಳಾಸಕ್ಕೆ ಕಳುಹಿಸಬೇಕು. ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರವರಿಗಾಗಲಿ, ಪ್ರಬುದ್ಧ ಕರ್ಣಾಟಕದ ಸಂಪಾದಕರಿಗಾಗಲಿ ಕಳುಹಿಸಬಾರದು. ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಚಂದಾಹಣವನ್ನು ತಮ್ಮ ತಮ್ಮ ಕಾಲೇಜಿನ ಅಕೌಂಟ್ಸ್ ಅಧಿಕಾರಿಗಳಿಗೆ ಮುಂಗಡವಾಗಿ ಸಲ್ಲಿಸಿ, ಪಡೆದ ರಸೀತಿಯನ್ನು ತಮ್ಮ ವಿಳಾಸದೊಂದಿಗೆ ಕಳುಹಿಸಿಕೊಡಬೇಕು. ಕಾಲೇಜುಗಳ ಅಧ್ಯಾಪಕವರ್ಗದವರೂ ಇದೇ ರೀತಿ ಮಾಡಬಹುದು. ವಿದ್ಯಾರ್ಥಿಗಳು ತಾವು ವಿದ್ಯಾರ್ಥಿಗಳೆಂಬ ಬಗ್ಗೆ ತಮ್ಮ ಪಾಠಶಾಲೆಯ ಮುಖ್ಯೋಪಾಧ್ಯಾಯರಿಂದ ಒಂದು ಪ್ರಮಾಣಪತ್ರವನ್ನು ಪಡೆದು ಅದನ್ನು ಚಂದಾಹಣದೊಡನೆ ಕಳುಹಿಸಬೇಕು. ಚಂದಾದಾರರು ತಮ್ಮ ಚಂದಾಹಣವನ್ನು (ಸರ್ಕಾರಿ ಖಜಾನೆಯಲ್ಲಿ 'ಯೂನಿವರ್ಸಿಟಿ ಫಂಡ್'ಗೆ ಕಟ್ಟಿ, ಖಜಾನೆ ರಸೀತಿಯನ್ನು ತಮ್ಮ ವಿಳಾಸದೊಡನೆ ಕಳುಹಿಸಬಹುದು.)

ಪ್ರಬುದ್ಧ ಕರ್ಣಾಟಕದ ೩೩, ೩೪, ೩೫ ನೆಯ ಸಂಪುಟಗಳು ನಮ್ಮಲ್ಲಿ ಸಿಕ್ಕುತ್ತವೆ. ಇವುಗಳನ್ನು ಸಂಚಿಕೆ ಒಂದಕ್ಕೆ ೬ ಆಣೆ ಅಥವಾ ೩೭ ನಯೆ ಪೈಸೆಯಂತೆ ರಿಯಾಯಿತಿ ದರದಲ್ಲಿ ಪಡೆಯಬಹುದು. ಅಂಚೆಯ ಮೂಲಕ ತರಿಸಿಕೊಳ್ಳುವವರು ಸಂಪುಟ ಒಂದಕ್ಕೆ ಎಂಬತ್ತೊಂದು ನಯೆ ಪೈಸೆ, ಸಾಮಾನ್ಯ ಸಂಚಿಕೆ ಒಂದಕ್ಕೆ ನಲವತ್ನಾಲ್ಕು ನಯೆ ಪೈಸೆ, ಎರಡು ಸಂಚಿಕೆಗಳನ್ನು ಒಳಗೊಂಡ ಸಂಚಿಕೆಗೆ ಐವತ್ತಾರು ನಯೆಪೈಸೆ ಅಂಚೆ ವೆಚ್ಚವನ್ನು ಕಳುಹಿಸಬೇಕು.

'ಪ್ರಬುದ್ಧ ಕರ್ಣಾಟಕ'ದಲ್ಲಿ ಪ್ರಕಟನೆಗೆ ಲೇಖನಗಳನ್ನೂ ವಿಮರ್ಶೆಗೆ ಗ್ರಂಥಗಳನ್ನೂ ವಿನಿಮಯಕ್ಕೆ ಪತ್ರಿಕೆಗಳನ್ನೂ ಪ್ರಬುದ್ಧ ಕರ್ಣಾಟಕದ ಸಂಪಾದಕ (ಪ್ರಸಾರಾಂಗ, ವಿ. ವಿ. ಮೊಹಲ್ಲ, ಮೈಸೂರು ೨)ರಿಗೆ ಕಳುಹಿಸಬೇಕು.

ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರ ಪುಸ್ತಕಮಾಲೆ

೧. ಖಗೋಳಶಾಸ್ತ್ರ ಪ್ರವೇಶ—ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ.ಎಸ್‌ಸಿ.
೨. ಸಮಾಜದ ರೋಗರುಜಿನಗಳು—ಜಿ. ಹನುಮಂತರಾವ್, ಎಂ.ಎ.
೩. ತೆರಿಗೆ—ಬಿ. ಆರ್. ಸುಬ್ಬರಾವ್, ಎಂ.ಎ.
೪. ನವರತ್ನಗಳು—ಎಚ್. ಸುಬ್ಬಾಜೋಯಿಸ್, ಎಂ.ಎಸ್‌ಸಿ.
೫. ನಮ್ಮ ಹಳ್ಳಿಗಳು—ಜಿ. ಎನ್. ಕೃಷ್ಣಮೂರ್ತಿ, ಎಂ.ಎ.
೬. ಕುಮಾರವ್ಯಾಸ—ಎಸ್. ವಿ. ರಂಗಣ್ಣ, ಎಂ.ಎ.
೭. ಹಂಪೆಯ ಹರಿಹರ—ಡಿ. ಎಲ್. ನರಸಿಂಹಾಚಾರ್, ಎಂ.ಎ.
೮. ಕನ್ನಡ ಸಾಹಿತ್ಯ—ಕೆ. ವೆಂಕಟರಾಮಪ್ಪ, ಎಂ.ಎ.
೯. ವಿದ್ಯುಚ್ಛಕ್ತಿಯ ವೈಭವ—ಬಿ. ಎ. ಕೃಷ್ಣಸ್ವಾಮಿರಾವ್, ಎಂ.ಎಸ್‌ಸಿ.
೧೦. ಪಂಪ—ಟಿ. ಎನ್. ಶ್ರೀಕಂಠಯ್ಯ, ಎಂ.ಎ.
೧೧. ಪ್ರಾಣಿಜೀವನ—ಎ. ನಾರಾಯಣರಾವ್, ಎಂ.ಎಸ್‌ಸಿ.
೧೨. ಕನಸುಗಳ—ಡಾ|| ಎನ್. ಎಸ್. ನಾರಾಯಣಶಾಸ್ತ್ರೀ, ಎಂ.ಎ., ಡಿ.ಲಿಟ್.
೧೩. ಮದುವೆ—ಎನ್. ಕಸ್ತೂರಿ, ಎಂ.ಎ., ಬಿ.ಎಲ್.
೧೪. ನಮ್ಮ ಆರ್ಥಿಕದೃಷ್ಟಿ—ಎಸ್. ಗೋಪಾಲಸ್ವಾಮಿ, ಎಂ.ಎ.
೧೫. ವಾಯುಗುಣ—ಕೆ. ಶೇಷಾದ್ರಿ ಅಯ್ಯಂಗಾರ್, ಎಂ.ಎಸ್‌ಸಿ., ಎಲ್‌ಎಲ್.ಬಿ.
೧೬. ಬೆಳಕು—ಟಿ. ಎಸ್. ಸುಬ್ಬರಾಯ, ಎಂ.ಎಸ್‌ಸಿ.
೧೭. ಕರ್ಣಾಟಕ ಕಾದಂಬರಿ—ವಿ. ಸೀತಾರಾಮಯ್ಯ, ಎಂ.ಎ.
೧೮. ಕಾಳಿದಾಸನ ಕಾವ್ಯಗಳು—ಎಸ್. ರಾಮಚಂದ್ರರಾವ್, ಎಂ.ಎ.
೧೯. ಇಂಗ್ಲೆಂಡಿನ ರಾಜಕೀಯ ಬೆಳವಣಿಗೆ—ಪಿ. ಜಿ. ಸತ್ಯಗಿರಿನಾಥನ್, ಎಂ.ಎ.
೨೦. ಕಣ್ಣು ಮತ್ತು ಅದರ ರಕ್ಷಣೆ—ಡಿ. ಶಾಮಣ್ಣ, ಬಿ.ಎ., ಎಂ.ಬಿ., ಬಿ.ಎಸ್.
೨೧. ಸಾರ್ವಜನಿಕ ವೆಚ್ಚ—ಡಾ|| ಎಂ. ಎಚ್. ಗೋಪಾಲ್, ಎಂ.ಎ., ಪಿಎಚ್.ಡಿ.
೨೨. ಶಿಶುವಿಹಾರಗಳು—ಸಿ. ರಂಗಾಚಾರ್, ಬಿ.ಎಸ್‌ಸಿ., ಎಂ.ಎಡ್.
೨೩. ಸಂಖ್ಯೋದ್ಯಾನ—ಬಿ. ಸೀತಾರಾಮಶಾಸ್ತ್ರೀ, ಎಂ.ಎ.
೨೪. ವಿಡಂಬನ—ಎಸ್. ವಿ. ರಂಗಣ್ಣ, ಎಂ.ಎ.
೨೫. ಎಲ್ಲೋರ ಮತ್ತು ಅಜಂತಾ—ಡಾ|| ಎಂ. ಎಚ್. ಕೃಷ್ಣ, ಎಂ.ಎ., ಡಿ.ಲಿಟ್.
೨೬. ಸಾರಜನಕದ ಮಹತ್ವ—ಎಚ್. ಸುಬ್ಬಾಜೋಯಿಸ್, ಎಂ.ಎಸ್‌ಸಿ.
೨೭. ಭಾಸ—ಡಾ|| ಎಚ್. ಎಲ್. ಹರಿಯಪ್ಪ, ಎಂ.ಎ., ಪಿಎಚ್.ಡಿ.
೨೮. ಪಾಶ್ಚಾತ್ಯ ರಾಜಕೀಯ ತತ್ವಗಳು—ಎಂ. ಯಾಮುನಾಚಾರ್ಯ, ಎಂ.ಎ.
೨೯. ಸರ್ವಜ್ಞ ಕವಿ—ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.

೩೦. ರಕ್ತ—ಡಿ. ಶಾಮಣ್ಣ, ಬಿ.ಎ., ಎಂ.ಬಿ.,ಬಿ.ಎಸ್.
೩೧. ಇಂಗ್ಲಿಷ್ ಪ್ರಬಂಧಗಳು—ಎಸ್. ಮಂಜುನಾಥ್, ಎಂ.ಎ.
೩೨. ಅಕ್ಕಮಹಾದೇವಿ—ಎಸ್. ವಿ. ಪರಮೇಶ್ವರಭಟ್ಟ, ಎಂ.ಎ.
೩೩. ಗಣಿತಶಾಸ್ತ್ರದ ಸ್ವರೂಪ—ಡಾ|| ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ.ಎಸ್‌ಸಿ.
೩೪. ಋಗ್ವೇದ—ಎಂ. ಎ. ಕೃಷ್ಣಸ್ವಾಮಿ, ಎಂ.ಎ.
೩೫. ಕುಮಾರವ್ಯಾಸ ವಾಣಿ—ಎಸ್. ವಿ. ರಂಗಣ್ಣ, ಎಂ.ಎ.
೩೬. ಆಳ್ವಾರುಗಳು—ಎಂ. ಯಾಮುನಾಚಾರ್ಯ, ಎಂ.ಎ.
೩೭. ಹಿಂದು ಮುಸ್ಲಿಂ ಮೈತ್ರಿಯನ್ನು ಬೆಳಸಿದ ರಾಜರು—ವಿ. ರಾಘವೇಂದ್ರರಾವ್, ಎಂ.ಎ.,ಬಿ.ಟಿ.
೩೮. ಸುಭಾಷಿತ ಸಂಗ್ರಹಗಳು—ಎಂ. ಪಿ. ಲಕ್ಷ್ಮೀನರಸಿಂಹಶಾಸ್ತ್ರೀ, ಎಂ.ಎ.
೩೯. ಮಕ್ಕಳ ಭಾವಜೀವನ—ಡಾ|| ಬಿ. ಕುಪ್ಪುಸ್ವಾಮಿನಾಯಿಡು, ಎಂ.ಎ.,ಡಿ.ಲಿಟ್.
೪೦. ಸಹಕಾರ—ಎಸ್. ಗೋಪಾಲಸ್ವಾಮಿ, ಎಂ.ಎ.
೪೧. ನಯಸೇನ—ಜಿ. ವೆಂಕಟಸುಬ್ಬಯ್ಯ, ಎಂ.ಎ., ಬಿ.ಟಿ.
೪೨. ಕೌಟಿಲ್ಯ—ಡಾ|| ಎಂ. ವಿ. ಕೃಷ್ಣರಾವ್, ಎಂ.ಎ.,ಬಿ.ಟಿ.,ಡಿ.ಲಿಟ್.
೪೩. ತೆಲುಗು ಚಾಟುಪದ್ಯಗಳು—ಕೆ. ವೆಂಕಟರಾಮಪ್ಪ, ಎಂ.ಎ.
೪೪. ಮುನಿಸಿಪಾಲಿಟಿಗಳು—ಎಚ್. ಕೃಷ್ಣರಾವ್, ಎಂ.ಎ.
೪೫. ಲಕ್ಷ್ಮೀಶ—ಎನ್. ಅನಂತರಂಗಾಚಾರ್, ಎಂ.ಎ.,ಬಿ.ಟಿ.
೪೬. ರುಚಿ—ಎಸ್. ವಿ. ರಂಗಣ್ಣ, ಎಂ.ಎ.
೪೭. ಕೀಟಗಳು—ಡಿ. ಎಸ್. ವೀರಯ್ಯ, ಎಂ.ಎಸ್‌ಸಿ.
೪೮. ಅಲಿಗಳು—ಕೆ. ಶೇಷಾದ್ರಿ ಅಯ್ಯಂಗಾರ್, ಎಂ.ಎಸ್‌ಸಿ., ಎಲ್‌ಎಲ್.ಬಿ.
೪೯. ಮುದ್ದಣ್ಣ—ಟಿ. ಎಸ್. ಶಾಮರಾವ್, ಎಂ.ಎ.
೫೦. ಐವರು ಭೌತವೈಜ್ಞಾನಿಕರು—ಬಿ. ಎ. ಕೃಷ್ಣಸ್ವಾಮಿರಾವ್, ಎಂ.ಎಸ್‌ಸಿ.
೫೧. ಕೃತಕ ರೇಷ್ಮೆ—ಎಂ. ಷಡಕ್ಷರಸ್ವಾಮಿ, ಎಂ.ಎಸ್‌ಸಿ.
೫೨. ಚೀನರ ಇತಿಹಾಸ ಮತ್ತು ನಾಗರಿಕತೆ—ಎಸ್. ವೆಂಕಟದೇಶಿಕಾಚಾರ್, ಎಂ.ಎ.
೫೩. ಯುದ್ಧಕಾಲದ ಆರ್ಥಿಕ ಸಮಸ್ಯೆಗಳು—ಎಸ್. ಲಕ್ಷ್ಮೀನರಸಿಂಹನ್, ಎಂ.ಎ.
೫೪. ಆಹಾರ—ಜೆ. ಆರ್. ಲಕ್ಷ್ಮಣರಾವ್, ಎಂ.ಎಸ್‌ಸಿ.
೫೫. ಇಬ್ಸನ್ನಿನ ಕೆಲವು ನಾಟಕಗಳು—ಎಸ್. ಮಂಜುನಾಥ್, ಎಂ.ಎ.
೫೬. ಶಬ್ದಪ್ರಪಂಚ—ಆರ್. ಎಲ್. ನರಸಿಂಹಯ್ಯ, ಎಂ.ಎಸ್‌ಸಿ.
೫೭. ಪ್ರಜಾಭಿಪ್ರಾಯ—ಟಿ. ಎಸ್. ರಾಜಗೋಪಾಲ ಅಯ್ಯಂಗಾರ್, ಎಂ.ಎ., ಎಲ್‌ಎಲ್.ಬಿ.
೫೮. ಕಲ್ಲಿದ್ದಲು—ಕೆ. ಎಸ್. ಲಕ್ಷ್ಮಣರಾವ್, ಎಂ.ಎಸ್‌ಸಿ.

೫೯. ಜನಪದಮುಕ್ತಕಗಳು—ಎಚ್. ಎಂ. ಶಂಕರನಾರಾಯಣರಾವ್, ಎಂ.ಎ.
೬೦. ಹಾಲು—ಕೆ. ಎಸ್. ಲಕ್ಷ್ಮಣರಾವ್, ಎಂ.ಎಸ್‌ಸಿ.
೬೧. ಭಾವಗೀತೆ—ಎಸ್. ವಿ. ಪರಮೇಶ್ವರಭಟ್ಟ, ಎಂ.ಎ.
೬೨. ಭಾರತದಲ್ಲಿ ಪ್ರಜಾಪ್ರಭುತ್ವ—ಟಿ. ಎಸ್. ರಾಜಗೋಪಾಲ ಅಯ್ಯಂಗಾರ್, ಎಂ.ಎ., ಎಲ್‌ಎಲ್.ಬಿ.
೬೩. ಆರೋಗ್ಯಸಾಧನೆ—ಮೋಟಗಾನಹಳ್ಳಿ ಮಹದೇವಶಾಸ್ತ್ರೀ, ಎಲ್.ಎ.ಎಂ.ಎಸ್.
೬೪-೬೫. ಆಧುನಿಕ ಭಾರತದಲ್ಲಿ ನೃತ್ಯಕಲೆ—ಯು. ಎಸ್. ಕೃಷ್ಣರಾವ್, ಎಂ.ಎಸ್‌ಸಿ., ಮತ್ತು ಚಂದ್ರಭಾಗಾದೇವಿ, ಬೆಲೆ: ಸಾದಾ ೫೦ ನಯೆ ಪೈಸೆ; ಉತ್ತಮ ೭೫ ನಯೆ ಪೈಸೆ.
೬೬. ಚುನಾವಣೆಗಳು—ಗ. ಸ. ಹಾಲಪ್ಪ, ಎಂ.ಎ. (ಕೊಲಂಬಿಯ)
೬೭. ಮೀನಿನಿಂದ ಮಾನವನೆಡೆಗೆ—ಎಚ್. ಬಿ. ದೇವರಾಜ ಸರ್ಕಾರ್, ಬಿ.ಎಸ್‌ಸಿ. (ಆನರ್ಸ್)
೬೮. ಕ್ಷಯ—ಡಾ॥ ಎಸ್. ಟಿ. ಪುಟ್ಟಣ್ಣ, ಬಿ.ಎಸ್‌ಸಿ., ಎಂ.ಬಿ., ಬಿ.ಎಸ್., ಡಿ.ಟಿ.ಎಂ.ಎಸ್. (ಲಂಡನ್)
೬೯. ಶಿಲ್ಪಿಯ ಪಾತ್ರ—ಶ್ರೀ ಬಿ. ಎಲ್. ಸಿ. ರಾಜನ್, ಬಿ.ಇ.
೭೦. ಪರತಂತ್ರಜೀವಿಗಳು ಮತ್ತು ಪರತಂತ್ರಜೀವನ—ಎಚ್. ಬಿ. ದೇವರಾಜ ಸರ್ಕಾರ್, ಬಿ.ಎಸ್‌ಸಿ. (ಆನರ್ಸ್)
೭೧. ಮಾನವ ಹಕ್ಕುಗಳು—ಹೆಚ್. ಎಂ. ಸದಾಶಿವಯ್ಯ, ಎಂ.ಎ., ಎಲ್‌ಎಲ್.ಬಿ.
೭೨. ವಿನೋದಗಣಿತ—ವಿ. ಕೆ. ದೊರೆಸ್ವಾಮಿ. ಎಂ.ಎಸ್‌ಸಿ., ಬಿ.ಎಲ್.
೭೩. ಸಾಬೂನು—ಕೆ. ಎಸ್. ಲಕ್ಷ್ಮಣರಾವ್, ಎಂ.ಎಸ್‌ಸಿ.
೭೪. ಉಷ್ಣಯಂತ್ರಗಳ ಪರಿಚಯ—ಕೆ. ವಿ. ಸುಬ್ಬರಾಯ, ಬಿ.ಎಸ್‌ಸಿ., ಬಿ.ಇ.
೭೫. ಬಟ್ಟೆಗಳ ವೈಜ್ಞಾನಿಕ ಪರೀಕ್ಷೆ—ಶ್ರೀ ನಾಗಭೂಷಣ್, ಬಿ.ಎಸ್‌ಸಿ., ಎಫ್.ಟಿ.ಐ.
೭೬. ಮಹಾಭಾರತ—ಡಾ॥ ಕೆ. ಕೃಷ್ಣಮೂರ್ತಿ, ಎಂ.ಎ., ಪಿಎಚ್.ಡಿ.
೭೭. ಜೇನು—ಡಿ. ಎಸ್. ಮುರಿಗಪ್ಪ ಶ್ರೇಷ್ಠಿ, ಬಿ.ಎಸ್‌ಸಿ. (ಅಗ್ರಿ.)
೭೮. ಮಾನವಶಾಸ್ತ್ರ—ಡಾ॥ ಕೆ. ಎನ್. ವೆಂಕಟರಾಯಪ್ಪ, ಎಂ.ಎ., ಪಿಎಚ್.ಡಿ.
೭೯. ಅಥರ್ವವೇದ—ಸಿ. ಜಿ. ಪುರುಷೋತ್ತಮ, ಎಂ.ಎ.
೮೦. ನೇಮಿಚಂದ್ರ—ಎನ್. ಅನಂತರಂಗಾಚಾರ್, ಎಂ.ಎ., ಬಿ. ಟಿ.
೮೧-೮೨. ಹಾಸ್ಯ—ಎಸ್. ವಿ. ರಂಗಣ್ಣ, ಎಂ.ಎ.
೮೩. ಶ್ರೀನಾಥ—ಕೆ. ವೆಂಕಟರಾಮಪ್ಪ, ಎಂ.ಎ.
೮೪. ಷಡಕ್ಷರದೇವ—ದೇ. ಜವರೇಗೌಡ, ಎಂ.ಎ.

೮೫. ಚಿತ್ರಾಂಗದಾ—ಯು. ಕೆ. ಸುಬ್ಬರಾಯಾಚಾರ್, ಎಂ.ಎ.
೮೬. ಸಂಚಿಯ ಹೊನ್ನಮ್ಮ—ಎಚ್. ಎಂ. ಶಂಕರನಾರಾಯಣರಾವ್, ಎಂ.ಎ.
೮೭. ವಾಲ್ಮೀಕಿ ರಾಮಾಯಣ—ಯು. ಕೆ. ಸುಬ್ಬರಾಯಾಚಾರ್, ಎಂ.ಎ.
೮೮. ಜಪಾನರ ಇತಿಹಾಸ ಮತ್ತು ನಾಗರಿಕತೆ—ಕೆ. ಪದ್ಮಾವತಮ್ಮ, ಎಂ.ಎ., ಬಿ.ಇಡ್.
೮೯. ಕ್ರಿಶ್ಚಿಯನ್ ಕ್ಯಾಲೆಂಡರ್—ಬಿ. ಸೀತಾರಾಮಶಾಸ್ತ್ರೀ, ಎಂ.ಎ.
೯೦. ಆಲ್‌ಫ್ರೆಡ್ ನೊಬೆಲ್—ಎಸ್. ಸುಬ್ರಹ್ಮಣ್ಯ, ಬಿ.ಎಸ್‌ಸಿ., ಬಿ.ಇಡ್.
೯೧. ಗೃಹರಚನಾವಿಧಿ—ಕೆ. ಎಸ್. ಸದಾನಂದ, ಬಿ.ಇ.
೯೨. ಹಿಂದೂಧರ್ಮಸಾರ—ಸ್ವಾಮಿ ಸೋಮನಾಥಾನಂದ.
೯೩. ಪ್ರಜಾಪ್ರಭುತ್ವದಲ್ಲಿ ರಾಜಕೀಯಪಕ್ಷಗಳು—ಟಿ. ಎಸ್. ರಾಜಗೋಪಾಲ್ ಅಯ್ಯಂಗಾರ್, ಎಂ.ಎ., ಎಲ್‌ಎಲ್.ಬಿ.
೯೪. ದಾರಿತಪ್ಪಿದ ಮಕ್ಕಳು—ಎನ್. ಎಸ್. ಶಾಂತಮ್ಮ, ಎಂ.ಎ.
೯೫. ಮಹಾಕವಿ ಬಾಣ—ಟಿ. ಎಸ್ ಕೃಷ್ಣಮೂರ್ತಿ, ಎಂ.ಎ.
೯೬. ಪ್ರೇರಣೆ—ಕೆ. ನಾಗರಾಜಶಾಸ್ತ್ರಿ, ಎಂ.ಎ.
೯೭. ಪ್ರಾಣಿಗಳ ರಚನಾ ಕೌಶಲ—ಹೆಚ್. ಬಿ. ದೇವರಾಜ ಸರ್ಕಾರ್, ಬಿ. ಎಸ್‌ಸಿ. (ಆನರ್ಸ್.)
೯೮. ಭಾರತೀಯ ರಾಷ್ಟ್ರೀಯತೆಯ ವಿಕಾಸ—ಎ.ಎಸ್. ನಂಜುಂಡಸ್ವಾಮಿ, ಬಿ.ಎ., ಬಿ.ಟಿ.
೯೯. ಶ್ರೀ ಹರ್ಷ—ಸಿ. ಅನಂತಾಚಾರ್.
೧೦೦. ಪ್ರಸಾರಂಗ—ಡಾ॥ ಕೆ. ವಿ. ಪುಟ್ಟಪ್ಪ, ಎಂ.ಎ., ಡಿ.ಲಿಟ್.
೧೦೧. ಷಟ್‌ಸ್ಥಲಸಿದ್ಧಾಂತ—ಡಾ॥ ಟಿ. ಜಿ. ಸಿದ್ಧಪ್ಪಾರಾಧ್ಯ, ಎಂ.ಎ., ಪಿಎಚ್.ಡಿ.
೧೦೨. ಶಕ್ತಿವಿಶಿಷ್ಟಾದ್ವೈತವೇದಾಂತ ಡಾ॥ ಟಿ. ಜಿ. ಸಿದ್ಧಪ್ಪಾರಾಧ್ಯ, ಎಂ.ಎ., ಪಿಎಚ್.ಡಿ.
೧೦೩. ಉಪನಿಷತ್ ಪರಿಚಯ—ಸ್ವಾಮಿ ಸೋಮನಾಥಾನಂದ.
೧೦೪. ತುಳಸೀದಾಸ—ಡಾ॥ ಹಿರಣ್ಮಯ, ಎಂ.ಎ., ಪಿಎಚ್.ಡಿ.
೧೦೫. ಭಾರತದಲ್ಲಿ ವಿಮೆ—ಕೆ. ಗೋಪಾಲ್, ಎಂಎ., ಬಿ.ಟಿ., ಡಿಪ್-ಇನ್-ಕಾಂ., ಎಫ್.ಸಿ.ಐ.ಐ. (ಲಂಡ್).
೧೦೬. ಎಕ್ಸ್-ಕಿರಣಗಳು—ಕೆ. ಶೇಷಾದ್ರಿ ಅಯ್ಯಂಗಾರ್, ಎಂ.ಎಸ್‌ಸಿ., ಎಲ್‌ಎಲ್.ಬಿ.
೧೦೭. ಸಿಹಿಮೂತ್ರರೋಗ—ಡಾ॥ ಎ. ನಾರಾಯಣಪ್ಪ, ಎಂ.ಬಿ., ಬಿ.ಎಸ್.

ಬರಲಿವೆ

೧೦೮. ಕಲಾಯ್ಡ್ ವಿಜ್ಞಾನ—ಕೆ. ಎಸ್. ಲಕ್ಷ್ಮಣರಾವ್. ಎಂ.ಎಸ್‌ಸಿ.
೧೦೯. ಗರ್ಭಿಣಿ ಮತ್ತು ಶಿಶುಸಂರಕ್ಷಣೆ—ವಿ. ಎಲ್. ಪಂಡಿತ್

೧೧೦. ವಾಯುಮಂಡಲ—ಕೆ. ಎಸ್. ಲಕ್ಷ್ಮಣರಾವ್, ಎಂ.ಎಸ್‌ಸಿ.
೧೧೧. ಸಕ್ಕರೆ—ಕೆ. ಎಸ್ ಲಕ್ಷ್ಮಣರಾವ್, ಎಂ.ಎಸ್‌ಸಿ.
೧೧೨. ಅಲ್ಲಮಪ್ರಭು—ಡಾ॥ ಟಿ. ಜಿ. ಸಿದ್ದಪ್ಪಾರಾಧ್ಯ, ಎಂ.ಎ.,ಪಿಎಚ್.ಡಿ.
೧೧೩. ವೇಮನ—ಕೆ. ವೆಂಕಟರಾಮಪ್ಪ, ಎಂ.ಎ.
೧೧೪. ಬಸವಣ್ಣನವರ ಆದರ್ಶ—ಡಾ॥ ಟಿ. ಜಿ. ಸಿದ್ದಪ್ಪಾರಾಧ್ಯ, ಎಂ.ಎ., ಪಿಎಚ್.ಡಿ.
೧೧೫. ಭಗವದ್ಗೀತೆ—ಡಾ॥ ಟಿ. ಜಿ. ಸಿದ್ದಪ್ಪಾರಾಧ್ಯ, ಎಂ.ಎ.,ಪಿಎಚ್.ಡಿ.
೧೧೬. ಅಂತರಿಕ್ಷಯಾನ—ವೈ. ವಿ. ಇಂದಿರಾಬಾಯಿ, ಎಂ.ಎಸ್‌ಸಿ.
೧೧೭. ನಮ್ಮ ನ್ಯಾಯಾಂಗ—ಆರ್. ಗುರುರಾಜ, ಬಿ.ಎ. (ಆನರ್ಸ್), ಎಂ.ಕಾಂ., ಬಿ.ಎಲ್.
೧೧೮. ಕಾಳಿದಾಸನ ನಾಟಕಗಳು—ಡಾ॥ ಕೆ. ಕೃಷ್ಣಮೂರ್ತಿ, ಎಂ.ಎ.,ಪಿಚ್.ಡಿ.
೧೧೯. ಜೀವಸತ್ವಗಳು—ಕೆ. ಎಸ್. ಲಕ್ಷ್ಮಣರಾವ್, ಎಂ.ಎಸ್‌ಸಿ.
೧೨೦. ಅನುವಂಶೀಯತೆ—ಹೆಚ್. ಬಿ. ದೇವರಾಜ ಸರ್ಕಾರ್, ಎಂ.ಎಸ್‌ಸಿ.

ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸಮಾಲೆ ಮತ್ತು ಸರ್. ಕೆ. ಪಿ. ಪುಟ್ಟಣ್ಣಚೆಟ್ಟರ ಪುದುವಟ್ಟಿನ ಪ್ರಕಟನಮಾಲೆಯಲ್ಲಿ ಪುಸ್ತಕಗಳನ್ನು ಕೊಳ್ಳುವ ಮಾರಾಟಗಾರರಿಗೆ ಈ ಕೆಳಗೆ ಕಂಡಂತೆ ಕಮಿಷನ್ ಕೊಡಲಾಗುವುದು. ಅಂಚೆ ಮತ್ತು ಪುಸ್ತಕವನ್ನು ಕಳುಹಿಸುವ ಖರ್ಚು ಪ್ರತ್ಯೇಕ.

ಶೇಕಡ ೧೦ ರಂತೆ ೫೦ ಪುಸ್ತಕಗಳನ್ನು ಏಕಕಾಲದಲ್ಲಿ ಕೊಳ್ಳುವವರಿಗೆ
ಶೇಕಡ ೧೫ ರಂತೆ ೨೦೦ ಪುಸ್ತಕಗಳನ್ನು ಏಕಕಾಲದಲ್ಲಿ ಕೊಳ್ಳುವವರಿಗೆ
ಶೇಕಡ ೨೦ ರಂತೆ ೫೦೦ ಪುಸ್ತಕಗಳನ್ನು ಏಕಕಾಲದಲ್ಲಿ ಕೊಳ್ಳುವವರಿಗೆ
ಶೇಕಡ ೨೫ ರಂತೆ ೨೦೦೦ ಪುಸ್ತಕಗಳನ್ನು ಒಂದು ವರ್ಷದಲ್ಲಿ ಕೊಳ್ಳುವವರಿಗೆ
(ಎಪ್ರಿಲ್ ೧ ರಿಂದ ಮಾರ್ಚಿ ೩೧ ರ ವರೆಗೆ)

ಸಾಧಾರಣ ಪ್ರತಿ ೨೫ ನಯೆ ಪೈಸೆ   ಉತ್ತಮ ಪ್ರತಿ ೩೭ ನಯೆ ಪೈಸೆ

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆ

ಪ್ರಧಾನ ಸಂಪಾದಕರು:
- ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್., ೧೯೪೨ರ ವರೆಗೆ
- ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ., ೧೯೪೨ ರಿಂದ ೧೯೪೭ರ ವರೆಗೆ
- ಡಾ॥. ಕೆ. ವಿ. ಪುಟ್ಟಪ್ಪ, ಎಂ.ಎ., ಡಿ.ಲಿಟ್., ೧೯೪೭ ರಿಂದ

೧. **ಹರಿಶ್ಚಂದ್ರ ಕಾವ್ಯಸಂಗ್ರಹ** (ಆರನೆಯ ಮುದ್ರಣ) — ಸಂಪಾದಕರು: ಟಿ. ಎಸ್. ವೆಂಕಣ್ಣಯ್ಯ, ಎಂ.ಎ. ಮತ್ತು ಎ.ಆರ್. ಕೃಷ್ಣಶಾಸ್ತ್ರೀ, ಎಂ.ಎ., ಬೆಲೆ: ಸಾದಾ ರೂ. ೧-೮-೦; ಉತ್ತಮ ರೂ. ೨-೦-೦

೨. **ಕರ್ಣಾಟಕ ಕಾದಂಬರೀ ಸಂಗ್ರಹ** (ಮೂರನೆಯ ಮುದ್ರಣ)— ಸಂಪಾದಕರು: ಟಿ. ಎಸ್. ವೆಂಕಣ್ಣಯ್ಯ, ಎಂ.ಎ., ಬೆಲೆ: ಸಾದಾ ರೂ. ೧-೧೨-೦

೩. **ಪ್ರಭುಲಿಂಗಲೀಲೆಯ ಸಂಗ್ರಹ** (ಸಚಿತ್ರ)-ಸಂಪಾದಕರು ಎಂ. ಎಸ್. ಬಸವಲಿಂಗಯ್ಯ, ಎಂ.ಎ., ಬಿ.ಎಲ್. ಮತ್ತು ಎಂ. ಆರ್. ಶ್ರೀನಿವಾಸ ಮೂರ್ತಿ, ಬಿ.ಎ., ಬೆಲೆ: ಸಾದಾ ರೂ. ೨.; ಉತ್ತಮ ರೂ. ೩.

೪. **ಸಾಕ್ರಟೀಸನ ಕೊನೆಯ ದಿನಗಳು** (ಸಚಿತ್ರ) — ಅನುವಾದಕರು. ಎ. ಎನ್. ಮೂರ್ತಿರಾವ್, ಎಂ.ಎ., ಬೆಲೆ: ಸಾದಾ ರೂ. ೨.೨೫ ನ.ಪೈ: ಉತ್ತಮ ರೂ. ೩.೨೫ ನ.ಪೈ.

೫. **ಶ್ರೀರಾಮಕೃಷ್ಣ ಪರಮಹಂಸ**—ಕೆ. ವಿ. ಪುಟ್ಟಪ್ಪ, ಎಂ.ಎ., ಬೆಲೆ: ಸಾದಾ ರೂ. ೩.೫೦ ನ.ಪೈ. ಉತ್ತಮ ಪ್ರತಿ ರೂ. ೫. ೦೦ ನ.ಪೈ.

೬. ***ರವೀಂದ್ರನಾಥ ಠಾಕೂರರು** (ಸಚಿತ್ರ) — ಮಾಸ್ತಿ ವೆಂಕಟೇಶ ಅಯ್ಯಂಗಾರ್, ಎಂ.ಎ.

೭. **ಆರೋಗ್ಯ, ಅದರ ಜ್ಞಾನ ಮತ್ತು ಸಾಧನ** (ಸಚಿತ್ರ)— ಜೆ. ಎ. ಈಶ್ವರಮೂರ್ತಿ, ಬಿ.ಎ., ಎಲ್. ಎಂ.ಎಸ್., ಬಿ.ಎಸ್‌ಸಿ.

೮. **ಪಂಪರಾಮಾಯಣ ಸಂಗ್ರಹ** — ಸಂಪಾದಕರು: ಆಸ್ಥಾನ ಮಹಾ ವಿದ್ವಾನ್ ತಿರುವಳ್ಳೂರ್ ಶ್ರೀನಿವಾಸರಾಘವಾಚಾರ್ ಮತ್ತು ಡಿ. ಎಲ್. ನರಸಿಂಹಾಚಾರ್, ಎಂ.ಎ., ಬೆಲೆ: ಸಾದಾ ರೂ. ೧-೨-೦.

೯. **ಹಣಪ್ರಪಂಚ**— ವಿ. ಸೀತಾರಾಮಯ್ಯ, ಎಂ.ಎ., ಬೆಲೆ: ಸಾದಾ ರೂ. ೪.೨೫ ನ.ಪೈ. ; ಉತ್ತಮ ರೂ. ೫.೨೫. ನ.ಪೈ.

೧೦. **ಸಂಸ್ಕೃತ ನಾಟಕ** — ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ., ಬೆಲೆ: ಸಾದಾ ರೂ. ೨-೨-೦; ಉತ್ತಮ ರೂ. ೨-೧೦-೦

೧೧. ***ಜೀವವಿಜ್ಞಾನ**—ಲೇಖಕರು: ಬಿ. ವೆಂಕಟನಾರಾಯಣಪ್ಪ, ಎಂ.ಎ.

೧೨. **ಹಿಂದೂದರ್ಶನಸಾರ**—ಮಹಾಮಹೋಪಾಧ್ಯಾಯ ಪಂಡಿತರತ್ನಂ ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯ, ಬೆಲೆ: ಸಾದಾ ರೂ. ೩.೫೦. ನ.ಪೈ; ಉತ್ತಮ ರೂ. ೪.೫೦. ನ.ಪೈ.

೧೩. **ರಾಜ್ಯಶಾಸ್ತ್ರ**—ಎಚ್. ಕೃಷ್ಣರಾವ್, ಎಂ.ಎ. ಬೆಲೆ: ಸಾದಾ ರೂ. ೧-೮-೦; ಉತ್ತಮ ರೂ. ೨-೮-೦.

೧೪. **ಹದಿಬದೆಯ ಧರ್ಮ** —ಸಂಪಾದಕೀಯರು: ಡಿ. ಚಂಪಾಬಾಯಿ, ಎಂ.ಎ., ಬೆಲೆ : ಸಾದಾ ರೂ. ೧.೫೦ ನ.ಪೈ ; ಉತ್ತಮ ರೂ. ೨.೫೦. ನ.ಪೈ ;

೧೫. **ಪುರಾಣನಾಮಚೂಡಾಮಣಿ** — ಬೆನಗಲ್ ರಾಮರಾವ್, ಎಂ.ಎ., ಎಲ್ಎಲ್.ಬಿ. ಮತ್ತು ಪಾನ್ಯಂ ಸುಂದರಶಾಸ್ತ್ರೀ, ಬೆಲೆ, ಸಾದಾ ರೂ. ೫.೫೦. ನ. ಪೈ. ; ಉತ್ತಮ ರೂ. ೬.೫೦. ನ. ಪೈ.

೧೬. ***ಯಶೋದರ ಚರಿತೆಯ ಸಂಗ್ರಹ** — ಸಂಪಾದಕರು : ಕೆ. ವಿ. ರಾಘವಾಚಾರ್, ಎಂ.ಎ., ಬಿ.ಟಿ.

೧೭. **ಗ್ರೀಕರ ತತ್ವಶಾಸ್ತ್ರಸಾರ ಸಂಗ್ರಹ**—ಕೆ. ಆರ್. ಶ್ರೀನಿವಾಸ ಅಯ್ಯಂಗಾರ್, ಎಂ.ಎ., ಬೆಲೆ: ಸಾದಾ ರೂ. ೩.೨೦ ನ.ಪೈ; ಉತ್ತಮ ರೂ. ೪.೨೦ ನ.ಪೈ;

೧೮. **ಹಿಂದೂ ದೇಶದ ಭೂಚರಿತ್ರೆ**— ವೈ. ನಾಗಪ್ಪ, ಎಂ.ಎಸ್‌ಸಿ., ಬೆಲೆ : ಸಾದಾ ರೂ. ೦-೧೨-೦ ; ಉತ್ತಮ ಪ್ರತಿ ರೂ. ೧-೪-೦.

೧೯. **ವಚನಧರ್ಮಸಾರ**— ಎಂ. ಆರ್. ಶ್ರೀನಿವಾಸಮೂರ್ತಿ, ಬಿ.ಎ., ಬೆಲೆ: ಸಾದಾ ರೂ. ೨-೦-೦ ; ಉತ್ತಮ ರೂ. ೩-೦-೦.

೨೦. **ಪ್ರಾಣಿಶಾಸ್ತ್ರ** —ಡಾ|| ಎ. ಸುಬ್ಬರಾವ್ , ಬಿ.ಎ., ಡಿ.ಎಸ್‌ಸಿ. ಮತ್ತು ಎ. ನಾರಾಯಣರಾವ್, ಎಂ.ಎಸ್‌ಸಿ., ಬೆಲೆ : ಸಾದಾ ರೂ. ೧-೮-೦, ಉತ್ತಮ ರೂ. ೧-೧೨-೦.

೨೧. **ಆಧುನಿಕ ತತ್ವಶಾಸ್ತ್ರಸಮಸ್ಯೆಗಳು**— ಜಿ. ಹನುಮಂತರಾವ್ , ಎಂ.ಎ., ಬೆಲೆ : ಸಾದಾ ರೂ. ೧-೧೨-೦ ; ಉತ್ತಮ ರೂ. ೨-೧೨-೦.

೨೨. **ಕನ್ನಡ ಕೈಪಿಡಿ** (ಭಾಗ ೫, ಸಾಹಿತ್ಯಚರಿತ್ರೆ)—ಬಿ. ಎಂ. ಶ್ರೀಕಂಠಯ್ಯ, ಎಂ.ಎ.,ಬಿ.ಎಲ್.; ಬೆಲೆ: ಸಾದಾ, ರೂ. ೩.೫೦; ಉತ್ತಮ ರೂ.೪.೫೦.

೨೩. **ಇಸ್ಲಾಂ ಸಂಸ್ಕೃತಿ**—ಮೂಲಲೇಖಕರು : ಪ್ರೊ|| ಮಹಮದ್ ಅಬ್ಬಾಸ್ ಷೂಸ್ತ್ರಿ; ಅನುವಾದಕರು : ರಾಜಸೇವಾಸಕ್ತ ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್., ಬೆಲೆ: ಸಾದಾ ರೂ. ೨; ಉತ್ತಮ ರೂ. ೩.

೨೪. **ತಮಿಳು ಪಾಠಗಳು**—ಲೇಖಕರು : ಎಸ್. ರುದ್ರಪತಿ, ಎಂ.ಎ., ಬೆಲೆ: ರೂ. ೩-೪-೦.

೨೫. **ಅಶೋಕ**—ಎನ್. ಕಸ್ತೂರಿ, ಎಂ.ಎ.,ಬಿ.ಎಲ್., ಬೆಲೆ : ಸಾದಾ ರೂ. ೧-೨-೦; ಉತ್ತಮ ರೂ. ೨-೦-೦.

೨೬. **ಭಾರತೀಯ ಕಾವ್ಯಮೀಮಾಂಸೆ**—ಪ್ರೊ|| ತೀ.ನಂ. ಶ್ರೀಕಂಠಯ್ಯ, ಎಂ.ಎ., ಬೆಲೆ : ಸಾದಾ ರೂ. ೪.೭೫ ನ.ಪೈ ; ಉತ್ತಮ ೫.೭೫. ನ.ಪೈ ;

೨೭. **ಭಾರತೀಯ ಸಂಸ್ಕೃತಿ**—ಡಾ॥ ಎಸ್. ಶ್ರೀಕಂಠಶಾಸ್ತ್ರೀ, ಎಂ.ಎ.,ಡಿ.ಲಿಟ್. ಬೆಲೆ: ಸಾದಾ ರೂ. ೩.; ಉತ್ತಮ ರೂ. ೪.

೨೮. **ಸಾರ್ವಜನಿಕ ಹಣಕಾಸು**—ವಿ. ಎಲ್. ಡಿ'ಸೋಜ, ಬಿ.ಎ., ಬಿ.ಕಾಂ. (ಲಂಡನ್.) ಮತ್ತು ಬಿ.ಆರ್. ಸುಬ್ಬರಾವ್, ಎಂ.ಎ., ಡಿಪ್-ಇನ್-ಕಾಂ., ಬೆಲೆ: ಸಾದಾ ರೂ. ೨-೮-೦; ಉತ್ತಮ ರೂ. ೩-೮-೦.

೨೯. **ಆದಿಪುರಾಣ ಸಂಗ್ರಹ**—ಸಂಪಾದಕರು: ಎಲ್. ಗುಂಡಪ್ಪ, ಎಂ.ಎ., ಬೆಲೆ: ಸಾದಾ ರೂ. ೨-೦-೦; ಉತ್ತಮ ರೂ. ೩-೦-೦.

೩೦. **ಪಂಪ ಭಾರತ**—(೯-೧೪ ಆಶ್ವಾಸಗಳು) ಬೆಲೆ: ಸಾದಾ ರೂ. ೩.೫೦ ನ.ಪೈ.; ಉತ್ತಮ ರೂ. ೪.೫೦. ನ.ಪೈ.

೩೧. **ಕಾಳಿದಾಸ**—ಎಂ. ಲಕ್ಷ್ಮೀನರಸಿಂಹಯ್ಯ. ಎಂ.ಎ., ಬೆಲೆ: ಸಾದಾ ರೂ. ೨-೦-೦; ಉತ್ತಮ ರೂ. ೨-೮-೦.

೩೨. **ಭರತೇಶ ವೈಭವ ಸಂಗ್ರಹ**—ಸಂಪಾದಕರು: ತ. ಸು. ಶಾಮರಾವ್, ಎಂ.ಎ., ಬೆಲೆ: ಸಾದಾ ರೂ. ೨-೮-೦; ಉತ್ತಮ ರೂ. ೩-೦-೦.

೩೩. **ಶ್ರೀ ಕೃಷ್ಣ ಚರಿತ್ರೆ**—ಸಂಪಾದಕರು: ಕೆ. ವೆಂಕಟರಾಮಪ್ಪ, ಎಂ.ಎ., ಬೆಲೆ: ಸಾದಾ ರೂ. ೧-೪-೦; ಉತ್ತಮ ರೂ. ೧-೧೨-೦

೩೪. **ಕನ್ನಡ ಕೈಪಿಡಿ**—(ಭಾಗ ೧, ೨, ೩, ೪,) ಬೆಲೆ: ಸಾದಾ ರೂ. ೨-೮-೦; ಉತ್ತಮ ರೂ. ೩-೦-೦.

೩೫. **ಪ್ರಜಾಸರ್ಕಾರ**—ಡಾ॥ ಎಂ. ವಿ. ಕೃಷ್ಣರಾವ್, ಎಂ.ಎ., ಬಿ.ಟಿ.,ಡಿ.ಲಿಟ್., ಬೆಲೆ: ಸಾದಾ ರೂ. ೧-೧೨-೦; ಉತ್ತಮ ರೂ. ೨-೪-೦.

೩೬. **ಭಾರತೀಯ ತತ್ತ್ವಶಾಸ್ತ್ರ ಸಂಗ್ರಹ**—ವಿದ್ವಾನ್ ಎಚ್. ಎನ್. ರಾಘವೇಂದ್ರಾಚಾರ್ಯ, ಎಂ.ಎ.

೩೭. **ಭೌತ ವಿಜ್ಞಾನ**—ಡಾ॥ ಟಿ. ಎಸ್. ಸುಬ್ಬರಾಯ, ಡಿ.ಎಸ್‌ಸಿ., ಬೆಲೆ: ಸಾದಾ ರೂ. ೨.೫೦ ನ.ಪೈ; ಉತ್ತಮ ರೂ. ೩.೫೦ ನ.ಪೈ.

೩೮. **ಕಮ್ಯೂನಿಸಂ**—ಎಲ್. ಶ್ರೀಕಂಠಯ್ಯ, ಎಂ.ಎ., ಎಂ. ಎಸ್‌ಸಿ. (ಲಂಡನ್) ಬಾರ್-ಅಟ್-ಲಾ; ಬೆಲೆ: ಸಾದಾ ರೂ. ೨-೦-೦; ಉತ್ತಮ ರೂ. ೩-೦-೦

೩೯. **ವಿಜ್ಞಾನ ಸಂಶೋಧನೆ** — ಎಸ್. ವರದರಾಜನ್, ಬೆಲೆ: ಸಾದಾ ರೂ. ೩-೨-೦; ಉತ್ತಮ ರೂ. ೪-೨-೦.

೪೦. **ಗಣಿತ ಶಾಸ್ತ್ರದ ಚರಿತ್ರೆ**—ಸಿ. ಎನ್. ಶ್ರೀನಿವಾಸ ಅಯ್ಯಂಗಾರ್; ಬೆಲೆ: ಸಾದಾ ರೂ. ೨.೮೦ ನ.ಪೈ; ಉತ್ತಮ ರೂ. ೩.೮೦ ನ.ಪೈ.

೪೧. **ರಸಾಯನಶಾಸ್ತ್ರ**—(ಒಂದನೆಯ ಭಾಗ)—ಕೆ. ಸುಬ್ಬಾಭಟ್ಟ, ಎಂ. ಎಸ್‌ಸಿ., ಬೆಲೆ: ಸಾದಾ ರೂ. ೫.೨೫ ನ. ಪೈ; ಉತ್ತಮ ರೂ. ೬.೨೫ ನ. ಪೈ.

೪೨. **ತರ್ಕಶಾಸ್ತ್ರ** (ಭಾಗ ೧)—ಜಿ. ಹನುಮಂತರಾವ್, ಎಂ. ಎ., ಬೆಲೆ: ಸಾದಾ ರೂ. ೨.೧೩ ನ.ಪೈ. ಉತ್ತಮ ರೂ. ೩.೧೩ ನ.ಪೈ.

ತರ್ಕಶಾಸ್ತ್ರ (ಭಾಗ ೨)—ಜಿ. ಹನುಮಂತರಾವ್, ಎಂ.ಎ.,
ಬೆಲೆ: ಸಾದಾ ರೂ. ೨; ಉತ್ತಮ ರೂ. ೩.

೪೩. **ಸಂಸ್ಕೃತ ಕಾವ್ಯ**—ಡಾ|| ಕೆ. ಕೃಷ್ಣಮೂರ್ತಿ, ಎಂ. ಎ., ಪಿಎಚ್.ಡಿ., ಬೆಲೆ: ಸಾದಾ ರೂ. ೩.೫೦ ನ.ಪೈ; ಉತ್ತಮ ರೂ. ೪.೫೦ ನ.ಪೈ.

೪೪. **ನಾಟುನುಡಿ**—ಎಸ್. ವಿ. ರಂಗಣ್ಣ, ಎಂ.ಎ., ಬೆಲೆ: ಸಾದಾ ರೂ. ೨.೧೦ ನ.ಪೈ; ಉತ್ತಮ ರೂ. ೩. ೧೦ ನ. ಪೈ.

೪೫. **ತೆಲಗು ಪಾಠಗಳು**—ಕೆ. ಸುಬ್ಬರಾಮಪ್ಪ, ಎಂ. ಎ., ಬಿ. ಇಡ್.
ಬೆಲೆ: ಸಾದಾ ರೂ. ೩.೭೫ ನ. ಪೈ; ಉತ್ತಮ ರೂ. ೪.೭೫ ನ.ಪೈ.

೪೬. **ಬಂಕಿಮ ಚಂದ್ರ**—ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ., ಬೆಲೆ: ಸಾದಾ ರೂ. ೭.೦೦; ಉತ್ತಮ ರೂ. ೮.೦೦.

೪೭. **ಕುಟುಂಬ ಜೀವನ**—ಜಿ. ಹನುಮಂತರಾವ್, ಎಂ.ಎ., ಬೆಲೆ: ಸಾದಾ ರೂ ೩.೨೫; ಉತ್ತಮ ರೂ. ೪.೨೫.

೪೮. **ರಸಾಯನಶಾಸ್ತ್ರ**—(ಎರಡನೆಯ ಭಾಗ) ಕೆ. ಸುಬ್ಬಾಭಟ್ಟ, ಎಂ. ಎಸ್‌ಸಿ., ಬೆಲೆ ಸಾದಾ ರೂ. ೩-೪೦ ಉತ್ತಮ ರೂ. ೪. ೪೦.

೪೯. **ಪ್ರಾಚ್ಯ ಮತ್ತು ಪಾಶ್ಚಾತ್ಯ ಸಂಸ್ಕೃತಿ**—ಪ್ರೊ. ಎನ್. ಎ. ನಿಕಂ, ಎಂ.ಎ. (ಕ್ಯಾಂಟಬ್.) ಮತ್ತು ಎನ್. ಎಸ್. ಅನಂತರಂಗಾಚಾರ್, ಬಿ.ಎ. (ಆನರ್ಸ್).
ಬೆಲೆ*: ಸಾದಾ ರೂ. ೩-೧೦ ನ.ಪೈ. ಉತ್ತಮ ರೂ. ೪-೧೦ ನ.ಪೈ.

ಅಚ್ಚಿನಲ್ಲಿವೆ

೫೦. **ಪ್ರವಾಸಿ ಕಂಡ ಇಂಡಿಯಾ**—ಎಚ್. ಎಲ್. ನಾಗೇಗೌಡ, ಬಿ. ಎಸ್‌ಸಿ.
೫೧. **ಷೇಕ್ಸ್‌ಪಿಯರ್**—ಎ. ಎನ್. ಮೂರ್ತಿರಾವ್, ಎಂ.ಎ.

ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆಯ ಪುಸ್ತಕಗಳನ್ನು ಕೊಳ್ಳುವ ಮಾರಾಟಗಾರರಿಗೆ ಈ ಕೆಳಗೆ ಕಂಡಂತೆ ಕಮೀಷನ್ ಕೊಡಲಾಗುವುದು. ಅಂಚೆ ವೆಚ್ಚ, ಮಾರಾಟ ತೆರಿಗೆ ಮತ್ತು ಪುಸ್ತಕವನ್ನು ಕಳುಹಿಸುವ ಖರ್ಚು ಪ್ರತ್ಯೇಕ.

ಶೇಕಡ ೧೨½ ಯಂತೆ ೨೫ ರೂಗಳ ಪುಸ್ತಕಗಳನ್ನು ಏಕಕಾಲದಲ್ಲಿ ಕೊಳ್ಳುವವರಿಗೆ

ಶೇಕಡ ೧೮¾ ರಂತೆ ೧೦೦೦ ರೂಗಳ ಬೆಲೆಬಾಳುವ ಪುಸ್ತಕಗಳನ್ನು ಒಂದು ವರ್ಷದಲ್ಲಿ ಕೊಳ್ಳುವವರಿಗೆ

ಶೇಕಡ ೨೫ ರಂತೆ ೨೦೦೦ ರೂಗಳ ಬೆಲೆಬಾಳುವ ಪುಸ್ತಕಗಳನ್ನು ಒಂದು ವರ್ಷದಲ್ಲಿ (ಎಪ್ರಿಲ್ ೧ ರಿಂದ ಮಾರ್ಚಿ ೩೧ರವರೆಗೆ) ಕೊಳ್ಳುವವರಿಗೆ.

---

* ಈ ಪುಸ್ತಕಗಳು ಮುಗಿದುಹೋಗಿವೆ.

ಮೈಸೂರು ವಿಶ್ವವಿದ್ಯಾನಿಲಯ ಪಠ್ಯಪುಸ್ತಕಮಾಲೆ

೧. **ಇಂಟರ್‌ಮೀಡಿಯಟ್ ಭೌತಶಾಸ್ತ್ರ**—ಬಿ. ವಿ. ನಾರಾಯಣರಾವ್, ಎಂ.ಎಸ್‌ಸಿ.; ಬೆಲೆ: ಸಾದಾ ರೂ. ೧-೧೨-೦; ಉತ್ತಮ ರೂ. ೨-೧೨-೦.

೨. **ಬೀಜರೇಖಾಗಣಿತ**—ಕೆ. ಮಂಜುನಾಥಯ್ಯ, ಎಂ.ಎಸ್‌ಸಿ., ಬಿ.ಎಲ್.; ಬೆಲೆ: ರೂ. ೨-೪-೦.

೩. **ಕಲನಶಾಸ್ತ್ರ**—ಎಂ. ಎಸ್. ಸೂರ್ಯನಾರಾಯಣಶಾಸ್ತ್ರೀ, ಎಂ.ಎಸ್.ಸಿ.; ಬೆಲೆ: ರೂ. ೩.೨೫.

೪. **ಗ್ರೇಟ್ ಬ್ರಿಟನ್ನಿನ ಚರಿತ್ರೆ**—ಡಾ|| ಎಂ. ಶೇಷಾದ್ರಿ; ಬೆಲೆ: ಸಾದಾ ರೂ. ೨.೭೫ ನ.ಪೈ; ಉತ್ತಮ ರೂ. ೩.೭೫ ನ.ಪೈ.

೫. **ಆರ್ಥಿಕರಚನೆ**—ಡಾ|| ಜಿ. ಟಿ. ಹುಚ್ಚಪ್ಪ, ಎಂ.ಎ., ಪಿಎಚ್.ಡಿ.; ಬೆಲೆ: ಸಾದಾ ರೂ. ೨.೭೫ ನ.ಪೈ; ಉತ್ತಮ ರೂ. ೩.೭೫ ನ.ಪೈ.

೬. **ಇಂಟರ್‌ಮೀಡಿಯಟ್ ಪ್ರಾಣಿಶಾಸ್ತ್ರ** — ಎ. ನಾರಾಯಣರಾವ್, ಎಂ.ಎಸ್‌ಸಿ.; ರೂ. ೩-೦-೦.

೭. **ಸರಳ ರಸಾಯನಶಾಸ್ತ್ರ**—ಕೆ. ಸುಬ್ಬಾಭಟ್ಟ, ಎಂ.ಎಸ್‌ಸಿ.; ಬೆಲೆ: ಸಾದಾ ರೂ. ೨.೨೫ ನ.ಪೈ; ಉತ್ತಮ ರೂ. ೩.೨೫ ನ.ಪೈ.

೮. **ಇಂಟರ್‌ಮೀಡಿಯಟ್ ಜಾಮಿಟ್ರಿ**—ಜಂಬುನಾಥನ್, ಎಂ.ಎಸ್‌ಸಿ., ಬೆಲೆ: ಸಾದಾ ರೂ. ೩-೦-೦; ಉತ್ತಮ ರೂ. ೪-೦-೦.

೯. **ಭೌತಿಕ ಭೂಗೋಳ**—ಕುಮಾರಸ್ವಾಮಿ, ಎಂ.ಎ.; ಬೆಲೆ: ಸಾದಾ ರೂ. ೩.೨೫ ನ.ಪೈ.

೧೦. **ಆಧುನಿಕ ತರ್ಕಶಾಸ್ತ್ರ ಸಂಗ್ರಹ**—ಎಂ. ಯಾಮುನಾಚಾರ್ಯ, ಎಂ.ಎ., ಬೆಲೆ: ಸಾದಾ ರೂ. ೧.೭೫ ನ.ಪೈ; ಉತ್ತಮ ರೂ. ೨.೭೫ ನ.ಪೈ.

೧೧. **ಪ್ರಪಂಚ ಚರಿತ್ರೆಯ ರೂಪರೇಖೆಗಳು**—ಡಾ|| ಎಸ್. ಶ್ರೀಕಂಠಶಾಸ್ತ್ರೀ, ಎಂ.ಎ.,ಡಿ.ಲಿಟ್. ಬೆಲೆ: ಸಾದಾ ರೂ. ೨.೩೦ ನ.ಪೈ; ಉತ್ತಮ ರೂ. ೩.೩೦. ನ.ಪೈ.

೧೨. **ಪ್ರೀ-ಯೂನಿವರ್ಸಿಟಿ ಜ್ಯಾಮಿತಿ**—ಎಂ.ವಿ. ಜಂಬುನಾಥನ್, ಎಂ.ಎಸ್‌ಸಿ., ಬೆಲೆ: ಸಾದಾ ರೂ. ೩-೦-೦; ಉತ್ತಮ ರೂ. ೪-೦-೦.

೧೩. **ವಾಣಿಜ್ಯ ಶಾಸ್ತ್ರ**—ಡಾ|| ಜಿ. ರಾಮಕೃಷ್ಣ ರೆಡ್ಡಿ, ಎಂ.ಎ., ಪಿಎಚ್.ಡಿ., ಬೆಲೆ: ಸಾದಾ ರೂ. ೨.೬೫ ನ.ಪೈ; ಉತ್ತಮ ರೂ. ೩.೬೫ ನ.ಪೈ.

೧೪. **ರೋಮ್ ದೇಶದ ಚರಿತ್ರೆ**—ಡಾ||ಬಿ.ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್, ಎಂ.ಎ., ಡಿ.ಲಿಟ್., ಬೆಲೆ: ಸಾದಾ ರೂ. ೨.೪೦ ನ.ಪೈ; ಉತ್ತಮ ರೂ. ೩.೪೦ ನ.ಪೈ.

೧೫. **ಪ್ರೀ–ಯೂನಿವರ್ಸಿಟಿ ಭೌತ ವಿಜ್ಞಾನ**—ಡಾ॥ ಎಲ್. ಸೀಬಯ್ಯ, ಡಿ.ಎಸ್‌ಸಿ., ಬೆಲೆ: ಸಾದಾ ರೂ. ೫.೪೦ ನ.ಪೈ; ಉತ್ತಮ ರೂ. ೬.೪೦ ನ.ಪೈ.

೧೬. **ತ್ರಿಕೋನ ಮಿತಿ**—ಪಿ.ಆರ್. ಪ್ರಾಣೇಶರಾವ್, ಎಂ.ಎಸ್‌ಸಿ., ಬೆಲೆ: ಸಾದಾ ರೂ. ೩.೭೫ ನ.ಪೈ.; ಉತ್ತಮ ರೂ. ೪.೭೫ ನ.ಪೈ.

೧೭. **ಸಾಮಾನ್ಯ ವಿಜ್ಞಾನ**—ಡಾ॥ ಎಲ್. ಸೀಬಯ್ಯ, ಡಿ.ಎಸ್‌ಸಿ., ಬೆಲೆ: ಸಾದಾ ರೂ. ೨.೫೦; ಉತ್ತಮ ರೂ. ೩.೫೦ ನ.ಪೈ.

೧೮. **ಪ್ರೀ–ಯೂನಿವರ್ಸಿಟಿ ಬೀಜಗಣಿತ**—ಶ್ರೀ ವಿ. ಕೆ. ದೊರೆಸ್ವಾಮಿ, ಎಂ.ಎಸ್‌ಸಿ., ಬಿ.ಎಲ್., ಬೆಲೆ: ಸಾದಾ ರೂ. ೩-೦-೦; ಉತ್ತಮ ರೂ. ೪-೦-೦.

೧೯. **ಸಮಾಜ ವಿಜ್ಞಾನ**—ವಿ. ಮುದ್ದಲಿಂಗಣ್ಣ, ಎಂ.ಎ., ಬೆಲೆ: ಸಾದಾ ರೂ. ೨.೯೦ ನ.ಪೈ; ಉತ್ತಮ ರೂ. ೩.೯೦ ನ.ಪೈ.

೨೦. **ಭೂವಿಜ್ಞಾನ**—ಎಸ್. ವರದರಾಜನ್, ಎಂ.ಎಸ್‌ಸಿ., ಮತ್ತು ಶ್ರೀ ಡಿ. ರಂಗಯ್ಯ, ಎಂ.ಎಸ್‌ಸಿ., ಬೆಲೆ: ಸಾದಾ ರೂ. ೪.೫೬ ನ.ಪೈ. ಉತ್ತಮ ರೂ. ೫.೫೬ ನ.ಪೈ.

೨೧. **ಕನ್ನಡ ಕಾವ್ಯಾಂಜಲಿ**—ಟಿ. ಎನ್. ಶ್ರೀಕಂಠಯ್ಯ, ಎಂ.ಎ., ಬೆಲೆ: ಸಾದಾ ೬೨ ನ.ಪೈ; ಉತ್ತಮ ರೂ. ೧.೫೦ ನ.ಪೈ.

೨೨. **ಬೀಜಗಣಿತ**—ಪಿ. ಆರ್. ಪ್ರಾಣೇಶರಾವ್, ಎಂ.ಎಸ್‌ಸಿ., ಬೆಲೆ: ಸಾದಾ ರೂ. ೨.೫೦ ನ.ಪೈ; ಉತ್ತಮ ರೂ. ೩.೫೦ ನ.ಪೈ.

೨೩. **ಪ್ರೀ–ಯೂನಿವರ್ಸಿಟಿ ಪ್ರಾಣಿಶಾಸ್ತ್ರ**—ಎ. ನಾರಾಯಣರಾವ್, ಎಂ.ಎಸ್‌ಸಿ., ಬೆಲೆ: ಸಾದಾ ರೂ. ೨.೦೦; ಉತ್ತಮ ರೂ. ೪.೦೦.

೨೪. **ಪರಿಮಿತ ವಿಕಲನಗಳು**—ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್, ಎಂ.ಎ., ಬೆಲೆ: ಸಾದಾ ರೂ. ೩.೭೫ ನ.ಪೈ; ಉತ್ತಮ ಪ್ರತಿ ರೂ. ೬.೭೫ ನ.ಪೈ.

೨೫. **ಪ್ರೀ–ಯೂನಿವರ್ಸಿಟಿ ಸಸ್ಯಶಾಸ್ತ್ರ** — ಎಚ್. ಎನ್. ಚಾಮಯ್ಯ, ಎಂ.ಎಸ್‌ಸಿ., ಬೆಲೆ: ಸಾದಾ ರೂ. ೮.೬೦ ನ. ಪೈ; ಉತ್ತಮ ಪ್ರತಿ ರೂ. ೯.೬೦ ನ.ಪೈ.

೨೬. **ಪ್ರೀ–ಯೂನಿವರ್ಸಿಟಿ ಭೂವಿವರಣೆ**—ಡಾ॥ ಘೋರಿ, ಎಂ.ಎ., ಪಿಎಚ್.ಡಿ., ಬೆಲೆ: ಸಾದಾ ರೂ. ೪.೧೫ ನ.ಪೈ.; ಉತ್ತಮ ಪ್ರತಿ ರೂ. ೫.೧೫ ನ.ಪೈ.

೨೭. **ಪುರಾತತ್ವಶೋಧನೆ**—ಡಾ॥ ಎಸ್. ಶ್ರೀಕಂಠಶಾಸ್ತ್ರಿ, ಎಂ.ಎ., ಡಿ.ಲಿಟ್., ಬೆಲೆ: ಸಾದಾ ರೂ. ೬.೮೨; ಉತ್ತಮ ರೂ. ೭.೮೨ ನ.ಪೈ.

೨೮. **ಗೃಹವಿಜ್ಞಾನ**—ಡಾ॥ಸುಶೀಲಲಿಂಗಯ್ಯ, ಬೆಲೆ: ಸಾದಾ ರೂ. ೩.೭೫ ನ.ಪೈ. ಉತ್ತಮ ಪ್ರತಿ ರೂ. ೪.೭೫ ನ. ಪೈ.

೨೯. **ಮಹಾಶ್ವೇತೆ**— ಟಿ. ಎಸ್. ವೆಂಕಣ್ಣಯ್ಯ ಎಂ.ಎ., ಮತ್ತು ತ. ಸು. ಶಾಮರಾವ್, ಎಂ.ಎ., ಬೆಲೆ: ಸಾದಾ ರೂ. ೧. ಉತ್ತಮ ರೂ. ೨.

೩೦. **ಕನ್ನಡ ಕಾವ್ಯವಲ್ಲರಿ**—ಬೆಲೆ: ಸಾದಾ ರೂ. ೧.೭೫ ನ. ಪೈ. ಉತ್ತಮ ಪ್ರತಿ ರೂ. ೨.೭೫ ನ.ಪೈ.

೩೧. **English Text for under-graduate classes : price ord. Rs. 2. ; Calico. Rs. 3.**

೩೨. **ಕನ್ನಡ ಕಾವ್ಯಾಂಜಲಿ (ಭಾಗ-೨)**—ಪ್ರೊ. ಡಿ. ಎಲ್. ನರಸಿಂಹಾಚಾರ್, ಎಂ.ಎ., ಬೆಲೆ : ಸಾದಾ ರೂ. ೧. ; ಉತ್ತಮ ರೂ. ೨.

೩೩. **ಗ್ರೀಸ್ ದೇಶದ ಚರಿತ್ರೆ**—ಬಿ. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್, ಎಂ.ಎಸ್ಸಿ., ಬೆಲೆ : ಸಾದಾ ರೂ. ೨.೨೦. ; ಉತ್ತಮ ರೂ. ೩.೨೦.

೩೪. **ಅರ್ಥಶಾಸ್ತ್ರ**—ಡಾ॥ ಜಿ. ರಾಮಕೃಷ್ಣರೆಡ್ಡಿ, ಎಂ.ಎ., ಪಿಎಚ್.ಡಿ., ಬೆಲೆ : ಸಾದಾ ರೂ. ೩. ಉತ್ತಮ ರೂ. ೪.

೩೫. **ಲೆಕ್ಕ ಪರಿಶೋಧನೆ ಮತ್ತು ಸಮರ್ಥನೆ**—ಡಿ. ವಿ. ರಾಮಚಂದ್ರ, ಎಂ.ಎ., ಬಿ.ಕಾಂ., ಬೆಲೆ : ಸಾದಾ ರೂ. ೩.೫೦ ನ.ಪೈ ; ಉತ್ತಮ ರೂ. ೪.೫೦ ನ.ಪೈ.

೩೬. **ಭಾರತದಲ್ಲಿ ಬ್ಯಾಂಕುಗಳ ಕಾನೂನು ಮತ್ತು ಆಚರಣೆ**—ಡಿ. ವಿ. ರಾಮಚಂದ್ರ, ಎಂ.ಎ., ಬಿ.ಕಾಂ., ಬೆಲೆ : ಸಾದಾ ರೂ. ೩.೬೦ ನ.ಪೈ ; ಉತ್ತಮ ರೂ. ೪.೬೦ ನ.ಪೈ.

ಬರಲಿವೆ

೩೭. **ಭಾರತದ ಭೂ ವಿಜ್ಞಾನ**—ಎಸ್. ವರದರಾಜನ್, ಎಂ.ಎಸ್ಸಿ., ಮತ್ತು ಡಿ. ರಂಗಯ್ಯ, ಎಂ.ಎಸ್ಸಿ.

೩೮. **ಸಾರ್ವಜನಿಕ ಆಡಳಿತ**—ಎಚ್. ಕೃಷ್ಣರಾವ್, ಎಂ.ಎ.

೩೯. **ಬೀಜಗಣಿತ**—ಡಾ॥ ಎಸ್. ವಿ. ಕೇಶವ ಹೆಗ್ಡೆ, ಎಂ.ಎಸ್ಸಿ., ಪಿಎಚ್.ಡಿ.

೪೦. **ದ್ಯುತಿ ಶಾಸ್ತ್ರ**—ಡಾ॥ಟಿ. ಎಸ್.ಸುಬ್ಬರಾಯ, ಡಿ.ಎಸ್ಸಿ.,

೪೧. **ಅಂತರಾಂಶ ಕಲನ ವಿನ್ಯಾಸ**—ಬಿ. ಸೀತಾರಾಮಶಾಸ್ತ್ರೀ, ಎಂ.ಎಸ್ಸಿ.

೪೨. **ಗಣಿತಾತ್ಮಕ ಭೌತಶಾಸ್ತ್ರ**—ಡಾ॥ ಟಿ. ಎಸ್. ಸುಬ್ಬರಾಯ, ಡಿ.ಎಸ್ಸಿ.

೪೩. **ಶಾಖಪ್ರಕರಣ**—ಕೆ. ಶೇಷಾದ್ರಿ ಐಯಂಗಾರ್., ಎಂ.ಎಸ್ಸಿ., ಎಲ್ಎಲ್.ಬಿ.

೪೪. **ರಾಜ್ಯತತ್ತ್ವ**—ಎನ್. ಶಂಕರಲಿಂಗಯ್ಯ, ಎಂ.ಎ., ಮತ್ತು ಎಚ್. ಕೃಷ್ಣರಾವ್, ಎಂ.ಎ.

೪೫. **ಪಾಶ್ಚಾತ್ಯ ರಾಜಕೀಯ ಶಾಸ್ತ್ರ**—ಎಚ್. ಕೃಷ್ಣರಾವ್, ಎಂ.ಎ.

೪೬. **ವಾಣಿಜ್ಯ ನ್ಯಾಯ**—ಹೆಚ್. ಹೆಚ್. ಬಸವರಾಜ್, ಬಿ.ಎ., ಎಲ್ಎಲ್.ಬಿ.

೪೭. **ಬೀಜಾರೇಖಾಗಣಿತ**—ಡಾ|| ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ.ಎಸ್‌ಸಿ.

೪೮. **ಬೀಜರೇಖಾಗಣಿತ**—ಡಾ|| ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ. ಎಸ್‌ಸಿ.

೪೯. **ಭೌತರಾಸಾಯನಶಾಸ್ತ್ರ**—ಕೆ. ಸುಬ್ಬಾಭಟ್ಟ, ಎಂ.ಎಸ್‌ಸಿ.

೫೦. **ಸಸ್ಯಶಾಸ್ತ್ರ**—ಬಿ. ಎಚ್. ಅನ್ನಪೂರ್ಣಬಾಯಿ, ಎಂ.ಎಸ್‌ಸಿ.

Other Publications

1. **ಹರಿಹರನ ರಗಳೆಯಲ್ಲಿ ಜೀವನ ದರ್ಶನ**—ಸ. ಸ. ಮಾಳವಾಡ, ಎಂ.ಎ., ಬೆಲೆ: ಸಾದಾ ರೂ. ೧–೪–೦ ; ಉತ್ತಮ ರೂ. ೨–೪–೦.
2. **ಕನ್ನಡ ಸಾಹಿತ್ಯದಲ್ಲಿ ಸರಸ್ವತಿಯ ದರ್ಶನ**—ಡಾ|| ರಂ. ಶ್ರೀ. ಮುಗಳಿ, ಎಂ.ಎ., ಡಿ.ಲಿಟ್. ; ಬೆಲೆ: ಸಾದಾ ರೂ. ೧. ಉತ್ತಮ ರೂ. ೨.
3. **ರಸೋಲ್ಲಾಸ**—ಡಾ|| ಕೆ. ಕೃಷ್ಣಮೂರ್ತಿ, ಎಂ.ಎ., ಬಿ.ಟಿ., ಪಿಎಚ್.ಡಿ. ; ಬೆಲೆ: ಸಾದಾ ರೂ. ೧.೫೦. ನ.ಪೈ. ; ಉತ್ತಮ ರೂ. ೨.೫೦ ನ.ಪೈ.
4. **ಮರಾಠಿ ಸಾಹಿತ್ಯ**—ಶ್ರೀ ದ. ರಾ. ಬೇಂದ್ರೆ, ಎಂ.ಎ.
5. **ಸಾಹಿತ್ಯ ವಿಮರ್ಶೆಗಳಲ್ಲಿ ಅರ್ಥ ಮತ್ತು ಮೌಲ್ಯ**— ವಿ. ಸೀತಾರಾಮಯ್ಯ, ಎಂ.ಎ.; ಬೆಲೆ: ಸಾದಾ ರೂ. ೨.೬೦. ನ.ಪೈ; ಉತ್ತಮ ರೂ. ೩.೬೦. ನ.ಪೈ.
6. **ವಂಗ ಸಾಹಿತ್ಯ ಪರಿಚಯ**–ಸ್ವಾಮಿ ಶಂಕರಾನಂದ ಸರಸತಿ, ಬೆಲೆ: ಸಾದಾ ರೂ. ೩.೧೦. ನ.ಪೈ.; ಉತ್ತಮ ರೂ. ೪.೧೦. ನ.ಪೈ.
7. **Minimum Wages in India**: by V. R. Pillai, M.A.,M.SC. ; Price Rs. 1-14-0
8. **Aspects of Bhakti**; by K. C. Varadachari. Price : ord : Re. 1, Calio Rs. 1-8-0.
9. **Man in the making** : by J. B. Freeman ; Price : Rs. 4.
10. **The Philosophy of Mahatma Gandhi and other Essays**: by Prof. A. R. Wadia. Price Rs. 20.00.
11. **History and Pre-History of Sanskrit** : by Dr. Sukumarsen, price Ord. Rs. 1.25.; Calico : Rs. 2·25.
12. **European man** : by Prof. Toachim von Rentleen. Ordinary np. 40 ; Library np. 50.

13. **Gokhale and Sastri**: by P. Kodanda Rao, Price 52 N.P.

Navinam Ramanujacharya Sanskrit Prize Essay

14. **ಅಲಂಕಾರಶಾಸ್ತ್ರೇ ಕಾವ್ಯವೈವಿಧ್ಯವಾದ ವಿಮರ್ಶ** :—
ಡಾ|| ಕೆ. ಕೃಷ್ಣಮೂರ್ತಿ, ಎಂ.ಎ., ಬಿ.ಟಿ., ಪಿಎಚ್.ಡಿ. ;
ಬೆಲೆ: ರೂ. ೦-೮-೦.

ಬರಲಿವೆ

15. **ಉರ್ದು ಮತ್ತು ಫಾರಸಿ ಸಾಹಿತ್ಯ**—ರಾಘವೇಂದ್ರರಾವ್
16. **ಟ್ರಾಜಿಡಿ ಅಥವಾ ಪಾಶ್ಚಾತ್ಯ ಗಂಭೀರ ನಾಟಕ**—ಎಸ್. ವಿ. ರಂಗಣ್ಣ, ಎಂ.ಎ.
17. **ವೇದಾರ್ಥ ಮೀಮಾಂಸೆ**—ಡಾ|| ಎ. ವೆಂಕಟಸುಬ್ಬಯ್ಯ.
18. **Buddha And Basava** by Sri Kumaraswamiji.
19. **Contributions to the Interpretation of the Regveda** by Dr. Venkatasubbaiah

MYSORE UNIVERSITY PUBLICATIONS
ENGLISH

1. **The Mysore Tribes and Castes**: by the late Mr. H. V. Nanjundayya, M.A., M.L., C.I.E. and Rao Bahadur L. K. Anantakrishna Iyer; Four Volumes: Vol. II, 1928; Vol. III, 1930; Vol. IV, 1931; Vol. I, 1935. Appendix; Each Volume is profusely llustrated: Vol. I, Rs. 15-0-0; Other Volumes each Rs. 12-8-0.

(*a*) *Studies in Economics and Politics*

1. **Labour and Housing in Bangalore City**: C Narasimha Moorthy, M A. and R. K. Srinivasan, M. A. Price Re. 0-8-0.

2. **The Munro System of British Statesmanship in India**: Dr. K. N. Venkatasubba Sastri, M.A., Ph.D.; Price Rs. 3-0-0.

3. **Theory of Interest**: Sri S. Laxminarasimhan, M.A.; Price Rs. 2-8-0.

4. **An Inquiry into Economic Theory**: Sri A. N. Subramanyam, M.A.; Price Rs. 1-4-0.

(*b*) *Mysore University Historical Series*

1. **Sources of Karnataka History,** Vol. I: S. Srikanta Sastry, M.A.; Price Calico Rs. 3-8-0; Stiff Rs. 3-0-0.

(*c*) *Mysore University Studies in Philosophy*

1. ***Dvaita Philosophy and Its Place in the Vedanta**: Mr. H. N. Raghavendrachar, M.A.

2. **Metaphysics of Value,** Vol. I: K. R. Srinivasa Iyengar, M.A.; Price Rs. 5-00.

(*d*) *Mysore University Studies in Dravidian Philology*

1. ***A Grammar of the Oldest Kannada Inscriptions**: Dr. A. N. Narasimhiah, M.A., L.T., Ph.D.; Price Rs. 2-12-3.

2. *** History of Kannada Literature**: Rao Bahadur R. Narasimhacharya; Price Re. 1-0-0.

3. *** History of Kannada Language:** Rao Bahadur R. Narasimhacharya.

(*e*) *Dr. Abhayambal Memorial Lectures*

1. **Role of Foreign exchange and Finance in India's development plan** by Dr. P. S. Lokanathan. Price 45 N. P.

ವಿಶ್ವವಿದ್ಯಾನಿಲಯದ ಪಠ್ಯಪುಸ್ತಕಮಾಲೆ ವಿಶೇಷೋಪನ್ಯಾಸಮಾಲೆ ಮತ್ತು ಇತರ ಪ್ರಕಟನಮಾಲೆಯ ಪುಸ್ತಕಗಳನ್ನು ಕೊಳ್ಳುವ ಮಾರಾಟಗಾರರಿಗೆ ಈ ಕೆಳಗೆ ಕಂಡಂತೆ ಕಮಿಷನ್ ಕೊಡಲಾಗುವುದು. ಅಂಚೆ ವೆಚ್ಚ, ಮಾರಾಟ ತೆರಿಗೆ ಮತ್ತು ಪುಸ್ತಕಗಳನ್ನು ಕಳುಹಿಸುವ ಖರ್ಚು ಪ್ರತ್ಯೇಕ.

ಶೇಕಡ ೧೨½ಯಂತೆ ೨೫ ರೂಪಾಯಿ ಬೆಲೆಬಾಳುವ ಪುಸ್ತಕಗಳನ್ನು ಏಕಕಾಲದಲ್ಲಿ ಕೊಳ್ಳುವವರಿಗೆ.

ಈ ಗ್ರಂಥಮಾಲೆಯ ಪುಸ್ತಕಗಳನ್ನು ತರಿಸಿಕೊಳ್ಳಲಿಚ್ಛಿಸುವವರು ಈ ಕೆಳಗಿನ ವಿಳಾಸಕ್ಕೆ ಬರೆಯಬೇಕು.

ಡೈರೆಕ್ಟರ್,
ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ
ವಾಣಿವಿಲಾಸ ಮೊಹಲ್ಲ, ಮೈಸೂರು ೨.

ಸರ್. ಕೆ. ಪಿ. ಪುಟ್ಟಣ್ಣ ಚೆಟ್ಟರ ಪುದುವಟ್ಟಿನ ಪ್ರಕಟನಮಾಲೆ

೧. ಟಪಾಲ್ ಸಂಸ್ಥೆಯ ವಿವರ—ಕೆ. ಲಕ್ಷ್ಮೀನರಸಿಂಹಯ್ಯ,
ಬಿ.ಎ., ಎಲ್ಎಲ್.ಬಿ.

೨. ವಿಶ್ವವಿಸರಣ—ಜಿ. ಎಸ್. ಪರಮಶಿವಯ್ಯ, ಎಂ.ಎಸ್‌ಸಿ.

೩. ಸರ್ಕಾರದ ಪದ್ಧತಿ ಮತ್ತು ರಚನಾಕ್ರಮ—ಎಚ್. ಕೃಷ್ಣರಾವ್, ಎಂ.ಎ.

೪. ವ್ಯವಸಾಯದ ಮಣ್ಣುಗಳು—ಕೂರಪಾಡು ಗುಂಡಪ್ಪ, ಬಿ.ಎ.

೫.*ಆಕಾಶಯಾನ—ಬಿ. ಕೆ. ಎ೯. ರಾವ್.

೬.*ವಿಶ್ವವಿದ್ಯಾನಿಲಯಗಳು—ಡಾ|| ಎಂ. ಸಿದ್ದಲಿಂಗಯ್ಯ, ಎಂ.ಎ., ಬಿ.ಟಿ., ಪಿಎಚ್.ಡಿ., ಡಿಪ್.ಎಡ್. ಮತ್ತು ಸಿ. ರಂಗಾಚಾರ್, ಬಿ.ಎಸ್‌ಸಿ.,
ಎಂ.ಎಡ್.

೭.*ಹೆರಿಗೆ ಮತ್ತು ಶಿಶುಪೋಷಣೆ—ಡಾ|| ರತ್ನಮ್ಮ ಐಸಾಕ್, ಎಲ್.ಎಂ.ಎಸ್.,
ಎಂ.ಆರ್.ಸಿ.ಎಸ್., ಎಲ್.ಆರ್.ಸಿ.ಪಿ.

೮. ಮಲೇರಿಯಾ ನಿರೋಧ—ಬಿ. ಅನಂತಸ್ವಾಮಿರಾವ್, ಬಿ.ಎಸ್‌ಸಿ.,
ಎಂ.ಬಿ.,ಬಿ.ಎಸ್., ಎಂ.ಪಿ.ಎಚ್.

೯. ಗ್ರಾಮ ನೈರ್ಮಲ್ಯ—ಎಸ್. ಡಿ. ನಾರಾಯಣಗೌಡ, ಎಂ.ಬಿ.,ಬಿ.ಎಸ್.,
ಡಿ.ಪಿ.ಎಚ್.

೧೦. ಪಶುಪಾಲನೆ—ಎಂ. ಕೃಷ್ಣಶಾಸ್ತ್ರೀ, ಬಿ.ಎ., ಐ.ಡಿ.ಡಿ., ಅಸೋಸಿಯೇಟ್
ಐ.ಡಿ.ಆರ್.ಐ.

೧೧. ಯೋಗಾಸನಗಳು—ವಿದ್ವಾನ್ ಟಿ. ಕೃಷ್ಣಮಾಚಾರ್ಯ.
ಬೆಲೆ: ಸಾದಾ ೮೦ ನಯೆ ಪೈಸೆ; ಉತ್ತಮ ಪ್ರತಿ ರೂ. ೧.

೧೨. ಮೈಸೂರು ದೇಶದ ರಸಾಯನಿಕ ಕೈಗಾರಿಕೆಗಳು—
ಕೆ. ಅಶ್ವತ್ಥನಾರಾಯಣರಾವ್, ಡಿ.ಎಸ್‌ಸಿ.

೧೩. ವಿದ್ಯುಚ್ಛಕ್ತಿಯ ಉಪಯೋಗ—ಎ. ಬಿ. ತಿರುನಾರಾಯಣ, ಬಿ.ಎ.,
ಬಿ.ಎಸ್‌ಸಿ. (ಆನರ್ಸ್, ಇ.ಇ.) ಸಿ.ಪಿ., ಇ.ಟಿ. (ಐ.ಐ.ಎಸ್.)

೧೪. ಮಕ್ಕಳ ಬೆಳವಣಿಗೆ—ಡಾ|| ಬಿ. ಕುಪ್ಪುಸ್ವಾಮಿನಾಯಿಡು,
ಎಂ.ಎ., ಡಿ.ಲಿಟ್.

೧೫. ರೇಡಾರ್—ಆರ್. ಎಲ್. ನರಸಿಂಹಯ್ಯ, ಎಂ.ಎಸ್‌ಸಿ.;
ಸಾದಾ ಪ್ರತಿ ೮೦ ನಯೆ ಪೈಸೆ; ಉತ್ತಮ ಪ್ರತಿ ರೂ. ೧.

೧೬. ಗಣಿ ಕೆಲಸದ ಕೈಪಿಡಿ—ಜೆ. ಪಿ. ಡೇವಿಡ್, ಬಿ.ಎಸ್‌ಸಿ.;
ಸಾದಾ ಪ್ರತಿ ೮೦ ನಯೆ ಪೈಸೆ; ಉತ್ತಮ ಪ್ರತಿ ರೂ. ೧.

೧೭. ಲೋಹವಿದ್ಯೆ—ಡಾ|| ಬಿ. ಪಿ. ರಾಧಾಕೃಷ್ಣ, ಬಿ.ಎಸ್‌ಸಿ.,(ಆನರ್ಸ್).
ಪಿಎಚ್.ಡಿ.

೧೮. ಪರಮಾಣುಶಕ್ತಿ—ಡಾ|| ಎಲ್. ಸೀಬಯ್ಯ, ಡಿ.ಎಸ್‌ಸಿ.
೧೯. ಭಾರತ ಸಂವಿಧಾನ—ಗ. ಸ. ಹಾಲಪ್ಪ, ಎಂ.ಎ. (ಕೊಲಂಬಿಯ).
೨೦. ಅಂತರ ರಾಷ್ಟ್ರೀಯ ಸಂಬಂಧಗಳು—ಟಿ. ಎಸ್. ನಾರಾಯಣರಾವ್, ಎಂ.ಎ.
೨೧. ವಿಕಿರಣಕ್ರಿಯಾಶಕ್ತಿ— ಕೆ. ಶೇಷಾದ್ರಿ ಅಯ್ಯಂಗಾರ್, ಎಂ.ಎಸ್‌ಸಿ., ಎಲ್‌ಎಲ್.ಬಿ.
೨೨–೨೩. ಸಂಸಾರಯೋಜನೆ—ಡಾ|| ಎಂ. ದಯಾಕರ, ಎಂ.ಬಿ.,ಬಿ.ಎಸ್.
ಬೆಲೆ: ಸಾದಾ ೮೦ ನಯೆ ಪೈಸೆ; ಉತ್ತಮ ಪ್ರತಿ ರೂ. ೧.
೨೪. ಜಲಶಕ್ತಿ—ಎಚ್. ಸಿ. ಕಪನೀಪತಿಭಟ್ಟ, ಬಿ.ಎ., ಬಿ.ಇ., ಎಂ.ಐ.ಇ.
೨೫. ಪತ್ರಿಕೋದ್ಯಮಶಾಸ್ತ್ರ—ನಾಡಿಗ ಕೃಷ್ಣಮೂರ್ತಿ, ಎಂ.ಎ.(ಮಿಸ್ಸೋರಿ).
೨೬. ಮುದ್ರಣ ಕಲೆ—ಡಿ. ಎಸ್. ಗುರುಬಸಪ್ಪ, ಬಿ.ಎಸ್‌ಸಿ. ಮತ್ತು ಬಿ. ಪಿ. ಮಲ್ಲರಾಜೆ ಅರಸು, ಬಿ.ಎ., ಎಲ್‌ಎಲ್.ಬಿ.
೨೭. ಬುದ್ಧಿಶಕ್ತಿಯ ಅಳತೆ ಮತ್ತು ಅದರ ಪ್ರಯೋಜನಗಳು–ಬಿ. ಕೃಷ್ಣನ್, ಎಂ.ಎ.
೨೮. ಭಾರತದ ಸಾರಿಗೆ—ಬಿ. ಎಸ್. ಬಸವಲಿಂಗಪ್ಪ, ಬಿ.ಎ., ಎಂ.ಕಾಂ.
೨೯. ವೈಸೂರಿನ ವ್ಯವಸಾಯ–ಪ. ಲ. ನರಸಿಂಹ ಅಯ್ಯಂಗಾರ್, ಬಿ.ಎ.,ಬಿ.ಟಿ., ಎಲ್.ಎಜಿ.
೩೦. ಪುಸ್ತಕಗಳಿಗೆ ರಟ್ಟು ಕಟ್ಟುವ ಕಲೆ—ಡಿ. ಎಸ್. ಗುರುಬಸಪ್ಪ, ಬಿ.ಎಸ್‌ಸಿ., ಮತ್ತು ಬಿ. ಪಿ. ಮಲ್ಲರಾಜೆ ಅರಸು, ಬಿ.ಎ., ಎಲ್‌ಎಲ್.ಬಿ.

ಬರಲಿದೆ

೩೧. ರೇಷ್ಮೆ—ಎಲ್. ನರಸಿಂಹಮೂರ್ತಿ, ಬಿ.ಎಸ್‌ಸಿ.
ಸಾಧಾರಣ ಪ್ರತಿ ೪೦ ನಯೆ ಪೈಸೆ; ಉತ್ತಮ ಪ್ರತಿ ೫೦ ನಯೆ ಪೈಸೆ.

ಡೈರೆಕ್ಟರ್
'ಪ್ರಸಾರಾಂಗ' ಮೈಸೂರು ವಿಶ್ವವಿದ್ಯಾನಿಲಯ
ವಾಣೀವಿಲಾಸ ಮೊಹಲ್ಲ, ಮೈಸೂರು–೨

* ಈ ಪುಸ್ತಕಗಳು ಮುಗಿದುಹೋಗಿವೆ.

WO 272—MUPM—1000+25—28-8-61

ಪ್ರಬುದ್ಧ ಕರ್ಣಾಟಕಕ್ಕೆ ವಿನಿಮಯವಾಗಿ ಬರುವ ಪತ್ರಿಕೆಗಳು

ಇಂಗ್ಲಿಷ್ ಪತ್ರಿಕೆಗಳು

Annals of the Oriental Research Institute University, Madras; *Bramhavidya*, Adyar, Madras; *Bulletin of the School of Oriental Studies*, London; *Journal of the Andhra Historical Research Society*, Rajahmundry; *Journal of the Karnataka Historical Research Society*, Dharwar; *Quarterly Journal of the Mythic Society*, Bangalore; *The Indian P.E.N.* Bombay; *Annals of the Venkateswara Oriental Institute*, Tirupati; *The Jaina Siddhanta Bhaskara and the Jaina Gazette*, Arrah; *Bulletin of the Deccan College Research Institute*, Poona; *Publication of the Kannada Research Office*, Dharwar; *The Journal of the Literary Committee of the L.E. Association*, Dharwar; *Annals of Bhandarkar Oriental Research Institute*, Poona.

ವಾರಪತ್ರಿಕೆಗಳು

'ಕಂಠೀರವ', ಮಂಗಳೂರು; 'ಚೇತನಾ', ಬೆಂಗಳೂರು; 'ಪ್ರಭಾತ', ಮಂಗಳೂರು; 'ಪ್ರಪಂಚ', ಹುಬ್ಬಳ್ಳಿ.

ಮಾಸಪತ್ರಿಕೆಗಳು

'ಆಂಧ್ರ ಸಾಹಿತ್ಯ ಪರಿಷತ್ಪತ್ರಿಕೆ' (ತೆಲುಗು), ಕಾಕಿನಾಡ; 'ಕತೆಗಾರ', ಬೆಂಗಳೂರು; 'ಕನ್ನಡ ಸಹಕಾರಿ', ಮಂಗಳೂರು; 'ಜಯಕರ್ನಾಟಕ', ಧಾರವಾಡ; 'ಜಯಂತಿ', ಧಾರವಾಡ; 'ಮಕ್ಕಳ ಪುಸ್ತಕ', ಬೆಂಗಳೂರು; 'ಮೈಸೂರು ಸಹಕಾರ ಪತ್ರಿಕೆ', ಬೆಂಗಳೂರು; 'ವಿದ್ಯಾದಾಯಿನಿ', ಮೈಸೂರು; 'ವಿವೇಕಾಭ್ಯುದಯ', ಮೈಸೂರು; 'ಶರಣಸಾಹಿತ್ಯ', ಬೆಂಗಳೂರು; 'ಶಿವಾನುಭವ', ಬಿಜಾಪುರ; 'ಸರಸ್ವತಿ', ಬೆಂಗಳೂರು; 'ಸುಬೋಧ', ಬೆಂಗಳೂರು; 'ಜೀವನ', ಬೆಂಗಳೂರು; 'ಕಥಾವಳಿ', ಬೆಂಗಳೂರು; 'ಪುಸ್ತಕ ಪ್ರಪಂಚ', ಮೈಸೂರು; 'ಕನ್ನಡ ನುಡಿ' ಬೆಂಗಳೂರು.

ತ್ರೈಮಾಸಿಕ ಪತ್ರಿಕೆಗಳು

'ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ', ಬೆಂಗಳೂರು.

ಗ್ರಂಥಮಾಲೆ

'ಮನೋಹರ ಗ್ರಂಥಮಾಲೆ', ಧಾರವಾಡ; 'ಮಿಂಚಿನಬಳ್ಳಿ' ಧಾರವಾಡ.

ಮೈಸೂರು ಮಹಾರಾಜರವರ ಕಾಲೇಜಿನ
ಕರ್ಣಾಟಕ ಸಂಘದ ಪ್ರಕಟಣೆಗಳು

೧. **ನಾಗಾನಂದ ನಾಟಕ**—ಅನಂತನಾರಾಯಣ ಶಾಸ್ತ್ರಿ; ಬೆಲೆ: ರೂ. ೧-೦-೦.
೨. **ಕರ್ಣಾಟಕ ಮೃಚ್ಛಕಟಿಕಪ್ರಕರಣಂ**—ಆಸ್ಥಾನ ಕವಿ ನಂಜನಗೂಡು ಸುಬ್ಬಾಶಾಸ್ತ್ರಿಗಳವರಿಂದ; ರೂ. ೧-೧೨-೦.

ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದ ಪ್ರಕಟಣೆಗಳು

೧. **ಶ್ರೀ ಕೈಲಾಸಂ ಅವರ ಸ್ಮರಣೆ**—ಕೆ. ವಿ. ಅಯ್ಯರ್; ರೂ. ೨-೪-೦
೨. **ಕರ್ಣಾಟಕ ಮಾಲವಿಕಾಗ್ನಿಮಿತ್ರ ನಾಟಕಂ** — ಮೋಟಗಾನಹಳ್ಳಿ ಶಂ. ಸುಬ್ರಹ್ಮಣ್ಯಶಾಸ್ತ್ರೀ; ರೂ. ೧-೧೨-೦.
೩. **ಮೊನ್ನ ವನ್ನ** (ಮಾರಿಸ್ ಮ್ಯಾಟರ್‌ಲಿಂಕನ ಮೂರಂಕದ ನಾಟಕ)—ಎಸ್. ಜಿ. ಶಾಸ್ತ್ರಿ; ರೂ. ೨-೦-೦.
೪. **ನಾಗನ ಪದಗಳು**—ಜಿ. ಪಿ. ರಾಜರತ್ನಂ; ರೂ. ೧-೪-೦.
೫. **ಶಕ್ತಿ** (ಸಚಿತ್ರ)—ಆರ್. ಎಲ್. ನರಸಿಂಹಯ್ಯ; ರೂ. ೩-೦-೦.
೬. **ಸುಪ್ರಭಾತಮ್**—(ದೈವಭಕ್ತಿಯನ್ನು ಕುರಿತ ಪ್ರಬಂಧಗಳು); ರೂ. ೩-೦-೦.
೭. **ಸೋಕ್ರಟೀಸನ ಮರಣ**—ಎಸ್. ಜಿ. ಶಾಸ್ತ್ರಿ; ರೂ. ೧-೪-೦.
೮. **ಬಾಹುಬಲಿ ವಿಜಯಂ**—(ಎರಡು ನಾಟಕಗಳು); ರೂ. ೧-೮-೦.
೯. **ಕಾರ್ಕಳದ ಗೊಮ್ಮಟಸ್ವಾಮಿ**—(ಲೇಖನ, ಕವನ); ರೂ. ೧-೦-೦.
೧೦. **ನಮ್ಮ ನಮ್ಮವರು**—(೬೬ ಬೇರೆ ಬೇರೆ ಕೃತಿಗಳು); ರೂ. ೨-೮-೦.
೧೧. **ಬಾಲಸರಸ್ವತಿ**—(೩೬ ಬೇರೆ ಬೇರೆ ಕೃತಿಗಳು); ರೂ. ೨-೮-೦.
೧೨. **ಚಿನ್ನದ ದೋಸೆ ಮತ್ತು ಇತರ ಕಥೆಗಳು**—ರೂ. ೦-೧೨-೦.
೧೩. **ಮಕ್ಕಳ ಮಾತು**—(ಎಸ್ಸೆಗಳು); ರೂ. ೧-೦-೦.
೧೪. **ಪಚ್ಚೆಯ ತೆನೆ**—(ಎಸ್ಸೆಗಳು); ರೂ. ೧-೦-೦.
೧೫. **ಗಂಧದ ಹುಡಿ**—(ಎಸ್ಸೆಗಳು); ರೂ. ೧-೦-೦.
೧೬. **ದುರಾಸೆಯ ದಂಡ**—ಐದು ಏಕಾಂಕ ನಾಟಕಗಳು; ರೂ. ೧-೪-೦.
೧೭. **ಜನಪ್ರಿಯ ವಿಜ್ಞಾನ**—(ವಿಜ್ಞಾನ ಪ್ರಬಂಧಗಳು); ರೂ. ೧-೦-೦.

ಸಂಪಾದಕರು: ಎಸ್. ನಾರಾಯಣಶೆಟ್ಟಿ, ಎಂ.ಎ.; ಜಿ. ವರದರಾಜರಾವ್, ಎಂ.ಎ.
ಪ್ರಕಾಶಕರು: ಪಿ. ಮಲ್ಲಿಕಾರ್ಜುನಪ್ಪ, ಎಂ.ಎಸ್‌ಸಿ.,
ಡೈರೆಕ್ಟರ್, 'ಪ್ರಸಾರಾಂಗ', ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.